ಶನಿವಾರ, ಏಪ್ರಿಲ್ 13, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮತದಾನ
ಮಹಿಳಾ ಕಾನ್‌ಸ್ಟೆಬಲ್‌ವೊಬ್ಬರು ರಾಜಸ್ಥಾನದ ಬೀಕಾನೇರ್‌ನಲ್ಲಿ ಶುಕ್ರವಾರ ಅಂಚೆ ಮತದಾನ ಮಾಡಿದ ಬಳಿಕ ಕಾಣಿಸಿಕೊಂಡಿದ್ದು ಹೀಗೆ...

GM UNIVERSITY

P.B. Road, Davanagere, Karnataka-577006

ADMISSIONS OPEN 2024-25

OPEN DAY

All are cordially invited

Saturday 20th April 2024
9.30 AM - 6.00 PM
@ GM University Campus
P.B. Road, Davanagere, Karnataka

Scan For Registration

Fun filled entertainment with
Kannada Rapper
Chandan Shetty

KEY HIGHLIGHTS OF OPEN DAY EVENT

- Have a Great opportunity to Learn the career opportunities
- Motivational Speech & Campus tour
- Block your seat on Open day & Grab the offers

UG PROGRAMS OFFERED

Faculty Of Engineering & Technology

School of Computer Science & Technology
B.Tech.in
Computer Science & Engg. (CSE)
Information Science & Engg. (ISE)
Computer Science-AI & ML (CS-AIML)
Computer Science-Data Science (CS-DS)
Computer Science-Cyber Security (CS-CY)
Computer Science-Cloud Computing (CS-CC)
Computer Science-Information Security (CS-IS)
Computer Science-Business Systems (CS-BS)
Computer Science-IOT (CS-IO)

School of Engineering
B.Tech.in
Electronics & Communication Engg. (E & CE)
Electrical & Electronics Engg. (EEE)
Robotics & Automation (RA)
Engineering Design (ED)
Civil Engineering (CE)
Biotechnology (BT)

GM Institute of Pharmaceutical Sciences & Research

D.Pharm & B.Pharm

Faculty of Commerce & Management

School of Commerce
B.Com
B.Com (Accounting & Finance)
B.Com (Banking & Insurance)
B.Com (Accounting & Taxation)

School of Management
BBA
BBA (Digital Marketing & Social Media)
BBA (Business Analytics)
BBA (Innovation & Entrepreneurship)
BBA (Logistics & Supply Chain Management)
BBA (Human Resource Management)
BBA (Marketing & Sales)

Faculty of Computing & IT

School of Computer Science
BCA- Computer Science

School of Computer Science
B.Sc- Data Science
B.Sc- AI & Data Analytics
B.Sc- Computer Science

Faculty of Basic & Applied Sciences

School of Mathematical & Physical Sciences
B.Sc-Major (M,Cs), Minor (P/S/E)
B.Sc-Major (S,Cs), Minor(P/M/E)
B.Sc-Major (P,M), Minor (Cs/S/E)

School of Chemical & Biological Sciences
B.Sc-Major (P,Cs), Minor (Cs/M/E)
B.Sc-Major (C,Cs), Minor(P/M/E)
B.Sc-Major (B,Z), Minor (C/EC/Cs/S)
B.Sc-Major (C,Z), Minor(B/EC/Cs/S)
B.Sc-Major (C,B), Minor (BC/MB/Cs/S)

School of Applied Sciences
B.Sc-Major (BT), Minor (Cs/BC)
B.Sc-Major (FST), Minor(Z/BC/Cs)
B.Sc-Major (MB), Minor (Z/C/BC/Cs)

Diploma

Civil Engineering
Architecture
Mechanical Engineering
Computer Science & Engineering
Electrical & Electronic Engg.
Electronics & Communication Engg.
Commercial Pratice

GM UNIVERSITY
P.B. Road, Davanagere, Karnataka-577006
GM UNIVERSITY

admissions@gmu.ac.in
Toll Free No.: 1800 123 7099

Contact us for Admission
9364099720, 9364099712
6364259993.

www.gmu.ac.in

VISHWACHETANA VIDYANIKETANA ®
VISHWACHETANA VIDYANIKETANA
Dr. Vijayalakshmi V Chairperson
RESIDENTIAL PU COLLEGE - DAVANAGERE
CHETANA
Near NH-4 bypass, Hadadi Road, Davangere-577005. Mob: 9900052370/7022982906
Sensational Second PU-2024 Result
100 % Result
Congratulations to all our achievers
STATE 7th RANK
592 / 600
SRUSTI B KOLAL
Reg.No: 20249419171
Kannada : 100
English : 98
Physics : 96
Chemistry : 99
Mathematics : 99
Biology : 100
Distinctions 492 (83 %)
First Class 155 (17 %)
589 NAVEEN H S
588 KAVANA P G
586 ROHAN K S
586 AKSHATA S
586 DHANUSH M S
584 SURYA S
584 RAHUL S N
584 KULMI AMRUTHA
584 PRERANA V
583 SHARATH KUMAR P M
583 SAHANA R P
583 TANMAYI V KOTTUR
582 KIRAN KUMAR V M
582 PRIYANKA G S
582 PRUTHVI HOMBALE
582 CHIRANTHAN K R
582
581 SHIVAKUMAR K C
581 KIRAN S
580 SHASHANK R
580 YASHASWINI MULLALLI
580 SANJANA R
580 D TEJASHWINI
580 C S SRUJAN
580 NISAR K S
579 VIJAYALAXMI D
578 SHREYA C J
577 CHETHAN KUMAR M U
577 SRUSHTI G K
577 SAMRAT J AJARADDI
577 MONIKA P DEVIGERE
577 RAHUL NAIK L
576 HARSHA S B
576 T CHANDU
576 KIRAN A
576 KEERTHANA S L
576 IQRA NAZNEEN
576 SHIVAKUMARA G P
575 VAISHNAVI M
575 ABHISHEK N L
575 U R ANIRUDHA
575 K LIKHITH KUMAR
575 MONIKA S
575 N CHANDANA
574 SURENDRA V
574 ANJALI A S
574 ANUSHA D
574 CHINMAY H S
574 ROHITH GOWDA N
574 SHREE HARI B V
574 BRUNDHA G S
574 PUNITH KUMAR H M
573 MANYA P
573 DEEPIKA B M
573 RAJA RAJESHWARI G S
573 MANOHARI G S
573 RANGANATHA B S
573 AMRUTH S A
573 SUCHITH H B
572 MANOJ KUMAR M G
572 VARSHINI G
572 PRUTHVISHALINI C S
572 DEEPIKA D A
572 ANJALI
572 AAQIB AHMED KHAZI
572 KARTHIK R
572 SRUJAN S
572 YASHVANTH T G
571 MAMATHA S
571 ABHISHEK C
571 BHARATH G M
571 MAMATHA M
571 DISHA K V
571 S M SHRIVATHSA N
570 DHANUJA S
570 PALLAVI T N
570 JYOTHIKA G S
570 DEEPTI RAJSHEKAR B
570 RAKESH P R
570 AMRUTHA G E
570 KAVYA KODLI
570 A G MOHAN
570 PRAJWAL J N
569 SHILPA KORADAL
569 MOHAN G K
568 ROHAN GOWDA N
568 BHARGAVI S H
568 MANYA G M
568 KEERTHANA M
568 SHARATH G M
568 KAVANA H V
568 C D HAMSASHREE
568 SHRAVYA Y N
568 ABHISHEK K
567 GOWTHAM M
567 SANGEETA B K
567 VARUN D
567 ANANYA S
567 POOJA M KADAPPANAVAR
567 BHANUPRIYA S
567 SUPRITA
567 SHASHANK M
567 K M PAVAN KUMAR
567 VIKAS BANAKAR
566 BHAGYASHREE I H
566 ANU H K
566 CHARAN KUMAR R R
566 KARTIK SHANTAPPA D
566 NUTHAN O
566 PRIYANKA D M
566 HARSHINI P J
565 VARSHA S
565 UDAY KUMAR M
565 YASHASWINI B M
565 NAGARAJA H
565 HARSHITHA H S
565 HALASWAMY S
565 RAMYA H M
564 RUCHITHA K
564 RAVISHANKAR M
564 SHRYAVANI N T
564 PRIYA KASHETTI
564 RAKSHA S M
563 LAKSHMI D L
563 KARTHIK G E
563 VISHWANATHA L U
563 RUCHITHA B
563 CHINMAY R
563 ANUP Y R
563 SANJANA G
562 BHOOMIKA R SHETTY
562 GOWTHAM K M
562 SUCHITH H L
562 RUCHITHA H C
562 POORNIMA H J
562 SAMBHRAM M
562 JAYANTH T
562 GIRISH M R
562 NIKHIL GOWDA N
561 RAGHAVENDRA B N
561 SRINIDHI J
RESULT ANALYSIS
99 % & above 02
98 % & above 13
97 % & above 33
96 % & above 54
95 % & above 99
94 % & above 139
93 % & above 184
92 % & above 226
91 % & above 278
90 % & above 324
Our well deserved JEE - MAINS 2024 Result
MOHAMMED RAFID MALAGI 99.09 Percentile
SURYA S 98.28
DHANUSH M S 98.23
NAVEEN H S 97.85
AKASH P 97.09
SRUJAN S 96.79
ROHAN K S 96.75
RAHUL S N 96.32
TESJAS M P 96.00
SAMRUDH C PATIL 95.42
PRERANA V 95.39
ABHISHEK N L 94.76
TANMAYI V KOTTUR 94.09
HARSHA S B 94.01
PUNITH KUMAR H M 93.75
SURENDRA VISHWAKARMA 93.37
MONIKA P DEVIGERE 93.35
MANYA P 93.22
YASHWANTH V 93.00
C S SRUJAN 91.47
SHASHANK R 91.15
VIVEK M 90.77
ANJALI A S 90.23
SAMBHRAM M 90.17
ADMISSIONS OPEN 2024-2025 FOR I PUC
Courses offered: PCMB | PCMCs
Coaching offered: NEET / JEE / KCET / NATA
Separate Hostel for Boys & Girls
Contact: 9900559102, 9900559104, 7022982907, 7022982905

ಶನಿವಾರ, ಏಪ್ರಿಲ್ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 103 | ಪುಟ 22

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಅಂಬೇಡ್ಕರ್
ಮತ್ತು
ಮಹಿಳಾವಾದ

ಇ.ಸಿ ನಡೆಗೆ ಸಿಐಸಿ ಅಸಮಾಧಾನ 11

ಬಿಜೆಪಿ ತೆರಿಗೆ ಕಟ್ಟದ್ದಕ್ಕೆ ಯಾರು ಹೊಣೆ: ಸಿ.ಎಂ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,244 ▼	22,519 ▼	₹75,180 (ಬೆಂಗಳೂರು) ▲	₹85,700 (ಬೆಂಗಳೂರು) ▲	83.38 ▼

ತನಿಖಾ ಸಂಸ್ಥೆಗಳ ಜಂಟಿ ಕಾರ್ಯಾಚರಣೆ • ಪಶ್ಚಿಮ ಬಂಗಾಳದಲ್ಲಿ ಸಿಕ್ಕಿಬಿದ್ದ ಮುಸಾವೀರ್, ತಾಹಾ

ಕೆಫೆ ಬಾಂಬ್ ಆರೋಪಿಗಳ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಪ್ರಮುಖ ಆರೋಪಿಗಳು ಎನ್ನಲಾದ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅಬ್ದುಲ್ ಮಥೀನ್ ಅಹಮದ್ ತಾಹಾ ಅವರನ್ನು ಪಶ್ಚಿಮ ಬಂಗಾಳದ ಪೂರ್ವ ಮೇದಿನಿಪುರ ಜಿಲ್ಲೆಯಲ್ಲಿ ಶುಕ್ರವಾರ ಬಂಧಿಸಲಾಗಿದೆ.

'ಬೆಂಗಳೂರಿನ ಬ್ರೂಕ್‌ಫೀಲ್ಡ್‌ನಲ್ಲಿರುವ ಕೆಫೆಯಲ್ಲಿ ಮಾರ್ಚ್ 1ರಂದು ಬಾಂಬ್ ಸ್ಫೋಟಿಸಲಾಗಿತ್ತು. ಬಾಂಬ್ ಇರಿಸಿದ್ದ ತೀರ್ಥಹಳ್ಳಿಯ ಮುಸಾವೀರ್ ಹಾಗೂ ಅಬ್ದುಲ್ ಮಥೀನ್ ತಲೆಮರೆಸಿಕೊಂಡಿದ್ದರು. ಪಶ್ಚಿಮ ಬಂಗಾಳದಲ್ಲಿ ಶುಕ್ರವಾರ (ಏಪ್ರಿಲ್ 12) ಬೆಳಿಗ್ಗೆ ಕಾರ್ಯಾಚರಣೆ ನಡೆಸಿ ಇಬ್ಬರನ್ನೂ ಸೆರೆ ಹಿಡಿಯಲಾಗಿದೆ' ಎಂದು ಎನ್‌ಐಎ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಪಶ್ಚಿಮ ಬಂಗಾಳಕ್ಕೆ ಕೆಲ ದಿನಗಳ ಹಿಂದೆಯಷ್ಟೇ ಬಂದಿದ್ದ ಶಂಕಿತರು, ಹೋಟೆಲ್‌ವೊಂದರಲ್ಲಿ ಉಳಿದುಕೊಂಡಿದ್ದರು. ಎರಡು ದಿನ ಬಿಟ್ಟು ಹೋಟೆಲ್ ಕೊಠಡಿ ಖಾಲಿ ಮಾಡಿ ಗಡಿ ಮೂಲಕ ಬಾಂಗ್ಲಾದೇಶಕ್ಕೆ ಹೋಗಲು ತಯಾರಿ ನಡೆಸುತ್ತಿದ್ದ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿತ್ತು' ಎಂದು ಅವರು ತಿಳಿಸಿದರು.

ಪ್ರಕರಣದ ಆರೋಪಿಗಳನ್ನು ಕೋಲ್ಕತ್ತದ ವಿಶೇಷ ನ್ಯಾಯಾಲಯಕ್ಕೆ ಎನ್‌ಐಎ ಅಧಿಕಾರಿಗಳು ಶುಕ್ರವಾರ ಹಾಜರುಪಡಿಸಿದರು ಪಿಟಿಐ ಚಿತ್ರ

10ನೇ ಪುಟ ನೋಡಿ

3 ದಿನ ಎನ್‌ಐಎ ಕಸ್ಟಡಿಗೆ

'ಮುಸಾವೀರ್ ಹಾಗೂ ಅಬ್ದುಲ್ ಮಥೀನ್‌ನನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಲಾಯಿತು. ಟ್ರಾನ್ಸಿಟ್ ವಾರೆಂಟ್ ಮೇಲೆ ಇಬ್ಬರನ್ನೂ ಮೂರು ದಿನ ಕಸ್ಟಡಿಗೆ ಪಡೆಯಲಾಗಿದೆ. ಬೆಂಗಳೂರಿಗೆ ಕರೆತಂದು ವಿಚಾರಣೆ ಮುಂದುವರಿಸಲಾಗುವುದು' ಎಂದು ಎನ್‌ಐಎ ಅಧಿಕಾರಿಯೊಬ್ಬರು ತಿಳಿಸಿದರು.

ಮುಸಾವೀರ್ ಹುಸೇನ್

ಅಬ್ದುಲ್ ಮಥೀನ್

ಬಿಜೆಪಿ–ಟಿಎಂಸಿ ವಾಕ್ಸಮರ

ಕೋಲ್ಕತ್ತ (ಪಿಟಿಐ): ಕೆಫೆ ಬಾಂಬ್ ಸ್ಫೋಟ ಪ್ರಕರಣದ ಇಬ್ಬರು ಆರೋಪಿಗಳನ್ನು ಪಶ್ಚಿಮ ಬಂಗಾಳದಲ್ಲಿ ಬಂಧಿಸಿದ ಬೆನ್ನಲ್ಲೇ ಆಡಳಿತಾರೂಢ ಟಿಎಂಸಿ ಮತ್ತು ವಿರೋಧ ಪಕ್ಷ ಬಿಜೆಪಿ ಮಧ್ಯೆ ವಾಕ್ಸಮರ ಶುರುವಾಗಿದೆ.

ಟಿಎಂಸಿ ಆಡಳಿತವು ರಾಜ್ಯವನ್ನು ಉಗ್ರರ ಸುರಕ್ಷಿತ ಸ್ವರ್ಗವಾಗಿ ಪರಿವರ್ತಿಸಿದೆ ಎಂದು ಬಿಜೆಪಿ ಗಂಭೀರ ಆರೋಪ ಮಾಡಿದೆ.

'ಪ್ರಕರಣದ ಆರೋಪಿಗಳನ್ನು ಎನ್‌ಐಎ ಬಂಧಿಸಿದೆ. ಮಮತಾ ಬ್ಯಾನರ್ಜಿ ಅವರ ಅಧಿಕಾರ ಅವಧಿಯಲ್ಲಿ ಪಶ್ಚಿಮ ಬಂಗಾಳವು ಭಯೋತ್ಪಾದಕರ ಸುರಕ್ಷಿತ ಸ್ವರ್ಗವಾಗಿದೆ' ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅಮಿತ್ ಮಾಳವೀಯ 'ಎಕ್ಸ್'ನಲ್ಲಿ ವಾಗ್ದಾಳಿ ನಡೆಸಿದ್ದಾರೆ.

10ನೇ ಪುಟ ನೋಡಿ

2ನೇ ಹಂತ: ಮೊದಲ ದಿನ 41 ಮಂದಿ ಕಣಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 14 ಲೋಕಸಭಾ ಕ್ಷೇತ್ರಗಳಲ್ಲಿ ಮೊದಲ ದಿನದಿಂದಲೇ ನಾಮಪತ್ರ ಸಲ್ಲಿಕೆ ಬಿರುಸಾಗಿದೆ. ಶುಕ್ರವಾರ 41 ಅಭ್ಯರ್ಥಿಗಳು 57 ನಾಮಪತ್ರಗಳನ್ನು ಸಲ್ಲಿಸಿದ್ದಾರೆ.

ವಿಜಯಪುರ, ಕಲಬುರಗಿ, ಕೊಪ್ಪಳ, ಬಳ್ಳಾರಿ ಮತ್ತು ದಾವಣಗೆರೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಮೊದಲ ದಿನವೇ ನಾಮಪತ್ರ ಸಲ್ಲಿಸಿದ್ದರೆ, ಕಲಬುರಗಿ, ಕೊಪ್ಪಳ, ಬಳ್ಳಾರಿ ಮತ್ತು ಉತ್ತರ ಕನ್ನಡ ಕ್ಷೇತ್ರಗಳಲ್ಲಿ ಬಿಜೆಪಿಯ ಉಮೇದುವಾರರು ಕಣಕ್ಕಿಳಿದಿದ್ದಾರೆ.

ಬಿಎಸ್‌ಪಿಯಿಂದ 2, ಎಎಪಿಯಿಂದ ಒಂದು, ಇತರ ನೋಂದಾಯಿತ ಪಕ್ಷಗಳಿಂದ 20 ಹಾಗೂ ಪಕ್ಷೇತರರಿಂದ 14 ನಾಮಪತ್ರಗಳು ಸಲ್ಲಿಕೆಯಾಗಿವೆ.

ಬಂಡಾಯದ ಬಿಸಿ: ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳಿಗೂ ಬಂಡಾಯ ಅಭ್ಯರ್ಥಿಗಳ ಸ್ಪರ್ಧೆಯ ಬಿಸಿ ಮೊದಲ ದಿನವೇ ತಟ್ಟಿದೆ. ಬಿ.ಎಸ್. ಯಡಿಯೂರಪ್ಪ ಕುಟುಂಬದ ವಿರುದ್ಧ ತೊಡೆ ತಟ್ಟಿರುವ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಶಿವಮೊಗ್ಗ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.

ದಾವಣಗೆರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಜಿ.ಬಿ. ವಿನಯ್ ಕುಮಾರ್ ಪಕ್ಷೇತರರಾಗಿ ಕಣಕ್ಕಿಳಿದರು.

ಮೊದಲ ದಿನ ನಾಮಪತ್ರ ಸಲ್ಲಿಸಿದ ಪ್ರಮುಖರು

ಬಿಜೆಪಿ

ಹೆಸರು	ಕ್ಷೇತ್ರ
ಉಮೇಶ್ ಜಾಧವ	ಕಲಬುರಗಿ
ಬಿ. ಶ್ರೀರಾಮುಲು	ಬಳ್ಳಾರಿ
ವಿಶ್ವೇಶ್ವರ ಹೆಗಡೆ ಕಾಗೇರಿ	ಉತ್ತರ ಕನ್ನಡ
ಬಸವರಾಜ್ ಕ್ಯಾವಟರ್	ಕೊಪ್ಪಳ

ಕಾಂಗ್ರೆಸ್

ಹೆಸರು	ಕ್ಷೇತ್ರ
ರಾಧಾಕೃಷ್ಣ ದೊಡ್ಡಮನಿ	ಕಲಬುರಗಿ
ಇ. ತುಕಾರಾಂ	ಬಳ್ಳಾರಿ
ಪ್ರಭಾ ಮಲ್ಲಿಕಾರ್ಜುನ	ದಾವಣಗೆರೆ
ರಾಜಶೇಖರ ಹಿಟ್ನಾಳ)	ಕೊಪ್ಪಳ

ಬಂಡಾಯ

ಹೆಸರು	ಕ್ಷೇತ್ರ
ಕೆ.ಎಸ್. ಈಶ್ವರಪ್ಪ	ಶಿವಮೊಗ್ಗ (ಬಿಜೆಪಿ)
ಜಿ.ಬಿ. ವಿನಯ್ ಕುಮಾರ್	ದಾವಣಗೆರೆ (ಕಾಂಗ್ರೆಸ್)

ಅಭ್ಯರ್ಥಿಗಳ ಆಸ್ತಿ ವಿವರ 12

ಮೇ 29ರಿಂದ ಶಾಲೆ ಪುನರಾರಂಭ

ಬೆಂಗಳೂರು: ರಾಜ್ಯ ಪಠ್ಯಕ್ರಮದ ಎಲ್ಲ ಸರ್ಕಾರಿ, ಅನುದಾನಿತ, ಖಾಸಗಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಮೇ 29ರಿಂದ ಪುನರಾರಂಭವಾಗಲಿವೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ 2024–25ನೇ ಸಾಲಿನ ಶೈಕ್ಷಣಿಕ ವರ್ಷದ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದ್ದು, 18 ದಿನಗಳು ದಸರಾ ರಜೆ, 48 ದಿನಗಳು ಬೇಸಿಗೆ ರಜೆ ನೀಡಿದೆ. ಒಟ್ಟು 244 ದಿನಗಳನ್ನು ಶಾಲಾ ಕರ್ತವ್ಯದ ದಿನಗಳೆಂದು ನಿಗದಿ ಮಾಡಲಾಗಿದೆ. ಮಕ್ಕಳು ಹಾಗೂ ಶಿಕ್ಷಕರಿಗೆ 121 ದಿನಗಳ ಒಟ್ಟಾರೆ ರಜೆ ದೊರಕಲಿದೆ.

ಶಾಲಾ ಅವಧಿಯ 244 ದಿನಗಳಲ್ಲಿ ಬೋಧನೆ ಹಾಗೂ ಕಲಿಕಾ ಪ್ರಕ್ರಿಯೆಗೆ 180 ದಿನಗಳನ್ನು ಮೀಸಲಿಡಲಾಗಿದೆ.

2024-25ನೇ ಸಾಲಿನ ಮೊದಲ ಅವಧಿ	ಮೇ 29–ಅ.2
ದಸರಾ ರಜೆ	ಅ.3–ಅ.20
2024-25ನೇ ಸಾಲಿನ ಎರಡನೇ ಅವಧಿ	ಅ.21–ಏ.10
ಬೇಸಿಗೆ ರಜೆ	ಏ.11–ಮೇ 28

ಚಿನಕುರಳಿ

ಪ್ರಕಾಶ್ ಶೆಟ್ಟಿ

ADVERTORIAL

ಮಂಡಿನೋವಿಗೆ ಪ್ಲೇಟ್ಲೆಟ್ ಪ್ಲಾಸ್ಮಾ ಚಿಕಿತ್ಸೆ

ನಿಮ್ಮ ದೇಹದ ಸ್ವಯಂ-ಗುಣಪಡಿಕೆಯ ಸಾಮರ್ಥ್ಯದ ಮೂಲಕ ನೋವನ್ನು ಉಪಶಮನಗೊಳಿಸುವ ಆಧುನಿಕ ನೈಸರ್ಗಿಕ ಆವಿಷ್ಕಾರ

ಮೊಣಕಾಲು ನೋವಿನ ಉಪಶಮನಕ್ಕೆ ಪ್ಲೇಟ್ಲೆಟ್ ಪ್ಲಾಸ್ಮಾ ಚಿಕಿತ್ಸೆ ಚುಚ್ಚುಮದ್ದು



ಮೊಣಕಾಲು ನೋವು ಹಿರಿಯರಿಂದ ಹಿಡಿದು ಕ್ರೀಡಾಪಟುಗಳವರೆಗೆ ಎಲ್ಲಾ ವಯಸ್ಸಿನ ಜನರನ್ನು ಬಾಧಿಸುವ ಸಮಸ್ಯೆಯಾಗಿದೆ. ಇದು ಗಾಯ, ಸಂಧಿವಾತ, ಅಥವಾ ಸವೆತ ದಿಂದ ಉಂಟಾಗುತ್ತದೆ, ಈ ಕಾರಣದಿಂದಾಗಿ ಜೀವನದ ಗುಣಮಟ್ಟದ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ.

ಪ್ಲೇಟ್‌ಲೆಟ್–ರಿಚ್ ಪ್ಲಾಸ್ಮಾ (ಪಿಆರ್‌ಪಿ) ಚಿಕಿತ್ಸೆಯು ಮೊಣಕಾಲಿನ ಅಸ್ವಸ್ಥತೆ–ಯನ್ನು ನಿವಾರಿಸುವಲ್ಲಿ ಮತ್ತು ಚಲನಶೀಲತೆಯನ್ನು ಹೆಚ್ಚಿಸುವಲ್ಲಿ ಸಾಕಷ್ಟು ಜನರ ಗಮನ ಸೆಳೆಯುತ್ತಿದೆ. ಇದು ನಿರಂತರ ನೋವಿನಿಂದ ಬಳಲುತ್ತಿರುವವರಿಗೆ ನವೀಕೃತ ಜೀವನವನ್ನು ನೀಡುತ್ತದೆ.

ಪಿಆರ್‌ಪಿ ಚಿಕಿತ್ಸೆಯು ಅತ್ಯಾಧುನಿಕ ವೈದ್ಯಕೀಯ ವಿಧಾನವಾಗಿದ್ದು, ಮೊಣಕಾಲು ನೋವನ್ನು ಅದರ ಮೂಲದಲ್ಲಿ ಉಪಶಮನಗೊಳಿಸಲು ದೇಹದ ನೈಸರ್ಗಿಕ ಗುಣಪಡಿಸುವ ಕಾರ್ಯವಿಧಾನಗಳನ್ನು ಬಳಸಿ–ಕೊಳ್ಳುತ್ತದೆ. ನೋವಿನಿಂದ ಬಳಲುತ್ತಿರುವವರ ಸ್ವಂತ ಪ್ಲೇಟ್ಲೆಟ್ಗಳನ್ನು ಬಳಸಿಕೊಳ್ಳುವ ಮೂಲಕ, ಪಿಆರ್‌ಪಿ ಚುಚ್ಚುಮದ್ದು ಅಂಗಾಂಶದ ದುರಸ್ತಿ ಮತ್ತು ಪುನರುತ್ಪಾದನೆಯನ್ನು ಉತ್ತೇಜಿಸುತ್ತದೆ, ಮತ್ತು ಉರಿಯೂತ–ವನ್ನು ಕಡಿಮೆ ಮಾಡುತ್ತದೆ.

ಪಿಆರ್‌ಪಿ ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ:

1. ರಕ್ತ ಸಂಗ್ರಹಣೆ
2. ರಕ್ತದಿಂದ ಪ್ಲೇಟ್ಲೆಟ್ ಬೇರ್ಪಡಿಕೆ
3. ಪ್ಲೇಟ್ಲೆಟ್ ಸಂಗ್ರಹಿಸುವುದು
4. ಹಾನಿಗೊಳಗಾದ ಪ್ರದೇಶಕ್ಕೆ ಪಿಆರ್‌ಪಿ ಚುಚ್ಚುವುದು

ಈ ಚಿಕಿತ್ಸೆ ಏಕೆ ಜನರ ಗಮನ ಸೆಳೆಯುತ್ತಿದೆ?

- 30 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು

ಬಹುಪಾಲು ಜನರಿಗೆ ಸಂಧಿವಾತ ನೋವನ್ನು ಸರ್ಜರಿ ಇಲ್ಲದೇ ಉಪಶಮನಗೊಳಿಸುವ ಭರವಸೆ ಅಲಿವಿಯೇಟ್ ನೀಡುತ್ತದೆ. 45–60 ವರ್ಷ ವಯಸ್ಸಿನ ಆರಂಭಿಕ ಹಂತಗಳಲ್ಲಿ ಸಂಧಿವಾತ ರೋಗ ಲಕ್ಷಣಗಳನ್ನು ಹೊಂದಿರುವ ಜನರು, ನಂತರದ ವರ್ಷಗಳಲ್ಲಿ ತೀವ್ರವಾದ ಹಾನಿಯನ್ನು ತಡೆಗಟ್ಟಲು ಇವರ ಕ್ಲಿನಿಕ್‌ನಲ್ಲಿ ಸಹಾಯ ಪಡೆಯುವುದು ಉತ್ತಮ.

ಪಿಆರ್‌ಪಿ ಚಿಕಿತ್ಸೆಯಿಂದ ನೋವುರಹಿತ ನಾಳೆಯ ಸಾಧ್ಯತೆಯಿದೆ. ಇಂದೇ ಕರೆ ಮಾಡಿ ಮತ್ತು ಪ್ರಕಾಶಮಾನವಾದ, ಹೆಚ್ಚು ಸಕ್ರಿಯ ಭವಿಷ್ಯದತ್ತ ನಿಮ್ಮ ಮೊದಲ ಹೆಜ್ಜೆಯನ್ನು ಇರಿಸಿ.



ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಪರಿಣಾಮಕಾರಿ ಚಿಕಿತ್ಸೆ.

ಅಲಿವಿಯೇಟ್

ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ:
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ಜಯನಗರ | ವೈಟ್‌ಫೀಲ್ಡ್ | ಇಂದಿರಾನಗರ

CALL NOW 81475 50855 | 080 23614888

ಭಾರತೀಯ ಚುನಾವಣಾ ಆಯೋಗ
Election Commission of India

#IVoteForSure
#MeraVoteDeshKeLiye

iOS Android

ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳಲ್ಲಿ ನಿಮ್ಮ ಪಾತ್ರವನ್ನು ನಿರ್ವಹಿಸಿ

ಯಾವುದೇ ಮಾದರಿ ನೀತಿ ಸಂಹಿತೆ ಉಲ್ಲಂಘನೆಯನ್ನು ವರದಿ ಮಾಡಲು ಸಿ-ವಿಜಿಲ್ ಆ್ಯಪ್ ಸ್ಕ್ಯಾನ್ ಮತ್ತು ಡೌನ್‌ಲೋಡ್ ಮಾಡಿರಿ.

चुनाव का पर्व
DESH KA GARV
LOK SABHA ELECTION 2024

CBC 52101/13/0007/2425

ಮಯೂರ, ಸುಧಾ ಓದಿರಿ

ಯಲಹಂಕ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು

ವಿಭಾ ದೀಕ್ಷಿತ್
ಶೇ 98.83
ವಾಣಿಜ್ಯ ವಿಭಾಗ

ಎನ್‌. ಹಿಮ ಬಿಂದು
ಶೇ 98.66
ವಾಣಿಜ್ಯ ವಿಭಾಗ

ಪ್ರೇರಣಾ ಟಿ.ಎನ್‌.
ಶೇ 92.3
ವಿಜ್ಞಾನ/ ರೇವಾ ಇಂಡಿಪೆಂಡೆಂಟ್ ಪಿಯು ಕಾಲೇಜು, ಗಂಗಾನಗರ

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: Y/E.29/2024-25/02
ದಿನಾಂಕ: 04.04.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಮೈಸೂರು ವಿಭಾಗದಲ್ಲಿರುವ 22 ನಂ. ಲಿಫ್ಟ್‌ಗಳಿಗೆ ಬೇಕಾದ ವಿದ್ಯುತ್ ಪೂರೈಕೆಯ ವ್ಯವಸ್ಥೆ (ಮರು–ಟೆಂಡರು).	ರೂ. 84,69,384/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.04.2024, 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್ ಮೈಸೂರು

PUB/15/AAD/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ತೆರೆದ ಟೆಂಡರು ಸೂಚನೆ ಸಂ. 07/SBC/24 ದಿನಾಂಕ: 03.04.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಬೆಂಗಳೂರು – ಧರ್ಮಾವರಂ ವಿಭಾಗ:** ವಿಭಾಗೀಯ ವೇಗವನ್ನು 110 ಪ್ರತಿ ಗಂಟೆ ಕಿಮೀ. ನಿಂದ 130 ಪ್ರತಿ ಗಂಟೆ ಕಿಮೀ. ವರೆಗೆ ಹೆಚ್ಚಿಸುವದಕ್ಕೆ ಸಂಬಂಧಿಸಿದಂತೆ 63.4 ಕಿಮೀ ಉದ್ದಕ್ಕೆ ಟ್ರ್ಯಾಕ್‌ಗಳಿಗೆ ಹೊಂದಿಕೊಂಡಂತೆ ಡಬ್ಲ್ಯೂ–ಬೀಮ್ ಮೆಟಲ್ ಬ್ಯಾರಿಯರ್‌ನೊಂದಿಗೆ ಸುರಕ್ಷತಾ ಫೆನ್ಸಿಂಗ್‌ನ ಪೂರೈಕೆ. ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 24,60,46,965/-
2	**ಬೆಂಗಳೂರು – ಸಂಪಿಗೆ ರಸ್ತೆ ವಿಭಾಗ:** ವಿಭಾಗೀಯ ವೇಗವನ್ನು 110 ಪ್ರತಿ ಗಂಟೆ ಕಿಮೀ. ನಿಂದ 130 ಪ್ರತಿ ಗಂಟೆ ಕಿಮೀ. ವರೆಗೆ ಹೆಚ್ಚಿಸುವದಕ್ಕೆ ಸಂಬಂಧಿಸಿದಂತೆ 36.50 ಕಿಮೀ ಉದ್ದಕ್ಕೆ ಟ್ರ್ಯಾಕ್‌ಗಳಿಗೆ ಹೊಂದಿಕೊಂಡಂತೆ ಡಬ್ಲ್ಯೂ–ಬೀಮ್ ಮೆಟಲ್ ಬ್ಯಾರಿಯರ್‌ನೊಂದಿಗೆ ಸುರಕ್ಷತಾ ಫೆನ್ಸಿಂಗ್‌ನ ಪೂರೈಕೆ. ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 14,16,41,899/-
3	**ಉಪ ಕಾಮಗಾರಿ–1: ಬೆಂಗಳೂರು – ತುಮಕೂರು:** ಸಹಾಯಕ ವಿಭಾಗೀಯ ಇಂಜಿನಿಯರ್ / ಯಶವಂತಪುರ ಉಪ–ವಿಭಾಗದಲ್ಲಿ ಕಿಮೀ. 93/000–200 ರಲ್ಲಿ ಬ್ರಿಡ್ಜ್ ಸಂ. 268 ಅನ್ನು ಬಲವರ್ಧನೆ ಮಾಡುವುದು. **ಉಪ ಕಾಮಗಾರಿ–2:** ಬೈಯಪ್ಪನಹಳ್ಳಿ (ಬಿವೈಪಿಎಲ್) – ಧರ್ಮಾವರಂ (ಡಿಎಂಎಂ) ವಿಭಾಗದಲ್ಲಿ ಬ್ರಿಡ್ಜ್ ಸಂ. 535 ಅಪ್, 516 ಅಪ್, 490, 480, 434, 319, 288, 285, 281, 268, 266, 259, 224, 214 ಮತ್ತು 197 (ಒಟ್ಟು 15 ಬ್ರಿಡ್ಜ್‌ಗಳು) ರ ಅಪ್ರೋಚ್‌ಗಳಲ್ಲಿ, ಪ್ರಸ್ತಾವಿತ ಸೂಚನಾ ಫಲಕಗಳನ್ನು ಅಳವಡಿಸುವುದು. **ಉಪ ಕಾಮಗಾರಿ–3:** ಯಲಹಂಕ–ಬಂಗಾರಪೇಟೆ ವಿಭಾಗದಲ್ಲಿ ಬ್ರಿಡ್ಜ್ ಸಂ. 257 ರಲ್ಲಿ ಮತ್ತು ಬೆಂಗಳೂರು–ತುಮಕೂರು ವಿಭಾಗದ ಬ್ರಿಡ್ಜ್ ಸಂ. 352ಎ ರಲ್ಲಿ (ಒಟ್ಟು 2 ಬ್ರಿಡ್ಜ್‌ಗಳು) ಅಪ್ರೋಚ್‌ಗಳಲ್ಲಿ, ಪ್ರಸ್ತಾವಿತ ಸೂಚನಾ ಫಲಕಗಳನ್ನು ಅಳವಡಿಸುವುದು. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 98,68,175/-
4	**ಯಶವಂತಪುರ:** ಯಶವಂತಪುರ ಕೋಚಿಂಗ್ ಡಿಪೋನಲ್ಲಿರುವ 6 ಪ್ಲಾಟ್‌ಫಾರ್ಮ್‌ಗಳು, 4 ಲೈನ್‌ಗಳಿಗೆ ನೀರಿನ ಸೌಲಭ್ಯಗಳಿಗಾಗಿ ಕ್ಯಾಮ್‌ಟೆಕ್ ವಿನ್ಯಾಸದ ಸ್ಕಾಡಾ ವ್ಯವಸ್ಥೆಯನ್ನು 2 ವರ್ಷಗಳ ಅವಧಿಗೆ ಕಾರ್ಯಗತಗೊಳಿಸುವುದು ಮತ್ತು ನಿರ್ವಹಣೆ ಕಾರ್ಯಗಳು.	ರೂ. 82,83,110/-
5	**ಉಪ ಕಾಮಗಾರಿ–1: ಯಶವಂತಪುರ:** ಪಿಟ್ ಲೈನ್‌ಗಳ ಮೇಲಿನ ಅಭಿವೃದ್ಧಿ ಕೆಲಸಗಳು ಹಾಗೂ ಪ್ರಸ್ತುತವಿರುವ ಪಿಟ್ ಲೈನ್ 1 ಮತ್ತು 2ರಲ್ಲಿ, 1.185 ಕಿಮೀ. ದೂರಕ್ಕೆ 52ಕೆಜಿ/90ಆರ್ ರೈಲ್‌ಗಳನ್ನು 52ಕೆಜಿ/90 ಯುಟಿಎಸ್ ಆಗಿ ಥ್ರೂ ರೈಲ್ ರಿನ್ಯೂವಲ್ (ಸೆಕೆಂಡರಿ) ಕೆಲಸಗಳು. **ಉಪ ಕಾಮಗಾರಿ–2: ಯಶವಂತಪುರ:** ಪಿಟ್ ಲೈನ್‌ಗಳ ಮೇಲಿನ ಅಭಿವೃದ್ಧಿ ಕೆಲಸಗಳು ಹಾಗೂ ಪ್ರಸ್ತುತವಿರುವ ಪಿಟ್ ಲೈನ್ 3 ಮತ್ತು 4ರಲ್ಲಿ, 1.135 ಕಿಮೀ. ದೂರಕ್ಕೆ 52ಕೆಜಿ/90ಆರ್ ರೈಲ್‌ಗಳನ್ನು 52ಕೆಜಿ/90 ಯುಟಿಎಸ್ ಆಗಿ ಥ್ರೂ ರೈಲ್ ರಿನ್ಯೂವಲ್ (ಸೆಕೆಂಡರಿ) ಕೆಲಸಗಳು. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 4,31,21,369/-
6	ಚಿಕ್ಕ ಬಾಣಾವರ ವಿಭಾಗದಲ್ಲಿ ಬಿ ಜಿ ನಗರ (ಬಿಜಿಎನ್‌ಆರ್), ಹಿರಿಸಾವೆ (ಹೆಚ್‌ಐಎಸ್‌ಇ), ಶ್ರವಣಬೆಳಗೊಳ (ಎಸ್‌ಬಿಜಿಎ), ಚನ್ನರಾಯಪಟ್ಟಣ (ಸಿಎನ್‌ಪಿಎ) ಮತ್ತು ಸಮುದ್ರವಳ್ಳಿ (ಡಿಎಸ್‌ವಿಎಸ್) ಯಾರ್ಡ್‌ಗಳಲ್ಲಿ 7.881 ಕಿಮೀನ ಲೂಪ್‌ಲೈನ್‌ಗಳ ಮೇಲಿನ ಥ್ರೂ ಬಾಲಸ್ಟ್ ರಿಕೌಪ್‌ಮೆಂಟ್‌ಗಳಿಗೆ ಸಂಬಂಧಿಸಿದಂತೆ ಹಿರಿಸಾವೆ (ಹೆಚ್‌ಐಎಸ್‌ಇ) ಡಿಪೋನಲ್ಲಿ (ಪರಿಮಾಣ = 12510 ಕ್ಯುಮೀ) ಲೀಡಿಂಗ್ ಮತ್ತು ಲೋಡಿಂಗ್‌ಗಳನ್ನು ಒಳಗೊಂಡಂತೆ ಮಶೀನ್ ಕ್ರಷ್ಡ್ ಟ್ರ್ಯಾಕ್ ಬಾಲಾಸ್ಟ್‌ಗಳ ತಯಾರಿಕೆ, ಪೂರೈಕೆ ಮತ್ತು ಶೇಖರಣೆ ಕಾರ್ಯಗಳು.	ರೂ. 1,50,43,900/-
7	**ಉಪ ಕಾಮಗಾರಿ–1: ಚಿಕ್ಕ ಬಾಣಾವರ – ಹಾಸನ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್ / ಕುಣಿಗಲ್ ಉಪ–ವಿಭಾಗದಲ್ಲಿ ಬರುವ ನಿಲ್ದಾಣಗಳಾದ ನೆಲಮಂಗಲ (ಎನ್‌ಎಂಜಿಎ) ದ ಕಿಮೀ. 13/300–14/000 ರಲ್ಲಿ, ಕುಣಿಗಲ್ (ಕೆಐಜಿಎಲ್) ನ ಕಿಮೀ. 58/200–550 ರ ಎಡಭಾಗದಲ್ಲಿ ಮತ್ತು ಬಲಭಾಗದಲ್ಲಿ, ಯಡಿಯೂರು (ವೈವೈ) ಇಲ್ಲಿ ಕಿಮೀ. 75/800–76/200 ರ ಎಡಭಾಗದಲ್ಲಿ ಮತ್ತು ಬಲಭಾಗದಲ್ಲಿ ಮತ್ತು ಬಿಜಿ ನಗರ (ಬಿಜಿಎನ್‌ಆರ್) ಇಲ್ಲಿ ಕಿಮೀ. 90/000–550 ರ ಎಡಭಾಗದ ನಿಲ್ದಾಣಗಳಲ್ಲಿ ಬೌಂಡರಿ ಗೋಡೆಯ ನಿರ್ಮಾಣ, **ಉಪ ಕಾಮಗಾರಿ–2:** ಶ್ರವಣಬೆಳಗೊಳ (ಎಸ್‌ಬಿಜಿಎ) ನಿಲ್ದಾಣ: ಪಿಎಫ್–1 ರಲ್ಲಿ ಪ್ರಸ್ತಾವಿತ ಪ್ಲಾಟ್‌ಫಾರ್ಮ್ ಶೌಚಾಲಯದ ನಿರ್ಮಾಣ ಕಾರ್ಯ. **ಉಪ ಕಾಮಗಾರಿ–3:** ಬೆಂಗಳೂರು–ಸೇಲಂ ವಿಭಾಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ 1500 ಮೀ ಉದ್ದದ ಆರ್‌ಸಿಸಿ ಡ್ರೈನ್‌ನ ನಿರ್ಮಾಣ, ಸಹಾಯಕ ವಿಭಾಗೀಯ ಇಂಜಿನಿಯರ್/ಧರ್ಮಪುರಿ ವಿಭಾಗದಲ್ಲಿ ಬರುವ ಹೊಸೂರು (ಹೆಚ್‌ಎಸ್‌ಆರ್‌ಎ) ಯಾರ್ಡ್‌ನಲ್ಲಿ 10 ನಂ. ಪಾಯಿಂಟ್‌ಗಳು ಮತ್ತು ಕ್ರಾಸಿಂಗ್‌ಗಳಿಗೆ ಬೇಕಾದ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ ಕೆಲಸಗಳು. ನಿರ್ವಹಣೆಯ ಅವಧಿ 6 ತಿಂಗಳುಗಳು.	ರೂ. 3,65,50,782/-
8	**ಬೆಂಗಳೂರು – ಸೇಲಂ ವಿಭಾಗ:** ಓಮಲೂರು – ಲೊಟ್ಟೆಗೊಲ್ಲಹಳ್ಳಿ ನಿಲ್ದಾಣಗಳ ನಡುವೆ ರೈಲ್ವೆ ಸ್ಟೇಷನ್, ಸಿಬ್ಬಂದಿ ಗೃಹಗಳು, ಎಲ್‌ಸಿ ಗೇಟ್‌ಗಳು ಮತ್ತು ಟ್ರ್ಯಾಕ್‌ಮ್ಯಾನ್ ವಿಶ್ರಾಂತಿ ಗೃಹಗಳಿಗೆ ಬೇಕಾದ ಕುಡಿಯುವ ನೀರಿನ ಪೂರೈಕೆ.	ರೂ. 34,02,083/-
9	**ಉಪ ಕಾಮಗಾರಿ – 1:** (ಎ) ಬೆಂಗಳೂರು – ಸೇಲಂ ವಿಭಾಗದಲ್ಲಿ: ಸಹಾಯಕ ವಿಭಾಗೀಯ ಇಂಜಿನಿಯರ್/ಧರ್ಮಪುರಿ ವ್ಯಾಪ್ತಿಯ 1310/ಕಿಮೀ ರಿಂದ 1540/ಕಿಮೀ ವರೆಗಿನ 9.565 ಕಿಮೀ. ನ ಲೂಪ್ ಲೈನ್‌ಗಳ ಪ್ರಸ್ತುತವಿರುವ 52ಕೆಜಿ ಪಿಎಸ್‌ಸಿ ಸ್ಲೀಪರ್‌ಗಳ ಸಾಂದ್ರತೆಯನ್ನು ಹೆಚ್ಚಿಸುವುದು, (ಬಿ) ಚಿಕ್ಕ ಬಾಣಾವರ – ಹಾಸನ ವಿಭಾಗ: ನೆಲಮಂಗಲ (ಎನ್‌ಎಂಜಿಎ) ಯಾರ್ಡ್‌ನಲ್ಲಿ – 08 ಸಂ. ಪಾಯಿಂಟ್ಸ್ ಮತ್ತು ಕ್ರಾಸಿಂಗ್‌ಗಳಿಗೆ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ (2) ಧರ್ಮಪುರಿ (ಡಿಪಿಜೆ), ರಾಯಕೋಟೈ (ಆರ್‌ವೈಸಿ), ಪೆರಿಯ ನಾಗತುಣ್ಯೆ (ಪಿಆರ್‌ಎನ್‌ಟಿ), ಕೆಲಮಂಗಲಂ (ಕೆಎಂಎಲ್‌ಎಂ) ಮತ್ತು ಬಾಣಸವಾಡಿ (ಬಿಎಎನ್‌ಡಿ) ಯಾರ್ಡ್‌ಗಳು – ಒಟ್ಟು 11 ಸಂ. ಇಲ್ಲಿ ಪಾಯಿಂಟ್ಸ್ ಮತ್ತು ಕ್ರಾಸಿಂಗ್‌ಗಳಿಗೆ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ (ಡಿ) ಬೆಂಗಳೂರು – ಸೇಲಂ ವಿಭಾಗ: ಹೊಸೂರು (ಹೆಚ್‌ಎಸ್‌ಆರ್‌ಎ) ಯಾರ್ಡ್‌ನ 10 ಸಂ. ಪಾಯಿಂಟ್ಸ್ ಮತ್ತು ಕ್ರಾಸಿಂಗ್‌ಗಳಿಗೆ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ ಕೆಲಸಗಳಿಗೆ ಸಂಬಂಧಿಸಿದಂತೆ ಪೆರಿಯ ನಾಗತುಣ್ಯೆ (ಪಿಆರ್‌ಎನ್‌ಟಿ) ಡಿಪೋನಲ್ಲಿ (ಪರಿಮಾಣ = 21,150 ಕ್ಯುಮೀ) ಲೀಡಿಂಗ್ ಮತ್ತು ಲೋಡಿಂಗ್‌ಗಳನ್ನು ಒಳಗೊಂಡಂತೆ ಮಶೀನ್ ಕ್ರಷ್ಡ್ ಟ್ರ್ಯಾಕ್ ಬಾಲಾಸ್ಟ್‌ಗಳ ತಯಾರಿಕೆ, ಪೂರೈಕೆ ಮತ್ತು ಶೇಖರಣೆ ಕಾರ್ಯಗಳು. **ಉಪ–ಕಾಮಗಾರಿ–2:** ಬೆಂಗಳೂರು–ಸೇಲಂ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ಧರ್ಮಪುರಿ ವಿಭಾಗದಲ್ಲಿರುವ ರಾಯಕೋಟೈ (ಆರ್‌ವೈಸಿ) ನಿಲ್ದಾಣದಲ್ಲಿ ಟ್ರ್ಯಾಕ್ ಮಶೀನ್ ಸೈಡಿಂಗ್‌ನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಾಲಾಸ್ಟ್‌ಗಳ ಪೂರೈಕೆ ಮತ್ತು ಡಂಪಿಂಗ್ ಕೆಲಸಗಳು.	ರೂ. 2,03,93,140/-
10	**ಉಪ–ಕಾಮಗಾರಿ–1:** ಬೈಯಪ್ಪನಹಳ್ಳಿ – ಧರ್ಮಾವರಂ ವಿಭಾಗದಲ್ಲಿ ಬರುವ ರಾಜಾನುಕುಂಟೆ ಮತ್ತು ದೊಡ್ಡಬಳ್ಳಾಪುರ ನಿಲ್ದಾಣಗಳ ನಡುವೆ ಕಿಮೀ. 29/800–900 ರಲ್ಲಿ ಬ್ರಿಡ್ಜ್ ಸಂ. 490 (1ಥ12.20ಮೀ) ರಲ್ಲಿ ಸ್ಟೀಲ್ ಗಿರ್ಡರ್ ಅನ್ನು ಪಿಎಸ್‌ಸಿ ಸ್ಲಾಬ್‌ನೊಂದಿಗೆ ಪರಿವರ್ತಿಸುವುದು. **ಉಪ–ಕಾಮಗಾರಿ–2:** ಬೆಂಗಳೂರು – ಮೈಸೂರು ವಿಭಾಗದಲ್ಲಿ ನಾಯಂಡಹಳ್ಳಿ (ಎನ್‌ವೈಹೆಚ್) – ಜ್ಞಾನಭಾರತಿ ಹಾಲ್ಟ್ (ಜಿಎನ್‌ಬಿ) ನಿಲ್ದಾಣಗಳ ನಡುವೆ ಕಿಮೀ. 8/398 ರಲ್ಲಿ ಬ್ರಿಡ್ಜ್ ಸಂ. 448ರ ಮೇಲೆ 9.15 ಮೀ ಗಿಂತ ಹೆಚ್ಚಿ ಮತ್ತು 12.20 ಮೀ ವರೆಗಿನ ಸ್ಪಾನ್ ಬ್ರಿಡ್ಜ್‌ಗಳ ಸ್ಟೀಲ್ ಗಿರ್ಡರ್‌ಗಳನ್ನು ಪಿಎಸ್‌ಸಿ ಸ್ಲಾಬ್‌ಗಳಿಂದ ಪರಿವರ್ತನೆಗೊಳಿಸುವುದು. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 1,20,05,264/-
11	**ಕೆಎಸ್‌ಆರ್ ಬೆಂಗಳೂರು: ಉಪ ಕಾಮಗಾರಿ–1:** ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಬೆಂಗಳೂರು ದಂಡು ಕೊನೆಯಲ್ಲಿ ಪಿಎಫ್ ಸಂ. 9 ಮತ್ತು 10 ರ ಎಫ್‌ಓಬಿಗಳಿಗೆ ಲಿಫ್ಟ್ ನಂ. 1 ರ ಪೂರೈಕೆಗಾಗಿ ಪ್ರಸ್ತಾವಿತ ಸಿವಿಲ್ ಕಾಮಗಾರಿಗಳು. **ಉಪ ಕಾಮಗಾರಿ–2:** ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಬೆಂಗಳೂರು ದಂಡು ಕೊನೆಯಲ್ಲಿ ಪಿಎಫ್ ಸಂ. 5 ಮತ್ತು 6 ರ ಎಫ್‌ಓಬಿಗಳಿಗೆ ಲಿಫ್ಟ್ ನಂ. 1 ರ ಪೂರೈಕೆಗಾಗಿ ಪ್ರಸ್ತಾವಿತ ಸಿವಿಲ್ ಕಾಮಗಾರಿಗಳು. **ಉಪ ಕಾಮಗಾರಿ–3:** ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಹಿಂಭಾಗದಲ್ಲಿ ಮೆಟ್ರೋ ಸ್ಕೈ ವಾಕ್‌ನ ಎಫ್‌ಓಬಿ ಸಂಪರ್ಕಕ್ಕಾಗಿ ಲಿಫ್ಟ್‌ನ ಪೂರೈಕೆ. ಉಪ ಕಾಮಗಾರಿ–4: ಕೆಎಸ್‌ಆರ್ ಬೆಂಗಳೂರು – ಮೈಸೂರು ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ವಿಭಾಗದ – ಪ್ರಸ್ತಾವಿತ 7 ನಂ. ಟ್ರಾಕ್ ಮೆನ್ ವಿಶ್ರಾಂತಿ ಗೃಹ / ಟೂಲ್ ಕೊಠಡಿಗಳ ಉಳಿದಿರುವ ಕೆಲಸಗಳು. ನಿರ್ವಹಣೆಯ ಅವಧಿ 3 ತಿಂಗಳುಗಳು.	ರೂ. 1,42,12,041/-
12	**ಕೆಎಸ್‌ಆರ್ ಬೆಂಗಳೂರು ಮತ್ತು ಬೆಂಗಳೂರು ದಂಡು:** ಸಹಾಯಕ ವಿಭಾಗೀಯ ಇಂಜಿನಿಯರ್/ಜಿ/ಬೆಂಗಳೂರು ಉಪ–ವಿಭಾಗದಲ್ಲಿ ಕೆಎಸ್‌ಆರ್ ಬೆಂಗಳೂರು ಮತ್ತು ಬೆಂಗಳೂರು ದಂಡು ನಿಲ್ದಾಣಗಳಿಗೆ ಆರು ತಿಂಗಳುಗಳ ಅವಧಿಗೆ ರೈಲ್ವೆ ನಿಲ್ದಾಣ ಮತ್ತು ಸಿಬ್ಬಂದಿ ಗೃಹಗಳಿಗೆ ಬೇಕಾದ ಕುಡಿಯುವ ನೀರಿನ ಪೂರೈಕೆ.	ರೂ. 65,89,500/-
13	**ಬೆಂಗಳೂರು – ಮೈಸೂರು ವಿಭಾಗ:** ವರಿಷ್ಠ ವಿಭಾಗೀಯ ಇಂಜಿನಿಯರ್ / ಪಶ್ಚಿಮ / ಬೆಂಗಳೂರು ವಿಭಾಗದಲ್ಲಿ ಲೆವೆಲ್ ಕ್ರಾಸಿಂಗ್‌ಗಳಾದ ಎಲ್‌ಸಿ ಸಂ. 2, 9, 10, 24, 26, 31, 32, 35, 38, 42, 44, 45 – ಒಟ್ಟು 12 ಎಲ್‌ಸಿಗಳಿಗೆ ಸಾಧಾರಣ ಎತ್ತರದ ಗೇಜ್‌ಗಳನ್ನು ಒದಗಿಸುವುದು (29 ನಂ. ಎತ್ತರದ ಗೇಜ್‌ಗಳು) ನಿರ್ವಹಣೆಯ ಅವಧಿ 4 ತಿಂಗಳುಗಳು.	ರೂ. 2,37,36,360/-
14	**ಬೆಂಗಳೂರು:** ಬೆಂಗಳೂರು ನಿಲ್ದಾಣದ ಎಲ್ಲಾ ಪಿಎಫ್‌ಗಳು ಮತ್ತು ಪಿಟ್ ಲೈನ್‌ಗಳಿಗೆ 2 ವರ್ಷಗಳ ಅವಧಿಗೆ ಬೇಕಾದ ಪ್ರಸ್ತಾವಿತ ನೀರು ಸರಬರಾಜು ಮತ್ತು ನೀರಿನ ಹೈಡ್ರೆಂಟ್‌ಗಳ ಪೂರೈಕೆ.	ರೂ. 31,29,390/-
15	**ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ–1:** ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಉಪ ವಿಭಾಗದಲ್ಲಿ ಸಿಪಿಟಿ ಯಾರ್ಡ್‌ನ ಮೇಲೆ ಆರ್‌ಸಿಸಿ ಬಾಕ್ಸ್ ಲಾಂಚಿಂಗ್ ಮಾದರಿಯಲ್ಲಿ ಕಿಮೀ. 55/200–300 ರಲ್ಲಿ ಬ್ರಿಡ್ಜ್ ಸಂ. 572 ರಲ್ಲಿ ಹೆಚ್ಚುವರಿ ವೆಂಟ್ ವೇ – ಪ್ರಸ್ತುತ 1X2.40X1.2ಮೀ ಆರ್‌ಸಿಸಿ ಬಾಕ್ಸ್. ಪ್ರಸ್ತಾವಿತ–1X3.0ಮೀX2. 0ಮೀ (26.11ಮೀ ಬ್ಯಾರೆಲ್). **ಉಪ–ಕಾಮಗಾರಿ–2:** ಬೆಂಗಳೂರು – ಮೈಸೂರು ವಿಭಾಗ = 5 ಬ್ರಿಡ್ಜ್‌ಗಳು (ಬ್ರಿಡ್ಜ್ ಸಂ. 448ಡೌನ್, 583ಡೌನ್, 610ಅಪ್, 627ಅಪ್&ಡೌನ್ ಇಲ್ಲಿ ಅಪ್ರೋಚ್‌ಗಳಲ್ಲಿ ಪ್ರಸ್ತಾವಿತ ಸೂಚನಾ ಫಲಕಗಳನ್ನು (29 ನಂ.) ಅಳವಡಿಸುವುದು. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 1,63,37,832/-
16	**ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ–1:** ಕಿಮೀ. 46/000 ರಿಂದ 99/000 ವರೆಗಿನ ಅಪ್ ಮತ್ತು ಡೌನ್ ಲೈನ್‌ಗಳಲ್ಲಿರುವ ಪ್ರತ್ಯೇಕವಾದ ಸ್ಥಳದಲ್ಲಿ ಪ್ರಮಾಣಿತ ಅಗಲದೊಂದಿಗೆ ದಡಗಳನ್ನು ಬಲಗೊಳಿಸುವುದು. **ಉಪ ಕಾಮಗಾರಿ–2:** ಮಂಡ್ಯಮತ್ತು ಹಣಕೆರೆ ಯಾರ್ಡ್‌ಗಳಲ್ಲಿ ಪ್ರಸ್ತುತವಿರುವ 12 ರಲ್ಲಿ 1 ಟಿಡಬ್ಲ್ಯೂಎಸ್ ಮತ್ತು ವೆಲ್ಡೆಬಲ್ ಕ್ರಾಸಿಂಗ್‌ಗಳಲ್ಲಿರುವ ಕರ್ವ್ಡ್ ಸ್ವಿಚ್‌ಗಳ ಟಿಟಿಆರ್. **ಉಪ ಕಾಮಗಾರಿ–3: ಬೆಂಗಳೂರು – ಮೈಸೂರು ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಮಂಡ್ಯ ವಿಭಾಗದಲ್ಲಿ ಕಿಮೀ. 72/300–100/900 ರಲ್ಲಿರುವ ಒಟ್ಟು 16 ನಂ. ಮಿತಿಮೀರಿದ ಎಸ್‌ಇಜೆ ಗಳನ್ನು ಪಿಎಸ್‌ಸಿ ಅಭಿವೃದ್ಧಿಗೊಳ್ಳಲಾದ 52ಕೆಜಿ ಎಸ್‌ಇಜೆಗಳಾಗಿ ಪರಿವರ್ತಿಸುವುದು. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು. (ಸಂಯುಕ್ತ ಕಾಮಗಾರಿ).	ರೂ. 1,06,91,375/-
17	**ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ–1:** ಕೆಂಗೇರಿ (ಕೆಜಿಐ) ನಿಲ್ದಾಣದಲ್ಲಿ 50 ಕೆಎಲ್‌ಡಿ ಸಾಮರ್ಥ್ಯವುಳ್ಳ ಎಸ್‌ಟಿಪಿ ಟ್ಯಾಂಕ್‌ನ ಪೂರೈಕೆ. **ಉಪ–ಕಾಮಗಾರಿ–2:** ಹೆಜ್ಜಾಲ ಐಆರ್‌ಐಡಿಎಂ – ಹೆಜ್ಜಾಲ ಐಆರ್‌ಐಡಿಎಂ ನ ಕಿಮೀ. 19/400 ರಿಂದ 20/400 ನಡುವೆ ಪ್ರಸ್ತಾವಿತ ಬೌಂಡರಿ ಗೋಡೆಗಳ ನಿರ್ಮಾಣ ಹಾಗೂ 140 ಟನ್ ಕ್ರೇನ್‌ಗಾಗಿ ಪ್ರದರ್ಶನ ಟ್ರಾಕ್. ನಿರ್ವಹಣೆಯ ಅವಧಿ 24 ತಿಂಗಳುಗಳು (ಸಂಯುಕ್ತ ಕಾಮಗಾರಿ).	ರೂ. 3,38,24,934/-
18	**ಬೆಂಗಳೂರು – ಜೋಲಾರ್‌ಪೇಟೆ ವಿಭಾಗ:** ವಿಭಾಗೀಯ ವೇಗವನ್ನು 110 ಪ್ರತಿ ಗಂಟೆ ಕಿಮೀ. ನಿಂದ 130 ಪ್ರತಿ ಗಂಟೆ ಕಿಮೀ. ವರೆಗೆ (ಒಟ್ಟು 120 ಕಿಮೀ. ಉದ್ದ) ಹೆಚ್ಚಿಸುವದಕ್ಕೆ ಸಂಬಂಧಿಸಿದಂತೆ ಬಂಗಾರಪೇಟೆ – ಜೋಲಾರ್‌ಪೇಟೆ (ಬಿಡಬ್ಲ್ಯೂಟಿ–ಜೆಟಿಜೆ) ವಿಭಾಗದಲ್ಲಿ ಎಸ್‌ಬಿಸಿ–ಜೆಟಿಜೆ ಕಾಮಗಾರಿಗೆ ಸಂಬಂಧಿಸಿದಂತೆ 79.7 ಕಿಮೀ ಉದ್ದಕ್ಕೆ ಟ್ರ್ಯಾಕ್‌ಗಳಿಗೆ ಹೊಂದಿಕೊಂಡಂತೆ ಡಬ್ಲ್ಯೂ–ಬೀಮ್ ಮೆಟಲ್ ಬ್ಯಾರಿಯರ್‌ನೊಂದಿಗೆ ಸುರಕ್ಷತಾ ಫೆನ್ಸಿಂಗ್‌ನ ಪೂರೈಕೆ. ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 30,90,46,508/-
19	**ಬೆಂಗಳೂರು – ಜೋಲಾರ್‌ಪೇಟೆ ವಿಭಾಗ:** ವಿಭಾಗೀಯ ವೇಗವನ್ನು 110 ಪ್ರತಿ ಗಂಟೆ ಕಿಮೀ. ನಿಂದ 130 ಪ್ರತಿ ಗಂಟೆ ಕಿಮೀ. ವರೆಗೆ (ಒಟ್ಟು 120 ಕಿಮೀ. ಉದ್ದ) ಹೆಚ್ಚಿಸುವದಕ್ಕೆ ಸಂಬಂಧಿಸಿದಂತೆ ವೈಟ್‌ಫೀಲ್ಡ್ – ಬಂಗಾರಪೇಟೆ (ಡಬ್ಲ್ಯೂಎಫ್‌ಡಿ–ಬಿಡಬ್ಲ್ಯೂಟಿ) ವಿಭಾಗದಲ್ಲಿ ಎಸ್‌ಬಿಸಿ–ಜೆಟಿಜೆ ಕಾಮಗಾರಿಗೆ ಸಂಬಂಧಿಸಿದಂತೆ 40.3 ಕಿಮೀ ಉದ್ದಕ್ಕೆ ಟ್ರ್ಯಾಕ್‌ಗಳಿಗೆ ಹೊಂದಿಕೊಂಡಂತೆ ಡಬ್ಲ್ಯೂ–ಬೀಮ್ ಮೆಟಲ್ ಬ್ಯಾರಿಯರ್‌ನೊಂದಿಗೆ ಸುರಕ್ಷತಾ ಫೆನ್ಸಿಂಗ್‌ನ ಪೂರೈಕೆ. ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 15,62,61,871/-
20	**ಬೆಂಗಳೂರು – ಜೋಲಾರ್‌ಪೇಟೆ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ ಬಂಗಾರಪೇಟೆ ಉಪ–ವಿಭಾಗದಲ್ಲಿ ಪ್ರಸ್ತಾವಿತ 25 ಕೆಎಲ್‌ಡಿ ಸಾಮರ್ಥ್ಯದ ಕೊಳಚೆ ನೀರಿನ ಟ್ರೀಟ್‌ಮೆಂಟ್ ಸ್ಥಾವರ (ಎಸ್‌ಟಿಪಿ) ಟ್ಯಾಂಕ್‌ನ ಪೂರೈಕೆ. ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 90,83,523/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.04.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/09/AAD/PRB/SWR/2024-25 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

South Western Railway - SWR | SWRRLY | SWRRLY

ನಗರದಲ್ಲಿ 2 ಲಕ್ಷ ನಲ್ಲಿಗಳಿಗೆ ಏರಿಯೇಟರ್ ಅಳವಡಿಕೆ: ಜಲಮಂಡಳಿ

ಸಂಸ್ಕರಿತ ನೀರಿಗೆ ಬೇಡಿಕೆ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೆಚ್ಚು ಪ್ರಮಾಣದಲ್ಲಿ ನೀರು ಬಳಸುವವರಿಂದ (ಬಲ್ಕ್ ಬಳಕೆದಾರರು) ಸಂಸ್ಕರಿಸಿದ ನೀರಿನ ಬೇಡಿಕೆ ಹೆಚ್ಚಾಗುತ್ತಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಪ್ರತಿ ತಿಂಗಳು 10 ಲಕ್ಷ ಲೀಟರ್‌ಗೂ ಹೆಚ್ಚು ನೀರು ಬಳಸುವ 714 ಬಲ್ಕ್ ಬಳಕೆದಾರರಲ್ಲಿ, 127 ಬಲ್ಕ್ ಬಳಕೆದಾರರು ಸಂಸ್ಕರಿಸಿದ ನೀರಿಗೆ ಬೇಡಿಕೆ ಸಲ್ಲಿಸಿದ್ದಾರೆ. ಅವರ ಪ್ರದೇಶಗಳಿಗೆ ಸಮೀಪದ ಜಲಮಂಡಳಿ ಎಸ್‌ಟಿಪಿಗಳು ಹಾಗೂ ಖಾಸಗಿ ಎಸ್‌ಟಿಪಿಗಳಿಂದ ಸಂಸ್ಕರಿಸಿದ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು ಎಂದು ಜಲಮಂಡಳಿ ಅಧಿಕಾರಿಗಳ ಸಭೆಯಲ್ಲಿ ಸೂಚಿಸಿದರು.

ಸಂಸ್ಕರಿಸಿದ ನೀರಿಗೆ ಹೆಚ್ಚಿನ ಪ್ರಮಾಣದಲ್ಲಿ ಬೇಡಿಕೆಯಿಡುವ ಉದ್ದಿಮೆಗಳು ಹಾಗೂ ಕಟ್ಟಡ ನಿರ್ಮಾಣ ಸಂಸ್ಥೆಗಳಿಗೆ ಸಂಸ್ಕರಿಸಿದ ನೀರಿನ ದರದಲ್ಲಿ ಇನ್ನಷ್ಟು ರಿಯಾಯಿತಿ ನೀಡಲು ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

ಡಾ.ವಿ.ರಾಮ್‌ಪ್ರಸಾತ್ ಮನೋಹರ್

ನಗರದಲ್ಲಿ ಏರಿಯೇಟರ್ ಅಳವಡಿಸುವುದನ್ನು ಕಡ್ಡಾಯಗೊಳಿಸಿದ ನಂತರ 2,86,114 ನಲ್ಲಿಗಳಿಗೆ ಏರಿಯೇಟರ್ ಅಳವಡಿಸಲಾಗಿದೆ. 714 ಬಲ್ಕ್ ಗ್ರಾಹಕರಲ್ಲಿ 481 ಬಲ್ಕ್ ಗ್ರಾಹಕರು ಈಗಾಗಲೇ ತಮ್ಮ ವ್ಯಾಪ್ತಿಯ ಪ್ರದೇಶದಲ್ಲಿ ಏರಿಯೇಟರ್ ಅಳವಡಿಸಿಕೊಂಡಿದ್ದಾರೆ ಎಂದರು.

ಸಭೆಯಲ್ಲಿ ಮುಖ್ಯ ಎಂಜನಿಯರ್‌ಗಳಾದ ಎಲ್. ಕುಮಾರನಾಯಕ್, ಕೆ.ಎನ್.ಪರಮೇಶ, ಎಸ್.ವಿ.ವೆಂಕಟೇಶ, ಎ.ರಾಜಶೇಖರ್, ಮಹೇಶ ಕೆ.ಎನ್., ರಾಜೀವ್ ಕೆ.ಎನ್., ಗಂಗಾಧರ್ ಬಿ.ಸಿ., ದೇವರಾಜು ಎಂ., ಜಯಶಂಕರ್ ಉಪಸ್ಥಿತರಿದ್ದರು.

ಕೊಳವೆಬಾವಿ ಕೊರೆಯಲು ಸೂಚನೆ: ಬೆಂಗಳೂರು ಪೂರ್ವಭಾಗದಲ್ಲಿ ನೀರಿನ ಕೊರತೆ ನಿಭಾಯಿಸುವ ನಿಟ್ಟಿನಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಸಬೇಕು ಹಾಗೂ ಕೊಳವೆ ಬಾವಿಗಳ ಪುನಶ್ಚೇತನ ಮಾಡಬೇಕು ಎಂದು ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಶುಕ್ರವಾರ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಂದ ದೂರು ಆಲಿಸಿಅವರು ಅಧಿಕಾರಿಗಳೊಂದಿಗೆ ಮಾತನಾಡಿದರು.

ಪೂರ್ವ ಭಾಗದಲ್ಲಿ 30 ಕೊಳವೆಬಾವಿಗಳ ನ್ನು ಕೊರೆಸಲಾಗಿದ್ದು, ಇನ್ನೂ 20 ಕೊರೆಸಲು ಸೂಚಿಸಿದರು.

ಬಿಎಎಫ್ ಜೊತೆ ಒಪ್ಪಂದ

ಅಪಾರ್ಟ್‌ಮೆಂಟ್‌ಗಳಲ್ಲಿ ಸಂಸ್ಕರಿಸಿದ ನೀರನ್ನು ಗ್ರಾಹಕರಿಗೆ ಜಲಮಂಡಳಿ ವತಿಯಿಂದ ಸರಬರಾಜು ಮಾಡಲು ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಷನ್‌ನೊಂದಿಗೆ (ಬಿಎಎಫ್) ಜಲಮಂಡಳಿ ಒಪ್ಪಂದ ಮಾಡಿಕೊಂಡಿದೆ.

ಅಪಾರ್ಟ್‌ಮೆಂಟ್‌ಗಳಿಂದ ಸಂಸ್ಕರಿಸಿದ ನೀರನ್ನು ಟ್ಯಾಂಕರ್‌ಳ ಮೂಲಕ ಜಲಮಂಡಳಿ ಸರಬರಾಜು ಮಾಡಲಿದೆ. ಮುಂದಿನ ಹಂತದಲ್ಲಿ ಸತತವಾಗಿ ಬೇಡಿಕೆ ಇರುವ ಗ್ರಾಹಕರಿಗೆ ಪೈಪ್‌ಲೈನ್ ಮೂಲಕವೂ ಸಂಸ್ಕರಿಸಿದ ನೀರು ಪೂರೈಸಲಾಗುತ್ತದೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ತಿಳಿಸಿದರು.

ಅಪಾರ್ಟ್‌ಮೆಂಟ್‌ಗಳಲ್ಲಿ ಸಂಸ್ಕರಿಸಿದ ನೀರನ್ನು ಬಳಕೆ ಮಾಡಿದ ನಂತರವೂ ಉಳಿಯುತ್ತಿದೆ. ಅದನ್ನು ಅನಿವಾರ್ಯವಾಗಿ ನಾಲೆಗಳಿಗೆ ಬಿಡಲಾಗುತ್ತಿತ್ತು. ಇದನ್ನು ತಡೆಯಲು ಮೂರನೇ ವ್ಯಕ್ತಿಗೆ ಸಂಸ್ಕರಿಸಿದ ನೀರು ಮಾರಾಟ ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಆದರೆ ಇದನ್ನು ಪೂರೈಸುವ ಸಂಸ್ಥೆಯ ಕೊರತೆ ಎದುರಾಗಿತ್ತು. ಆದ್ದರಿಂದ ಬಿಎಎಫ್ ಮತ್ತು ಬಳಕೆದಾರರ ನಡುವೆ ಜಲಮಂಡಳಿ ಕೊಂಡಿಯಾಗಿ ಕಾರ್ಯನಿರ್ವಹಿಸಲಿದೆ ಎಂದರು.

ಬಿಎಎಫ್ ಅಧ್ಯಕ್ಷ ವಿಕ್ರಮ್, ಪದಾಧಿಕಾರಿಗಳಾದ ಅರುಣ್ ಕುಮಾರ್, ಸತೀಶ್ ಮಲ್ಯ ಉಪಸ್ಥಿತರಿದ್ದರು.

ನೀರು ಸರಬರಾಜು ಮಂಡಳಿ ವಿರುದ್ಧದ ಅರ್ಜಿ: ಹೈಕೋರ್ಟ್ ಆದೇಶ

‘ಯೋಜನಾ ಶುಲ್ಕ ಸಂಗ್ರಹ ಕಾನೂನುಬಾಹಿರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವಸತಿ ಕಟ್ಟಡಗಳಿಂದ ಅವುಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಬೆಂಗಳೂರು ಒಳಚರಂಡಿ ಹಾಗೂ ನೀರು ಸರಬರಾಜು ಮಂಡಳಿ ಸಂಗ್ರಹ ಮಾಡುತ್ತಿರುವ, ಗ್ರೇಟರ್ ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಯೋಜನಾ ಶುಲ್ಕ (ಜಿಬಿಡಬ್ಲ್ಯು-ಎಸ್‌ಎಸ್‌ಪಿ) ಹಾಗೂ ಬೆನಿಫಿಷಿಯರಿ ಕ್ಯಾಪಿಟಲ್ ಕಾಂಟ್ರಿಬ್ಯೂಷನ್(ಬಿಸಿಸಿ) ಶುಲ್ಕಗಳನ್ನು ಕಾನೂನು ಬಾಹಿರ ಎಂದು ಹೈಕೋರ್ಟ್ ಘೋಷಿಸಿದೆ.

ಈ ಸಂಬಂಧ ಶೋಭಾ ಲಿಮಿಟೆಡ್ ಮತ್ತು ಬ್ರಿಗೇಡ್ ಎಂಟರ್ ಪ್ರೈಸಸ್ ಲಿಮಿಟೆಡ್ ಕಂಪನಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಮಹತ್ವದ ಆದೇಶ ನೀಡಿದೆ.

ಅರ್ಜಿದಾರರಿಂದ ಸಂಗ್ರಹಿಸಿರುವ ಗ್ರೇಟರ್ ಬೆಂಗಳೂರು ನೀರು ಪೂರೈಕೆ ಮತ್ತು ಒಳಚರಂಡಿ ಯೋಜನಾ ಶುಲ್ಕವನ್ನು ವಾಪಸ್ ನೀಡುವಂತೆ ನ್ಯಾಯಪೀಠ ನಿರ್ದೇಶಿಸಿದೆ.

ಪ್ರಸ್ತುತ ಜಲಮಂಡಳಿಯು ಬಹು ಮಹಡಿಕಟ್ಟಡಗಳಿಂದ ಸಂಗ್ರಹ ಮಾಡುತ್ತಿರುವ ಮುಂಗಡ ಪ್ರೊ ರೇಟಾ ಶುಲ್ಕ ಮತ್ತು ಕಟ್ಟಡಗಳ ನಿರ್ಮಾಣಕ್ಕಾಗಿ ಸಂಸ್ಕರಿತ ನೀರು ಶುಲ್ಕ ಸಂಗ್ರಹದ ಕ್ರಮವನ್ನು ನ್ಯಾಯಪೀಠ ಎತ್ತಿ ಹಿಡಿದಿದೆ.

ಏತನ್ಮಧ್ಯೆ, ‘ರಾಜ್ಯ ಸರ್ಕಾರ ಅಥವಾ ಬೆಂಗಳೂರು ಜಲಮಂಡಳಿ, ಈ ಎರಡೂ ಶುಲ್ಕಗಳನ್ನು ವಿಧಿಸಲು ಬೆಂಗಳೂರು ನೀರು ಮತ್ತು ಒಳಚರಂಡಿ ಕಾಯ್ದೆ-1964 ಮತ್ತು ಬೆಂಗಳೂರು ನೀರು ಪೂರೈಕೆ ನಿಯಂತ್ರಣ-1965ರ ಅಡಿ ಸೂಕ್ತ ತಿದ್ದುಪಡಿ ತರುವ ಮೂಲಕ ಮುಂದಿನ ಕ್ರಮ ಜರುಗಿಸಬಹುದಾಗಿದೆ’ ಎಂದು ನ್ಯಾಯಪೀಠ ವಿವರಿಸಿದೆ.

‘ಅರ್ಜಿದಾರರು ಈಗಾಗಲೇ ಜಲಮಂಡಳಿಗೆ ಪಾವತಿ ಮಾಡಿರುವ ಬಿಸಿಸಿ ಹಾಗೂ ಜಿಬಿಡಬ್ಲ್ಯು-ಎಸ್‌ಎಸ್‌ಪಿ ಶುಲ್ಕವನ್ನು ವಾಪಸು ಪಡೆಯಲು ಅರ್ಹರಿದ್ದಾರೆ. ಜಲಮಂಡಳಿ ಅವರಿಗೆ 12 ವಾರಗಳಲ್ಲಿ ಹಣ ಮರು ಪಾವತಿಸಬೇಕು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಜಿಬಿಡಬ್ಲ್ಯುಎಸ್‌ಎಸ್‌ಪಿ ಹಾಗೂ ಬಿಸಿಸಿ ಶುಲ್ಕವನ್ನು ಜಲಮಂಡಳಿ ಸಂಗ್ರಹ ಮಾಡುತ್ತಿದೆ. ಇದರಿಂದ ಬಂದ ಹಣವನ್ನು ಮಂಡಳಿಯು ಹೊಸ ಪ್ರದೇಶಗಳ ನೀರು ಪೂರೈಕೆ ಹಾಗೂ ಒಳಚರಂಡಿ ವ್ಯವಸ್ಥೆಯ ಮೂಲ ಸೌಕರ್ಯಕ್ಕಾಗಿ ಬಳಕೆ ಮಾಡುತ್ತಿದೆ. ಆದರೆ, ಯಾವುದೇ ಶಾಸನಾತ್ಮಕ ಬೆಂಬಲ ಇಲ್ಲದೆ ಈ ರೀತಿ ಶುಲ್ಕಗಳನ್ನು ವಿಧಿಸುವ ಅಧಿಕಾರ ಮಂಡಳಿಗಿಲ್ಲ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಬಿಎಂಟಿಸಿ ಪ್ರಯಾಣಿಕರ ಗುರಿಯಾಗಿಸಿ ಮೊಬೈಲ್ ಕಳ್ಳತನ

‘ಗೋಕಾವರಂ ಗ್ಯಾಂಗ್’: ಆರು ಬಂಧನ

ಪ್ರಜಾವಾಣಿ ವಾರ್ತೆ

ಪೆದ್ದರಾಜು

ಬಾಲರಾಜು

ರಮೇಶ್

ರವಿತೇಜ



ವೆಂಕಟೇಶ್

ಸಾಯಿಕುಮಾರ್

ಬೆಂಗಳೂರು: ಬಿಎಂಟಿಸಿ ಬಸ್ ಹತ್ತುವ ನೆಪದಲ್ಲಿ ಪ್ರಯಾಣಿಕರ ಮೊಬೈಲ್ ಕಳ್ಳತನ ಮಾಡುತ್ತಿದ್ದ ಆಂಧ್ರಪ್ರದೇಶದ ‘ಗೋಕಾವರಂ ಗ್ಯಾಂಗ್’ನ ಆರು ಮಂದಿ ಆರೋಪಿಗಳನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಾಯಿಕುಮಾರ್, ಪೆದ್ದರಾಜು, ವೆಂಕಟೇಶ್, ರಮೇಶ್, ರವಿತೇಜ, ಬಾಲರಾಜು ಬಂಧಿತ ಆರೋಪಿಗಳು. ಬಂಧನದ ವೇಳೆ ಮೂರು ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿತ್ತು. ನಂತರ ₹30 ಲಕ್ಷ ಮೌಲ್ಯದ ವಿವಿಧ ಕಂಪನಿಗಳ 107 ಮೊಬೈಲ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಏಪ್ರಿಲ್ 4ರಂದು ವ್ಯಕ್ತಿಯೊಬ್ಬರು, ಬಿಎಂಟಿಸಿ ಬಸ್ ಹತ್ತುವಾಗ ಇದೇ ಗ್ಯಾಂಗ್‌ನ ಆರೋಪಿಗಳು ಮೊಬೈಲ್ ಕಳವು ಮಾಡಿದ್ದರು. ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು. ಮೊದಲ ಬಾರಿಗೆ ಈ ಗ್ಯಾಂಗ್ ಪೊಲೀಸರ ಬಲೆಗೆ ಬಿದ್ದಿದೆ’ ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

‘ಪ್ರತಿನಿತ್ಯ ಆರೋಪಿಗಳು ಯಾವುದಾದರೂ ಒಂದು ಬಸ್ ಶೆಲ್ಟರ್ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಬಸ್ ಬಂದ ಕೂಡಲೇ ಐವರು ಆರೋಪಿಗಳು, ಬಸ್ ಏರುವಂತೆ ನಟಿಸಿ ಜನಸಂದಣಿ ಸೃಷ್ಟಿಸುತ್ತಿದ್ದರು. ಅದರಲ್ಲಿ ಒಬ್ಬ ಆರೋಪಿ ಮೊಬೈಲ್ ಕದಿಯುತ್ತಿದ್ದ. ಮೊಬೈಲ್ ಕಳ್ಳತನ ಮಾಡಿದ ಆರೋಪಿ, ಅಲ್ಲೇ ಇಳಿದು ಹೋಗುತ್ತಿದ್ದ. ಉಳಿದವರು ಮುಂದಿನ ನಿಲ್ದಾಣಗಳಲ್ಲಿ ಇಳಿಯುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಆಂಧ್ರಪ್ರದೇಶದಿಂದ ಬಂದಿದ್ದ ಆರೋಪಿಗಳು ಕಾಡುಗೋಡಿ ಹಾಗೂ ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಾಡಿಗೆಗೆ ಕೊಠಡಿ ಪಡೆದುಕೊಂಡಿದ್ದರು. ಕಳ್ಳತನ ಮಾಡಿದ ಮೊಬೈಲ್‌ಗಳನ್ನು ಅಲ್ಲಿ ಸಂಗ್ರಹಿಸಿ ಇಡುತ್ತಿದ್ದರು. ಚಿನ್ನಸಂದ್ರದ ಕೊಠಡಿಯಲ್ಲಿ 80 ಮೊಬೈಲ್‌ಗಳು ಹಾಗೂ ಆವಲಹಳ್ಳಿಯ ಕೊಠಡಿಯಲ್ಲಿ 24 ಮೊಬೈಲ್‌ಗಳು ಸಿಕ್ಕಿವೆ’ ಎಂದು ಪೊಲೀಸರು ಹೇಳಿದರು.

‘107 ಮೊಬೈಲ್ ಪೈಕಿ ಒಂದು ಮೊಬೈಲ್ ವಾರಸುದಾರರು ಮಾತ್ರ ಸಿಕ್ಕಿದ್ದಾರೆ. ಉಳಿದ ಮೊಬೈಲ್ ಮಾಲೀಕರು ಸಿಕ್ಕಿಲ್ಲ’ ಎಂದು ಮೂಲಗಳು ಹೇಳಿವೆ.

ಹೊರರಾಜ್ಯಕ್ಕೆ ಸಾಗಾಟ: ಕದ್ದ ಮೊಬೈಲ್‌ಗಳನ್ನು ಒಂದು ಕೊಠಡಿಯಲ್ಲಿ ಸಂಗ್ರಹಿಸಿಡುತ್ತಿದ್ದರು. ನಂತರ ಅವುಗಳನ್ನು ಅಂತರ ರಾಜ್ಯ ಬಸ್‌ಗಳ ಮೂಲಕ ಹೊರರಾಜ್ಯಕ್ಕೆ ಕೊಂಡೊಯ್ದು ಅಲ್ಲಿ ಕಡಿಮೆ ಬೆಲೆಗೆ ಮಾರುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಶೇಷಾದ್ರಿಪುರಂ ಸಂಯುಕ್ತ ಪಿಯು ಕಾಲೇಜಿನ ಸಾಧಕರು

ಬೆಂಗಳೂರು: ಇಲ್ಲಿನ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಈ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಾಣಿಜ್ಯ ವಿಭಾಗದ 27 ವಿದ್ಯಾರ್ಥಿಗಳು ಹಾಗೂ ವಿಜ್ಞಾನ ವಿಭಾಗದ ಮೂವರು ವಿದ್ಯಾರ್ಥಿಗಳು ಶೇ 95ಕ್ಕೂ ಅಧಿಕ ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗ: ಶ್ರೇಯಾ ಸಿ.ಬಿ. (ಶೇ 99.17), ಚುನೇಹಾ ಆರ್. ಎಸ್. (ಶೇ 98.50), ನವನೀತಾ ಜಿ. (ಶೇ 98.33), ಯತೀಶ್ ಕುಮಾರ್ ಸಿ.ಕೆ. (ಶೇ 98.17), ದಿವ್ಯಾ ಪಿ. (ಶೇ 98.17), ಲಹರಿ ಎಸ್. (ಶೇ 98), ಅಕ್ಷತಾ ಶೆಣೈ ಎಂ. (ಶೇ 98), ಮಂಜುನಾಥ ಸ್ವಾಮಿ ಎನ್. (ಶೇ 97.83), ನಿವೇದಿತಾ ಕೆ.ಬಿ. (ಶೇ 97.83), ಸಮಿತಾ ಎಂ. (ಶೇ 97.67), ನಂದ ಕುಮಾರ್ ಎ. (ಶೇ 97.50), ಪ್ರಗತಿ ಕೆ.ಇ. (ಶೇ 97.50), ಅನಿರುದ್ಧ್ ಕೆ.ವಿ. (ಶೇ 97.33), ನಮಿತಾ ಎಸ್. (ಶೇ 97.33), ಅನೀಶ್ ಹೆಗ್ಡೆ(ಶೇ 97), ಮೋನಿಕಾ ಡಿ. (ಶೇ 97), ಕಾರ್ತಿಕ್ ಆರ್. (ಶೇ 96.83), ವರ್ಷಾ ಜಿ. (ಶೇ 96.83), ಸಂತೋಷ್ ಆರ್. (ಶೇ 96.67), ಕವನಾ ಡಿ. (ಶೇ 96.67), ಸುಜನ್ ಎಚ್. (ಶೇ 96.67), ಅಶ್ವಿತಾ ಎಂ. (ಶೇ 96.67), ಚರಣ್ ದೇವಾಂಗ್ ಆರ್. (ಶೇ 96.50), ಪಲ್ಲವಿ ವಿ.ಕೆ. (ಶೇ 96.50), ವಾಸವಿ ಕೆ. ಕುಲಕರ್ಣಿ (ಶೇ 96.33), ಭುವನ್ ಭಟ್ (ಶೇ 96.33), ಕೃತಿಕಾ ಆರ್. (ಶೇ 96.33).

ಶ್ರೇಯಾ ಸಿ.ಬಿ.

ಪ್ರೀತಂ ಆರ್.ಪಿ.

ಚುನೇಹಾ

ನವನೀತಾ ಜಿ.

ದೀಪಾಶ್ರೀ ಎ.

ಸುಶಾಂತ್ ಎನ್.

ಯತೀಶ್ ಕುಮಾರ್ ಸಿ.ಕೆ.

ದಿವ್ಯಾ ಪಿ.

ವಿಜ್ಞಾನ ವಿಭಾಗ: ಪ್ರೀತಂ ಆರ್. ಪಿ. (ಶೇ 99.17), ದೀಪಾಶ್ರೀ ಎ. (ಶೇ 97.83), ಸುಶಾಂತ್ ಎನ್. (ಶೇ 96.50).

ಪಿಯು ಸಾಧಕರು

ಲಕ್ಷ್ಮೀ
ಶೇ 97.83
ವಾಣಿಜ್ಯ ವಿಭಾಗ
ಜ್ಞಾನಪೀಠ ಪಿಯು ಕಾಲೇಜು, ಲಗ್ಗೆರೆ

ಸುಕ್ಷಿತಾ ಜೋಗಿ
ಶೇ 96.83
ವಾಣಿಜ್ಯ ವಿಭಾಗ
ಪ್ರಜ್ವಲ್ ಪಿಯು ಕಾಲೇಜು, ಮಾಗಡಿ ರಸ್ತೆ

ಶ್ರೇಯಾಯು.ಕೆ.
ಶೇ 96.16
ವಿಜ್ಞಾನ ವಿಭಾಗ
ಶ್ರೀಚೈತನ್ಯ ಪಿಯು ಕಾಲೇಜು, ವಿದ್ಯಾರಣ್ಯಪುರ

ಅಭಿಜ್ಞಾ ಬಿ.
ಶೇ 94.5
ವಿಜ್ಞಾನ ವಿಭಾಗ
ಶ್ರೀ ಚೈತನ್ಯ ಪಿಯು ಕಾಲೇಜು, ರಾಜಾಜಿನಗರ

ಕವಿಕಾ ಗುತ್ತಿಗೆ ನೌಕರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಾಯಂಡಹಳ್ಳಿ ಮೇಲ್ಸೇತುವೆಯಿಂದ ಜಿಗಿದು ಗುತ್ತಿಗೆ ನೌಕರರೊಬ್ಬರು ಶುಕ್ರವಾರ ಬೆಳಿಗ್ಗೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಜ್ಞಾನಭಾರತಿ ಸಮೀಪದ ಸೊನ್ನೇನಹಳ್ಳಿಯ ನಿವಾಸಿ, ಕರ್ನಾಟಕ ವಿದ್ಯುತ್ ಕಾರ್ಖಾನೆಯ (ಕವಿಕಾ) ಗುತ್ತಿಗೆ ನೌಕರ ನವೀನ್ (30) ಆತ್ಮಹತ್ಯೆ ಮಾಡಿಕೊಂಡವರು.

‘ನವೀನ್ ಕಳೆದ ನವೆಂಬರ್‌ನಲ್ಲಿ ಮದುವೆಯಾಗಿದ್ದರು. ಮೂರು ತಿಂಗಳ ಹಿಂದಷ್ಟೇ ಅವರಿಗೆ ಕವಿಕಾದಲ್ಲಿ ಗುತ್ತಿಗೆ ಆಧಾರದ ಕೆಲಸ ಸಿಕ್ಕಿತ್ತು’ ಎಂದು ಮೂಲಗಳು ತಿಳಿಸಿವೆ.

‘ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ನಿಧನ ವಾರ್ತೆ

ಜ್ಯೋತಿಷಿ ಎಸ್.ಕೆ.ಜೈನ್

ಬೆಂಗಳೂರು: ಜ್ಯೋತಿಷಿ ಸುರೇಂದ್ರ ಕುಮಾರ್ ಜೈನ್ (67) ಅವರು ಶುಕ್ರವಾರ ಸಂಜೆ ನಿಧನರಾದರು. ಅವರಿಗೆ ಪತ್ನಿ ಹಾಗೂ ಪುತ್ರಿ ಇದ್ದಾರೆ.

ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದ ಅವರು, ಕಳೆದ ಕೆಲವು ದಿನಗಳಿಂದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ, ಆರೋಗ್ಯದಲ್ಲಿ ಸುಧಾರಣೆ ಕಾಣಿಸಿ ಮನೆಗೆ ತೆರಳಿದ್ದರು. ಮತ್ತೆ ಆರೋಗ್ಯದಲ್ಲಿ ಏರುಪೇರಾಗಿದ್ದರಿಂದ ನಾಲ್ಕು ದಿನಗಳ ಹಿಂದೆ ಮತ್ತೆ ಆಸ್ಪತ್ರೆಗೆ ದಾಖಲಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1957ರ ಅಕ್ಟೋಬರ್ 13ರಂದು ಜನಿಸಿದ್ದರು. ಶಿಕ್ಷಣ ಪಡೆದ ಬಳಿಕ ಬೆಂಗಳೂರಿನಲ್ಲಿ ನೆಲೆಸಿದ್ದರು. ಇವರ ತಂದೆ ಬಿ.ಜಿ.ಶಶಿಕಾಂತ್ ಜೈನ್ ಸಹ ಜ್ಯೋತಿಷಿಯಾಗಿದ್ದರು. ಎಸ್.ಕೆ.ಜೈನ್ ಅವರು ಎಂಜಿನಿಯರ್ ಆಗಬೇಕೆಂದು ಬಯಸಿದ್ದರು. ನಂತರ, ಜ್ಯೋತಿಷ್ಯ ಕಲಿತು ಈ ಕ್ಷೇತ್ರದಲ್ಲಿ ಹೆಸರು ಮಾಡಿದ್ದರು. ಎಸ್.ಕೆ.ಜೈನ್ ಎಂದೇ ಖ್ಯಾತರಾಗಿದ್ದರು.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/1/2024
ದಿನಾಂಕ : 08-04-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಮೈಸೂರು – ಹಾಸನ ಮಾರ್ಗದಲ್ಲಿ ಮಂದಗೆರೆ ಮತ್ತು ಹೊಳೆನರಸೀಪುರ ನಿಲ್ದಾಣಗಳ ನಡುವೆ ಕಿ.ಮೀ.77/940 ನಲ್ಲಿನ ಅಣ್ಣೇಚಾಕನಹಳ್ಳಿಯಲ್ಲಿ ಹೊಸ ಕ್ರಾಸಿಂಗ್ ನಿಲ್ದಾಣ ಒದಗಿಸುವುದನ್ನು ಒಳಗೊಂಡಂತೆ ಸಿವಿಲ್ ಮತ್ತು ವಿದ್ಯುತ್ ಸಂಯೋಜಿತ ಕಾಮಗಾರಿ (**ಟೆಂಡರ್ ಉಲ್ಲೇಖ ಸಂ.: ಎಂವೈಎಸ್–ಎಎನ್‌ಸಿ–ಎಕ್ಸ್‌ಐಎನ್‌ಜಿ–ಎಸ್‌ಟಿಎನ್**)	ರೂ. 15,84,19,226/–
2	ಹುಬ್ಬಳ್ಳಿ ವಿಭಾಗ : ಹೊಸಪೇಟೆ – ಕೊಟ್ಟೂರು ಸೆಕ್ಷನ್ : ಹಗರಿಬೊಮ್ಮನಹಳ್ಳಿ ಮತ್ತು ವ್ಯಾಸ ಕಾಲೋನಿ ನಿಲ್ದಾಣಗಳ ನಡುವೆ ಕಿಮೀ.41/525 ನಲ್ಲಿ ಎಲ್‌ಸಿ ಸಂ. 35 ರಲ್ಲಿ 1X60 ಕ್ಲಿಯರ್ ಸ್ಪಾನ್ ಬೋಸ್ಟ್ರಿಂಗ್ ಸ್ಟೀಲ್ ಗರ್ಡರ್‌ನಂತೆ ರೈಲ್ವೆ ಸ್ಪಾನ್‌ನಂತೆ ಮತ್ತು 2X18.71ಮೀ ಪಿಎಸ್‌ಸಿ ಗರ್ಡರ್ + ಅಪ್ರೋಚ್‌ಗಳಲ್ಲಿ ಸಿಸಿ ಬ್ಲಾಕ್‌ಗಳ ದ್ವಿಪಥ ರಸ್ತೆ ಮೇಲ್ಸೇತುವೆಯ ಉದ್ದೇಶಿತ ನಿರ್ಮಾಣ (**ಟೆಂಡರ್ ಉಲ್ಲೇಖ ಸಂ. ಹೆಚ್‌ಟಿಪಿ–ಕೆಟಿವೈ–ಆರ್‌ಓಬಿ–ಎಲ್‌ಸಿ–35**)	ರೂ. 34,51,20,491/–
3	ಹಾಸನ – ಸಕಲೇಶಪುರ ಸೆಕ್ಷನ್‌ನಲ್ಲಿ ಹಾಸನ ಮತ್ತು ಆಲೂರು ನಿಲ್ದಾಣಗಳ ನಡುವೆ ಕಿಮೀ. 1/700–800 ನಲ್ಲಿ ಎಲ್‌ಸಿ ಸಂ.3 ರ ಬದಲಿಗೆ ಸೀಮಿತ ಎತ್ತರದ ಸಬ್‌ವೇ ನಿರ್ಮಾಣ (**ಟೆಂಡರ್ ಉಲ್ಲೇಖ ಸಂ.: ಹೆಚ್‌ಎಸ್–ಎಸ್‌ಕೆಎಲ್‌ಆರ್–ಆರ್‌ಓಬಿ–ಎಲ್‌ಸಿ3–03**)	ರೂ. 4,35,06,188/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–04–2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/16/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25

South Western Railway - SWR | SWRRLY | SWRRLY

ಸಿಡಿಲು ಬಡಿದು ಇಬ್ಬರ ಸಾವು; ಕೆಲವೆಡೆ ವಿದ್ಯುತ್ ಪೂರೈಕೆ ಸ್ಥಗಿತ

ರಾಜ್ಯದ ವಿವಿಧ ಕಡೆ ಬಿರುಗಾಳಿ ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ನಾಪೋಕ್ಲು: ರಾಜ್ಯದ ವಿವಿಧೆಡೆ ಶುಕ್ರವಾರ ಮಳೆಯಾಗಿದ್ದು ವಾತಾವರಣವನ್ನು ತಂಪಾಗಿಸಿದೆ. ಕೆಲವೆಡೆ ಗುಡುಗು– ಮಿಂಚು ಸಹಿತ ಹಾಗೂ ಕಲಘಟಗಿಯಲ್ಲಿ ಬಿರುಗಾಳಿ ಸಹಿತ ಮಳೆ ಆಗಿದೆ. ಸಿಡಿಲು ಬಡಿದು ಇಬ್ಬರು ಸಾವಿಗೀಡಾಗಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ ಪಟ್ಟಣ ಸೇರಿದಂತೆ ಹಲವೆಡೆ ಮಳೆಯಾಗಿದೆ. ಶೃಂಗೇರಿಯಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಸುರಿದ ಮಳೆ ತಂಪೆರೆದಿದೆ.

ಕೊಡಗು, ಬೆಳಗಾವಿ, ವಿಜಯನಗರ, ವಿಜಯಪುರ, ಬಾಗಲಕೋಟೆ, ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ರಭಸದ ಮಳೆಯಾಗಿದೆ. ವಿಜಯಪುರ ಜಿಲ್ಲೆ ಇಂಡಿ ತಾಲ್ಲೂಕಿನ ತಾಂಬಾದಲ್ಲಿ ಜಮೀನಿಗೆ ಹೋದಾಗ ಸಿಡಿಲು ಬಡಿದು ಭಾರತಿ ಹಣಮಂತ ಕೆಂಗನಾಳ (40) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ತಾಲ್ಲೂಕಿನ ಕೋಡಂಬಿ ಗ್ರಾಮದ ಬಳಿ ಸಿಡಿಲು ಬಡಿದು ಐದು ಜಾನುವಾರುಗಳು ಸಾವನ್ನಪ್ಪಿವೆ.

ಬೆಳಗಾವಿ ನಗರದ ರಾಣಿ ಪಾರ್ವತಿದೇವಿ ವೃತ್ತದಲ್ಲಿ ಸವಾರರು ಮಳೆಯಲ್ಲೇ ಸಾಗಿದರು ಪ್ರಜಾವಾಣಿ ಚಿತ್ರ/ ಏಕನಾಥ ಅಗಸಿಮನಿ

ಧಾರವಾಡ ಜಿಲ್ಲೆಯ ಸೂಳಿಕಟ್ಟಿ ಗ್ರಾಮದ ರಸ್ತೆ ಬದಿ 20 ವಿದ್ಯುತ್ ಕಂಬ, ಎರಡು ಮರಗಳು ಬಿದ್ದು ಸಂಚಾರಕ್ಕೆ ಅಡಚಣೆಯಾಯಿತು. ಗುಡುಗು, ಮಿಂಚು, ಗಾಳಿ ಆರ್ಭಟವಿತ್ತು. ಗ್ರಾಮ ದಲ್ಲಿ ವಿದ್ಯುತ್ ಪೂರೈಕೆ ಸ್ಥಗಿತವಾಗಿದೆ.

ಬೆಳಗಾವಿ ನಗರ ಹಾಗೂ ತಾಲ್ಲೂಕಿನ ವಿವಿಧೆಡೆ ಗುಡುಗು– ಮಿಂಚಿನ ಸಹಿತ ಉತ್ತಮ ಮಳೆಯಾಗಿದೆ. ರಾಮದುರ್ಗ, ಬೈಲಹೊಂಗಲ ಪಟ್ಟಣ ಮತ್ತು ತಾಲ್ಲೂಕಿನ ವಿವಿಧೆಡೆ ಸಾಧಾರಣ ಮಳೆ ಯಾಗಿದೆ. ಬೆಳಗಾವಿಯ ಅನಗೋಳದ ಸಂತ ಮೀರಾ ಶಾಲೆಯಲ್ಲಿ ಕಾರಿನ ಮೇಲೆ ಮರ ಬಿದ್ದು ಕಾರು ಜಖಂಗೊಂಡಿತು.

ದಾವಣಗೆರೆ, ಚಿತ್ರದುರ್ಗ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಮಳೆಯಾಗಿದ್ದು ಸುಡು ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ವರ್ಷದ ಮೊದಲ ಮಳೆಯು ಹಿತಕರ ವಾತಾವರಣ ಸೃಷ್ಟಿಸಿತು.

ಶಿವಮೊಗ್ಗ ವರದಿ: ಜಿಲ್ಲೆಯ ತೀರ್ಥಹಳ್ಳಿ, ಕುಂಸಿ, ಆನಂದಪುರ, ಕೋಣಂದೂರು ಭಾಗದಲ್ಲಿ ತುಂತುರು ಮಳೆ ಬಂದಿದೆ. ಕುಂಸಿ ಸಮೀಪದ ಆಯನೂರು ಕೋಟೆಯಲ್ಲಿ ಸಿಡಿಲು ಬಡಿದು 18 ಕುರಿಗಳು ಮೃತಪಟ್ಟಿವೆ.

ಸಿಡಿಲು ಬಡಿದು ರೈತ ಸಾವು (ಕಲಬುರಗಿ ವರದಿ): ಜಿಲ್ಲೆಯ ಆಳಂದ ಹಾಗೂ ಅಫಜಲಪುರ ತಾಲ್ಲೂಕಿನ ವಿವಿಧೆಡೆ ಗುರುವಾರ ರಾತ್ರಿ ಮಳೆಯಾಗಿದ್ದು, ಸಿಡಿಲು ಬಡಿದು ಆಳಂದ ತಾಲ್ಲೂಕಿನ ಕವಲಗಾ ಗ್ರಾಮದ ರೈತ ಕಲ್ಯಾಣಿ ಹಣಮಂತ ಭೂಸನೂರು (60) ಮೃತಪಟ್ಟಿದ್ದಾರೆ. ಸಂಜೆ ಹೊಲಕ್ಕೆ ತೆರಳುವಾಗ ಗುಡುಗು, ಸಿಡಿಲು ಸಹಿತ ಮಳೆ ಆರಂಭಗೊಂಡಿದೆ. ಮಾರ್ಗ ಮಧ್ಯೆ ಮರದ ಕೆಳಗೆ ನಿಂತಾಗ ಸಿಡಿಲು ಅಪ್ಪಳಿಸಿದೆ. ಸಿಡಿಲಿನ ಹೊಡತಕ್ಕೆ ರೈತ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

Preethi
LIFELONG# FREE SERVICE
ಹೊಸ ವರ್ಷದ ಸಂಭ್ರಮ
MRP ₹12,389/- ₹9,999/-
Preethi Zodiac Mixer Grinder ಖರೀದಿಸಿ
ಹಾಗು Preethi Tawa ಉಚಿತವಾಗಿ ಪಡೆಯಿರಿ
Worth ₹1,454/- FREE
www.shop.preethi.in/ | www.facebook.com/PreethiKitchenAppliances | www.instagram.com/preethikitchenappliances/
One Call Assistance : +91-99400 00005
CONTACT US:
Bangalore: 8277441999, 9740168637, 9972737413, 7760697461, 080 - 22222583 Mysore: 9739260425, 8277461576, 0821-2443966, Belgaum: 8277436271, 8970169931, 0831-2464093 Hubli: 9480566673, 9008402723, 0836-2352077
#Lifelong free service- Charges apply for replacement of spares/accessories. Applicable for product purchased only in India
*T&C ಅನ್ವಯಿಸುತ್ತದೆ. ಆಫರ್ ಸ್ಟಾಕ್ ಇರುವವರೆಗೆ ಮಾತ್ರ ಮಾನ್ಯವಾಗಿರುತ್ತದೆ.

VOLTAS · beko
VOLTAS
All that your home needs, now under one roof.
Inaugurating the Voltas Brand Shop.
A one-stop shop for all the appliances you need.
M/S EVANTAGE TECH SOLUTIONS
3 Block, Shanthipuram Main Road, Near Parandahalli Bus Stop,
Parandahalli, Kolar Gold Fields - 563122 | Mob. No. 8105168884
Saturday, 13th April 2024, 11:00 AM Onwards
VOLTAS | THE BRAND SHOP
AIR CONDITIONERS | AIR PURIFIERS | REFRIGERATORS | WASHING MACHINES | MICROWAVE OVENS | DISHWASHERS | COMMERCIAL REFRIGERATION | AIR COOLERS | WATER HEATERS
Visit us at: voltasbeko.com | Follow us at | @VoltasBeko | Voltas Beko | Voltas Beko | VoltasBeko 24 X 7 Customer Care No: 9818994444
For product registration, SMS<VB> to 56677 | Email: wecare@voltasbeko.com | www.voltasbeko.com/storelocator
Buy online at: www.voltas.com
Visit us at www.voltas.com
To locate your nearest store, log on to: www.voltas.com/apps/store-locator
Voltas 24x7 Customer Service - 1860 599 4555, 9650694555
For product registration, SMS <WTA> to 9289525321
Buy only genuine Voltas stabilizers.
Follow us at My Voltas My Voltas My Voltas Voltas Limited My Voltas

ನೈಜ ಅಥವಾ ನಕಲಿ?
ವ್ಯತ್ಯಾಸವನ್ನು ಗುರುತಿಸಿ
ತಪ್ಪುಮಾಹಿತಿಯನ್ನು ನಿಲ್ಲಿಸಲು WhatsApp ನ ಟೂಲ್‌ಗಳೊಂದಿಗೆ
ತಪ್ಪುಮಾಹಿತಿ ವಿರುದ್ಧ ಹೋರಾಡಲು WhatsApp ನ ನಿರ್ಬಂಧಿಸಿ ಮತ್ತು ವರದಿ ಮಾಡಿ ಎಂಬ ವಿಶ್ವಾಸಾರ್ಹ ಟೂಲ್‌ಗಳನ್ನು ಹಾಗೂ ಫಾರ್ವರ್ಡ್ ಮಾಡುವ ಮಿತಿಗಳನ್ನು ಪರಿಗಣಿಸಿ. ಸಂದೇಶಗಳನ್ನು ಪರಿಶೀಲಿಸಲು ನೀವು ನಮ್ಮ 10 ಸ್ಥಳೀಯ ಫ್ಯಾಕ್ಟ್-ಚೆಕಿಂಗ್ ಪಾಲುದಾರರೊಂದಿಗೆ ಸಹ ಸಂಪರ್ಕ ಸಾಧಿಸಬಹುದು.
WhatsApp.com/INfactcheck ನಲ್ಲಿ ಇನ್ನಷ್ಟು ತಿಳಿಯಿರಿ

ಹೊಸ ರಂಗಮಂದಿರಗಳ ನಿರ್ಮಾಣಕ್ಕೆ ಜನಪ್ರತಿನಿಧಿಗಳ ನಿರಾಸಕ್ತಿ • ಸೂಕ್ತ ವೇದಿಕೆ ಸಿಗದೆ ಕಲಾ ಚಟುವಟಿಕೆಗಳು ಕುಂಠಿತ

ಮೂಲಸೌಕರ್ಯವಿಲ್ಲದೆ ಸೊರಗಿದ ರಂಗಮಂದಿರಗಳು

• ವರುಣ ಹೆಗಡೆ

ಕಲಾಗ್ರಾಮದಲ್ಲಿರುವ ಸಾಂಸ್ಕೃತಿಕ ಸಮುಚ್ಚಯ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬಿಬಿಎಂಪಿ ನಿರ್ವಹಣೆ ಮಾಡುತ್ತಿರುವ ಬಹುತೇಕ ರಂಗಮಂದಿರಗಳು ಮೂಲಸೌಕರ್ಯಕ್ಕಾಗಿ ಕಾದು ಕುಳಿತಿವೆ. ಸುಸಜ್ಜಿತ ರಂಗಮಂದಿರಗಳ ನಿರ್ಮಾಣದ ಕೂಗು ಸಾಂಸ್ಕೃತಿಕ ವಲಯದಲ್ಲಿದ್ದರೂ ಎಲ್ಲ ಸರ್ಕಾರಗಳು ಈ ಕ್ಷೇತ್ರವನ್ನು ಕಡೆಗಣಿಸುತ್ತಲೇ ಬಂದಿವೆ.

ಚುನಾವಣೆ ಬಂದಾಗಲೆಲ್ಲ ಜನಪ್ರತಿನಿಧಿಗಳು ರಂಗಮಂದಿರಗಳ ನಿರ್ಮಾಣದ ಭರವಸೆ ನೀಡುತ್ತಲೇ ಬಂದಿದ್ದಾರೆ. ಆದರೆ, ಅಧಿಕಾರಕ್ಕೆ ಏರುತ್ತಿದ್ದಂತೆ ಸ್ಥಳಾವಕಾಶದ ಕೊರತೆ ಸೇರಿ ವಿವಿಧ ಸಿದ್ಧ ಕಾರಣಗಳನ್ನು ನೀಡುತ್ತಿರುವುದು ಸಾಂಸ್ಕೃತಿಕ ವಲಯದವರ ಅಸಮಾಧಾನಕ್ಕೆ ಕಾರಣವಾಗಿದೆ. ಇದರಿಂದಾಗಿ ನಗರದಲ್ಲಿ ಈಗಾಗಲೇ ವೇದಿಕೆ ಕಲ್ಪಿಸುತ್ತಿರುವ ರಂಗಮಂದಿರಗಳೂ ಕಿತ್ತುಹೋಗಿರುವ ನೆಲಹಾಸು, ದೋಷಪೂರಿತ ಧ್ವನಿ–ಬೆಳಕಿನ ವ್ಯವಸ್ಥೆ, ನಿರ್ವಹಣೆ ಇಲ್ಲದ ಶೌಚಾಲಯ, ತಂತ್ರಜ್ಞರ ಕೊರತೆ ಸೇರಿದಂತೆ ವಿವಿಧ ಸಮಸ್ಯೆಗಳನ್ನು ಎದುರಿಸುತ್ತಿವೆ.

ಕೋವಿಡ್ ಬಳಿಕ ಕೆಲ ಖಾಸಗಿ ರಂಗಮಂದಿರ, ಸಭಾಂಗಣಗಳ ನವೀಕರಣ ನಡೆದಿದ್ದು, ಮುಖ್ಯಸ್ಥರು ಬಾಡಿಗೆ ಹೆಚ್ಚಿಸಿದ್ದಾರೆ. ಡಾ. ಅಂಬೇಡ್ಕರ್ ಭವನ, ಚೌಡಯ್ಯ ಸ್ಮಾರಕ ಭವನ, ಸೇಂಟ್ ಜಾನ್ ಆಡಿಟೋರಿಯಂ, ಕುವೆಂಪು ಕಲಾಕ್ಷೇತ್ರ, ಗುರುನಾನಕ್ ಭವನ, ಎಡಿಎ ಸೇರಿ ವಿವಿಧ ರಂಗಮಂದಿರಗಳು 500ಕ್ಕೂ ಅಧಿಕ ಆಸನಗಳ ಸಾಮರ್ಥ್ಯ ಹೊಂದಿವೆ. ಆದರೆ, ಇಲ್ಲಿ ಬಾಡಿಗೆ ಒಂದು ಲಕ್ಷ ರೂಪಾಯಿವರೆಗೂ ಇದೆ. ಇಷ್ಟು ಬಾಡಿಗೆ ಪಾವತಿಸಿ, ಪ್ರದರ್ಶನಗಳನ್ನು ನೀಡುವುದು ರಂಗ ಹಾಗೂ ಕಲಾ ತಂಡಗಳಿಗೆ ಕಷ್ಟಸಾಧ್ಯವಾಗಿದೆ. ಇದರಿಂದಾಗಿ ವರ್ಷದಿಂದ ವರ್ಷಕ್ಕೆ ನಗರವು ಸಾಂಸ್ಕೃತಿಕ ಕ್ಷೇತ್ರದಿಂದ ದೂರವಾಗುತ್ತಿದೆ.

ರವೀಂದ್ರ ಕಲಾಕ್ಷೇತ್ರದ ಮಾದರಿಯಲ್ಲಿಯೇ ನಗರದ ನಾಲ್ಕು ಕಡೆ ರಂಗಮಂದಿರ ನಿರ್ಮಿಸುವುದಾಗಿ 2020ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದರು. ಇದಕ್ಕಾಗಿ ಬಜೆಟ್‌ನಲ್ಲಿ ₹ 60 ಕೋಟಿ ಮೀಸಲಿಡಲಾಗಿತ್ತು. ವಿಶ್ವೇಶ್ವರಯ್ಯಬಡಾವಣೆಯಲ್ಲಿ ಎರಡೂವರೆ ಎಕರೆ, ದೇವನಹಳ್ಳಿಯ ಕಸಬಾ ಹೋಬಳಿ, ಕನ್ನಹಳ್ಳಿ ಬಳಿ ಐದು ಎಕರೆ, ಕೆಐಎಡಿಬಿ, ಕೆಎಚ್‌ಬಿ ಯಲ್ಲಿ ಸಾರ್ವಜನಿಕ ರಿಗೆ ಮೀಸಲಿಟ್ಟ ಸಿಎ ನಿವೇಶನವನ್ನು ರಂಗಮಂದಿರ ನಿರ್ಮಾಣಕ್ಕೆ ಗುರುತಿಸಿ ವರ್ಷಗಳೇ ಕಳೆದಿವೆ. ಆದರೆ, ಈವರೆಗೂ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿಲ್ಲ.

ಡಾ. ಅಂಬೇಡ್ಕರ್ ಭವನ	1,345
ಚೌಡಯ್ಯ ಸ್ಮಾರಕ ಭವನ	1,101
ಸೇಂಟ್ ಜಾನ್ ಆಡಿಟೋರಿಯಂ	1,068
ಕುವೆಂಪು ಕಲಾಕ್ಷೇತ್ರ	850
ರವೀಂದ್ರ ಕಲಾಕ್ಷೇತ್ರ	830
ಪುರಭವನ	810
ಎಚ್.ಎನ್. ಕಲಾಕ್ಷೇತ್ರ	750
ಬಯಲು ರಂಗಮಂದಿರ	741
ಗುರುನಾನಕ್ ಭವನ	704
ಎಡಿಎ ರಂಗಮಂದಿರ	525

500ಕ್ಕೂ ಹೆಚ್ಚು ಆಸನ ಹೊಂದಿರುವ ರಂಗಮಂದಿರಗಳು

ನಿರ್ವಹಣೆ ಸೇರಿ ವಿವಿಧ ಸಮಸ್ಯೆ

ಕನ್ನಡ ಭವನದಲ್ಲಿರುವ ನಯನ ಸಭಾಂಗಣವು ಕಿರಿದಾಗಿದ್ದು, ನಾಟ್ಯ, ವಿಚಾರಸಂಕಿರಣ, ಸಂಗೀತ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗೆ ಮಾತ್ರ ಸಹಕಾರಿಯಾಗಿದೆ. ಜೆ.ಸಿ. ರಸ್ತೆಯಲ್ಲಿರುವ ಎಡಿಎ ರಂಗಮಂದಿರ ಅಮೆಚೂರು ಡ್ರಮಾಟಿಕ್ ಅಸೋಸಿಯೇಷನ್ ಕೊಡುಗೆಯಾಗಿದೆ.

ಇಲ್ಲಿ ವಾಹನಗಳ ನಿಲುಗಡೆಗೆ ಸ್ಥಳವಿಲ್ಲದಿರುವುದು ಸಮಸ್ಯೆಯಾಗಿದೆ. ಕುವೆಂಪು ಕಲಾಕ್ಷೇತ್ರದಲ್ಲಿ ಗ್ರೀನ್ ರೂಮ್‌ಗಳು ವೇದಿಕೆಯ ನೆಲಮಹಡಿಯಲ್ಲಿವೆ. ಇದು ಕಲಾವಿದರಿಗೆ ಕಿರಿಕಿರಿ ಉಂಟುಮಾಡಲಿದೆ. ಸಮಾಜ ಕಲ್ಯಾಣ ಇಲಾಖೆಯ ಡಾ. ಅಂಬೇಡ್ಕರ್ ಭವನವು ಅತ್ಯಾಧುನಿಕ ಸೌಲಭ್ಯ ಹೊಂದಿದ್ದರೂ ನಿರ್ವಹಣೆ ಕೊರತೆ ಎದುರಿಸುತ್ತಿದೆ.

ಗಾಂಧಿನಗರದ ಗುಬ್ಬಿ ವೀರಣ್ಣ ರಂಗಮಂದಿರ, ರಾಜಾಜಿನಗರದ ರಾಜ್‌ಕುಮಾರ್ ರಂಗಮಂದಿರ ಸೇರಿದಂತೆ ವಿವಿಧ ರಂಗಮಂದಿರಗಳು ಸೂಕ್ತ ನಿರ್ವಹಣೆ ಇಲ್ಲದೆಯೇ ಕಳೆಗುಂದಿವೆ.

ಮತ ಮಂಥನ

ರವೀಂದ್ರ ಕಲಾಕ್ಷೇತ್ರ ಅವಲಂಬನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರ ಒಳಗೊಂಡಂತೆ ನಗರದ ಏಳು ರಂಗ ಮಂದಿರಗಳನ್ನು ನಿರ್ವಹಣೆ ಮಾಡುತ್ತಿದೆ. ಇವುಗಳಲ್ಲಿ ಎರಡು ಬಯಲು ರಂಗಮಂದಿರಗಳೂ ಸೇರಿವೆ.

ನಗರದ ಹೃದಯ ಭಾಗದಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕಗಳಿಗೆ ಅದ್ಯತೆ ನೀಡಲಾಗುತ್ತಿದೆಯಾದರೂ ರಂಗ ತಂಡಗಳು ಪ್ರದರ್ಶನ ನೀಡಲು ಎರಡು ತಿಂಗಳು ಮುಂಚಿತವಾಗಿ ಕಾಯ್ದಿರಿಸಿ, ಕಾಯಬೇಕಾದ ಪರಿಸ್ಥಿತಿಯಿದೆ. ಅದು ಕೂಡ ಸರ್ಕಾರಿ ಕಾರ್ಯಕ್ರಮಗಳು ತುರ್ತಾಗಿ ನಿಗದಿಯಾದಲ್ಲಿ ಕಾಯ್ದಿರಿಸಿದ ದಿನಾಂಕವನ್ನು ಬಿಟ್ಟುಕೊಡಬೇಕಾಗುತ್ತದೆ. ಹೀಗಾಗಿ, ಪ್ರದರ್ಶನದ ದಿನದವರೆಗೂ ರಂಗಮಂದಿರ ಸಿಗುವ ಖಚಿತತೆ ಇಲ್ಲದಂತಾಗಿದೆ.

ಸಂಸ್ಕೃತಿ ಇಲಾಖೆಯು 2022ರಲ್ಲಿ ರಂಗಮಂದಿರಗಳ ಬಾಡಿಗೆಯನ್ನು ಪರಿಷ್ಕರಿಸಿ, ಆದೇಶ ಹೊರಡಿಸಿತ್ತು. ಪ್ರತಿ ವರ್ಷ ಬಾಡಿಗೆ ದರವನ್ನು ಶೇ 5 ರಷ್ಟು ಏರಿಕೆ ಮಾಡಬೇಕೆಂದು ತಿಳಿಸಲಾಗಿತ್ತು. ಸರ್ಕಾರಿ ಆದೇಶದ ಅನ್ವಯ ರವೀಂದ್ರ ಕಲಾಕ್ಷೇತ್ರದ ಬಾಡಿಗೆಯನ್ನು ಕಳೆದ ವರ್ಷ ಶೇ 5 ರಷ್ಟು ಹೆಚ್ಚಳ ಮಾಡಲಾಗಿತ್ತು. ಸದ್ಯ ಒಂದು ಪಾಳಿಗೆ ₹5 ಸಾವಿರ ಠೇವಣಿ ಹಾಗೂ ಜಿಎಸ್‌ಟಿ ಸಹಿತ ₹ 12,434 ಬಾಡಿಗೆಯಿದ್ದು, ಠೇವಣಿ ಹಣವನ್ನು ಮರಳಿಸಲಾಗುತ್ತದೆ.

ಬಿಬಿಎಂಪಿಯು 2015ರಲ್ಲಿ ಸರ್ ಪುಟ್ಟಣ್ಣ ಚೆಟ್ಟಿ ಪುರಭವನವನ್ನು ನವೀಕರಣ ಮಾಡಿ, ಹವಾನಿಯಂತ್ರಣ ಸೇರಿದಂತೆ ವಿವಿಧ ವ್ಯವಸ್ಥೆಯನ್ನು ಅಳವಡಿಕೆ ಮಾಡಿತ್ತು. ₹ 8 ಸಾವಿರ ಇದ್ದ ಬಾಡಿಗೆ ದರವನ್ನು ₹ 1.22 ಲಕ್ಷಕ್ಕೆ ಏರಿಕೆ ಮಾಡಿತ್ತು. ಕಲಾವಿದರು ಸಂಘ–ಸಂಸ್ಥೆಗಳಿಂದ ಆಕ್ಷೇಪ ವ್ಯಕ್ತವಾದ ಬಳಿಕ ₹ 75 ಸಾವಿರಕ್ಕೆ ಇಳಿಕೆ ಮಾಡಿತ್ತು. ಆದರೆ, ಇಷ್ಟು ಮೊತ್ತದ ಬಾಡಿಗೆ ಹೊಂದಿಸುವುದು ಸಣ್ಣ ಮತ್ತು ಮಧ್ಯಮ ಗಾತ್ರದ ಸಂಘ–ಸಂಸ್ಥೆ, ರಂಗ ತಂಡಗಳಿಗೆ ಸವಾಲಾಗಿತ್ತು. ಹೀಗಾಗಿ, ವರ್ಷದ ಬಹುತೇಕ ದಿನಗಳು ಪುರಭವನ ಬಾಗಿಲು ಮುಚ್ಚಿಯೇ ಇರುತ್ತಿತ್ತು.

ಬಿಬಿಎಂಪಿ 2022ರಲ್ಲಿ ಪುರಭವನದ ಬಾಡಿಗೆ ದರವನ್ನು ಮತ್ತೆ ಪರಿಷ್ಕರಿಸಿ, ಕನ್ನಡ ರಂಗಭೂಮಿಗೆ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ. ಹವಾನಿಯಂತ್ರಿತ ಸೌಲಭ್ಯಕ್ಕೆ ದಿನದ ಬಾಡಿಗೆಯನ್ನು ₹60 ಸಾವಿರಕ್ಕೆ ಇಳಿಸಿದೆ. ಹವಾನಿಯಂತ್ರಿತ ಸೌಲಭ್ಯ ಬೇಡವೆಂದರೆ ₹50 ಸಾವಿರ ಪಾವತಿಸಬೇಕು. ಅರ್ಧ ದಿನಕ್ಕೂ ಬಾಡಿಗೆ ನೀಡಲಾಗುತ್ತಿದೆ. ಅಷ್ಟು ಮೊತ್ತವನ್ನು ಸಂಘ–ಸಂಸ್ಥೆಗಳಿಗೆ ಪಾವತಿಸುವುದು ಕಷ್ಟಸಾಧ್ಯವಾಗಿದ್ದು, ಕಾರ್ಯಕ್ರಮಗಳು ಅಷ್ಟಾಗಿ ನಡೆಯುತ್ತಿಲ್ಲ.

ನಗರದ ಬಹುತೇಕ ರಂಗಮಂದಿರಗಳು ನಿರ್ವಹಣೆಯಿಲ್ಲದೆ ಸೊರಗಿವೆ. ಬಯಲು ರಂಗಮಂದಿರಗಳು ಅಕ್ರಮ ಚಟುವಟಿಕೆಗಳ ತಾಣವಾಗಿವೆ. ರವೀಂದ್ರ ಕಲಾಕ್ಷೇತ್ರ ಸೇರಿ ವಿವಿಧ ರಂಗಮಂದಿರಗಳಿಗೆ ಮೂಲಸೌಕರ್ಯ ಒದಗಿಸಬೇಕು

ಕೆ.ವಿ. ನಾಗರಾಜಮೂರ್ತಿ, ಕರ್ನಾಟಕ ನಾಟಕ ಅಕಾಡೆಮಿ ನಿಯೋಜಿತ ಅಧ್ಯಕ್ಷ



ಸಣ್ಣ ರಂಗಮಂದಿರಗಳು ಈಗಿನ ತುರ್ತು. ಮುನ್ನೂರು ಆಸನಗಳ ರಂಗಮಂದಿರಗಳು ನಗರದ ವಿವಿಧೆಡೆ ನಿರ್ಮಾಣವಾಗಬೇಕು. ಸರ್ಕಾರಿ ರಂಗಮಂದಿರಗಳ ಬಾಡಿಗೆಯನ್ನು ಹೆಚ್ಚಳ ಮಾಡಬಾರದು. ರಿಯಾಯಿತಿಗೆ ದೊರಕಲಿ

ಜೆ. ಲೋಕೇಶ್, ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ

ಹುಬ್ಬಳ್ಳಿ: ಬಿಜೆಪಿ ಕಚೇರಿಯಿಂದ ಅಂಬೇಡ್ಕರ್, ವಾಲ್ಮೀಕಿ ಚಿತ್ರ ಹೊರಕ್ಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಇಲ್ಲಿನ ಅರವಿಂದ ನಗರದ ಬಿಜೆಪಿ ಕಚೇರಿಯ ಪತ್ರಿಕಾಗೋಷ್ಠಿ ಸಭಾಂಗಣದಲ್ಲಿದ್ದ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಮಹರ್ಷಿ ವಾಲ್ಮೀಕಿ ಭಾವಚಿತ್ರಗಳನ್ನು ಶುಕ್ರವಾರ ಪಕ್ಷದ ಕಾರ್ಯಕರ್ತರೊಬ್ಬರು ಹೊರಗಡೆ ಒಯ್ದ ದೃಶ್ಯ ವೈರಲ್ ಆದ ಕಾರಣ ಚರ್ಚೆಗೆ ಗ್ರಾಸವಾಯಿತು.

ಪಕ್ಷದ ರಾಜ್ಯ ಮಹಿಳಾ ಮೋರ್ಚಾದ ಅಧ್ಯಕ್ಷೆ ಮಂಜುಳಾ ಅವರ ಪತ್ರಿಕಾಗೋಷ್ಠಿ ನಿಗದಿಯಾಗಿತ್ತು. ವೇದಿಕೆಯ ಬದಿ ಮೇಜಿನ ಮೇಲೆ ಬಿಜೆಪಿ ಸಂಸ್ಥಾಪಕರಾದ ಶ್ಯಾಮ ಪ್ರಸಾದ ಮುಖರ್ಜಿ, ದೀನದಯಾಳ ಉಪಾಧ್ಯಾಯ, ಭಾರತಮಾತೆ, ಡಾ.ಬಿ. ಆರ್. ಅಂಬೇಡ್ಕರ್ ಮತ್ತು ಮಹರ್ಷಿ ವಾಲ್ಮೀಕಿ ಭಾವಚಿತ್ರಗಳಿದ್ದವು. ‘ಇವರೆಲ್ಲರ ಜೊತೆಗೆ ಬಸವಣ್ಣನವರ ಭಾವಚಿತ್ರ ಏಕಿಲ್ಲ’ ಎಂದು ಕೆಲವರು ಆಕ್ಷೇಪಿಸಿದಾಗ, ಕಾರ್ಯಕರ್ತರೊಬ್ಬರು ಅಂಬೇಡ್ಕರ್ ಮತ್ತು ವಾಲ್ಮೀಕಿ ಭಾವಚಿತ್ರಗಳನ್ನು ಹೊರಒಯ್ದರು.

ಇದರ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಬಿಜೆಪಿ ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ, ‘ಹುಬ್ಬಳ್ಳಿಯ ಗೋಕುಲ ಗಾರ್ಡನ್‌ನಲ್ಲಿ ಶನಿವಾರ ಬಿಜೆಪಿ ಎಸ್‌ಟಿ ಸಮಾವೇಶ ಇದೆ. ಈ ಕಾರಣ ಪಕ್ಷದ ಕಚೇರಿಯಲ್ಲಿ ಪೂರ್ವಭಾವಿ ಸಭೆ ಇತ್ತು. ಹೀಗಾಗಿ ಅವರಿಬ್ಬರು ಮಹನೀಯರ ಚಿತ್ರಗಳನ್ನು ಇಲ್ಲಿ ಇಡಲಾಗಿತ್ತೆ ಹೊರತು ಬೇರೆ ದುರುದ್ದೇಶವಿಲ್ಲ’ ಎಂದರು.

₹19 ಕೋಟಿ ಮೌಲ್ಯದ ಚಿನ್ನ, ಬೆಳ್ಳಿ ವಶ

ಪ್ರಜಾವಾಣಿ ವಾರ್ತೆ

ರಾಮನಗರ: ಸೂಕ್ತ ದಾಖಲೆ ಇಲ್ಲದೆ ಸಾಗಣೆ ಮಾಡುತ್ತಿದ್ದ ಮಲಬಾರ್ ಗೋಲ್ಡ್ ಕಂಪನಿಗೆ ಸೇರಿದ ₹19ಕೋಟಿ ಮೌಲ್ಯದ 29 ಕೆ.ಜಿ ಚಿನ್ನಾಭರಣ ಮತ್ತು 28ಕೆ.ಜಿ ಬೆಳ್ಳಿ ಆಭರಣವನ್ನು ತಾಲ್ಲೂಕಿನ ಹೆಜ್ಜಾಲ ಬಳಿ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾ ಸಿಬ್ಬಂದಿ ಶುಕ್ರವಾರ ವಶಕ್ಕೆ ಪಡೆದಿದ್ದಾರೆ. ಈ ಕುರಿತು ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮಧ್ಯಾಹ್ನ ಚೆಕ್‌ಪೋಸ್ಟ್ ಸಿಬ್ಬಂದಿ ವಾಹನ ತಡೆದು ಪರಿಶೀಲನೆ ನಡೆಸಿದಾಗ ಅದರೊಳಗೆ ಚಿನ್ನ ಮತ್ತು ಬೆಳ್ಳಿ ಆಭರಣವಿರುವುದು ಪತ್ತೆಯಾಗಿದೆ. ಮೈಸೂರಿನಲ್ಲಿರುವ ಮಲಬಾರ್‌ನ ಮಳಿಗೆಗಳಿಗೆ ಬೆಂಗಳೂರಿನಿಂದ ಪ್ಯಾಕ್ ಮಾಡಿದ ಬಾಕ್ಸ್‌ಗಳಲ್ಲಿ ಆಭರಣಗಳನ್ನು ಕೊಂಡೊಯ್ಯುತ್ತಿರುವುದಾಗಿ ಕಂಪನಿ ಸಿಬ್ಬಂದಿ ಹೇಳಿದ್ದಾರೆ’ ಎಂದು ಮಾಗಡಿ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ರಮೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಂಪನಿ ಸಿಬ್ಬಂದಿ ತೋರಿಸಿದ ದಾಖಲೆ ಮತ್ತು ಜಿಎಸ್‌ಟಿ ಬಿಲ್‌ನಲ್ಲಿ ವ್ಯತ್ಯಾಸ ಕಂಡು ಬಂತು. ಆಗ ವಾಣಿಜ್ಯ ತೆರಿಗೆ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಯಿಸಿ ಎಲ್ಲಿಂದ ತರಲಾಗಿದೆ. ಎಲ್ಲಿಗೆ ಕೊಂಡೊಯ್ಯಲಾಗುತ್ತಿದೆ ಎಂಬುದನ್ನು ವಿಚಾರಿಸಲಾಯಿತು. ಚಿನ್ನ ಮತ್ತು ಬೆಳ್ಳಿಯನ್ನು ತೂಕದ ಯಂತ್ರದಲ್ಲಿ ಮತ್ತೊಮ್ಮೆ ತೂಕ ಮಾಡಿ ಪರಿಶೀಲಿಸಲಾಯಿತು’ ಎಂದು ಹೇಳಿದರು.

ವರನಟ ಡಾ. ರಾಜ್‌ಕುಮಾರ್ ಅವರ 18ನೇ ಪುಣ್ಯತಿಥಿ ಅಂಗವಾಗಿ ನಗರದ ಕಂಠೀರವ ಸ್ಟುಡಿಯೊದಲ್ಲಿರುವ ಅವರ ಸಮಾಧಿಗೆ ಪುತ್ರ ರಾಘವೇಂದ್ರ ರಾಜ್‌ಕುಮಾರ್ ಮತ್ತು ಕುಟುಂಬ ಸದಸ್ಯರು ಶುಕ್ರವಾರ ಪೂಜೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ಮನೆ ಮನೆ ಪ್ರಚಾರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಕೇಂದ್ರ ಸಚಿವರಾಗಿ ಅನುಭವವಿರುವ ಶೋಭಾ ಕರಂದ್ಲಾಜೆ ಅವರನ್ನು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ನಮ್ಮ ಪಕ್ಷ ಕಣಕ್ಕಿಳಿಸಿದೆ. ನಮ್ಮ ಪಕ್ಷ ಮತ್ತು ಜೆಡಿಎಸ್ ಪಕ್ಷದ ಕಾರ್ಯಕರ್ತರು ಸೇರಿ ಅಧಿಕ ಮತಗಳಿಂದ ಅವರನ್ನು ಗೆಲ್ಲಿಸಬೇಕು’ ಎಂದು ಬಿಜೆಪಿ ಶಾಸಕ ಎಸ್. ಮುನಿರಾಜು ತಿಳಿಸಿದರು.

ಶೆಟ್ಟಿಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ಬಿ. ಸುರೇಶ್ ನೇತೃತ್ವದಲ್ಲಿ ಆಯೋಜಿಸಲಾದ ಮನೆ ಮನೆಗೆ ಪ್ರಚಾರ ಕಾರ್ಯಕ್ಕೆ, ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪ್ರಚಾರಕ್ಕೆ ಚಾಲನೆ ನೀಡಿ ಮಾತನಾಡಿದರು.

‘ನಮ್ಮ ಕಾರ್ಯಕರ್ತರು ಬೆಳಿಗ್ಗೆ ಎರಡು ಗಂಟೆ ಮತ್ತು ಸಂಜೆ ಮೂರು ಗಂಟೆ ಮನೆ ಮನೆಗೆ ತೆರಳಿ ಪ್ರಚಾರ ಮಾಡಬೇಕು. ದೇಶದ ಅಭಿವೃದ್ಧಿ ಮತ್ತು ಭದ್ರತೆಗೋಸ್ಕರ ಎನ್ ಡಿಎ ನೇತೃತ್ವದ ಸರ್ಕಾರ ಕೇಂದ್ರದಲ್ಲಿ ಬರಬೇಕು' ಎಂದರು.

ಇದೇ ವೇಳೆ ಶಾಸಕ ಎಸ್. ಮುನಿರಾಜು ಅವರು ಮಲ್ಲಸಂದ್ರ ವಾರ್ಡ್‌ನ ಆಂಜನೇಯ ದೇವಸ್ಥಾನ, ಬಾಗಲಗುಂಟೆ ವಾರ್ಡ್ ಮಾರಮ್ಮ ದೇವಿ ದೇವಸ್ಥಾನ ಮತ್ತು ದಾಸರಹಳ್ಳಿ ಉಮಾ ಮಹೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮನೆ ಮನೆ ಪ್ರಚಾರಕ್ಕೆ ಚಾಲನೆ ನೀಡಿದರು.

ಶೆಟ್ಟಿಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ಬಿ. ಸುರೇಶ್ ನೇತೃತ್ವದಲ್ಲಿ ಆಯೋಜಿಸಲಾಗಿದ್ದ ಮನೆ ಮನೆ ಪ್ರಚಾರ ಕಾರ್ಯದಲ್ಲಿ ಶಾಸಕ ಎಸ್.ಮುನಿರಾಜು ಮತಯಾಚಿಸಿದರು

ಮಾನವ ಹಕ್ಕುಗಳ ಆಯೋಗ: ಶ್ಯಾಂ ಭಟ್ ಹಂಗಾಮಿ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಮಾನವ ಹಕ್ಕುಗಳ ಆಯೋಗದ ಹಂಗಾಮಿ ಅಧ್ಯಕ್ಷರನ್ನಾಗಿ ನಿವೃತ್ತ ಐಎಎಸ್ ಅಧಿಕಾರಿ ಟಿ.ಶ್ಯಾಂ ಭಟ್ ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

ಈಗ ಅವರು ಆಯೋಗದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದು, ಹೊಸ ಅಧ್ಯಕ್ಷರ ನೇಮಕ ಆಗುವವರೆಗೆ ಅಥವಾ ಮುಂದಿನ ಆದೇಶದವರೆಗೆ ಅಧ್ಯಕ್ಷ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶ್ಯಾಂ ಭಟ್ ಬಿಡಿಎ ಆಯುಕ್ತರಾಗಿದ್ದರು. ಆಗ ಭ್ರಷ್ಟಾಚಾರದ ಆರೋಪವನ್ನೂ ಅವರು ಎದುರಿಸಿದ್ದರು. ಅದೇ ಸಂದರ್ಭದಲ್ಲಿ ಅವರನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.

2019ರಲ್ಲಿ ಶ್ಯಾಂ ಭಟ್ ಕೆಪಿಎಸ್‌ಸಿ ಅಧ್ಯಕ್ಷ ಸ್ಥಾನದಿಂದ ನಿವೃತ್ತರಾಗಿದ್ದರು. 2023ರ ಮೇ ತಿಂಗಳಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ನವೆಂಬರ್ ತಿಂಗಳಲ್ಲಿ ಶ್ಯಾಂ ಭಟ್ ಅವರನ್ನು ಮಾನವ ಹಕ್ಕುಗಳ ಆಯೋಗದ ಸದಸ್ಯರನ್ನಾಗಿ ನೇಮಿಸಲಾಯಿತು. ಈಗ ಅಧ್ಯಕ್ಷ ಹುದ್ದೆಗೇರಿಸಲಾಗಿದೆ.

‘ಮಹಿಳೆಯರ ಪರ ಕೆಲಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯ ಬಂದ ನಂತರ ಬೆಂಗಳೂರಿನಿಂದ ಒಬ್ಬ ಮಹಿಳೆಯೂ ಲೋಕಸಭೆಯನ್ನು ಪ್ರವೇಶಿಸಿಲ್ಲ. ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಮಹಿಳೆಯರು ಹೆಚ್ಚಿದ್ದು, ಅವರ ಪರ ಕೆಲಸ ಮಾಡಲು ನನ್ನನ್ನು ಅವರು ಗೆಲ್ಲಿಸುತ್ತಾರೆ’ ಎಂದು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾರೆಡ್ಡಿ ವಿಶ್ವಾಸ ವ್ಯಕ್ತಪಡಿಸಿದರು.

ಬಸವನಗುಡಿ ವಿಧಾನಸಭಾ ಕ್ಷೇತ್ರದ ಅಶೋಕ ನಗರದಲ್ಲಿ ಚುನಾವಣೆ ಪ್ರಚಾರ ನಡೆಸಿ, ವಿವಿಧ ಕ್ಷೇತ್ರದ ಮುಖಂಡರು, ಮಹಿಳಾ ಸಂಘಟನೆಗಳ ಜೊತೆಗೆ ಅವರು ಸಂವಾದ ನಡೆಸಿದರು.

‘ನಾನು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದಿದ್ದರಿಂದ ನಗರದ ಇಂಚಿಂಚು ಅರಿವು ನನಗಿದೆ. ನನ್ನ ತಂದೆ ಬೆಂಗಳೂರು ಅಭಿವೃದ್ಧಿ ಸಚಿವರಾಗಿದ್ದಾಗ ಅವರು ಮಾಡಿದ್ದ ಕೆಲಸಗಳಿಂದ ಇಂದು ಬೆಂಗಳೂರು ಅಭಿವೃದ್ಧಿಯತ್ತ ದಾಪುಗಾಲು ಹಾಕುತ್ತಿದೆ’ ಎಂದರು.

‘ನನ್ನ ತಂದೆ ಮುಜರಾಯಿ ಇಲಾಖೆ ಸಚಿವರಾದ ನಂತರ ಆ ಇಲಾಖೆಯಲ್ಲಿ ಆಗುತ್ತಿರುವ ಎಲ್ಲಾ ಅಭಿವೃದ್ಧಿ ಬೆಳವಣಿಗೆಗಳನ್ನು ನೋಡಿ, ಎಲ್ಲಾ ಸಮಾಜದ ಜನರು ಈ ಬಾರಿ ನನ್ನ ಕೈ ಹಿಡಿಯಲಿದ್ದಾರೆ’ ಎಂದು ಹೇಳಿದರು.

ಸೌಮ್ಯಾ ರೆಡ್ಡಿ

ಮನೆಯಿಂದ ಅಂಚೆ ಮತದಾನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಉತ್ತರ, ಕೇಂದ್ರ ಹಾಗೂ ದಕ್ಷಿಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ 85 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನವರು ಹಾಗೂ ಅಂಗವಿಕಲರು ಶನಿವಾರದಿಂದ ಮನೆಯಿಂದಲೇ ಅಂಚೆ ಮತದಾನ ಮಾಡಬಹುದು.

ಮೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 85 ವರ್ಷಕ್ಕಿಂತ ಹೆಚ್ಚಿನವರು 95,128 ರಷ್ಟಿದ್ದಾರೆ. ಇವರಲ್ಲಿ 6,206 ಮಂದಿ ಹಾಗೂ 22,222 ಅಂಗವಿಕಲರಲ್ಲಿ 201 ಮತದಾರರು ಮಾತ್ರ ಅಂಚೆ ಮತದಾನಕ್ಕೆ ನೋಂದಣಿ ಮಾಡಿಕೊಂಡಿದ್ದಾರೆ.

ಏಪ್ರಿಲ್ 13ರಿಂದ ಏಪ್ರಿಲ್ 18ರವರೆಗೆ ಮನೆಯಿಂದಲೇ ಗೌಪ್ಯ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಇಬ್ಬರು ಮತಗಟ್ಟೆ ಅಧಿಕಾರಿಗಳು, ಭದ್ರತಾ ಸಿಬ್ಬಂದಿ, ವಿಡಿಯೊಗ್ರಾಫರ್ ಒಳಗೊಂಡಿರುವ ಮತಗಟ್ಟೆ ತಂಡವು ಮತದಾರರ ಮನೆಗೆ ತೆರಳಿ, ಮತದಾನದ ಗುರುತಿನ ಚೀಟಿ ಪರಿಶೀಲಿಸುತ್ತದೆ. ಬಳಿಕ ಗೌಪ್ಯ ಮತದಾನಕ್ಕಾಗಿ ಅಂಚೆ ಮತಪತ್ರದಲ್ಲಿ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಯನ್ನು ವಿಡಿಯೊಗ್ರಫಿ ಮಾಡಲಾಗುತ್ತದೆ.

ಮತಗಟ್ಟೆ ಸಿಬ್ಬಂದಿಯು ಮತಪತ್ರ ಹಾಗೂ ಮತಪೆಟ್ಟಿಗೆಗಳೊಂದಿಗೆ ಮತದಾರರಿಗೆ ಮುಂಚಿತವಾಗಿ ಮಾಹಿತಿ ನೀಡಿ ಮನೆಗೆ ಭೇಟಿ ನೀಡಲಿದ್ದಾರೆ. ಮೊದಲ ಬಾರಿ ಭೇಟಿ ನೀಡಿದಾಗ ಮತದಾರರು ಮನೆಯಲ್ಲಿರದಿದ್ದರೆ, ಎರಡನೇ ಬಾರಿ ಹೋಗುತ್ತಾರೆ. ಆ ಬಳಿಕ ಮತದಾನಕ್ಕೆ ಅವಕಾಶವಿರುವುದಿಲ್ಲ ಎಂದು ಚುನಾವಣಾಧಿಕಾರಿ ತಿಳಿಸಿದ್ದಾರೆ.

ಮನೆಯಿಂದ ಮತದಾನಕ್ಕೆ 12ಡಿ ನಮೂನೆಯಲ್ಲಿ ನೋಂದಣಿ ಮಾಡಿಸಿಕೊಂಡವರಿಗೆ ಮತಗಟ್ಟೆಯಲ್ಲಿ ವಿದ್ಯುನ್ಮಾನ ಮತಯಂತ್ರದಲ್ಲಿ ಮತ ಚಲಾಯಿಸುವ ಅವಕಾಶ ಇಲ್ಲ ಎಂದಿದ್ದಾರೆ.

ಮಮತಾ ಸಾಗರ್‌ಗೆ ‘ಜಾಗತಿಕ ಸಾಹಿತ್ಯ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯದಲ್ಲಿನ ಅತ್ಯುತ್ತಮ ಸಾಧನೆಗಾಗಿ ಕೊಡಮಾಡುವ ‘ಜಾಗತಿಕ ಸಾಹಿತ್ಯ ಪ್ರಶಸ್ತಿ’ಗೆ ಕನ್ನಡದ ಕವಯಿತ್ರಿ ಮಮತಾ ಜಿ. ಸಾಗರ್ ಭಾಜನರಾಗಿದ್ದಾರೆ.

ಜಾಗತಿಕ ಬರಹಗಾರರ ಒಕ್ಕೂಟ (ಡಬ್ಲ್ಯುಒಡಬ್ಲ್ಯು) ಏಪ್ರಿಲ್ 6ರಂದು ನೈಜೀರಿಯಾದ ಅಬುಜ ನಗರದಲ್ಲಿ ಆಯೋಜಿಸಿದ್ದ ಏಳನೇ ಅಂತರರಾಷ್ಟ್ರೀಯ ಸಾಹಿತ್ಯೋತ್ಸವದಲ್ಲಿ ಮಮತಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ಯಾನ್ ಆಫ್ರಿಕಲ್ ಕಂಟ್ರೀಸ್ ಅಸೋಸಿಯೇಶನ್ ಆಫ್ ರೈಟರ್ಸ್, ಅಸೆಂಬ್ಲಿ ಆಫ್ ಯುರೇಷಿಯನ್ ಪೀಪಲ್ಸ್, ರಷ್ಯನ್ ಅಕಾಡೆಮಿ ಆಫ್ ಆರ್ಟ್ಸ್ ಜಂಟಿಯಾಗಿ ಈ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಿದ್ದವು.

ಮಾನವೀಯತೆಯ ಬುನಾದಿಯ ಮೇಲೆ ಸಂಸ್ಕೃತಿ, ಸಾಹಿತ್ಯ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನು ಸ್ಥಾಪಿಸಿ, ಶಾಂತಿ ಹಾಗೂ ಸೌಹಾರ್ದ ಬಯಸುವ ಜಗತ್ತಿನ ಬರಹಗಾರರ ಕ್ರಿಯಾಶೀಲ ಪ್ರಯತ್ನಗಳನ್ನು ಕಲೆ ಹಾಕುವುದು ಈ ಪ್ರಶಸ್ತಿಯ ಉದ್ದೇಶವಾಗಿದೆ. ಇದೇ ಮೊದಲ ಬಾರಿಗೆ ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಯನ್ನು ಗುರುತಿಸಿ ಗೌರವಿಸುವುದಕ್ಕಾಗಿ ಡಬ್ಲ್ಯು.ಒ.ಡಬ್ಲ್ಯು ಸಂಘಟನೆ ‘ಜಾಗತಿಕ ಸಾಹಿತ್ಯ ಪ್ರಶಸ್ತಿ‘ ಸ್ಥಾಪಿಸಿದೆ. ಕನ್ನಡದ ಸಾಹಿತಿಯೊಬ್ಬರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ವಿಶೇಷವಾಗಿದೆ.

ಮಮತಾ ಜಿ. ಸಾಗರ ಅವರು, ಕನ್ನಡದ ಕವಿ, ಭಾಷಾಂತರಕಾರರು, ನಾಟಕಕಾರರಾಗಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದು, ಬೆಂಗಳೂರು ವಿ.ವಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಒಂಬತ್ತು ವರ್ಷ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಮಣಿಪಾಲ್ ವಿ.ವಿಯ ಸೃಷ್ಟಿ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ, ಸೃಜನಾತ್ಮಕ ಬರವಣಿಗೆ ಅಧ್ಯಯನದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮುಖ್ಯಮಂತ್ರಿ ಅಭಿನಂದನೆ: ಜಾಗತಿಕ ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಕವಯಿತ್ರಿ ಮಮತಾ ಸಾಗರ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದಿಸಿದ್ದಾರೆ.

ನೈಜೀರಿಯಾದ ಅಬುಜ ನಗರದಲ್ಲಿ ಆಯೋಜಿಸಿದ್ದ ಏಳನೇ ಅಂತರರಾಷ್ಟ್ರೀಯ ಸಾಹಿತ್ಯೋತ್ಸವದಲ್ಲಿ ‘ಜಾಗತಿಕ ಸಾಹಿತ್ಯ ಪ್ರಶಸ್ತಿ‘ ಸ್ವೀಕರಿಸಿ ಮಾತನಾಡಿದ ಕವಯಿತ್ರಿ ಮಮತಾ ಜಿ. ಸಾಗರ್ (ಬಲದಿಂದ ಮೊದಲನೆಯವರು)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹಾನಗರ ಪಾಲಿಕೆ ಕಛೇರಿಗಳು,
ನರಸಿಂಹರಾಜ ಚೌಕ, ಬೆಂಗಳೂರು – 560002

ಅಧಿಸೂಚನೆ ಸಂಖ್ಯೆ: ಸ.ಆ.ನೇ&ವಿ/ಪಿಆರ್/45&46/2023–24/03 ದಿನಾಂಕ: 12.04.2024

ತಿದ್ದುಪಡಿ ಅಧಿಸೂಚನೆ

ವಿಷಯ: ಪಾಲಿಕೆಯಲ್ಲಿ ನೇರಪಾವತಿಯಡಿ (DPS) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಹುದ್ದೆಗೆ ಅರ್ಜಿ ಸಲ್ಲಿಸಲು ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಪಾಲಿಕೆಯ ಅಧಿಸೂಚನೆ ಸಂಖ್ಯೆ: ಸ.ಆ.ನೇ&ವಿ/ಪಿಆರ್/45&46/2023-24, ದಿನಾಂಕ: 14.03.2024

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರಪಾವತಿಯಡಿ (DPS) ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಭರ್ತಿಗಾಗಿ ಸೃಜಿಸಿರುವ 11,307 ಸಂಖ್ಯಾತಿರಿಕ್ತ (Supernumerary posts) ಹುದ್ದೆಗಳನ್ನು, ಆಫ್ ಲೈನ್ ಮೂಲಕ ನೇಮಕ ಮಾಡಿಕೊಳ್ಳುವ ಸಂಬಂಧ, ಮೇಲಿನ ಉಲ್ಲೇಖದಂತೆ ಪಾಲಿಕೆಯ ಅಧಿಸೂಚನೆಯಲ್ಲಿ ಸದರಿ ಹುದ್ದೆಯ ಷರತ್ತುಗಳ ವಿವರವಾದ ಮಾಹಿತಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಿ, ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರು ಅರ್ಹ ಪೌರಕಾರ್ಮಿಕರಿಂದ ಭರ್ತಿ ಮಾಡಿರುವ ಅರ್ಜಿ ನಮೂನೆಯನ್ನು ಸ್ವೀಕರಿಸಿ, ಸ್ವೀಕೃತಿಯನ್ನು ಅರ್ಜಿದಾರರಿಗೆ ನೀಡಲು ದಿನಾಂಕ: 15.03.2024 ರಿಂದ ದಿನಾಂಕ: 15.04.2024 ರವರೆಗೆ ಕಾಲಾವಕಾಶವನ್ನು ನೀಡಲಾಗಿತ್ತು.

ಪ್ರಸ್ತುತ ಸಾರ್ವತ್ರಿಕ ಲೋಕಸಭಾ ಚುನಾವಣೆ–2024 ಘೋಷಣೆಯಾಗಿದ್ದು, ಮಾದರಿ ನೀತಿ ಸಂಹಿತೆ ಚಾಲ್ತಿಯಲ್ಲಿರುವುದರಿಂದ ಹಾಗು ಆಡಳಿತಾತ್ಮಕ ಕಾರಣದಿಂದ, ಸದರಿ ಹುದ್ದೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಕಾಲಾವಕಾಶವನ್ನು ದಿನಾಂಕ: 15.05.2024 ರವರೆಗೆ ವಿಸ್ತರಿಸಲಾಗಿದೆ. ಉಳಿದಂತೆ, ದಿನಾಂಕ: 14.03.2024ರ ಅಧಿಸೂಚನೆಗಳಲ್ಲಿನ ಅಂಶಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/–
ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಗರದಲ್ಲಿ ಇಂದು

ದೇವಾಂಗ ದೇವರದಾಸಿಮಯ್ಯನವರ ಜಯಂತ್ಯುತ್ಸವ: ಆಯೋಜನೆ: ದೇವಾಂಗ ಸಂಘ, ಸ್ಥಳ: ರಾಮಲಿಂಗ ಚೌಡೇಶ್ವರಿ ದೇವಾಲಯ, ದೇವಾಂಗ ಹಾಸ್ಟೆಲ್ ರಸ್ತೆ, ಸಂಪಂಗಿರಾಮನಗರ, ಬೆಳಿಗ್ಗೆ 7ರಿಂದ

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಮಯೂರ ವಾಹನ ಉತ್ಸವ, ಹಂಸ ವಾಹನ ಉತ್ಸವ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷಿ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ಡಾ.ವಸುಂಧರಾ ಭೂಪತಿ ಅವರ ಸಂಪಾದಕತ್ವದಲ್ಲಿ ಮೂಡಿಬಂದಿರುವ ‘ಆರೋಗ್ಯ ಚಿಂತನ ಮಾಲಿಕೆ’ಯ 4ನೇ ಕಂತಿನ 12 ಕೃತಿಗಳ ಲೋಕಾರ್ಪಣೆ ಹಾಗೂ ಡಾ.ಸಿ.ಆರ್.ಚಂದ್ರಶೇಖರ್ ಅವರಿಗೆ ಅಭಿನಂದನೆ: ಅಧ್ಯಕ್ಷತೆ: ಡಾ.ಆರ್.ಕೆ.ಸರೋಜಾ, ಕೃತಿಗಳ ಲೋಕಾರ್ಪಣೆ: ಕೆ.ಮರುಳಸಿದ್ದಪ್ಪ, ಕೃತಿ ಬಗ್ಗೆ ಮಾತು: ಡಾ.ವೀಣಾ ಭಟ್, ಡಾ.ಎಚ್.ಜಿ.ಜಯಲಕ್ಷ್ಮಿ, ಲೇಖಕರ ಪರವಾಗಿ ಮಾತು: ಡಾ.ಸುರೇಶ ವಿ. ಸಗರದ, ಅಭಿನಂದನಾ ನುಡಿ: ಡಾ.ಕೆ.ಎಸ್.ಪವಿತ್ರ, ಆಯೋಜನೆ: ವಸಂತ ಪ್ರಕಾಶನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30



ಡಾ.ಸಿ.ಆರ್. ಚಂದ್ರಶೇಖರ್

ಸಂವಿಧಾನದ ಉಳಿವಿಗಾಗಿ ಸಾಂಸ್ಕೃತಿಕ ಪ್ರತಿಶೋಧ ಉದ್ಘಾಟನೆ ಸಮಾರಂಭ: ಉದ್ಘಾಟನೆ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ರಾಜಪ್ಪ ದಳವಾಯಿ, ಪ್ರಾಸ್ತಾವಿಕ: ಜನಾರ್ದನ (ಜನ್ನಿ), ಕರಪತ್ರ ಬಿಡುಗಡೆ: ಮೀನಾಕ್ಷಿ ಬಾಳಿ, ವಿಷಯ ಮಂಡನೆ: ಶಿವಸುಂದರ್, ಉಪಸ್ಥಿತಿ: ಜೆ.ಸಿ. ಶಶಿಧರ್, ಮನೋಜ್ ವಾಮಂಜೂರು, ಸಾಮೂಹಿಕ ಸಂಘಟನೆಗಳ ಸಮಾಲೋಚನೆ, ಅಧ್ಯಕ್ಷತೆ: ಕೆ. ನೀಲಾ, ಅಭಿಪ್ರಾಯ ಮಂಡನೆ: ಮಾವಳ್ಳಿ ಶಂಕರ್, ಎಸ್.ವೈ.ಗುರುಶಾಂತ್, ಕೆ.ಶರೀಫಾ, ಈ. ಬಸವರಾಜು, ಜಿ.ಸಿ.ಬಯ್ಯಾರೆಡ್ಡಿ, ಕೆ.ಬಿ.ಮಹದೇವಪ್ಪ, ಅಖಿಲ ವಿದ್ಯಾಸಂದ್ರ, ಭೀಮನಗೌಡ, ಬಿ.ಆರ್. ಮಂಜುನಾಥ್, ರಾಮಚಂದ್ರಪ್ಪ, ಗೋಪಾಲಕೃಷ್ಣ ಹರಳಹಳ್ಳಿ, ಆಯೋಜನೆ: ಸಮುದಾಯ ಕರ್ನಾಟಕ, ಸಮಾನ ಮನಸ್ಕರ ಸಂಘಟನೆಗಳು, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 10.30

ಎಸ್.ಕೆ. ಉಮೇಶ್ ಅವರ ‘ಕರಿಯಪ್ಪ ಮೇಷ್ಟ್ರು ನಡೆದಿದ್ದೆ ದಾರಿ’ ಪುಸ್ತಕ ಬಿಡುಗಡೆ: ಉಪಸ್ಥಿತಿ: ನಿತಿನ್ ಷಾ, ಆಯೋಜನೆ ಹಾಗೂ ಸ್ಥಳ: ಸಪ್ನ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 11.30

ವಿಶ್ವ ಆರೋಗ್ಯ ದಿನಾಚರಣೆ: ಮುಖ್ಯ ಅತಿಥಿ: ನೇಮಿಚಂದ್ರ, ಗೌರವ ಉಪಸ್ಥಿತಿ: ಪ್ರಭಾಮೂರ್ತಿ, ಅಧ್ಯಕ್ಷತೆ: ಡಾ.ಸಿ.ಆರ್. ಚಂದ್ರಶೇಖರ್, ಆಯೋಜನೆ: ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆ, ಸ್ಥಳ: ಸಮಾಧಾನ ಆಪ್ತಸಲಹೆ ಕೇಂದ್ರ, ಬನ್ನೇರುಘಟ್ಟ ರಸ್ತೆ, ಮೈಕೋ ಲೇಔಟ್, ಮಧ್ಯಾಹ್ನ 3

‘ಸರ್ವರಿಗಾಗಿ ಪರಿಸರ ನ್ಯಾಯದ ಹಾದಿ’ ವಿಚಾರ ಸಂಕಿರಣ: ಮುಖ್ಯ ಭಾಷಣ: ನ್ಯಾ.ಅಭಯ್ ಎಸ್. ಓಕಾ, ಗೌರವ ಅತಿಥಿ: ನ್ಯಾ. ಸುನಿಲ್ ದತ್ ಯಾದವ್, ಆಯೋಜನೆ: ಡಿಎಲ್‌ಎನ್ ರಾವ್ ಫೌಂಡೇಷನ್, ಸ್ಥಳ: ಎನ್‌ಜಿಒ ಹಾಲ್, ಕಬ್ಬನ್ ಉದ್ಯಾನ, ಮಧ್ಯಾಹ್ನ 3.30

ನ್ಯಾ.ಅಭಯ್ ಎಸ್ ಓಕಾ

‘ಕನ್ನಡಕ್ಕೆ ಜೇಡರ ದಾಸಿಮಯ್ಯ ಕೊಡುಗೆ’ ವಿಚಾರ ಸಂಕಿರಣ: ಉದ್ಘಾಟನೆ: ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷತೆ: ಎಸ್.ಪಿನಾಕಪಾಣಿ, ವಿಚಾರ ಮಂಡನೆ: ಗುಂಡೀಗೆರೆ ವಿಶ್ವನಾಥ್, ಪ್ರಭು ಇಸುವನಹಳ್ಳಿ, ಶಕುಂತಲ ಬಾಗಲಕೋಟ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, #533, 7ನೇ ಮುಖ್ಯರಸ್ತೆ, ದೊಡ್ಡಬಸ್ತಿ ರಸ್ತೆ, ಕರ್ನಾಟಕ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 4.30

ಸತ್ಯವತಿ ವಿಜಯರಾಘವ ಚಾರಿಟಬಲ್ ಟ್ರಸ್ಟ್ ಧರ್ಮದರ್ಶಿಗಳ ದತ್ತಿ, ನಾಗಡಿಕೆರೆ–ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ, ಪಂಕಜಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ: ನ್ಯಾ.ಎಚ್.ಬಿ. ಪ್ರಭಾಕರ ಶಾಸ್ತ್ರಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಎ.ಪುಷ್ಪ ಅಯ್ಯಂಗಾರ್, ಎನ್.ಕೆ. ರಮೇಶ್, ಪ್ರಶಸ್ತಿ ಪುರಸ್ಕೃತರು: ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ, ಅಮರೇಂದ್ರ ಹೊಲ್ಲಂಬಳ್ಳಿ, ಕೆ.ಜಿ. ಸರೋಜಾ ನಾಗರಾಜ್, ಕೆ.ವಿ.ರಾಜೇಶ್ವರಿ, ಕೆ.ಎನ್. ಪುಟ್ಟಲಿಂಗಯ್ಯಗೌಡ, ಆಯೋಜನೆ ಹಾಗೂ ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸೂ.ವಂ.ಆರಗ ವಿಮರ್ಶಾ ಪ್ರಶಸ್ತಿ ಮತ್ತು ಡಾ.ವಿಜಯಾ ಸುಬ್ಬರಾಜ್ ಗಣ್ಯಲೇಖಕಿ ಪ್ರಶಸ್ತಿ ಪ್ರದಾನ ಸಮಾರಂಭ: ಪ್ರಶಸ್ತಿ ಪ್ರದಾನ: ಜಾಣಗೆರೆ ವೆಂಕಟರಾಮಯ್ಯ, ಮುಖ್ಯ ಅತಿಥಿ: ಎಲ್.ಜಿ.ಮೀರಾ, ಪ್ರಶಸ್ತಿ ಪುರಸ್ಕೃತರು: ಮೋಹನ ಕುಂಟಾರ್, ಟಿ.ಎಸ್.ಶ್ರವಣಕುಮಾರಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ.ಸಭಾಂಗಣ, ಬಿ.ಎಂ.ಶ್ರೀ.ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5

ರವಿ ಬೆಳಗೆರೆ ಅವರು ಅನುವಾದಿಸಿದ ‘ವಿವಾಹ’ ಕೃತಿ ಬಿಡುಗಡೆ: ನಿರ್ಮಲಾ ಎಲಿಗಾರ್, ಮೃತ್ಯುಂಜಯ ದೊಡ್ಡವಾಡ ಅವರ ನಿರ್ದೇಶನದಲ್ಲಿ ‘ನವ ಭಾವ ಚೈತ್ರ’ ಸಂಗೀತ ಕಾರ್ಯಕ್ರಮ, ಗೀತೆ ವಿಶ್ಲೇಷಣೆ: ಯಶೋಮತಿ ರವಿ ಬೆಳಗೆರೆ, ಆಯೋಜನೆ: ರವಿ ಬೆಳಗೆರೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್ತು, ಸಂಗೀತಧಾಮ ಮ್ಯೂಸಿಕ್ ಅಕಾಡೆಮಿ, ಸ್ಥಳ: ಯೋಗ ಸಭಾಂಗಣ, ಬಿಬಿಎಂಪಿ ಕಚೇರಿ, ಆರ್‌ಬಿಐ ಬಡಾವಣೆ, ಸಂಜೆ 5

ಬಾಬಾ ಸಾಹೇಬ್ ಮತ್ತು ದಲಿತ ಚಳವಳಿ ರೂಪುಗೊಂಡ ಕಥನದ ಬಗ್ಗೆ ಸಂವಾದ: ಪಾಲ್ಗೊಳ್ಳುವವರು: ಇಂದೂಧರ್ ಹೊನ್ನಾಪುರ, ರಹಮತ್ ತರೀಕೆರೆ, ಶ್ರೀಪಾದ ಭಟ್, ಅಶ್ವಿನಿ ಓಬುಳೇಶ್, ವಿಕಾಸ್ ಆರ್. ಮೌರ್ಯ, ಆಯೋಜನೆ: ಜೀರುಂಡೆ ಪುಸ್ತಕ, ಸ್ಥಳ: ಬೀಟಲ್ ಬುಕ್ ಶಾಪ್, ವಿಜಯನಗರ, ಸಂಜೆ 5

ಎಫ್.ಎಂ.ನಂದಗಾವ ಅವರ ‘ಘಟ ಉರುಳಿತು’, ಗಿರೀಶ್ ತಾಳಿಕಟ್ಟೆ ಅವರ ‘ಡಿಟೆಕ್ಟಿವ್ ಸ್ಟೋರೀಸ್’ ಪುಸ್ತಕ ಬಿಡುಗಡೆ ಹಾಗೂ ‘ಸಂಚಲನ’ ಪ್ರಶಸ್ತಿ ಪ್ರದಾನ: ಬಂಜಗೆರೆ ಜಯಪ್ರಕಾಶ್, ಆರೋಗ್ಯಪ್ಪ, ಪುಸ್ತಕ ಪರಿಚಯ: ಎಚ್.ದಂಡಪ್ಪ, ಬಿ.ಕೆ. ಶಿವರಾಮ್, ‘ಸಂಚಲನ’ ಪ್ರಶಸ್ತಿ ಪುರಸ್ಕೃತರು: ರಫಾಯಲ್ ರಾಜ್, ಆಯೋಜನೆ: ಸಂಚಲನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

70ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಗಾಯನ: ಶ್ರೀಯಾಮೂರ್ತಿ, ತಬಲಾ: ಸುಮೀತ್ ನಾಯಕ್, ಹಾರ್ಮೋನಿಯಂ: ಪ್ರಮೋದ್, ತಾಳವಾದ್ಯ: ಲಯ ಲಹರಿ ವೃಂದ, ಆಯೋಜನೆ ಹಾಗೂ ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5.30

ಕಲಾವಿದ ವಸಂತ ಶೆಣೈ ಅವರ ಸ್ಮರಣಾರ್ಥ ‘ರಂಗ ವಸಂತ ಸ್ಮರಣೆ’: ಪಾಲ್ಗೊಳ್ಳುವವರು: ಕನ್ನಪಾಡಿ ರಾಮಕೃಷ್ಣ, ಚಡ್ಡಿ ನಾಗೇಶ್, ಹೂಗೊಪ್ಪಲು ಕೃಷ್ಣಮೂರ್ತಿ, ಸತ್ಯಪ್ರಕಾಶ್, ‘ಮುಖ್ಯಮಂತ್ರಿ’ ಚಂದ್ರು, ಯು. ಸುರೇಂದ್ರ ಶೆಣೈ, ಪ್ರಶಾಂತ ಶೆಣೈ, ನಾಟಕ ಪ್ರದರ್ಶನ: ‘ಮುಚ್ಚಿಟ್ಟದ್ದು ಬಚ್ಚಿಟ್ಟದ್ದು’, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ಸಿ.ಅಶ್ವಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 6

ವಾರ್ಷಿಕ ಸಂಗೀತ ಸಮಾರಂಭ: ಗಾಯನ: ಆನಂದ್ ಭಾಟೆ, ತಬಲಾ: ರವೀಂದ್ರ ಯಾವಗಲ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ಆಯೋಜನೆ: ರಾಜಗುರು ಸ್ಮೃತಿ, ಸ್ಥಳ: ಹವ್ಯಕ ಸಭಾ ಭವನ, ಮಲ್ಲೇಶ್ವರ, ಸಂಜೆ 6

ರಾಮನವಮಿ ಸಂಗೀತೋತ್ಸವ–2024: ಸಂಜೆ 5ರಿಂದ 6 ಗಂಟೆ: ಎಸ್‌ವಿಎನ್ ರಾವ್ ಪ್ರಶಸ್ತಿ ಪ್ರದಾನ ಸಮಾರಂಭ, ಹರಿದಾಸ ವಿಜಯ ಹರಿಕಥೆ: ವಿಶಾಖ ಹರಿ, ವಾದ್ಯ ಸಹಕಾರ: ಚಾರುಲತಾ ರಾಮಾನುಜಂ, ಅರ್ಜುನ್ ಗಣೇಶ್, ಸುಕನ್ಯ ರಾಂಗೋಪಾಲ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೆಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಮೈದಾನ, ಚಾಮರಾಜಪೇಟೆ, ಸಂಜೆ 6.30

ವಸಂತ ನವರಾತ್ರಿ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮ: ವಾಸವಿ ಗಾನ ಮಂಜರಿ ತಂಡದಿಂದ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30

‘ಆಲಾಪ್’ ಸಂಗೀತ ಕಛೇರಿ: ಪ್ರಣವಿ ಜಿ., ಅರಭಿ ಎಸ್. ರಾವ್, ಕಾರ್ತಿಕ್ ಪ್ರಣವ್, ಆಯೋಜನೆ ಹಾಗೂ ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ.ನಗರ, ಸಂಜೆ 6.30

‘ಜತೆಗಿರುವನು ಚಂದಿರ’ ನಾಟಕ ಪ್ರದರ್ಶನ: ನಿರ್ದೇಶನ: ಹುಲುಗಪ್ಪ ಕಟ್ಟೀಮನಿ, ಸಂಗೀತ: ಶ್ರೀನಿವಾಸ ಭಟ್, ಕನ್ನಡಕ್ಕೆ ರೂಪಾಂತರ: ಜಯಂತ ಕಾಯ್ಕಿಣಿ, ಆಯೋಜನೆ: ಸಂಕಲ್ಪ ಮೈಸೂರು ತಂಡ, ಸ್ಥಳ: ರಂಗ ಶಂಕರ, ಜೆ.ಪಿ.ನಗರ, ಮಧ್ಯಾಹ್ನ 3.30 ಹಾಗೂ ಸಂಜೆ 7.30

DAIKIN AIR CONDITIONERS — 2.02 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 14,260
ಎಕ್ಸ್‌ಚೇಂಜ್ ಹಳೆಯ ಎಸಿ	₹ 4,000
ಎಕ್ಸ್‌ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹86,800 — ಎಫೆಕ್ಟಿವ್ ಪ್ರೈಸ್ ₹64,540 — ಪ್ರತಿ ದಿನ ಇಎಂಐ ₹179

BLUE STAR — 1.5 TON 3 STAR INVERTER

ಗಿರಿಯಾಸ್ ರಿಯಾಯಿತಿ	₹21,580
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 3,000
ಎಕ್ಸ್‌ಚೇಂಜ್ ಹಳೆಯ ಎಸಿ	₹ 4,000
ಎಕ್ಸ್‌ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹63,500 — ಎಫೆಕ್ಟಿವ್ ಪ್ರೈಸ್ ₹30,920 — ಪ್ರತಿ ದಿನ ಇಎಂಐ ₹86

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

LG — 1.5 TON 3 STAR INVERTER TS-Q18YNXE2

ಗಿರಿಯಾಸ್ ರಿಯಾಯಿತಿ	₹35,080
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ	₹ 4,000
ಎಕ್ಸ್‌ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹78,990 — ಎಫೆಕ್ಟಿವ್ ಪ್ರೈಸ್ ₹34,410 — ಪ್ರತಿ ದಿನ ಇಎಂಐ ₹96

Godrej — 1.5 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 8,640
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,000
ಎಕ್ಸ್‌ಚೇಂಜ್ ಹಳೆಯ ಎಸಿ	₹ 4,000
ಎಕ್ಸ್‌ಚೇಂಜ್ ಹಳೆಯ ಎಸಿ	₹ 4,000

ಎಂ.ಆರ್.ಪಿ ₹45,900 — ಎಫೆಕ್ಟಿವ್ ಪ್ರೈಸ್ ₹28,260 — ಪ್ರತಿ ದಿನ ಇಎಂಐ ₹79

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

VOLTAS — 1.0 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 22,620
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ	₹ 4,000
ಎಕ್ಸ್‌ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹56,990 — ಎಫೆಕ್ಟಿವ್ ಪ್ರೈಸ್ ₹24,820 — ಪ್ರತಿ ದಿನ ಇಎಂಐ ₹69

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

LLOYD — 1.0 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 16,440
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,500
ಎಕ್ಸ್‌ಚೇಂಜ್ ಹಳೆಯ ಎಸಿ	₹ 4,000
ಎಕ್ಸ್‌ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹49,990 — ಎಫೆಕ್ಟಿವ್ ಪ್ರೈಸ್ ₹24,050 — ಪ್ರತಿ ದಿನ ಇಎಂಐ ₹67

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

ಯುಗಾದಿ SALE

UPTO 20% ಕ್ಯಾಶ್ ಬ್ಯಾಕ್ ಕ್ರೆಡಿಟ್ ಕಾರ್ಡ್ ಮೇಲೆ

UPTO ₹11,500 ಕ್ಯಾಶ್ ಬ್ಯಾಕ್ ಫೈನಾನ್ಸ್ ಮೇಲೆ*

UPTO ₹25,000 ಕಡಿತ ಎಕ್ಸ್‌ಚೇಂಜ್ ಮೇಲೆ*

Upto 70% ಕಡಿತ*

ಕೊನೆಯ 2 ದಿನಗಳು

(ಮಳಿಗೆಗಳು ಬೆಳಿಗ್ಗೆ 10 ರಿಂದ ರಾತ್ರಿ 10 ಗಂಟೆ ವರೆಗೆ ತೆರೆದಿರುತ್ತದೆ)

SAMSUNG 653 ಲೀ ಸೈಡ್ ಬೈ ಸೈಡ್ RS76CG8113SLHL — ಇ.ಎಮ್.ಐ ₹6,033

LG 650 ಲೀ ಸೈಡ್ ಬೈ ಸೈಡ್ GL-B257DBM3 — ಇ.ಎಮ್.ಐ ₹4,990

5% INSTANT DISCOUNT* SBI card — *Min. Trxn.: ₹15,000; Max. Discount: ₹2,500 per card. Valid only on EMI Trxn. Validity: 14 Mar - 28 Apr 2024. T&C Apply.

24 HOURS ಎಕ್ಸ್‌ಪ್ರೆಸ್ ಡೆಲಿವರಿ*

Paytm FIRST — AN EXCLUSIVE FREE MEMBERSHIP WITH BENEFITS WORTH ₹75,000* ON AC'S, MOBILES AND LAPTOPS. T&C APPLY

FINANCE POWERED BY Groww — 0% EMI — MIN PRODUCT VALUE ₹10,000

MobiKwik 4% ಕ್ಯಾಶ್ ಬ್ಯಾಕ್* — MINIMUM TRANSACTION ₹1000 MAXIMUM CASHBACK UPTO ₹750

LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು* — BT SPEAKER, INDUCTION COOKER, STEAM IRON, KETTLE, DRY IRON

Haier 531 ಲೀ ಸೈಡ್ ಬೈ ಸೈಡ್ — ಇ.ಎಮ್.ಐ ₹6,866 — ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

Panasonic 280 ಲೀ ಫ್ರಾಸ್ಟ್ ಫ್ರೀ — ಇ.ಎಮ್.ಐ ₹2,724 — ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

Whirlpool 235 ಲೀ ಫ್ರಾಸ್ಟ್ ಫ್ರೀ — ಇ.ಎಮ್.ಐ ₹2,542 — ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

iPhone 14/15 — ₹58,900 ONWARDS — 81 ಪ್ರತಿ ದಿನ ಇಎಂಐ — 70% OFF ON DAMAGE PROTECTION

SAMSUNG S24/ S24Plus/ S24Ultra — GET Paytm FIRST FREE BENEFITS WORTH ₹75,000* — ₹70,999 ONWARDS — 98 ಪ್ರತಿ ದಿನ ಇಎಂಐ — PAY ₹199 AND GET 1YR COMPLETE DAMAGE PROTECTION + WATCH WORTH ₹17,999

5G mela 5G PHONE — ₹9,999 ONWARDS — PAY ₹99 AND GET FREE 1 YEAR COMPLETE DAMAGE PROTECTION + BT NECKBAND WORTH UPTO ₹9999*** — mi, vivo, ONEPLUS, oppo

LG 77 ಓಎಲ್‌ಇಡಿ 4K SMART TV OLED77B3PSA — ಇ.ಎಮ್.ಐ ₹4,999

SAMSUNG 55 ಓಎಲ್‌ಇಡಿ 4K SMART TV 55S90C — ಇ.ಎಮ್.ಐ ₹10,050

SONY 55 4K ULTRA HD SMART ಓಎಲ್‌ಇಡಿ GOOGLE TV XR-55A80L — ಇ.ಎಮ್.ಐ ₹5,500

Lenovo (SLIM 3i)	hp VICTUS	DELL INS 3520
RYZEN 7	RYZEN 5 5600H	12TH GEN I5
16GB RAM	16GB RAM	16 GB RAM
512GB SSD	512GB SSD	512 GB SSD
15.6" FHD	4 GB GFX	15.6 FHD
WIN 11 MSO- 2021	15.6" FHD	WIN 11 MSO 21
	WIN 11	
OFFER PRICE* ₹49,990	OFFER PRICE* ₹53,490	OFFER PRICE* ₹53,990

GET Paytm FIRST FREE BENEFITS WORTH ₹75,000 — ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್ — UPTO 2500 CASH BACK* + ADDITIONAL BENEFIT WORTH ₹10,999 @ ₹1999

MacBook Air 13" — M1 GPU, 8GB, 256GB, 13.3" — GET Paytm FIRST FREE BENEFITS WORTH ₹75,000 — EFFECTIVE PRICE ₹74,990 (Including Rs.5000 Cash back) — ಉಚಿತ: ಸ್ಮಾರ್ಟ್ ಕಾಲಿಂಗ್ ವಾಚ್+ 1 YEAR EXTENDED WARRANTY WORTH ₹14999

BOSCH 9 ಕೆಜಿ ಫ್ರಂಟ್ ಲೋಡಿಂಗ್ — ಇ.ಎಮ್.ಐ ₹3,925 — ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

WIDEST RANGE OF AIRCOOLERS & FANS — Crompton, orient, USHA, V-GUARD, KENSTAR, Symphony, VOLTAS, BAJAJ, HAVELLS

Prestige — MIXER GRINDERS ENDURA 1000W MIXER GRINDER + PRESSURE COOKERS: SS Popular3 LTR — OFFER PRICE: ₹8,190 COMBI MRP: ₹13,385

Prestige — GAS STOVES:SVACHH DUO / NEO 3 BURNER + PRESSURE COOKERS: SS POPULAR3 LTR — OFFER PRICE: ₹8,790 COMBI MRP: ₹13,385

EUREKA FORBES AQUAGUARD SUPERIO RO+UV+MTDS+SS + NIRLEP NON STICK COOKWARE: ASPA 4 Pc SET — OFFER PRICE: ₹18,990 COMBI MRP: ₹31,990

SONY 5.1 Ch. SOUND BAR HT-S20R — 5.1CH DOLBY DIGITAL SOUNDBAR, 400W, BLUETOOTH & USB CONNECTIVITY, HDMI & OPTICAL CONNECTIVITY — OFFER PRICE ₹16,990* — ಇ.ಎಮ್.ಐ ₹1,416

LG, SAMSUNG, SONY, Panasonic, Haier, NY, IFB, Godrej, LLOYD, Whirlpool, BOSCH, Electrolux, PHILIPS, hp, acer, DELL, Lenovo, ASUS, vivo, oppo, ONEPLUS, mi, iPhone, JBL, BLUE STAR, HAFELE, Symphony, HAVELLS, USHA, DAIKIN, GENERAL, Prestige, VOLTAS, VOLTAS·beko, Butterfly, Preethi, VIJAYALAKSHMI, ULTRA, EUREKA FORBES, pureit, Livpure, FABER, KENSTAR, Pigeon, BAJAJ, Crompton, MAHARAJA WHITELINE, V-GUARD, ZEBRONICS, KAFF, OZONE

GIRIAS THE CONSUMER DURABLE PEOPLE Since 1971

ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಎಲೆಕ್ಟ್ರಾನಿಕ್‌ಸಿಟಿ 9591103536 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 |ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ಜೆ.ಪಿ.ನಗರ 9606922698 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಬಾಗೇಪಲ್ಲಿ 9036289562 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮಂತ್ರಿ ಮಾಲ್ 95919 25353 | ಮತ್ತಿಕೆರೆ 90352 22377 |ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 |ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022

STORE LOCATOR

ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ.ಹಣಕಾಸು ಯೋಜನೆಗಳು ಫೈನಾನ್ಸ್ ಕಂಪನಿಯ ಸ್ವಂತ ವಿವೇಚನೆಗೆ ಒಳಪಟ್ಟಿರುತ್ತವೆ. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ತನಕ ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ತನಕ ರಿಯಾಯಿತಿ. 3 ಇಎಂಐ ಅನ್ನು ಪೂರ್ಣಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಬಿಎಫ್ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ರೂ.11,500 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ ಮಾಡೆಲ್‌ಗಳು ಮತ್ತು ಬ್ರ್ಯಾಂಡ್‌ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಇಎಂಐ 9,12,18,24 ಮತ್ತು ಸ್ಥಿರ ಇಎಂಐ ಯೋಜನೆಗಳ ಆಧಾರದ ಮೇಲೆ ಮೇಲಿನ ಉತ್ಪನ್ನಗಳನ್ನು ನೀಡುತ್ತದೆ. ವಿನಿಮಯ ಕೊಡುಗೆಗಳು ಉತ್ತಮ ಕೆಲಸದ ಸ್ಥಿತಿಯ ಉತ್ಪನ್ನಗಳಲ್ಲಿ ಮತ್ತು ಇಎಂಐ ಬೆಲೆಯ ಮೇಲೆ ಮಾನ್ಯವಾಗಿರುತ್ತವೆ. ವಿನಿಮಯ ಕೊಡುಗೆಗಳು ಉತ್ತಮ ಕೆಲಸದ ಸ್ಥಿತಿಯ ಉತ್ಪನ್ನಗಳಲ್ಲಿ ಮತ್ತು ಎಂ.ಆರ್.ಪಿ ಬೆಲೆಯ ಮೇಲೆ ಮಾನ್ಯವಾಗಿರುತ್ತವೆ. ಹಳೆಯ ಸ್ಪ್ಲಿಟ್ ಎಸಿ ವಿನಿಮಯಕ್ಕಾಗಿ ಫ್ಲಾಟ್ ರೂ.8000 ರಿಯಾಯಿತಿ. ಉಚಿತ ಸ್ಮಾರ್ಟ್‌ವಾಚ್ ಆಫರ್‌ಗಳು ಕೇವಲ ರೂ.20000 ಮತ್ತು ಅದಕ್ಕಿಂತ ಹೆಚ್ಚಿನ ಆಯ್ದ ಮಾಡೆಲ್‌ಗಳು ಮತ್ತು ಬ್ರ್ಯಾಂಡ್‌ಗಳ ಖರೀದಿಗಳಿಗೆ ಮಾತ್ರ ಮಾನ್ಯವಾಗಿರುತ್ತವೆ.

156 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA www.roundtableindia.org www.ladiescircleindia.org

ಸಮಾಜ ವಿಧಿಸಿದ್ದ ಸಂಕೋಲೆಗಳಿಂದ ಮಹಿಳೆಯರು ಮುಕ್ತರಾಗಬೇಕು ಎಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಅಂಬೇಡ್ಕರ್ ಅವರ ವ್ಯಕ್ತಿತ್ವವನ್ನು ಪ್ರೇರಣೆಯಾಗಿಟ್ಟುಕೊಂಡು ಬದುಕು ಕಟ್ಟಿಕೊಂಡವರ ಮಾತುಗಳನ್ನು **ಓದೇಶ ಸಕಲೇಶಪುರ** ಇಲ್ಲಿ ನಿರೂಪಿಸಿದ್ದಾರೆ.

ಪ್ರತಿರೋಧಿಸಲು ಕಲಿಸಿಕೊಟ್ಟವರು

ಮನುಸ್ಮೃತಿಯಲ್ಲಿ ಬಂಧಿಯಾಗಿದ್ದ ಮಹಿಳೆಯರ ಹಕ್ಕುಗಳಿಗೆ ವಿಮೋಚನೆ ಕೊಡಿಸಿದವರು ಅಂಬೇಡ್ಕರ್. ನನ್ನ ಮನೆಯೊಳಗೇ ಅಸ್ಪೃಶ್ಯತೆ ಹಾಗೂ ಜಾತೀಯತೆಯನ್ನು ಕಂಡಿದ್ದ ನನಗೆ, ಚಿಕ್ಕಂದಿನಲ್ಲೇ ಪ್ರತಿರೋಧವೂ ಹುಟ್ಟಿಕೊಂಡಿತು. ಮುಂದೆ ರೈತಪರ ಹೋರಾಟಗಳಲ್ಲಿ ತೊಡಗಿಸಿಕೊಂಡು ಮಹಿಳೆಯರ ಪಾಲ್ಗೊಳ್ಳುವಿಕೆ ಮಹತ್ವ ಸಾರುವುದಕ್ಕೆ ಮತ್ತು ಅಂತರ್ಜಾತಿ ವಿವಾಹ ಸೇರಿದಂತೆ ಹಲವು ಚಳವಳಿಗಳ ಭಾಗವಾಗುವಲ್ಲಿ ಅಂಬೇಡ್ಕರ್ ಚಿಂತನೆಗಳ ಪ್ರಭಾವ ಸಾಕಷ್ಟಿದೆ.

ಅನಸೂಯಮ್ಮ ಬಿ.
ರೈತಪರ ಹೋರಾಟಗಾರ್ತಿ

ದೂಳು ಒರೆಸಿದ ಚೇತನ

ಹೋರಾಟಗಾರರ ಒಡನಾಡಿ ಅಂಬೇಡ್ಕರ್. ಹಕ್ಕುಗಳ ಪರವಾಗಿ ಹೋರಾಡುವವರಿಗೆ ಅಂಬೇಡ್ಕರ್ ಚಿಂತನೆಗಳು ಬೇಕೇ ಬೇಕು. ನಮ್ಮ ಬೇಡಿಕೆ ಮತ್ತು ಹಕ್ಕಿಗೆ ನ್ಯಾಯಬದ್ಧ ಅವಕಾಶ ಕಲ್ಪಿಸಿದವರು ಅಂಬೇಡ್ಕರ್. ನಾನೆಂದರೆ ಕೇವಲ ನಾನಲ್ಲ, ನಾನೊಬ್ಬ ಸಮಾಜದ ಅವಿಭಾಜ್ಯ ಅಂಗ ಎಂಬುದನ್ನು ಒತ್ತಿ ಹೇಳಿದರು. ನ್ಯಾಯದ ಕಣ್ಣನ್ನು ಮಸುಕುಗೊಳಿಸಿದ್ದ ದೂಳನ್ನು ಒರೆಸಿದ ಚೇತನ ಅಂಬೇಡ್ಕರ್.

ಡಾ. ಎಚ್.ಎಸ್. ಅನುಪಮಾ
ಲೇಖಕಿ

ಅಂಬೇಡ್ಕರ್ ಮತ್ತು ಮಹಿಳಾವಾದ

ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು. ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು. ಹೆಣ್ಣುಮಕ್ಕಳ ಮೇಲೆ ಮದುವೆಯನ್ನು ಹೇರಬಾರದು. ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರಬೇಕು. ಆಕೆ ಗಂಡನ ಗುಲಾಮಳಾಗಬಾರದು. ಮಹಿಳೆಗೆ ಅವಳದ್ದೇ ಆದ ಸ್ವಾತಂತ್ರ್ಯವಿದೆ ಹೀಗೆ ಹಲವು ವಿಚಾರಗಳನ್ನು ತಮ್ಮ ಬದುಕು, ಬರೆಹ, ಭಾಷಣಗಳಲ್ಲಿ ಪ್ರತಿಪಾದಿಸಿದ್ದ ಮಹಾನ್ ಚೇತನ ಡಾ.ಬಿ.ಆರ್.ಅಂಬೇಡ್ಕರ್. ಏಪ್ರಿಲ್ 14 ಅಂಬೇಡ್ಕರ್ ಅವರ ಜನ್ಮದಿನ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅವರ ಚಿಂತನೆಗಳ ಸ್ಮರಣೆ ಇದು.

ವಿಕಾಸ್ ಆರ್. ಮೌರ್ಯ

ಡಾ. ಬಿ.ಆರ್.ಅಂಬೇಡ್ಕರ್ ಅವರನ್ನು ಓದಿಕೊಂಡಿರುವವರಿಗೆ ಅವರ ಮಹಿಳಾವಾದ ಪರಿಚಯವಾಗದೇ ಇರಲಾರದು. ಹಿಂದೂ ಕೋಡ್‌ಬಿಲ್, ಮಹಿಳಾ ಕಾರ್ಮಿಕರ ಕಲ್ಯಾಣ, ಸಮಾನ ವೇತನ, ತಾಯ್ತನದ ಸೌಲಭ್ಯ, ಮಹಿಳಾ ಶಿಕ್ಷಣ ಮುಂತಾದ ಪ್ರಬುದ್ಧ ಭಾರತದ ನಡೆಗಳಲ್ಲಿ ಅಂಬೇಡ್ಕರ್ ಕೊಡುಗೆ ಚಿರಪರಿಚಿತವಾಗಿವೆ.

ಮನುಸ್ಮೃತಿಯು ಮಹಿಳೆಯರಿಂದ ಕಿತ್ತುಕೊಂಡ ಹಕ್ಕುಗಳನ್ನು ಮರುಸ್ಥಾಪಿಸಲು ಅವರು ಶ್ರಮಿಸಿದರು. ಮಹಿಳೆಯರು ಸಾಮಾಜಿಕವಾಗಿ ಸಬಲಗೊಳ್ಳಬೇಕು. ಹೆಣ್ಣು ಆರ್ಥಿಕವಾಗಿ ಸ್ವತಂತ್ರಳಾಗಿರಬೇಕು. ಹೆಣ್ಣುಮಕ್ಕಳ ಮೇಲೆ ಮದುವೆಯನ್ನು ಹೇರಬಾರದು. ಗಂಡನನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರಬೇಕು. ಆಕೆ ಗಂಡನ ಗುಲಾಮಳಾಗಬಾರದು. ಮಹಿಳೆಗೆ ಅವಳದ್ದೇ ಆದ ಸ್ವಾತಂತ್ರ್ಯವಿದೆ ಹೀಗೆ ಹಲವು ವಿಚಾರಗಳನ್ನು ಅವರ ಬದುಕು, ಬರೆಹ, ಭಾಷಣಗಳಲ್ಲಿ ನಾವು ಕಾಣಬಹುದಾಗಿದೆ. ಅಂಬೇಡ್ಕರ್ ಅವರ 'ಜಾತಿಪದ್ಧತಿಯ ಉಗಮ' ಸಿದ್ಧಾಂತವು ಮೇಲ್ಜಾತಿಯ ಪುರುಷರು ತಮ್ಮ ಸಮುದಾಯದ ಹೆಣ್ಣನ್ನು 'ಸ್ವಜಾತಿ ವಿವಾಹ'ದಲ್ಲಿ ಕಟ್ಟಿಹಾಕುವ ಮೂಲಕ ಅವಳನ್ನು 'ಅಸ್ವತಂತ್ರಗೊಳಿಸಿ' 'ಪುರುಷಾಧೀನಳಾಗಿಸಿ' ಜಾತಿಪದ್ಧತಿಯನ್ನು ಸೃಷ್ಟಿಸಿಕೊಂಡರು. ತಳಜಾತಿಗಳು ಇದನ್ನೇ ಅನುಕರಿಸಿದರು. ಇದಕ್ಕೆ ಮನುಸ್ಮೃತಿಯು ಧಾರ್ಮಿಕ ಪಾವಿತ್ರ್ಯತೆಯನ್ನು ಒದಗಿಸಿತು ಎಂದು ವಿವರಿಸುತ್ತದೆ. ಇದನ್ನೇ 'ಮನುವಾದಿ ಗಂಡಾಳ್ವಿಕೆ' ಎನ್ನಲಾಗುತ್ತದೆ. ಹಾಗಾಗಿ ಅಂಬೇಡ್ಕರ್ ಪ್ರಣೀತ ಮಹಿಳಾವಾದದ ದೃಷ್ಟಿಕೋನವು ವರ್ಗ, ಜಾತಿ ಮತ್ತು ಜೆಂಡರ್ ಒಳಗೊಳ್ಳುತ್ತದೆ. ಜಾತಿಶ್ರೇಣೀಕರಣವನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತದೆ. ಜಾತಿಶ್ರೇಣೀಕರಣವು 'ಶ್ರಮಿಕರ ವಿಭಜನೆ'ಯಂತೆ ಮಹಿಳೆಯರನ್ನೂ ಸಮಾನ ಶೋಷಿತರನ್ನಾಗಿ ಮಾಡಿಲ್ಲ. ಜಾತಿಶ್ರೇಣಿಯಲ್ಲಿ ಕೆಳಚಲಿಸಿದಷ್ಟೂ ಮಹಿಳೆಯರ ಸ್ಥಾನಮಾನ ಜಾತಿಯಾಧಾರಿತವಾಗಿ ಪತನವಾಗುತ್ತಾ ಹೋಗುತ್ತದೆ.

ಅಂಬೇಡ್ಕರ್ ಅವರು ಹಿಂದೂ ಕೋಡ್‌ಬಿಲ್ ಮೂಲಕ ಎಲ್ಲಾ ಜಾತಿಶ್ರೇಣಿಯ ಮಹಿಳೆಯರ ಸಮಸ್ಯೆಗೆ ಪರಿಹಾರ ಹುಡುಕಲು ಪ್ರಯತ್ನಿಸಿದ್ದರು. 'ಮನುವಾದಿ ಗಂಡಾಳ್ವಿಕೆ'ಯು ಜಾತಿಪದ್ಧತಿಯನ್ನು ಜಾರಿಗೊಳಿಸಲು ಕಂಡುಕೊಂಡ ಮೂರು ದಾರಿಗಳನ್ನು ಅಂಬೇಡ್ಕರ್ ಗುರುತಿಸಿದ್ದಾರೆ

1. ಸತಿಪದ್ಧತಿ 2. ಬಲವಂತದ ವೈಧವ್ಯ 3. ಹೆಣ್ಣುಮಕ್ಕಳ ಬಾಲ್ಯವಿವಾಹ. ಈ ಮೂರು ಆಚರಣೆಗಳ ಮೂಲಕ ಅಂತರ್ಜಾತಿ ವಿವಾಹಕ್ಕೆ ತಡೆಯೊಡ್ಡಿದ್ದರಿಂದಲೇ ಲೆಕ್ಕವಿಲ್ಲದಷ್ಟು ಜಾತಿಗಳು ರೂಪುಗೊಂಡವು. ಹಾಗಾಗಿಯೇ ಜಾತಿವಿನಾಶಕ್ಕೆ ಅಂಬೇಡ್ಕರ್ ಸೂಚಿಸಿದ ಮೊಟ್ಟಮೊದಲ ಹೆಜ್ಜೆ 'ಅಂತರ್ಜಾತಿ ವಿವಾಹ'. ಇಂದು ಮೇಲಿನ ಮೂರೂ ದಾರಿಗಳ ಬದಲಿಗೆ 'ಮರ್ಯಾದೆ' ಹೆಸರಿನಲ್ಲಿ ಹೆತ್ತವರೇ ತಮ್ಮ ಹೆಣ್ಣುಮಕ್ಕಳನ್ನು ಹತ್ಯೆ ಮಾಡುತ್ತಿದ್ದಾರೆ. ಇದಕ್ಕೆ ಆಯಾ ಜಾತಿಸಮುದಾಯದ ಸಮ್ಮತಿಯೂ ಇದೆ. ಈ ಕ್ರೂರಕೃತ್ಯಕ್ಕೆ 'ಮರ್ಯಾದೆಗೇಡು ಹತ್ಯೆ' ಎಂಬ ಹೆಸರನ್ನೂ ಇಟ್ಟುಕೊಂಡಿದ್ದಾರೆ. ಮರ್ಯಾದೆಗೇಡು ಹತ್ಯೆಗೆ ಮೂಲಕಾರಣ ತಿಳಿದೋ ತಿಳಿಯದೆಯೋ ಜಾತಿಪದ್ಧತಿಯ ನಾಶಗೈಯ್ಯಲು ಮುಂದಾಗುವ ಯುವಜನತೆಯನ್ನು ಅದರಲ್ಲೂ ಹೆಣ್ಣನ್ನು 'ಮನುವಾದಿ ಗಂಡಾಳ್ವಿಕೆ'ಯು ಶಿಕ್ಷಿಸುವುದಾಗಿದೆ. ಆ ಮೂಲಕ ಹೆಣ್ಣುಸಂಕುಲಕ್ಕೆ 'ಗೆರೆ' ದಾಟದಂತೆ ನೀಡುತ್ತಿರುವ ಎಚ್ಚರಿಕೆಯಾಗಿದೆ. ಈ ಬೆಳವಣಿಗೆಯನ್ನು ಅರ್ಥ ಮಾಡಿಕೊಳ್ಳಲು ಜೆಂಡರ್‌ನೊಂದಿಗೆ ಜಾತಿಶ್ರೇಣೀಕರಣದ ದೃಷ್ಟಿಕೋನವೂ ಬಹುಮುಖ್ಯವಾಗುತ್ತದೆ. ಹಾಗಾಗಿ 'ಮನುವಾದಿ ಗಂಡಾಳ್ವಿಕೆ' ಪರಿಕಲ್ಪನೆಯು ಅಂಬೇಡ್ಕರ್ ಅವರು ಮಹಿಳಾವಾದಕ್ಕೆ ನೀಡಿರುವ ಬಹುದೊಡ್ಡ ಕೊಡುಗೆಯಾಗಿದೆ.

ಭಾರತದ ನೈಜ ಸ್ವಾತಂತ್ರ್ಯವು ಜಾತಿವಿನಾಶದಲ್ಲಿದೆ. ಜನಚಳವಳಿಗಳು ಜಾತಿವಿನಾಶದಿಂದ ದೂರ ಸರಿಯುತ್ತಿರುವ ಈ ಸಂದರ್ಭದಲ್ಲಿ ಮಹಿಳಾವಾದವು ಜಾತಿವಿನಾಶ ಚಳವಳಿಯ ನಾಯಕತ್ವ ವಹಿಸುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ವರ್ಗ, ಜಾತಿ ಮತ್ತು ಜೆಂಡರ್ ಚಳವಳಿಗಳು ಒಗ್ಗಟ್ಟಿನಿಂದ ಅಂಬೇಡ್ಕರ್ ಕನಸನ್ನು ನನಸಾಗಿಸುವತ್ತ ಹೆಜ್ಜೆ ಹಾಕಬೇಕಿದೆ.

ಹೋರಾಟದ ಬದುಕಿಗೆ ಪ್ರೇರಣೆ

ಜಾತಿ ಮತ್ತು ವರ್ಗ ತಾರತಮ್ಯದ ವ್ಯವಸ್ಥೆ ಕಿತ್ತೊಗೆಯದೆ ವಿಮೋಚನೆ ಇಲ್ಲ ಎಂಬ ಅಂಬೇಡ್ಕರ್ ಮಾತು ನನ್ನನ್ನು ಬಹಳ ಪ್ರಭಾವಿಸಿದೆ. ಮಹಿಳೆಯರ ಆರ್ಥಿಕ ಹಕ್ಕುಗಳಿಗಾಗಿ ಮಂಡಿಸಿದ್ದ ಹಿಂದೂ ಕೋಡ್ ಬಿಲ್‌ಗೆ ಒಪ್ಪಿಗೆ ಸಿಗದಿದ್ದಾಗ ಅಂಬೇಡ್ಕರ್ ಕಾನೂನು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಅವರೊಳಗಿದ್ದ ತಾಯ್ತನಕ್ಕೊಂದು ನಿದರ್ಶನ. ಭಾರತದಲ್ಲಿ ವರ್ಗ ಮತ್ತು ಜಾತೀಯತೆ ವಿರುದ್ಧದ ಹೋರಾಟಕ್ಕೆ ದನಿ ಎತ್ತಿದವರು ಅಂಬೇಡ್ಕರ್. ಅವರ ಬದುಕು ಮತ್ತು ಚಿಂತನೆ ವೈಯಕ್ತಿಕ ಮತ್ತು ಹೋರಾಟದ ಬದುಕಿಗೆ ಪ್ರೇರಣೆಯಾಗಿದೆ.

ಕೆ. ನೀಲಾ, ಉಪಾಧ್ಯಕ್ಷೆ, ಜನವಾದಿ ಮಹಿಳಾ ಸಂಘಟನೆ

ಆಳವಾಗಿ ಪ್ರಭಾವ ಬೀರಿದ ವ್ಯಕ್ತಿತ್ವ

80ರ ದಶಕದಲ್ಲಿ ಸಾಮಾಜಿಕ ಸಂಚಲನ ಮೂಡಿಸಿದ ದಲಿತ ಸಂಘರ್ಷ ಸಮಿತಿಯ ಹೋರಾಟಗಳು ಅಂಬೇಡ್ಕರ್ ಅನುಭವಿಸಿದ ಅಪಮಾನಗಳನ್ನು ತೆರೆದಿಟ್ಟವು ಮತ್ತು ಅವರ ಚಿಂತನೆಗಳ ಸಾಮಾಜಿಕ ಪ್ರಸ್ತುತತೆಯನ್ನು ಎತ್ತಿ ಹಿಡಿದವು. ಡಿಎಸ್‌ಎಸ್ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರಿಂದ ಸಾಮಾಜಿಕ ಅನಿವಾರ್ಯತೆಗಳು ನನ್ನನ್ನು ಕೂಡ ಆವರಿಸಿದವು. ಮಹಿಳೆಯಾಗಿ ನನಗೆ ಅಂಬೇಡ್ಕರ್ ಅವರ ಮಹಿಳಾಪರ ಚಿಂತನೆಗಳು, ವಕೀಲಳಾಗಿ ಅವರ ಅಪಾರ ವಿದ್ವತ್ತು ಮತ್ತು ಸಂವಿಧಾನ ರಚನೆಯ ಸಂದರ್ಭದಲ್ಲಿ ಮೂಡಿ ಬಂದ ಅತ್ಯಂತ ಗಹನ ಚಿಂತನೆಗಳು ನನ್ನನ್ನು ತೀವ್ರವಾಗಿ ಪ್ರಭಾವಿಸಿವೆ. ವ್ಯಕ್ತಿಯಾಗಿ ಸ್ಥಾನಮಾನ ಪಡೆಯುವುದು ಅವರಿಗೆ ಮುಖ್ಯವಾಗಿರಲಿಲ್ಲ. ಕಷ್ಟವೂ ಆಗಿರಲಿಲ್ಲ. ಆದರೆ, ಸೈದ್ಧಾಂತಿಕ ಮತ್ತು ಸಾಮುದಾಯಿಕ ಚಿಂತನೆ ಮತ್ತು ಹೋರಾಟಗಳು ಹಾಗೂ ಅದರ ಫಲಿತಾಂಶಗಳು ನನ್ನಂಥವರ ಮೇಲೆ ಆಳವಾಗಿ ಪ್ರಭಾವ ಬೀರಿವೆ.

ಬಾನು ಮುಷ್ತಾಕ್, ಲೇಖಕಿ ಹಾಗೂ ವಕೀಲೆ

ಓದಲು ಅವರೇ ಸ್ಫೂರ್ತಿ

ಅಂಬೇಡ್ಕರ್ ಅವರು ಓದಿದ ಪರಿ, ಬಡತನದಿಂದ ಎದ್ದು ಬಂದ ಬಗೆ, ಮೌನವಾಗಿಯೇ ಸಂವಿಧಾನದ ಎಳೆಗಳಲ್ಲಿ ಭದ್ರಪಡಿಸಿದ ನಮ್ಮ ಹಕ್ಕುಗಳು, ಅದರಲ್ಲೂ ಮಹಿಳೆಯರಿಗಾಗಿ ಜಾರಿಗೆ ತಂದ ಹಿಂದೂ ಕೋಡ್ ಬಿಲ್‌ಗಾಗಿ ಭಾರತದ ಎಲ್ಲ ಧರ್ಮದ, ಎಲ್ಲ ಜಾತಿಯ ಮತ್ತು ಎಲ್ಲ ವರ್ಗದವರು ಋಣಿಯಾಗಿದ್ದೇವೆ. ನನ್ನ ಜನರು ಗುಡಿಗಳ ಮುಂದೆ ಸಾಲುಗಟ್ಟಿ ನಿಲ್ಲುವುದನ್ನು ಬಿಟ್ಟು ಗ್ರಂಥಾಲಯಗಳ ಮುಂದೆ ನಿಲ್ಲುವಂತಾಗಬೇಕು ಎಂದು ಹೇಳಿದ ಮಾತಿನಿಂದ ಪ್ರಭಾವಿತಳಾಗಿ ಓದಿನ ಕಡೆ ಗಮನ ಕೊಟ್ಟೆ. ತಂದೆ, ಬಂಧು-ಬಳಗದ ವಿರೋಧವಿದ್ದರೂ ಓದಿ ಮುಂದೆ ಬಂದೆ. ಬದುಕಿನಲ್ಲಿ ನನ್ನದೇ ಆದ ಜಾಗವೊಂದು ಮಾಡಿಕೊಂಡೆ. ಇದಕ್ಕೆಲ್ಲ ಅಂಬೇಡ್ಕರ್ ಸಹ ಸ್ಫೂರ್ತಿ.

ಕೆ. ಷರೀಫಾ, ಸಾಹಿತಿ

ಬ್ರೆಸ್ಟ್‌ಪಂಪ್ ಬಳಕೆ ಸರಿಯೇ?

• ನಾನು ಐದು ತಿಂಗಳ ಮಗುವಿನ ತಾಯಿ. ಮಗುವಿಗೆ ಹಾಲುಣಿಸುವಾಗ ಬಲಗಡೆ ಸ್ತನತೊಟ್ಟಿನ ಹತ್ತಿರ ತುಂಬಾ ನೋವು ಬರುತ್ತದೆ. ಬ್ರೆಸ್ಟ್‌ಪಂಪ್ ಬಳಸುತ್ತಿದ್ದೇನೆ. ವೈದ್ಯರ ಬಳಿ ತೋರಿಸಿದಾಗ ಮಾತ್ರೆ ಬರೆದುಕೊಟ್ಟಿದ್ದಾರೆ. ಅಜ್ಜಿ ಮತ್ತು ಅಮ್ಮ ಬ್ರೆಸ್ಟ್‌ಪಂಪ್ ಒಳ್ಳೆಯದಲ್ಲ. ಅದರ ಬಳಕೆಯಿಂದ ಹಾಲು ಕಡಿಮೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ನೋವು ನೆನೆಸಿಕೊಂಡರೆ ಹಾಲು ಕುಡಿಸುವುದೆ ಬೇಡವೆನಿಸುತ್ತದೆ. ಏನು ಮಾಡುವುದು ತೋಚುತ್ತಿಲ್ಲ.

ಸುಷ್ಮಾ ಚನ್ನರಾಯಪಟ್ಟಣ, ಸರ್ಕಾರಿ ಶಿಕ್ಷಕಿ

ನಿಮ್ಮ ವಿವರಣೆ ಗಮನಿಸಿದರೆ ಸ್ತನತೊಟ್ಟಿನಲ್ಲಿ ಬಿರುಕು ಉಂಟಾಗಿರಬಹುದು. ಹೆಚ್ಚಿನ ಸಂದರ್ಭಗಳಲ್ಲಿ ಇದಕ್ಕೆ ಕಾರಣ ತಪ್ಪು ಭಂಗಿಯಲ್ಲಿ ಹಾಲುಣಿಸುವುದು. ಹಾಲುಣಿಸುವಾಗ ಸ್ತನತೊಟ್ಟು ಮತ್ತು ಅದರ ಸುತ್ತವಿರುವ ಕಪ್ಪು ಭಾಗ ಅಂದರೆ ಕಿರುಡವನ್ನು (ಏರಿಯೋಲಾ) ಪೂರ್ಣಪ್ರಮಾಣದಲ್ಲಿ ಮಗುವಿನ ಬಾಯಿಗೆ ಹಾಕಿರುವುದಿಲ್ಲ. ಇದು ತಪ್ಪು.

ತೊಟ್ಟು ಹಾಗೂ ಕಿರುಡವನ್ನು ಪೂರ್ಣಪ್ರಮಾಣದಲ್ಲಿ ಮಗುವಿನ ಬಾಯಿಯೊಳಗೆ ಇರುವಂತೆ ಹಾಲುಣಿಸಬೇಕು. ಮುಗಿಯುವ ಹಂತದಲ್ಲಿ ಮಗುವಿನ ಬಾಯಿ ಬಿಡಿಸುವಾಗ ನಿಧಾನವಾಗಿ ನಿಮ್ಮ ಕಿರುಬೆರಳನ್ನು ಮಗುವಿನ ಬಾಯೊಳಗೆ ಹಾಕಿ ಮಗು ಸ್ತನತೊಟ್ಟು ಕಚ್ಚದ ಹಾಗೆ ನೋಡಿಕೊಳ್ಳಬೇಕು.

ಸ್ಪಂದನ

ಡಾ. ವೀಣಾ ಎಸ್. ಭಟ್

ಹಾಲುಣಿಸುವಾಗ ಮಧ್ಯೆ ಎದೆಹಾಲನ್ನೆ ತೊಟ್ಟಿಗೆ ಹಚ್ಚಿ ಗಾಳಿಗೆ ಬಿಡಿ. ಇದು ಮುಲಾಮಿನಂತೆ ಕೆಲಸ ಮಾಡುತ್ತದೆ. ಬಿರುಕು ಗುಣವಾಗುತ್ತದೆ.

ಎದೆ ಬಾವುಂಟಾಗಿ ಮಗು ಹಾಲು ಕುಡಿಯದಿದ್ದರೆ ಕೈಗಳಿಂದ ಹಿಂಡಿ ಅಥವಾ ಬ್ರೆಸ್ಟ್ ಪಂಪ್ ಬಳಸಿ ಹಾಲು ಕುಡಿಸಬಹುದು. ಬ್ರೆಸ್ಟ್‌ಪಂಪ್‌ನಿಂದ ಹಿಂಡುವ ಹಾಲಿನಲ್ಲಿ ಪೋಷಕಾಂಶಗಳಿಗೇನೂ ನಷ್ಟವಾಗದು. ಅನಿವಾರ್ಯ ಅನಿಸಿದಾಗ, ಕೈಯಲ್ಲಿ ಹಿಂಡಲು ಸಾಧ್ಯವೇ ಆಗದಿದ್ದಾಗ, ಮಗು ಹಾಲು ಕುಡಿಯದಿದ್ದಾಗ ಅಥವಾ ನೀವು ಕೆಲಸಕ್ಕೆ ಹೋಗುವ ಮೊದಲು ಬ್ರೆಸ್ಟ್‌ಪಂಪ್‌ನಿಂದ ಎದೆಹಾಲು ಹಿಂಡಿ, ಶೇಖರಿಸಿ ಕುಡಿಸಬಹುದು.

ನೆನಪಿರಲಿ ಸ್ತನ್ಯಪಾನದ ಸಂದರ್ಭದಲ್ಲಿ ಬರೀ ಪೋಷಕಾಂಶಗಳ ಪೂರೈಕೆಯಷ್ಟೆ ಆಗುವುದಿಲ್ಲ. ತಾಯಿಯ ಬೆಚ್ಚನೆಯ ಸ್ಪರ್ಶ, ಮೈವಾಸನೆ, ವಾತ್ಸಲ್ಯಭರಿತ ನೋಟ, ಮೆಲುದನಿ, ರುಚಿಯಾದ ಹಾಲು ಎಲ್ಲವನ್ನೂ ಮಗು ಆಸ್ವಾದಿಸಲು ಸಹಾಯಕವಾಗುತ್ತದೆ. ತಾಯಿ ಮಗುವಿನ ನಡುವೆ ಗಟ್ಟಿಯಾದ ಬಾಂಧವ್ಯ ಬೆಳೆಯುತ್ತದೆ. ಭಾವಾನಾತ್ಮಕ ನಂಟು ಹೆಚ್ಚುತ್ತದೆ. ಶಿಶುವಿನ ಸಂವೇದನಾಶೀಲತೆ ಹೆಚ್ಚಲು ಇದು ಸಹಾಯಕ. ಇಂಥ ಮಕ್ಕಳಲ್ಲಿ ಬುದ್ಧಿಯ ವಿಕಸನ ಹೆಚ್ಚುವುದಲ್ಲದೇ, ದೀರ್ಘಾವಧಿ ಸ್ತನ್ಯಪಾನ ಮುಂದುವರಿಸಲು ಸಹಕಾರಿಯಾಗುತ್ತದೆ.

ಯಾವುದೇ ಕಾರಣಕ್ಕೂ ಮಗುವಿಗೆ ಸ್ತನ್ಯಪಾನ ನಿಲ್ಲಿಸಬೇಡಿ. ಆರು ತಿಂಗಳ ನಂತರವೂ ಪೂರಕ ಆಹಾರದ ಜತೆಗೆ ಸ್ತನ್ಯಪಾನವನ್ನು ಕನಿಷ್ಠ ಎರಡು ವರ್ಷದವರೆಗೆ ಮುಂದುವರಿಸಿ. ಅನಿವಾರ್ಯ ಎನಿಸಿದಾಗ ಮಾತ್ರ ಬ್ರೆಸ್ಟ್‌ಪಂಪ್‌ನಿಂದ ಹಾಲು ಹಿಂಡಿ ಇಡಿ. ಕೊಠಡಿಯ ಉಷ್ಣತೆಯಲ್ಲಿ 6ರಿಂದ 8 ತಾಸು ಇಟ್ಟು ಬಳಸಬಹುದು. ಸಂದರ್ಭ ಸಿಕ್ಕಾಗೆಲ್ಲ ನೇರವಾಗಿ ಸ್ತನ್ಯಪಾನ ಮಾಡಿಸುವುದೇ ಉತ್ತಮ.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸ-ಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ತಂಪಾಗಿಡುವ ಆಹಾರಗಳು

ಸುಡುವ ಬಿಸಿಲಿಗೆ ದೇಹವನ್ನು ತಂಪಾಗಿಡುವ ಕೆಲವು ಆಹಾರಗಳ ರೆಸಿಪಿಗಳನ್ನು **ವೇದಾವತಿ ಎಚ್. ಎಸ್.** ನೀಡಿದ್ದಾರೆ

ಕ್ಯಾಪ್ಸಿಕಂ ತಂಬುಳಿ

ಬೇಕಾಗುವ ಸಾಮಗ್ರಿಗಳು: ಕ್ಯಾಪ್ಸಿಕಂ 1, ಈರುಳ್ಳಿ 1, ಜೀರಿಗೆ 1 ಟೀ ಚಮಚ, ಕಾಳುಮೆಣಸು 10, ತೆಂಗಿನಕಾಯಿ ತುರಿ 1/2 ಕಪ್, ಎಣ್ಣೆ ಅಥವಾ ತುಪ್ಪ ಹುರಿಯಲು 1 ಟೀ ಚಮಚ, ಮೊಸರು 1/2 ಲೀಟರ್, ಉಪ್ಪು ರುಚಿಗೆ ತಕ್ಕಷ್ಟು.

ಒಗ್ಗರಣೆಗೆ: ತುಪ್ಪ 1 ಟೀ ಚಮಚ, ಸಾಸಿವೆ 1 ಟೀ ಚಮಚ, ಒಣಮೆಣಸಿನ ಕಾಯಿ 1.

ತಯಾರಿಸುವ ವಿಧಾನ: ಬಾಣಲೆಯಲ್ಲಿ ಒಂದು ಟೀ ಚಮಚ ಎಣ್ಣೆ ಅಥವಾ ತುಪ್ಪವನ್ನು ಹಾಕಿ ಅದರಲ್ಲಿ ಜೀರಿಗೆ ಮತ್ತು ಕಾಳು ಮೆಣಸು ಹಾಕಿ ಪರಿಮಳ ಬರುವರೆಗೆ ಹುರಿಯಿರಿ. ನಂತರ ಬೀಜ ತೆಗೆದ ಕ್ಯಾಪ್ಸಿಕಂ ಮತ್ತು ಈರುಳ್ಳಿಯನ್ನು ಹಾಕಿ ಬಾಡಿಸಿ. ತಣ್ಣಗಾದ ನಂತರ ಮಿಕ್ಸಿಯಲ್ಲಿ ಹುರಿದ ಪದಾರ್ಥಗಳು, ತೆಂಗಿನಕಾಯಿ ತುರಿ, ಉಪ್ಪು ಮತ್ತು ಮೊಸರು ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿ ಕೊಂಡ ಪದಾರ್ಥಕ್ಕೆ ತುಪ್ಪವನ್ನು ಹಾಕಿ ಒಗ್ಗರಣೆ ಕೊಡಿ.

ಬಾರ್ಲಿ ಸೂಪ್

ಬೇಕಾಗುವ ಸಾಮಗ್ರಿಗಳು: ಒಂದಿಂಚು ಶುಂಠಿಯನ್ನು ಚಿಕ್ಕದಾಗಿ ಕತ್ತರಿಸಿ, ಬೆಳ್ಳುಳ್ಳಿ 10 ಎಸಳುಗಳನ್ನು ಚಿಕ್ಕದಾಗಿ ಕತ್ತರಿಸಿ, ಈರುಳ್ಳಿ 1/2 ಚಿಕ್ಕದಾಗಿ ಕತ್ತರಿಸಿ, ಕ್ಯಾರೆಟ್, ಬೀನ್ಸ್, ಕ್ಯಾಪ್ಸಿಕಂ, ಕೋಸು ಎಲ್ಲಾ ಸೇರಿ ಒಂದು ಕಪ್ ಚಿಕ್ಕದಾಗಿ ಕತ್ತರಿಸಿಕೊಳ್ಳಿ, ಕೊತ್ತಂಬರಿ ಸೊಪ್ಪು ಸ್ವಲ್ಪ, ಎಣ್ಣೆ / ಬೆಣ್ಣೆ ಎರಡು ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಪಾವ್ ಬಾಜಿ ಮಸಾಲೆ ಒಂದು ಚಮಚ, ಕಾಳುಮೆಣಸಿನ ಪುಡಿ ಅರ್ಧ ಚಮಚ, ಬಾರ್ಲಿ ನೂರು ಗ್ರಾಂ, ನೀರು ಒಂದು ಲೀಟರ್.

ತಯಾರಿಸುವ ವಿಧಾನ: ಬಾರ್ಲಿಯನ್ನು ಚೆನ್ನಾಗಿ ತೊಳೆದು ಕುಕ್ಕರ್ ಪಾತ್ರೆಯಲ್ಲಿ ಹಾಕಿ, ನೀರನ್ನು ಸೇರಿಸಿ 8-10 ವಿಷಲ್ ಕೂಗಿಸಿ ಒಲೆಯಿಂದ ಇಳಿಸಿ. ಬಾಣಲೆಯಲ್ಲಿ ಎಣ್ಣೆಯನ್ನು ಬಿಸಿ ಮಾಡಿ. ಅದರಲ್ಲಿ ಶುಂಠಿ, ಬೆಳ್ಳುಳ್ಳಿ ಮತ್ತು ಈರುಳ್ಳಿಯನ್ನು ಹಾಕಿ ಹುರಿಯಿರಿ. ನಂತರ ಕತ್ತರಿಸಿಕೊಂಡ ತರಕಾರಿಗಳನ್ನು ಸೇರಿಸಿ ಮೃದುವಾಗುವರೆಗೆ ಹುರಿಯಿರಿ. ಬೇಯಿಸಿದ ಬಾರ್ಲಿ ಮತ್ತು ಅದರ ನೀರನ್ನು ಹಾಕಿ. ಉಪ್ಪು ಸೇರಿಸಿ ಕುದಿಸಿ. ಬಳಿಕ ಪಾವ್ ಬಾಜಿ ಮಸಾಲೆ ಮತ್ತು ಕಾಳುಮೆಣಸಿನ ಪುಡಿಯನ್ನು ಸೇರಿಸಿ ಸಣ್ಣ ಉರಿಯಲ್ಲಿ ಕುದಿಸಿ. ಕೊನೆಯಲ್ಲಿ ಕೊತ್ತಂಬರಿ ಸೊಪ್ಪನ್ನು ಸೇರಿಸಿ ಸರ್ವ್ ಮಾಡಿ.

ಸಾಬುದಾನಿ ಮ್ಯಾಂಗೋ ಫ್ರೂಟ್ಸ್ ಕಸ್ಟರ್ಡ್

ಬೇಕಾಗುವ ಸಾಮಗ್ರಿ: ಸಾಬುದಾನಿ 1 ಕಪ್, ನೀರು ಒಂದೂವರೆ ಕಪ್, ಹಾಲು 1/2 ಲೀಟರ್, ವೆನಿಲ್ಲಾ ಕಸ್ಟರ್ಡ್ ಪೌಡರ್ 2 ಟೇಬಲ್ ಚಮಚ, ಸಕ್ಕರೆ ಒಂದೂವರೆ ಕಪ್.

ಹಣ್ಣುಗಳು: ಸಿಹಿ ಮಾವಿನ ಹಣ್ಣು 1 ಕಪ್, ದ್ರಾಕ್ಷಿ 1/2 ಕಪ್, ಸೇಬು 1/2 ಕಪ್, ಸಪೋಟ 1/2 ಕಪ್, ದಾಳಿಂಬೆ 1/2 ಕಪ್, ಬಾಳೆಹಣ್ಣು 1/2 ಕಪ್ ಎಲ್ಲಾ ಹಣ್ಣುಗಳನ್ನು ಒಂದೇ ರೀತಿಯಲ್ಲಿ ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಇಲ್ಲಿ ನಿಮಗೆ ಇಷ್ಟವಾದ ಹಣ್ಣುಗಳನ್ನು ಹಾಕಬಹುದು.

ತಯಾರಿಸುವ ವಿಧಾನ: ಸಾಬುದಾನಿಯನ್ನು 3 ರಿಂದ4 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ ನಂತರ ಬಾಣಲೆಯಲ್ಲಿ ನೀರನ್ನು ಹಾಕಿ ಮೆತ್ತಗೆ ಬೇಯಿಸಿಕೊಳ್ಳಿ. ಅದಕ್ಕೆ ಹಾಲು ಮತ್ತು ಸಕ್ಕರೆಯನ್ನು ಸೇರಿಸಿ ಕುದಿಸಿ. ವೆನಿಲ್ಲಾ ಕಸ್ಟರ್ಡ್ ಪೌಡರ್‌ಗೆ ಸ್ವಲ್ಪ ತಣ್ಣನೆಯ ಹಾಲನ್ನು ಹಾಕಿ ಮಿಶ್ರಣ ಮಾಡಿ. ಕುದಿಯುತ್ತಿರುವ ಮಿಶ್ರಣಕ್ಕೆ ಕರಗಿಸಿಕೊಂಡ ಕಸ್ಟರ್ಡ್ ಪೌಡರ್ ಮಿಶ್ರಣವನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಈ ಮಿಶ್ರಣವೂ ಗಟ್ಟಿಯಾಗುತ್ತಾ ಬಂದಾಗ ಒಲೆಯನ್ನು ಆರಿಸಿ. ಪೂರ್ತಿ ಆರಲು ಬಿಡಿ. ಆರಿದ ನಂತರ ತಳಿಸಿರುವ ಹಣ್ಣುಗಳನ್ನು ಹಾಕಿ ಮಿಶ್ರಣ ಮಾಡಿ. ಬಳಿಕ 1 ರಿಂದ 2 ಗಂಟೆಯ ಕಾಲ ಫ್ರಿಡ್ಜ್‌ನಲ್ಲಿಟ್ಟು ತಣ್ಣಗೆ ಮಾಡಿ ಸವಿಯಲು ಕೊಡಿ. ರುಚಿಕರವಾದ ಮತ್ತು ಆರೋಗ್ಯಕರವಾದ ಸಾಬುದಾನಿ-ಮ್ಯಾಂಗೋ ಫ್ರೂಟ್ಸ್ ಕಸ್ಟರ್ಡ್ ತಯಾರಿಸಿ ಸವಿಯಿರಿ.

ರಸಸ್ವಾದ

ರಾಗಿ ಪಾನಕ/ ರಾಗಿ ಹಾಲು

ಬೇಕಾಗುವ ಸಾಮಗ್ರಿಗಳು: 1/2 ಕಪ್ ರಾಗಿ, 8 ಬಾದಾಮಿ, 1/2 ಕಪ್ ತೆಂಗಿನ ತುರಿ, 1/2 ಕಪ್ ಬೆಲ್ಲ (ಸಿಹಿಗೆ ಅನುಗುಣವಾಗಿ ಹಾಕಿ), ಬೀಜ ತೆಗೆದ ಖರ್ಜೂರ 4, ಏಲಕ್ಕಿ 2, ನೀರು 2 ಕಪ್.

ತಯಾರಿಸುವ ವಿಧಾನ: ರಾಗಿಯನ್ನು ಚೆನ್ನಾಗಿ ತೊಳೆದು ನಾಲ್ಕು ಗಂಟೆಗಳ ಕಾಲ ನೀರಿನಲ್ಲಿ ನೆನೆ ಹಾಕಿ. ಬಾದಾಮಿಯನ್ನು ಬಿಸಿ ನೀರಿನಲ್ಲಿ ಒಂದು ಗಂಟೆ ನೆನೆ ಹಾಕಿ. ರಾಗಿ ಮತ್ತು ಬಾದಾಮಿಯಲ್ಲಿರುವ ನೀರನ್ನು ತೆಗೆದು ಮಿಕ್ಸಿ ಜಾರಿಗೆ ಹಾಕಿ. ಜೊತೆಗೆ ತೆಂಗಿನ ತುರಿ, ಬೆಲ್ಲ, ಖರ್ಜೂರ, ಏಲಕ್ಕಿ ಮತ್ತು ಒಂದು ಕಪ್ ನೀರನ್ನು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ರುಬ್ಬಿದ ಮಿಶ್ರಣವನ್ನು ಸೋಸಿಕೊಳ್ಳಿ. ಸೋಸಿದ ಬಳಿಕ ಪುನಃ ಮಿಕ್ಸಿ ಜಾರಿಗೆ ಚರಟನ್ನು ಹಾಕಿ ಜೊತೆಗೆ ಒಂದು ಕಪ್ ನೀರನ್ನು ಹಾಕಿ ನುಣ್ಣಗೆ ರುಬ್ಬಿಕೊಂಡು ಸೋಸಿಕೊಳ್ಳಿ. ಚೆನ್ನಾಗಿ ಮಿಶ್ರಣ ಮಾಡಿ ಕುಡಿಯಿರಿ. ಈ ಪಾನಕ ದೇಹಕ್ಕೆ ತಂಪು ಮತ್ತು ಆರೋಗ್ಯಕ್ಕೆ ಒಳ್ಳೆಯದು.

ಸೌತೆಕಾಯಿ ಮಿಲ್ಕ್ ಶೇಕ್

ಬೇಕಾಗುವ ಸಾಮಗ್ರಿಗಳು: ಹಸಿರು ಸೌತೆಕಾಯಿ (ಇಂಗ್ಲಿಷ್ ಸೌತೆಕಾಯಿ)-1, ಸಕ್ಕರೆ-2 ಟೇಬಲ್ ಚಮಚ, ಏಲಕ್ಕಿಪುಡಿ 1/4 ಟೀ ಚಮಚ, ತಣ್ಣಗಿನ ಹಾಲು 200 ಎಂ ಎಲ್, ಐಸ್ ಕ್ಯೂಬ್ ಸ್ವಲ್ಪ, ಅಲಂಕರಿಸಲು ಗೋಡಂಬಿ, ಪಿಸ್ತಾ ಚೂರುಗಳು ಸ್ವಲ್ಪ.

ತಯಾರಿಸುವ ವಿಧಾನ: ಸೌತೆಕಾಯಿ ಸಿಪ್ಪೆ ತೆಗೆದು ಚಿಕ್ಕದಾಗಿ ಕತ್ತರಿಸಿಕೊಳ್ಳಿ. ಮಿಕ್ಸಿ ಜಾರಿಗೆ ಸೌತೆಕಾಯಿ, ಸಕ್ಕರೆ, ಏಲಕ್ಕಿಪುಡಿ, ಹಾಲು ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಸರ್ವಿಂಗ್ ಗ್ಲಾಸಿಗೆ ಐಸ್ ಕ್ಯೂಬ್ ಹಾಕಿ ತಯಾರಿಸಿಕೊಂಡ ಮಿಲ್ಕ್ ಶೇಕ್ ಸೇರಿಸಿ. ಬಳಿಕ ಗೋಡಂಬಿ ಮತ್ತು ಪಿಸ್ತಾ ಚೂರುಗಳಿಂದ ಅಲಂಕರಿಸಿ ಸವಿಯಿರಿ.

1. ಮುಂಡಗೋಡ ತಾಲ್ಲೂಕಿನ ಹುಲಿಹೊಂಡ ಗ್ರಾಮದಲ್ಲಿ ಗಾಳಿ ಮಳೆಗೆ ತೋಟದಲ್ಲಿ ಪಪ್ಪಾಯಿ ಗಿಡಗಳು ಮುರಿದುಬಿದ್ದಿವೆ 2. ಬೆಳಗಾವಿ ನಗರದ ರಾಣಿ ಪಾರ್ವತಿದೇವಿ ವೃತ್ತದಲ್ಲಿ ಶುಕ್ರವಾರ ಸುರಿದ ಮಳೆಯಿಂದಾಗಿ ನೀರು ಸಂಗ್ರಹಗೊಂಡಿತು 3. ಬೆಳಗಾವಿಯ ಅನಗೋಳ ಪ್ರದೇಶದ ಸಂತ ಮೀರಾ ಶಾಲೆ ಬಳಿ ಶುಕ್ರವಾರ ಬಿರುಗಾಳಿ, ಮಳೆಗೆ ಮರವೊಂದು ಕಾರಿನ ಮೇಲೆ ಬಿದ್ದಿದೆ

ವಿವಿಧೆಡೆ ಬಾಳೆ, ನುಗ್ಗೆ, ಪಪ್ಪಾಯಿ ತೋಟಕ್ಕೆ ಹಾನಿ, ಧರೆಗುರುಳಿದ ವಿದ್ಯುತ್ ಕಂಬಗಳು

ಬಿರುಸಿನ ಗಾಳಿ ಮಳೆ, ಕೆಲವೆಡೆ ಸಾಧಾರಣ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ದಾವಣಗೆರೆ: ಧಾರವಾಡ, ದಾವಣಗೆರೆ, ಗದಗ ಜಿಲ್ಲೆಯ ವಿವಿಧೆಡೆ ಶುಕ್ರವಾರ ಮಳೆ ಸುರಿದಿದೆ. ಧಾರವಾಡ ಜಿಲ್ಲೆಯ ಮುಂಡಗೋಡದಲ್ಲಿ ಬಿರುಸಿನ ಗಾಳಿ ಮಳೆಗೆ ತಾಲ್ಲೂಕಿನ ಹುಲಿಹೊಂಡ ಗ್ರಾಮದಲ್ಲಿ ಪಪ್ಪಾಯಿ ತೋಟದಲ್ಲಿ, ನೂರಾರು ಸಂಖ್ಯೆಯ ಫಲಭರಿತ ಗಿಡಗಳು ಮುರಿದು ಬಿದ್ದಿವೆ. ಸುಳ್ಳಳ್ಳಿ ಗ್ರಾಮದ ಅಂಗನವಾಡಿ ಕೇಂದ್ರದ ಚಾವಣಿ ಹಾರಿ ಹೋಗಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆ ನಗರ, ಹರಪನಹಳ್ಳಿ, ಅರಸೀಕೆರೆ ಭಾಗದಲ್ಲಿ ಸಾಧಾರಣ ಮಳೆ ಸುರಿಯಿತು. ಹೂವಿನಹಡಗಲಿ ತಾಲ್ಲೂಕು ಸೋಗಿ ಗ್ರಾಮದಲ್ಲಿ ಬಿರುಗಾಳಿ ಸಹಿತ ಮಳೆಗೆ ಒಂದೂವರೆ ಎಕರೆ ಬಾಳೆತೋಟ, ಬಾವಿಹಳ್ಳಿ ಗ್ರಾಮದಲ್ಲಿ ಎರಡು ಎಕರೆ ನುಗ್ಗೆ ತೋಟಕ್ಕೆ ಹಾನಿಯಾಯಿತು. ಸೋಗಿ ಗ್ರಾಮದ ಶಾಲೆ ಬಳಿ ಎರಡು ವಿದ್ಯುತ್ ಕಂಬಗಳು, ಗಿಡಮರಗಳು ಉರುಳಿ ಬಿದ್ದಿವೆ.

ವಿಜಯಪುರ ನಗರದಲ್ಲಿ ಜೋರು ಮಳೆಯಾದರೆ, ಗದಗ ಜಿಲ್ಲೆಯ ನರಗುಂದದಲ್ಲಿ ಸಾಧಾರಣ ಮಳೆಯಾಯಿತು. ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ, ಬಾಗಲಕೋಟೆ, ಹುನಗುಂದ, ಬೀಳಗಿ, ಮಹಾಲಿಂಗಪುರ, ತೇರದಾಳ, ಗುಡೂರು ಸೇರಿದಂತೆ ಹಲವೆಡೆ ಮಳೆ ಸುರಿದಿದೆ. ಹಾವೇರಿ ಜಿಲ್ಲೆ ಹಂಸಬಾವಿ, ಬ್ಯಾಡಗಿ, ರಟ್ಟೀಹಳ್ಳಿ ಸೇರಿ ಸುತ್ತಮುತ್ತ ಗುಡುಗು ಸಹಿತ ಉತ್ತಮ ಮಳೆಯಾಯಿತು.

ಸಾಧಾರಣ ಮಳೆ: ದಾವಣಗೆರೆ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಶುಕ್ರವಾರ ಸಂಜೆ ಬಿರುಗಾಳಿ ಸಹಿತ ಸಾಧಾರಣ ಮಳೆ ಸುರಿಯಿತು.

ನಗರದ ಹೊರವಲಯದ ಆವರಗೆರೆ, ಬಾಡಾ ಕ್ರಾಸ್ ಭಾಗದಲ್ಲೂ ಅರ್ಧ ಗಂಟೆಗೂ ಹೆಚ್ಚು ಕಾಲ ವರುಣ ಆರ್ಭಟಿಸಿದ. ಮಳೆಯಿಂದಾಗಿ ಕೆಲಕಾಲ ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಯಿತು. ಬೈಕ್ ಸವಾರರು ರಸ್ತೆ ಬದಿ ಬೈಕ್ ನಿಲ್ಲಿಸಿ, ಹೋಟೆಲ್, ಮಳಿಗೆಗಳ ಆಶ್ರಯ ಪಡೆದರು. ರಸ್ತೆಗಳಲ್ಲಿ ನೀರು ಹರಿಯಿತು.

ಜಿಲ್ಲೆಯ ಚನ್ನಗಿರಿ, ಸಂತೇಬೆನ್ನೂರು, ಮಲೇಬೆನ್ನೂರು, ಹೊನ್ನಾಳಿ ಹಾಗೂ ಮಾಯಕೊಂಡ ಸುತ್ತಮುತ್ತಲಿನ ಪ್ರದೇಶದಲ್ಲಿ ಮಳೆಯ ಸಿಂಚನವಾಯಿತು. ಹರಿಹರ, ನ್ಯಾಮತಿ ತಾಲ್ಲೂಕಿನಲ್ಲಿ ಮೋಡ ಕವಿದ ವಾತಾವರಣ ಇತ್ತು.

ಚಿತ್ರದುರ್ಗ ವರದಿ: ನಗರದಲ್ಲಿ ಶುಕ್ರವಾರ ಸಂಜೆ ಗುಡುಗು, ಮಿಂಚು ಸಹಿತ ತುಂತುರು ಮಳೆ ಸುರಿಯಿತು. ಬೇಸಿಗೆ ಬಿಸಿಲಿನಿಂದ ಬಸವಳಿದಿದ್ದ ಭೂಮಿ ತಂಪಾಯಿತು. ಹೊಳಲ್ಕೆರೆ ತಾಲ್ಲೂಕಿನ ಚಿಕ್ಕಜಾಜೂರು ಸುತ್ತಮುತ್ತಲ ಗ್ರಾಮಗಳಲ್ಲಿ ಬಿರುಗಾಳಿ ಸಹಿತ ತುಂತುರು ಬಂದಿದೆ.

ಹೂವಿನಹಡಗಲಿ ತಾಲ್ಲೂಕಿನ ಸೋಗಿಯಲ್ಲಿ ಬಿರುಗಾಳಿ ಸಹಿತ ಮಳೆಯಿಂದ ಬಾಳೆತೋಟ ಹಾನಿಗೊಂಡಿದೆ

ಮುಖ್ಯಾಂಶಗಳು

- ವಿಜಯಪುರ, ಹಾವೇರಿ ಸೇರಿ ವಿವಿಧ ಜಿಲ್ಲೆಗಳಲ್ಲಿ ಧಾರಾಕಾರ ಮಳೆ
- ಬಿಸಿಲಿನ ಧಗೆಯಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆದ ಮಳೆರಾಯ

ಧಾರವಾಡ ಜಿಲ್ಲೆಯ ಕಲಘಟಗಿ ತಾಲ್ಲೂಕಿನ ಸೂಳಿಕಟ್ಟಿ ಗ್ರಾಮದ ಸಮೀಪ ರಸ್ತೆಯಲ್ಲಿ ವಿದ್ಯುತ್ ಕಂಬ ಉರುಳಿ ಬಿದ್ದಿದೆ

ಆರು ದಿನ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳ ಅಲ್ಲಲ್ಲಿ ಏಪ್ರಿಲ್ 13ರಿಂದ 18ರವರೆಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

13ರಂದು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಬೀದರ್, ಕಲಬುರಗಿ, ರಾಯಚೂರು, ವಿಜಯಪುರ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ ಹಾಗೂ ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಜಿಲ್ಲೆಗಳಲ್ಲಿ ಜೋರು ಮಳೆಯಾಗುವ ಸಾಧ್ಯತೆಯಿದೆ.

ಬಾಗಲಕೋಟೆ, ಧಾರವಾಡ, ಗದಗ, ವಿಜಯಪುರ, ಹಾವೇರಿ, ಕೊಪ್ಪಳ, ಕೊಡಗು, ಯಾದಗಿರಿ, ಶಿವಮೊಗ್ಗ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಉಳಿದ, ಜಿಲ್ಲೆಗಳಲ್ಲಿ ಒಣಹವೆ ಇರುವ ಬಹಳಷ್ಟು ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಏಪ್ರಿಲ್ 14ರಿಂದ ಮೂರು ದಿನಗಳ ಕಾಲ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಉಷ್ಣಾಂಶ ತುಸು ಏರಿಕೆ ಕಾಣಲಿದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ ಗಾಳಿಯು ಪ್ರತಿ ಗಂಟೆಗೆ 40ರಿಂದ 50 ಕಿ.ಮೀ ಹಾಗೂ 30ರಿಂದ 40 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ.

ದಕ್ಷಿಣ ಒಳನಾಡು ಒಳನಾಡು ಪ್ರದೇಶದಲ್ಲಿ ಗಾಳಿ ಪ್ರತಿ ಗಂಟೆಗೆ 30ರಿಂದ 40 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆಯಿದೆ ಎಂದು ತಿಳಿಸಿದೆ.

ಬೆಂಗಳೂರಿನಲ್ಲಿ ಎರಡು ದಿನಗಳ ಕಾಲ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಮಳೆಯಾಗುವ ಸಾಧ್ಯತೆಯಿದೆ.

ಎಲ್ಲೆಲ್ಲಿ ಮಳೆ?: ಶುಕ್ರವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ, ಬೀದರ್ ಜಿಲ್ಲೆಯ ಮಂಠಾಳ, ಕಲಬುರಗಿ ಜಿಲ್ಲೆ ನಿಂಬರ್ಗಾ ತಾಂಡಾದಲ್ಲಿ 3 ಸೆಂ.ಮೀ, ವಿಜಯಪುರ ಜಿಲ್ಲೆಯ ಇಂಡಿ, ಕಲಬುರಗಿ ಆಳಂದ, ಬಾಗಲಕೋಟೆಯ ಇಳಕಲ್, ಯಾದಗಿರಿಯ ನಾರಾಯಣಪುರ, ಚಿಕ್ಕಮಗಳೂರಿನ ಬಾಳೆಹೊನ್ನೂರಿನಲ್ಲಿ 2 ಸೆಂ.ಮೀ ಹಾಗೂ ಬೀದರ್ ಜಿಲ್ಲೆಯ ಭಾಲ್ಕಿ, ಕಲಬುರಗಿಯ ಯಡ್ರಾಮಿ, ಬೆಳಗಾವಿಯ ಯಡ್ವಾಡ, ವಿಜಯಪುರದ ಮುದ್ದೇಬಿಹಾಳ, ಚಿಕ್ಕಮಗಳೂರಿನ ಕಳಸದಲ್ಲಿ 1 ಸೆಂ.ಮೀ ಮಳೆಯಾಗಿತ್ತು.

ಪತಂಜಲಿ ಉತ್ಪನ್ನಗಳ ಪರಿಶೀಲನೆಗೆ ಸೂಚನೆ

ಬೆಂಗಳೂರು: ಪತಂಜಲಿ ಕಂಪನಿಯ ಎಲ್ಲ ಉತ್ಪನ್ನಗಳ ಗುಣಮಟ್ಟ ಪರೀಕ್ಷಿಸುವಂತೆ ಔಷಧ ನಿಯಂತ್ರಣ ಇಲಾಖೆ ಮತ್ತು ಆಯುಷ್ ಆಯುಕ್ತರಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದ್ದಾರೆ.

ಈ ಬಗ್ಗೆ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, 'ಬಾಬಾ ರಾಮದೇವ ಮತ್ತು ಅವರ ಪತಂಜಲಿ ಕಂಪನಿ ಮಾಡಿದ ನಿರ್ದಯ ವಂಚನೆಯನ್ನು ಕ್ಷಮಿಸಲಾಗದು. ಅವರು ಆಯುರ್ವೇದ ಮತ್ತು ಭಾರತೀಯ ಔಷಧ ಪದ್ಧತಿಗೆ ಅಪಖ್ಯಾತಿ ತಂದಿದ್ದಾರೆ. ಆದ್ದರಿಂದ ಪತಂಜಲಿ ಕಂಪನಿಯ ಎಲ್ಲ ಉತ್ಪನ್ನಗಳ ಗುಣಮಟ್ಟ ಪರೀಕ್ಷೆಗೆ ಸೂಚಿಸಿದ್ದೇನೆ' ಎಂದು ಹೇಳಿದ್ದಾರೆ.

ನಾಪೋಕ್ಲು ಸಮೀಪದ ಹೊದ್ದೂರು ಗ್ರಾಮದಲ್ಲಿ ಶುಕ್ರವಾರ ಮಳೆಯಲ್ಲಿ ನೆನೆಯುತ್ತಾ ಗ್ರಾಮಸ್ಥರು ಕುಣಿದು ಸಂಭ್ರಮಿಸಿದರು

ಸುರಿವ ಮಳೆಯಲ್ಲಿ ಕುಣಿದು ಸಂಭ್ರಮಿಸಿದ ಜನ

ಪ್ರಜಾವಾಣಿ ವಾರ್ತೆ

ನಾಪೋಕ್ಲು(ಕೊಡಗು ಜಿಲ್ಲೆ): ಕೊಡಗಿನಲ್ಲಿ ಇದೇ ಮೊದಲ ಬಾರಿಗೆ ಶುಕ್ರವಾರ ಗುಡುಗಿನೊಂದಿಗೆ ಸುರಿದ ಜೋರು ಮಳೆಯಲ್ಲಿ ಜನ ಕುಣಿಯುತ್ತಾ ಸಂಭ್ರಮಿಸಿದರು.

ನಾಪೋಕ್ಲು ಸಮೀಪದ ಹೊದ್ದೂರು ಗ್ರಾಮದಲ್ಲಿ ಏರ್ಪಡಿಸಿದ್ದ ಶ್ರೀಮಾರಿಯಮ್ಮ ಹಾಗೂ ಕೊರಗಜ್ಜ-ದೇವರ ವಾರ್ಷಿಕ ಉತ್ಸವದಲ್ಲಿ ಭಗವತಿ ದೇವರಿಗೆ ಗ್ರಾಮಸ್ಥರು ಮಳೆಗಾಗಿ ಪ್ರಾರ್ಥಿಸಿದ್ದರು. ಮಹಾಮಂಗಳಾರತಿ ನಡೆಯುವಾಗಲೇ ಮಳೆ ಸುರಿದಿದ್ದರಿಂದ ನೆನೆಯುತ್ತಾ ಕೊಡಗಿನ ವಾಲಗಕ್ಕೆ ಹೆಜ್ಜೆಹಾಕಿದರು.

ಪಟ್ಟಣ ಸೇರಿದಂತೆ ಕಕ್ಕಬ್ಬೆ, ಯವಕಪಾಡಿ, ನಾಲಡಿ, ನೆಲಜಿ, ಬಲ್ಲಮಾವಟಿ ಭಾಗಗಳಲ್ಲಿ ಸುಮಾರು 20 ನಿಮಿಷ ಉತ್ತಮ ಮಳೆಯಾಯಿತು. ಮೂರ್ನಾಡು ಸುತ್ತಮುತ್ತಲ ಪ್ರದೇಶಗಳಲ್ಲೂ ವರ್ಷಧಾರೆಯಾಯಿತು.

'ಯವಕಪಾಡಿಯ ಪನ್ನಂಗಾಲ ತಮ್ಮೆ ಹಬ್ಬದ ದಿನವೇ ಇಗ್ಗುತ್ತಪ್ಪ ದೇವರು ಭುವಿಗೆ ತಂಪೆರೆಯಿತು' ಎಂದು ಗ್ರಾಮಸ್ಥರು ಸಂತಸದಿಂದ ಹೇಳಿದರು.

ಶೃಂಗೇರಿಯಲ್ಲಿ ತಂಪೆರೆದ ಮಳೆ

ಶೃಂಗೇರಿ: ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಕೊಪ್ಪ ಪಟ್ಟಣ ಸೇರಿದಂತೆ ಹಲವೆಡೆ ಶುಕ್ರವಾರ ಮಳೆಯಾಗಿದೆ. ಶೃಂಗೇರಿಯಲ್ಲಿ ಅರ್ಧಗಂಟೆಗೂ ಹೆಚ್ಚು ಕಾಲ ಸುರಿದ ಮಳೆ ತಂಪೆರೆಯಿತು.

SAINIK SCHOOL BIJAPUR - 586 108

(KARNATAKA)

(Joint venture of Ministry of Defence and Govt of Karnataka)

RECRUITMENT OF STAFF

1. Applications are invited for the post mentioned below:

Sl.	Name of Post	No of Post & Cat	Age	Qualifications	Pay
(a)	**LDC (On Contractual)**	UR-01 (One)	Should be between 18 - 50 years as on 01 Jun 24	(i) Class XII/ Pre- degree (ii) Typing speed of at least 40 words per minute. (iii) Ability to correspond in English and computer operation. **Desirable.** Experience in dealing with various projects independently, maint of stores, ledgers, keeping records and well versed in drafting of letters.	Consolidated Salary will be paid based on the qualification and experience.
(b)	**Ward Boys (On Contractual)**	UR-04 (Four)	Should be between 18 - 50 years as on 01 Jun 24	Minimum 10th pass from recognized board. **Desirable** Communication in English, Higher qualification, experience in handling the students in a residential School / Institution, knowledge of computers & typing and experience in housekeeping duties and experience of working as Hostel Warden/ Ward Boy in any Residential Public School. The candidate should be physically fit. **Preference will be given to ex-servicemen.**	
(c)	**Nursing Sister (Female only) (On Contractual)**	UR-01 (One)	Should be between 18 - 50 years as on 01 Jun 24	Diploma in Nursing/ Diploma in General Nursing & Midwife. **Desirable** Communication in English, Higher qualification. Having experience for minimum 05 years working in residential Public School. The candidates should be physically fit.	
(d)	**PEM/PTI-Cum-Matron (Female only) (On Contractual)**	UR-01 (One)	Should be between 18 - 50 years as on 01 Jun 24	Minimum 10th pass with proficiency in Games / Sports from a recognized board. **Desirable.** (i) Having experience in this profession in reputed Public School. (ii) Bachelor Degree in Physical Education (B.P.ED) or equivalent with 50% Marks. (iii) Communication in English. (v) Knowledge of computers & typing and experience in housekeeping duties.	
(e)	**Counselor (On Contractual)**	UR-01 (One)	Should be between 21 - 35 years as on 01 Jun 24	Graduate / Post Graduate in Psychology or Post Graduate in Child Development or Graduate with diploma in Career Guidance and Counseling. **Experience.** (i) Experience in providing career/ educational counseling to students in a reputed school. (ii) Registration with Rehabilitation counselor of India as vocational counselor. (iii) Interested in other extra curricular activities and aptitude for residential school life style. (iv) The candidate should be physically fit.	
(f)	**Music Teacher (On Contractual)**	UR-01 (One)	Should be between 21 - 35 years as on 01 Jun 24	Higher Secondary with a degree or diploma in music from any of the recognized institutions. **Desirable.** Past experience to teach secondary level in CBSE affiliated Residential schools(s) will be given preference.	
(g)	**Driver (On Regular Basis)**	SC-01 (One)	Should be between 18 - 50 years as on 01 Jul 24	**Essential Qualification** (i) Should have passed matriculation from a recognized board. (ii) Should possess driving license to drive heavy duty as well as light four wheeler vehicles. (iii) Candidates with experience of driving heavy duty and light vehicles with minimum 05 years of experience will be given preference. **Desirable Qualification** (i) Candidates with experience of driving school vehicles in the past will be given preference. (ii) Knowledge of first line maintenance. (iii) Ex-Servicemen will be preferred.	Level-2 (Rs 19900-43100)

2. **Pay and Perks (For Sl No 1 (g) only).** Rent free accommodation, Pay band, Grade pay, Transport Allowance with DA and Medical Allowance as per Sainik Schools Society Rules & Regulations. Subsidized education for two children, LTC, Bonus, New Pension etc as per Sainik Schools Society Rules & Regulations.
3. **Other Conditions (For Sl No 1 (g) only).** (i) Employment conditions/Service Rules are in consonance with Sainik Schools Society Rules & Regulations. (ii) Job is transferable within All India liability. (iii) Selected candidate should be ready to take responsibilities usual to a residential school.
4. **How to Apply.** (i) Apply on application form downloaded from School website www.sssbj.in (notification-vacancy link). (ii) Duly filled applications alongwith attested copies of documents and one self addressed envelope with postage stamp of Rs 40/- (for communicating through Speed Post) affixed must reach **Principal Sainik School Bijapur - 586108 (Karnataka).** (iii) **Last date for receipt of Applications in Sainik School Bijapur will be 21 days from the date of first publication of the advertisement.** (iv) Applications should be accompanied by one A/C payee Demand Draft of **Rs. 500/-** (non- refundable) in favour of **Principal, Sainik School Bijapur** payable on State Bank of India Sainik School Campus Bijapur Branch (Code 3163). (v) Applications received after the due date or without the supporting documents or prescribed application fee or not in the prescribed format will be rejected without any intimation.
5. The school will not be responsible for any postal delay or missing of envelope and no claim will be entertained in this regard. **Only short listed Candidates will be called for Written Test / Practical Test/ Interview.** No TA/DA for attending the selection test/interview or for joining the post is admissible as per rules of the school.
6. Candidates are to enclose the following documents alongwith the application: -
   (a) Demand Draft for Rs 500/-.
   (b) Affix Passport size photograph at the space provided in the application form.
   (c) Self addressed envelope with stamps worth Rs 40/-.
   (d) Copies of educational and experience certificates.
   (e) In case, the Applicant is SC/ST/OBC category, the Applicant is to attach a copy of Caste / Category Certificate issued by the concerned authority.
7. The school administration reserves the right to cancel the vacancy due to administrative/policy reasons.

DATE: 13 April 2024

Sd/- PRINCIPAL
SAINIK SCHOOL BIJAPUR

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

Tel:080-29604556,29566556,29565353, E-mail: splocaima21@gmail.com

SPLOCA/Equinox/01/2024-25 **Dated:10.04.2024**

ಸಾರ್ವಜನಿಕ ಪ್ರಕಟಣೆ

'**M/s Equinox Land project India & Its Group Entities,** ದೂಷಿತ ಸಂಸ್ಥೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ (ಕೆ.ಪಿ.ಐ.ಡಿ.ಎಫ್.ಇ) ಕಾಯ್ದೆ,2004 ರ ಕಲಂ 7(2) ರ ಅನ್ವಯ ಭದ್ರತೆ ಸಾಲ ಕೊಟ್ಟವರಿಂದ ಮತ್ತು ಠೇವಣಿದಾರರಿಂದ ಕ್ಲೇಮು ಅರ್ಜಿಗಳನ್ನು ಆಹ್ವಾನಿಸಲು ಸಾರ್ವಜನಿಕ ತಿಳುವಳಿಕೆ.

ಕ್ಲೇಮು ಅರ್ಜಿಗಳನ್ನು ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು,(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ವಿ ವಿ ಗೋಪುರ ಪೋಡಿಯಂ ಬ್ಲಾಕ್ 4ನೇ ಮಹಡಿ, ಅಂಬೇಡ್ಕರ್ ವೀದಿ, ಬೆಂಗಳೂರು ರವರ ಕಛೇರಿಯಲ್ಲಿ ಠೇವಣಿದಾರರು/ಅಧಿಕೃತ ಪ್ರತಿನಿಧಿ/ನಾಮಿನಿದಾರರಿಗೆ ವಿತರಿಸಲಾಗುವುದು ಹಾಗೂ ನಾಮಿನಿದಾರರು ಗೈರಾಗಿದ್ದಲ್ಲಿ ಪವರ್ ಆಫ್ ಅಟಾರ್ನಿ ಹೊಂದಿರುವವರು ಅಧಿಕೃತ ಗುರುತಿನ ಚೀಟಿ ಹಾಗೂ ಹಣ ಹೂಡಿಕೆ ಮಾಡಿರುವ ಬಗ್ಗೆ ಪುರಾವೆ ದಾಖಲೆಗಳ ದೃಢೀಕೃತ ಪ್ರತಿ (ಬಾಂಡ್/ಎಂ.ಓ.ಯು) ಮತ್ತು ಅಧಿಕೃತ ಪತ್ರ /ಪಿ.ಒ.ಎ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿ ಕ್ಲೇಮ್ ಅರ್ಜಿಗಳನ್ನು ಪಡೆಯಬಹುದಾಗಿರುತ್ತದೆ.

ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಕ ದಿನಾಂಕ: 15.04.2024 ಬೆಳಿಗ್ಗೆ 10.00 ಗಂಟೆಗೆ, ಕ್ಲೇಮು ಅರ್ಜಿಗಳನ್ನು ಸಲ್ಲಿಸಲು ಕಡೆಯ ದಿನಾಂಕ : 14.05.2024 ಸಂಜೆ 5.30ರವರೆಗೆ

ಹಾಜರುಪಡಿಸಬೇಕಾದ ದಾಖಲೆಗಳು:

1. ಮೂಲ ಐಡಿ– ಆಧಾರ್, ಪ್ಯಾನ್/ಎಪಿಕ್ ದೃಢೀಕರಣಕ್ಕಾಗಿ ಜೆರಾಕ್ಸ್‌ನೊಂದಿಗೆ. 2. ಬ್ಯಾಂಕ್ ಮ್ಯಾನೇಜರ್‌ನಿಂದ ದೃಢೀಕರಿಸಲಾದ ಬ್ಯಾಂಕ್ ಪಾಸ್ ಶೀಟ್– **M/s Equinox Land project India & Its Group Entities,** ಕಂಪನಿಯಲ್ಲಿ ಹೂಡಿಕೆಯ ದಿನಾಂಕಕ್ಕೆ 2 ತಿಂಗಳ ಮುಂಚಿತವಾಗಿ ಇಲ್ಲಿಯವರೆಗೆ. 3. KYC ತೋರಿಸುವ ಪುಟಗಳ ಪ್ರತಿಯೊಂದಿಗೆ ಪಾಸ್‌ಬುಕ್‌ನ ಪ್ರತಿ. 4. ಮೂಲ ಬಾಂಡ್‌ಗಳು / ಒಪ್ಪಂದಗಳು / ನೋಟರೈಸ್ಡ್ ಅಫಿಡವಿಟ್‌ಗಳು/ಕಂಪನಿಯಿಂದ ಪಡೆದ ಇತರೆ ದಾಖಲೆಗಳನ್ನು ಸಲ್ಲಿಸತಕ್ಕದ್ದು. 5. ಅಧಿಕೃತ ಪ್ರತಿನಿಧಿಯಾಗಿದ್ದಲ್ಲಿ ಜನರಲ್ ಪವರ್ ಆಫ್ ಅಟಾರ್ನಿ ಮತ್ತು ಶಾಸನಾತ್ಮಕ ಮೂಲ ದಾಖಲೆಗಳನ್ನು ಹಾಜರುಪಡಿಸಬೇಕು. 6. ದೃಢೀಕರಿಸಿದ ಸ್ಪಷ್ಟವಾದ ಜೆರಾಕ್ಸ್ ಪ್ರತಿಯನ್ನು ಒದಗಿಸಬೇಕು ಅಥವಾ ಸಂಬಂಧಪಟ್ಟ ಅಧಿಕಾರಿಯಿಂದ ದೃಢೀಕರಣಕ್ಕಾಗಿ ಮೂಲವನ್ನು ಜೆರಾಕ್ಸ್ ಪ್ರತಿಯೊಂದಿಗೆ ಒದಗಿಸಬೇಕು. ಸ್ಕ್ಯಾನ್‌ಗಳು/WhatsApp ನಕಲುಗಳು ಸ್ವೀಕರಿಸುವುದಿಲ್ಲ. 7. ಎಫ್. ಇ ನೀಡಿದ ಪಾಸ್‌ಬುಕ್. 8. ಕಾಯ್ದೆಯ ಸೆಕ್ಷನ್ 7(4) ಮತ್ತು 7(5) ರ ಪ್ರಕಾರ, ಭದ್ರತೆ ಸಾಲ ನೀಡಿದವರು ದಿನಾಂಕ 10–04–2024 ರಿಂದ ಒಂದು ತಿಂಗಳ ಅವಧಿ ಮುಗಿಯುವ ಮೊದಲು ಭದ್ರತಾ ಪತ್ರದ ಮೌಲ್ಯಮಾಪನ ಮಾಡಿಸಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸಕ್ಷಮ ಪ್ರಾಧಿಕಾರವೇ ಸ್ವತಃ ಮೌಲ್ಯ ಮಾಪನ ಮಾಡುತ್ತಾರೆ. ಇದಕ್ಕೆ ಭದ್ರತೆ ಸಾಲ ಕೊಟ್ಟವರು ಬದ್ಧರಾಗಿರತಕ್ಕದ್ದು.

ಠೇವಣಿದಾರರು ಮರಣ ಹೊಂದಿದ್ದರೆ ಅಥವಾ ಆಸ್ಪತ್ರೆಗೆ ದಾಖಲಾಗಿದ್ದಲ್ಲಿ ಅವರ ನಾಮ ನಿರ್ದೇಶಿತರು/ವಾರಸುದಾರರು ಅರ್ಜಿ ಸಲ್ಲಿಸುವಾಗ ಅದಕ್ಕೆ ಪುರಾವೆಯಾಗಿರುವ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ

ಕ್ರ ಸಂ.	ಠೇವಣಿದಾರರು/ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1.	ಠೇವಣಿದಾರರು (Depositor)	ಠೇವಣಿದಾರರು ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿ/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2.	ನಾಮಿನಿದಾರರು (Nominee)	1. ಠೇವಣಿದಾರರ ಮರಣ ಪ್ರಮಾಣಪತ್ರ . 2. ವಂಶವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಾಮಿನಿದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. ಕೆ.ಪಿ.ಐ.ಡಿ ಕಾಯ್ದೆಯ ಕಲಂ 7(3)ರ ಅನ್ವಯ ಕ್ಲೇಮು ಅರ್ಜಿ ಸಲ್ಲಿಸುವುದಕ್ಕೆ ನಿಗದಿಪಡಿಸಿರುವ ಕಡೆಯ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಸ್ವೀಕರಿಸಲಾಗುವುದಿಲ್ಲ.
3.	ವಾರಸುದಾರರು (Legal heirs)	1. ಠೇವಣಿದಾರರ ಮರಣ ಪ್ರಮಾಣ ಪತ್ರ 2. ವಂಶ ವೃಕ್ಷ (ತಹಶೀಲ್ದಾರ್‌ರವರಿಂದ ಪಡೆದಿರತಕ್ಕದ್ದು) 3. ನಿರ್ದಿಷ್ಟನಾಮಿ (Nominee)ರವರ ಮರಣ ಪ್ರಮಾಣ ಪತ್ರ 4.ವಾರಸುದಾರರ ಪ್ರಮಾಣ ಪತ್ರ – ನ್ಯಾಯಾಲಯದ ಆದೇಶ. 5. ವಾರಸುದಾರರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು. 6. ಉಳಿದ ವಾರಸುದಾರರ ಒಪ್ಪಿಗೆ (Consent from other legal heirs)
4.	PoA – Power of Attorney	1. ಠೇವಣಿದಾರರು ಆಸ್ಪತ್ರೆಗೆ ದಾಖಲಾಗಿರುವುದಕ್ಕೆ ಸಂಬಂಧಿಸಿದ ದಾಖಲೆಗಳು. (ಗಂಭೀರ ಆರೋಗ್ಯ ಸಮಸ್ಯೆ ಇರುವವರು) ವೈದ್ಯರಿಂದ ವರದಿ ಪಡೆದು ಸಲ್ಲಿಸುವುದು. 2. ಹೊರದೇಶದಲ್ಲಿ ವಾಸಿಸುತ್ತಿರುವವರು Apostilled copy citizen card+Passport 3. ಮೇಲಿನ ಕ್ರ. ಸಂ. 1 ಮತ್ತು 2 ಕ್ಕೆ ಸಂಬಂಧಪಟ್ಟವರು ಕಡ್ಡಾಯವಾಗಿ Notarized Power of Attorney certificate ಸಲ್ಲಿಸತಕ್ಕದ್ದು. 4. PoA. ಹೊಂದಿರುವವರು ಮೇಲಿನ ದಾಖಲೆಗಳನ್ನು ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5.	ಅಪ್ರಾಪ್ತರ ಗಾರ್ಡಿಯನ್ (ಪೋಷಕರು)	1. ಠೇವಣಿದಾರರ ಮರಣ ಪತ್ರ 2. ಗಾರ್ಡಿಯನ್ ನೇಮಕದ ದಾಖಲೆ 3. ಸ್ವಯಂ ದೃಢೀಕೃತ ದಾಖಲೆ

ಕ್ಲೇಮು ಅರ್ಜಿಯನ್ನು ಸಲ್ಲಿಸುವ ಅರ್ಜಿದಾರರು **M/s Equinox Land project India & Its Group Entities** ಹೂಡಿಕೆಗೆ ಸಂಬಂಧಿಸಿದ, ಈ ಕೆಳಕಂಡ ಎಲ್ಲಾ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು.

ಕ್ರ ಸಂ.	ಠೇವಣಿದಾರರು/ಠೇವಣಿದಾರರ ಸಂಬಂಧಿಕರು	ಸಲ್ಲಿಸಬೇಕಾಗಿರುವ ದಾಖಲೆಗಳು
1.	ಉಳಿತಾಯ ಠೇವಣಿ (Savings Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2 ಉಳಿತಾಯ ಠೇವಣಿ ಪಾಸ್ ಪುಸ್ತಕ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount). ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
2.	ನಿಶ್ಚಿತ ಠೇವಣಿ (Fixed Deposit)	1. ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2.ಬಾಂಡ್ ಪ್ರಮಾಣ ಪತ್ರ/ನಿಶ್ಚಿತ ಠೇವಣಿ ಪ್ರಮಾಣ ಪತ್ರ/ಇತರೆ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
3.	ಸಂಚಿತ ಠೇವಣಿ (Cumulative Deposit)	1.ಭಾವಚಿತ್ರ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು. 2.ಸಂಚಿತ ಠೇವಣಿ ಪ್ರಮಾಣ ಪತ್ರ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) ಠೇವಣಿದಾರರು/ನಾಮಿನಿದಾರರು/ವಾರಸುದಾರರು/ಕಠಂದಾರರುಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
4.	ಆವರ್ತ ಠೇವಣಿ (Recurring)	1.ಭಾವಚಿತ್ರವಿರುವ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು 2.ಆವರ್ತ ಠೇವಣಿ ಪಾಸ್ ಪುಸ್ತಕ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.
5.	MES Deposit	1.ಭಾವಚಿತ್ರವಿರುವ ಇರುವ ಪಾಸ್ ಪುಸ್ತಕದ ಮುಖ ಪುಟ (Front page) ನಕಲು 2. MES Deposit ಠೇವಣಿ ಪಾಸ್ ಪುಸ್ತಕ 3.ಪಾಸ್ ಪುಸ್ತಕದಲ್ಲಿ ಠೇವಣಿದಾರರು ಹಣ ಸಂದಾಯ ಮಾಡಿದ ಬಗ್ಗೆ ವಹಿವಾಟಿನ ವಿವರ (Transaction statement page in passbook of claimed amount) ಠೇವಣಿದಾರರು/ನಾಮಿನಿದಾರರು/ವಾರಸುದಾರರು/PoAದಾರರು ಮೇಲಿನ ದಾಖಲೆಗಳನ್ನು ನೋಟರಿ/ಪತ್ರಾಂಕಿತ ಅಧಿಕಾರಿಗಳು/ಸ್ವಯಂ ದೃಢೀಕರಿಸಿ ಸಲ್ಲಿಸತಕ್ಕದ್ದು.

1. ಸುಳ್ಳು ದಾಖಲೆಗಳ ಆಧಾರದ ಅರ್ಜಿ ಅಥವಾ ಸ್ವಯಂ–ಸೃಷ್ಟಿತ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸುವುದರೊಂದಿಗೆ ಅಂತಹ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸಲಾಗುವುದು.
2. ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರು,(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ವಿ ವಿ ಗೋಪುರ ಪೋಡಿಯಂ ಬ್ಲಾಕ್ 4ನೇ ಮಹಡಿ, ಅಂಬೇಡ್ಕರ್ ವೀದಿ, ಬೆಂಗಳೂರು ಇವರ ಕಛೇರಿಯಲ್ಲಿ ಖುದ್ದು ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ.
3. ಅರ್ಜಿದಾರರು **M/s Equinox Land project India & Its Group Entities.,** ಇದರಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಕೀಮ್‌ಗಳಲ್ಲಿ ಹೂಡಿಕೆ ಮಾಡಿದ್ದಲ್ಲಿ, ಕಡ್ಡಾಯವಾಗಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಸಹಿ/–
ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

DIPR/CP/17/Zen/2024-25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ನಗು ಮುಖದವರಿಗೆ ನೋವೇ ಇರುವುದಿಲ್ಲ ಎನ್ನಲಾಗದು. ಅವರು ಆ ನೋವನ್ನು ಮೀರುವ ಸಾಮರ್ಥ್ಯ ಹೊಂದಿದ್ದಾರೆ ಎನ್ನಬಹುದು.

–ವಿಲಿಯಂ ಷೇಕ್ಸ್‌ಪಿಯರ್

ಪ್ರಣಾಳಿಕೆಯ ಸಂದೇಶವನ್ನು ಜನರಿಗೆ ತಲುಪಿಸುವುದು ಕಾಂಗ್ರೆಸ್‌ನ ಸವಾಲು

ಮತದಾರರ ಕೈಯಲ್ಲಿ ಇಂದ್ರ- ಚಂದ್ರರನ್ನೇ ತಂದು ಇರಿಸುತ್ತೇವೆ ಎಂಬಂತಹ ಭರವಸೆಗಳನ್ನು ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಕೊಡುತ್ತವೆ. ಆದರೆ, ಅಧಿಕಾರಕ್ಕೆ ಬಂದ ಮೇಲೆ ಹೆಚ್ಚಿನ ಭರವಸೆಗಳನ್ನು ಈ ಪಕ್ಷಗಳು ಮರೆಯುತ್ತವೆ. ಅವಾಸ್ತವಿಕ ಮತ್ತು ಅತಿರೇಕದ ಭರವಸೆಗಳನ್ನು ನಿಷೇಧಿಸಬೇಕು ಎಂಬ ಪ್ರಸ್ತಾಪ ಹಿಂದೊಮ್ಮೆ ಕೇಳಿಬಂದಿತ್ತು. ಆದರೆ, ಅದು ವಿವೇಕಯುತವಾದ ಕ್ರಮ ಅಲ್ಲ. ಪ್ರಣಾಳಿಕೆ ಎಂಬುದು ರಾಜಕೀಯ ಪಕ್ಷಗಳು ಮತ್ತು ಮತದಾರರ ನಡುವಣ ವಿಚಾರ. ಮತದಾರರು ಅವುಗಳ ಕುರಿತು ತೀರ್ಮಾನ ಮಾಡಬೇಕು. ಜಾರಿಗೊಳಿಸಬಹುದಾದ ಭರವಸೆಗಳಿಗಿಂತಲೂ ಹೆಚ್ಚಾಗಿ ರಾಜಕೀಯ ನಿಲುವುಗಳು ಮತ್ತು ಪಕ್ಷಗಳು ಮಾಡಿಕೊಳ್ಳಬಹುದಾದ ಹೊಂದಾಣಿಕೆಗಳನ್ನು ಈ ಪ್ರಣಾಳಿಕೆಗಳು ಪ್ರತಿನಿಧಿಸುತ್ತವೆ. ಕಾಂಗ್ರೆಸ್ ಪಕ್ಷವು ಬಿಡುಗಡೆ ಮಾಡಿರುವ ಪ್ರಣಾಳಿಕೆಯನ್ನು ಕೂಡ ಈ ದೃಷ್ಟಿಕೋನದಲ್ಲಿಯೇ ನೋಡಬೇಕು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ಅದರ ನೀತಿಗಳು ಮತ್ತು ತೆಗೆದುಕೊಂಡ ನಿರ್ಧಾರಗಳ ಕುರಿತು ಕಾಂಗ್ರೆಸ್ ಪಕ್ಷವು ಮುಖ್ಯವಾಗಿ ಕಳೆದ ಐದು ವರ್ಷಗಳಲ್ಲಿ ಮಾಡಿದ ಟೀಕೆಗಳೇ ಈ ಪ್ರಣಾಳಿಕೆಯಲ್ಲಿರುವ ಭರವಸೆಗಳಿಗೆ ಆಧಾರವಾಗಿವೆ. ಈಚಿನ ವರ್ಷಗಳಲ್ಲಿ ಬಿಜೆಪಿ ಮರುರೂಪಿಸಿರುವ ರಾಜಕೀಯ ವ್ಯವಸ್ಥೆಯಲ್ಲಿ, ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಯಾವ ದಿಕ್ಕಿನಲ್ಲಿ ಸಾಗಬೇಕು ಎಂದು ಕಾಂಗ್ರೆಸ್ ಯೋಚಿಸುತ್ತಿದೆ ಎಂಬುದನ್ನು ಈ ಭರವಸೆಗಳು ಸೂಚಿಸುತ್ತಿವೆ.

ಈಚಿನ ವರ್ಷಗಳಲ್ಲಿ ಬಿಜೆಪಿ ಮರುರೂಪಿಸಿರುವ ರಾಜಕೀಯ ವ್ಯವಸ್ಥೆಯಲ್ಲಿ, ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿ ಯಾವ ದಿಕ್ಕಿನಲ್ಲಿ ಸಾಗಬೇಕು ಎಂದು ಕಾಂಗ್ರೆಸ್ ಯೋಚಿಸುತ್ತಿದೆ ಎಂಬುದನ್ನು ಅದರ ಪ್ರಣಾಳಿಕೆಯಲ್ಲಿನ ಭರವಸೆಗಳು ಸೂಚಿಸುತ್ತಿವೆ

ಸಮಗ್ರ ನ್ಯಾಯ ಎಂದು ಕಾಂಗ್ರೆಸ್ ಪಕ್ಷವು ಭಾವಿಸಿರುವ ವಿಚಾರಗಳನ್ನು ಖಾತರಿಪಡಿಸಲು ಪ್ರಣಾಳಿಕೆಯಲ್ಲಿ ವಿಶೇಷ ಗಮನ ನೀಡಲಾಗಿದೆ. ನಿರುದ್ಯೋಗ, ಬಡತನ ಮತ್ತು ಅಸಮಾನತೆ ನಿವಾರಣೆ ಹಾಗೂ ಆರೋಗ್ಯ ಸೇವೆ ಮತ್ತು ರೈತರ ಅಭಿವೃದ್ಧಿ ಕುರಿತಂತೆ ಹಲವು ಭರವಸೆಗಳನ್ನು ನೀಡಲಾಗಿದೆ. ಪ್ರಣಾಳಿಕೆಗೆ 'ನ್ಯಾಯಪತ್ರ' ಎಂದು ಹೆಸರಿಡಲಾಗಿದೆ. ಅದರಲ್ಲಿ ನ್ಯಾಯದ ಐದು ಸ್ತಂಭಗಳು ಮತ್ತು 25 ಗ್ಯಾರಂಟಿಗಳನ್ನು ಉಲ್ಲೇಖಿಸಲಾಗಿದೆ. ಹೊಸ ಜಾತಿ ಗಣತಿ, ಮೀಸಲಾತಿಗೆ ಶೇ 50ರ ಮಿತಿ ರದ್ದತಿ, ವೃತ್ತಿ ತರಬೇತಿಯ ಹಕ್ಕು (ಅಪ್ರೆಂಟಿಸ್‌ಶಿಪ್), ಕನಿಷ್ಠ ಬೆಂಬಲ ಬೆಲೆಗೆ ಕಾಯ್ದೆಯ ಖಾತರಿ, ಆರೋಗ್ಯ ರಕ್ಷಣೆಗಾಗಿ ರಾಜಸ್ಥಾನ ಮಾದರಿಯ ವಿಮೆ, ಅಗ್ನಿಪಥ ಯೋಜನೆ ರದ್ದು ಮುಂತಾದ ಗ್ಯಾರಂಟಿಗಳನ್ನು ಘೋಷಿಸಲಾಗಿದೆ. ವಾಕ್ ಸ್ವಾತಂತ್ರ್ಯಕ್ಕೆ ಅಡಚಣೆಯಾಗಿರುವ ಕಾನೂನುಗಳು ಮತ್ತು ಈಗ ಕೇಂದ್ರೀಯ ತನಿಖಾ ಸಂಸ್ಥೆಗಳು ಕಿರುಕುಳ ನೀಡಲು ಬಳಸುವ ಕಾನೂನುಗಳ ಮರುಪರಿಶೀಲನೆಯ ಭರವಸೆ ನೀಡಲಾಗಿದೆ. ಪ್ರತಿ ಬಡ ಕುಟುಂಬಕ್ಕೂ ವರ್ಷಕ್ಕೆ ₹ 1 ಲಕ್ಷ ನೀಡುವುದಾಗಿಯೂ ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ಕೆಲವು ವಿಷಯಗಳ ಕುರಿತು ಏನನ್ನೂ ಹೇಳದೇ ಇರುವುದು ಕೂಡ ಗಮನಾರ್ಹವಾಗಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನ ನೀಡುವುದಾಗಿ ಘೋಷಿಸಲಾಗಿದೆ. ಆದರೆ, ಸಂವಿಧಾನದ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನದ ಮರುಸ್ಥಾಪನೆ ಕುರಿತು ಪ್ರಣಾಳಿಕೆಯು ಮೌನವಾಗಿದೆ. ಪೌರತ್ವ (ತಿದ್ದುಪಡಿ) ಕಾಯ್ದೆ ಮತ್ತು ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಕುರಿತು ಕೂಡ ಏನನ್ನೂ ಹೇಳಿಲ್ಲ.

ಪ್ರಣಾಳಿಕೆಗಳಲ್ಲಿ ಕೊಟ್ಟಿರುವ ಭರವಸೆಗಳು ಮತ್ತು ಬಿಟ್ಟಿರುವ ಅಂಶಗಳ ಕುರಿತು ಚರ್ಚೆ ನಡೆಯುತ್ತದೆ; ಆದರೆ, ಪಕ್ಷಗಳಿಗೆ ತಮ್ಮ ಸಂದೇಶಗಳನ್ನು ಜನರಿಗೆ ತಲುಪಿಸಲು ಸಾಧ್ಯವಾಗಿದೆಯೇ ಎಂಬುದು ಇಲ್ಲಿ ಹೆಚ್ಚು ಮಹತ್ವದ ವಿಚಾರವಾಗಿದೆ. ಭರವಸೆಗಳು ಜನರ ಮನಮುಟ್ಟಬೇಕು; ಆದರೆ, ಅದು ಆ ಸಂದರ್ಭದಲ್ಲಿ ಜನರಲ್ಲಿ ಪ್ರಬಲವಾಗಿರುವ ಆಕಾಂಕ್ಷೆಗಳು ಮತ್ತು ರಾಜಕೀಯ ಹಾಗೂ ಇತರ ಭಾವನೆಗಳ ಮೇಲೆ ಅವಲಂಬಿತವಾಗಿದೆ. ಯಾವೆಲ್ಲ ರೀತಿಯ ಭರವಸೆಗಳನ್ನು ನೀಡಲಾಗಿದೆ ಎಂಬುದರ ಮೇಲೆಯೂ ಅದು ಅವಲಂಬಿತ ಆಗಿರಬಹುದು. ತನ್ನ ಸಂದೇಶವನ್ನು ಜನರಿಗೆ ತಲುಪಿಸುವುದಕ್ಕಾಗಿ ಪಕ್ಷಗಳಲ್ಲಿ ಸಮರ್ಪಕ ವ್ಯವಸ್ಥೆ ಮತ್ತು ಜನರು ಕೂಡ ಬೇಕು. 2019ರಲ್ಲಿ ಲೋಕಸಭೆಗೆ ನಡೆದ ಚುನಾವಣೆಯ ವೇಳೆಯಲ್ಲಿ ತನ್ನ ಸಂದೇಶವನ್ನು ಜನರಿಗೆ ತಲುಪಿಸುವಲ್ಲಿ ಕಾಂಗ್ರೆಸ್ ವಿಫಲವಾಗಿತ್ತು. ಆದರೆ, ಕರ್ನಾಟಕ ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆಯಲ್ಲಿ ಸಂದೇಶವನ್ನು ತಲುಪಿಸುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಈಗ ತನ್ನ ಪ್ರಣಾಳಿಕೆಯನ್ನು ಜನರಿಗೆ ತಲುಪಿಸುವುದು ಮತ್ತು ಅದನ್ನು ವಿಶ್ವಾಸಾರ್ಹವಾಗಿಸುವುದು ಪಕ್ಷದ ಮುಂದೆ ಇರುವ ಸವಾಲಾಗಿದೆ.

ಸಂಕೀರ್ಣ ವರ್ತಮಾನದ ನಿರ್ವಹಣೆ ಆಧರಿಸಿ ನಿರ್ಧಾರವಾಗಲಿದೆ ಮನುಷ್ಯಜೀವಿಯ ಭವಿಷ್ಯ

ಬರಗಾಲ: 'ಕೊರೊನಾ ವೈರಾಗ್ಯ' ಆಗದಿರಲಿ!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಹಿಂದಿನ ವಾರ ಕೊಪ್ಪಳ ಬಳಿಯ ಗೆಳೆಯರೊಬ್ಬರ ಸಹಜ ಕೃಷಿ ತೋಟಕ್ಕೆ ಭೇಟಿ ನೀಡಿದ್ದೆ. ಈ ಗೆಳೆಯರೊಂದಿಗಿನ ಸಮಾಜಮುಖಿ ಮಾತುಕತೆಯಲ್ಲಿ ಪ್ರಮುಖವಾಗಿ ಪ್ರಸ್ತಾಪ ಆಗಿದ್ದು ಜಾಗತಿಕ ತಾಪಮಾನದ ಏರಿಕೆ. ಅವರು, 'ಹವಾಮಾನ ಬದಲಾವಣೆ ಬಗ್ಗೆ ಬರೀ ಮಾತಾಡುವುದೆಲ್ಲ ವೇಸ್ಟ್. ಅದು ನಮ್ಮ ಬುಡಕ್ಕೇ ಬಂದಿದೆ. ಅದರಲ್ಲೂ ರೈತ ಸಮುದಾಯ ಈ ಬಿಕ್ಕಟ್ಟಿನ ಬಹುದೊಡ್ಡ ಬಲಿಪಶು' ಎಂದು ವಿವರಿಸುತ್ತಾ ತಮ್ಮ ತೋಟದಲ್ಲಿನ ಬೆಳವಣಿಗೆಗಳನ್ನು ತೋರಿಸಿದರು. ಮಾವಿನ ಸೀಸನ್ ಮುಗಿಯುವ ಹೊತ್ತಿಗೆ ಕೊನೆಯ ಫಸಲಾಗಿ ದೊರೆಯಬೇಕಿದ್ದ ಮಲ್ಲಿಕಾ ಮಾವು ಏಪ್ರಿಲ್‌ನಲ್ಲೇ ತೊನೆದಾಡತೊಡಗಿದೆ. ನವೆಂಬರ್-ಡಿಸೆಂಬರ್ ಸಮಯದಲ್ಲಿ ಹೂವು ಕಾಣಿಸಿ ಇಷ್ಟೊತ್ತಿಗೆ ಕಾಯಿ ಕಟ್ಟಬೇಕಾದ ಅಪೂಸು ತಳಿಯ ಗಿಡದಲ್ಲಿ ಇದೀಗ ಏಳನೇ ಬಾರಿ ಪುನಃ ಹೂವು ಅರಳುವ, ಎಲೆ ಚಿಗುರುವ ವೈಚಿತ್ರ್ಯ ಘಟಿಸುತ್ತಿದೆ.

ಮಾನವನಿರ್ಮಿತ ಪ್ರಕೃತಿಯ ತಲ್ಲಣ ಮತ್ತು ಹವಾಮಾನ ಬದಲಾವಣೆಗಳು ಮನುಷ್ಯನ, ವಿಶೇಷವಾಗಿ ರೈತಾಪಿವರ್ಗದ ಬದುಕಿನ ಜೊತೆಗೆ ಗಿಡಮರಗಳಲ್ಲೂ ಗೊಂದಲ ಮೂಡಿಸಿವೆ. ಪರಿಸರದೊಂದಿಗಿನ ಸಾವಿರಾರು ವರ್ಷಗಳ ಒಡನಾಟ, ಅನುಭವ, ಕಲಿಕೆಯ ಮೂಲಕ ಸಂಪಾದಿಸಿದ ಮನುಷ್ಯನ ಸಹಯಾನದ ಜ್ಞಾನ ಕೆಲವೇ ವರ್ಷಗಳ ಪುಟ್ಟ ಅವಧಿಯಲ್ಲಿ ನುಚ್ಚುನೂರಾದ ಸನ್ನಿವೇಶವಿದು. 'ಜಾಗತಿಕ ತಾಪಮಾನ ಏರಿಕೆ ಆಗುತ್ತದೆ, ಮಂಜುಗಡ್ಡೆಗಳು ಕರಗುತ್ತವೆ, ಸಮುದ್ರ ಮಟ್ಟ ಹೆಚ್ಚಾಗುತ್ತದೆ...' ಎಂದೆಲ್ಲಾ ಪುಸ್ತಕ, ಭಾಷಣಗಳಿಂದ ತಿಳಿಯುವ ಕಾಲ ಮುಗಿದುಹೋಯಿತು. ಇದೀಗ ಪರಿಸರ ವೈಪರೀತ್ಯದ 'ಬಿಸಿ' ನಮ್ಮ ನೆತ್ತಿಯನ್ನೇ ಹತ್ತಿ ಸುಡತೊಡಗಿದೆ!

ಮಳೆಗಾಲವನ್ನು ನೆಚ್ಚಿಕೊಂಡ ಬಯಲುಸೀಮೆಯ ಬಹುಪಾಲು ಕೃಷಿಕರು ಈ ಬಾರಿ ಮುಂಗಾರು-ಹಿಂಗಾರು ಒಟ್ಟಿಗೇ ಕೈಕೊಟ್ಟ ಪರಿಣಾಮವಾಗಿ, ಎರಡೆರಡು ಸಲ ಬಿತ್ತಿದ ಹೊಲವನ್ನು ಹರಗುವ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ನದಿಪಾತ್ರಗಳು ಆಟದ ಮೈದಾನದಂತೆ ಬಟಾಬಯಲು. ಕೊಳವೆಬಾವಿ ನಂಬಿ ತೋಟ ಕಟ್ಟುವ, ಅಡಿಕೆ ಬೆಳೆಯುವ ಸಾಹಸ ಮಾಡಿದ ರೈತರು ಪಾತಾಳಕ್ಕೆ ಕುಸಿಯುವಂತಾಗಿದೆ. ಮಲೆನಾಡಿನ ನೀರಿನ ಮೂಲಗಳೂ ಬತ್ತಿಹೋಗಿವೆ. ಕುಡಿಯುವ ನೀರಿಗೇ ಹಾಹಾಕಾರ ಇರುವಾಗ ಕೃಷಿಗೆ ನೀರು ಒದಗಿಸುವುದು ದೂರವೇ ಉಳಿಯಿತು. ಮೂಕಪ್ರಾಣಿಗಳ ದಾಹ, ಗೋಳು ಹೇಳತೀರದು.

ಸಾಮಾನ್ಯವಾಗಿ ಬರ ಮತ್ತು ಪ್ರವಾಹದ ಪರಿಣಾಮ ಅನುಭವಿಸುವವರು ಗ್ರಾಮೀಣ ಪ್ರದೇಶದ ಜನ ಎಂದೇ ನಂಬಿ ಸದಾ ಸುರಕ್ಷಿತ ಭಾವದಲ್ಲಿದ್ದ ನಗರ-ಪಟ್ಟಣ ಭಾಗದ ಜನರಿಗೂ ಈ ವರ್ಷ ಜಲಕ್ಷಾಮದ ಬವಣೆ ತಟ್ಟಿದೆ. ರಾಜ್ಯದ ಬಹುಪಾಲು ಭಾಗಗಳಲ್ಲಿ ತಾಪಮಾನ 40 ಡಿಗ್ರಿ ದಾಟಿರುವ ಪರಿಣಾಮವಾಗಿ, ಶಾಖಾಘಾತಕ್ಕೆ ಈಡಾದವರ ಸಂಖ್ಯೆ ಈಗಾಗಲೇ ಆರುನೂರು ಮೀರಿದೆ.

ಸ್ವಾತಂತ್ರ್ಯೋತ್ತರದ ಎಪ್ಪತ್ತೇಳು ವರ್ಷಗಳ ನಂತರವೂ ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆಯನ್ನೂ ಪಡೆಯದ ಪಟ್ಟಣ, ನಗರಗಳ ದೈನೇಸಿ ಸ್ಥಿತಿ ಒತ್ತಟ್ಟಿಗಿರಲಿ, ಬೆಂಗಳೂರಿನಂತಹ ರಾಜಧಾನಿ ನಗರ ಕೂಡ ನೀರಿನ ಅಭಾವದಿಂದ ನರಳುವಂತಾಗಿದೆ. ನೀರಿನ ಬಳಕೆಯ ಬಗೆಗೆ ಜಲಮಂಡಳಿ ನಿರ್ಬಂಧ, ದಂಡ ಪ್ರಕಟಿಸಿದೆ. ಆದಾಗ್ಯೂ ನಾಗರಿಕ ಪ್ರಜ್ಞೆಯ ಕೊರತೆಯಿಂದ ಎಲ್ಲೆಡೆ ನಿಯಮಗಳ ಉಲ್ಲಂಘನೆಯನ್ನು ಕಾಣಬಹುದು.

ಜಾಗತಿಕ ತಾಪಮಾನ ಹೆಚ್ಚಳದ ಪರಿಣಾಮ ಮತ್ತು ಪರಿಹಾರ ಈವರೆಗೆ ಯಾರಿಗೂ ತಮಗೆ ಸಂಬಂಧಿಸಿದ ವಿದ್ಯಮಾನ ಎಂದು ಅನ್ನಿಸದೇ ಇರುವುದು ಆತಂಕಕಾರಿ ಸಂಗತಿ. ಈ ಸಮಸ್ಯೆಯ ಸೃಷ್ಟಿಗೆ ಸಾಮಾನ್ಯ ವ್ಯಕ್ತಿಯಿಂದ ವಿಶ್ವ ಸಮುದಾಯದ ತನಕ ಎಲ್ಲರೂ ತಮ್ಮ ಶಕ್ತ್ಯಾನುಸಾರ 'ಕೊಡುಗೆ' ನೀಡಿರುವುದು, ನೀಡುತ್ತಲೇ ಇರುವುದು ಸ್ಫಟಿಕ ಸ್ಪಷ್ಟ. ಅಂತಿಮವಾಗಿ ಇವೆಲ್ಲಾ ಪರಿಸರ ವಿರೋಧಿ ಚಟುವಟಿಕೆಗಳ ಕಹಿ ಉಣ್ಣಬೇಕಾದವರು ತಾವೇ ಎಂಬ ಕಟುಸತ್ಯವನ್ನು ಮುದ್ದಾಂ ಮರೆಮಾಚುವುದರಲ್ಲಿ ಅದೇನು ಜಾಣತನವೋ!

ಹವಾಮಾನ ವೈಪರೀತ್ಯದ ಕಾರಣಗಳು, ಪರಿಣಾಮಗಳು ಹಾಗೂ ನಿಯಂತ್ರಣ ಕ್ರಮಗಳನ್ನು ಕುರಿತ ಜಾಗತಿಕ ಮಟ್ಟದ ಸಂಶೋಧನೆಗಳು ಬಹಳಷ್ಟು ಪ್ರಗತಿಯನ್ನು ಸಾಧಿಸಿವೆ. ಹಾಗಾಗಿ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದಾಗ ರಾಜ್ಯಕ್ಕೆ ಬರಗಾಲ ಕಾಡುತ್ತದೆ, ಯಡಿಯೂರಪ್ಪ ನೇತೃತ್ವದ ಸರ್ಕಾರ ಇದ್ದಾಗ ಪ್ರವಾಹ ಎದುರಾಗುತ್ತದೆ ಎಂಬ ಮೂಢ ವ್ಯಾಖ್ಯಾನಕ್ಕೆ ಇಲ್ಲಿ ಆಸ್ಪದವಿಲ್ಲ. ಎಲ್ಲವೂ ಕಾರ್ಯಕಾರಣ ಸೂತ್ರಕ್ಕೆ ಬದ್ಧ.

ಆಧುನಿಕ ಮಾನವನ ಸ್ವಾರ್ಥಕೇಂದ್ರಿತ ಜೀವನಶೈಲಿ, ನಿಲುವು, ನೀತಿ ನಿರ್ಧಾರಗಳಲ್ಲಿ ಪರಿಸರ ಜಾಗೃತಿ ವ್ಯಕ್ತಗೊಳ್ಳುವ ಸಂದರ್ಭ ತೀರಾ ಅಪರೂಪ. ಆದರೆ ಜಾಗತಿಕ ತಾಪಮಾನ ಏರಿಕೆಯ ವಿರುದ್ಧದ ಹೋರಾಟದಲ್ಲಿ ಸಾಮಾನ್ಯ ವ್ಯಕ್ತಿಯ ಜವಾಬ್ದಾರಿ ಬಹುಮುಖಿಯಾದುದು. ಇಂಗಾಲದ ಹೆಜ್ಜೆಗುರುತನ್ನು ಕಡಿಮೆ ಮಾಡುವುದು ನಾಗರಿಕರ ಪ್ರಾಥಮಿಕ ಜವಾಬ್ದಾರಿಗಳಲ್ಲಿ ಒಂದು. ನೀರಿನ ಸಂರಕ್ಷಣೆ, ಮರುಬಳಕೆ, ತ್ಯಾಜ್ಯದ ಉತ್ಪತ್ತಿಯಲ್ಲಿ ಕಡಿತದ ಮೂಲಕ ಪರಿಸರ ರಕ್ಷಣೆಗೆ ಜನರು ಕೊಡುಗೆ ನೀಡಬಹುದು. ಹೀಗೆ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಪರಿಸರಸ್ನೇಹಿ, ಸುಸ್ಥಿರ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಜನರಿಗೆ ಬೇಕಾದಷ್ಟು ಅವಕಾಶಗಳಿರುತ್ತವೆ.

ಇದೀಗ ಬಿರುಬಿಸಿಲಿನಲ್ಲಿ ನೀರಿನ ಅಭಾವದಿಂದ ಚಡಪಡಿಸುತ್ತಿರುವ ನಾಗರಿಕರು ಜಾಗತಿಕ ತಾಪಮಾನ ಏರಿಕೆಯ ತಕ್ಷಣದ ಪರಿಣಾಮಗಳು ಹಾಗೂ ಭವಿಷ್ಯದ ಅಪಾಯಗಳ ಬಗ್ಗೆ ಒಂದಿಷ್ಟು ಅರಿವು ಮೂಡಿಸಿಕೊಂಡಂತೆ ಅಸ್ಪಷ್ಟವಾಗಿ ಕಾಣಿಸುತ್ತಿದೆ. ಹವಾಮಾನದಲ್ಲಿ ಅಲ್ಲ, ತಮ್ಮಲ್ಲಿ ಬದಲಾವಣೆ ಆಗಬೇಕಿದೆ ಎಂದು ಕೆಲವರಿಗಾದರೂ ಅನ್ನಿಸುತ್ತಿರುವುದು ಆಶಾದಾಯಕ ಬೆಳವಣಿಗೆ. ಆದರೆ ಈ ಪಾಠ ಕೂಡ ಕೋವಿಡ್ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಕಾಣಿಸಿಕೊಂಡು ಮಾಯವಾದ 'ಕೊರೊನಾ ವೈರಾಗ್ಯ' ಆಗಬಾರದಷ್ಟೇ!

ಇತ್ತೀಚೆಗಿನ ಮಹತ್ವದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್, 'ಹವಾಮಾನ ಬದಲಾವಣೆಯಿಂದ ಸಾಂವಿಧಾನಿಕ ಹಕ್ಕಿಗೆ ಧಕ್ಕೆ' ಆಗುತ್ತದೆಂದು ಸ್ಪಷ್ಟವಾಗಿ ಗುರುತಿಸಿದೆ. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರಿದ್ದ ಪೀಠವು, 'ಹವಾಮಾನ ಬದಲಾವಣೆಯು ಸಂವಿಧಾನ ನೀಡಿರುವ ಸಮಾನತೆಯ ಹಕ್ಕಿನ ಮೇಲೆ ಪರಿಣಾಮ ಉಂಟುಮಾಡಬಹುದು. ಸ್ವಚ್ಛವಾದ ಪರಿಸರ ಇಲ್ಲದಿದ್ದರೆ ಜೀವಿಸುವ ಸ್ವಾತಂತ್ರ್ಯವು ಪೂರ್ಣಪ್ರಮಾಣ ದಲ್ಲಿ ಸಾಕಾರಗೊಳ್ಳುವುದಿಲ್ಲ. ವಾಯುಮಾಲಿನ್ಯ, ತಾಪ ಮಾನ ಹೆಚ್ಚಳ, ಬರ, ಆಹಾರ ಪೂರೈಕೆಯಲ್ಲಿ ಕೊರತೆ, ಪ್ರವಾಹದಂತಹ ಪರಿಸ್ಥಿತಿಯಿಂದಾಗಿ ಆರೋಗ್ಯದ ಹಕ್ಕಿನ ಮೇಲೆ ಪರಿಣಾಮ ಉಂಟಾಗುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

'ಪ್ರತಿ ವ್ಯಕ್ತಿಯೂ ಸ್ವಚ್ಛವಾದ, ಸುರಕ್ಷಿತವಾದ ಹಾಗೂ ಆರೋಗ್ಯಕರ ಜೀವನಕ್ಕೆ ಪೂರಕವಾದ ಪರಿಸರದಲ್ಲಿ ಬದುಕು ಸಾಗಿಸುವ ಹಕ್ಕು ಹೊಂದಿದ್ದಾನೆ ಎಂಬ ತತ್ವವನ್ನು ಆರೋಗ್ಯಕರ ಪರಿಸರದ ಹಕ್ಕು ಒಳಗೊಳ್ಳುತ್ತದೆ. ಆರೋಗ್ಯಕರ ಪರಿಸರದ ಹಕ್ಕನ್ನು, ಹವಾಮಾನ ಬದಲಾವಣೆಯ ಕೆಟ್ಟ ಪರಿಣಾಮಗಳಿಂದ ಮುಕ್ತವಾಗಿರುವ ಹಕ್ಕನ್ನು ಗುರುತಿಸುವ ಮೂಲಕ ರಾಜ್ಯ ಸರ್ಕಾರಗಳು ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಬೇಕಾಗುತ್ತದೆ. ಆ ಮೂಲಕ ಅವು ಹವಾಮಾನ ಬದಲಾವಣೆಯ ಮೂಲ ಕಾರಣವನ್ನು ಸರಿಪಡಿಸಬೇಕಾಗುತ್ತದೆ' ಎಂದು ಪೀಠ ಹೇಳಿದೆ.

'ಅಂತರರಾಷ್ಟ್ರೀಯ ಕಾನೂನುಗಳ ಅಡಿಯಲ್ಲಿ ತನ್ನ ಮೇಲಿರುವ ಹೊಣೆಗಳನ್ನು ಭಾರತ ನಿರ್ವಹಿಸಬೇಕಾಗುತ್ತದೆ. ಹಸಿರುಮನೆ ಪರಿಣಾಮಕ್ಕೆ ಕಾರಣವಾಗುವ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸುವ, ಹವಾಮಾನ ಬಲಾವಣೆಗಳಿಗೆ ತಕ್ಕಂತೆ ಬದಲಾವಣೆಗಳನ್ನು ತಂದುಕೊಳ್ಳುವ ಹಾಗೂ ಆರೋಗ್ಯಕರ ಮತ್ತು ಸುಸ್ಥಿರ ಪರಿಸರದಲ್ಲಿ ಬದುಕುವ ಎಲ್ಲರ ಹಕ್ಕುಗಳನ್ನು ರಕ್ಷಿಸುವ ಕೆಲಸ ಮಾಡಬೇಕಾಗುತ್ತದೆ' ಎಂದು ಕೂಡ ಪೀಠ ವಿವರಿಸಿದೆ.

ಇಂಥ ಸಂಕೀರ್ಣ ವರ್ತಮಾನವನ್ನು ಜನಸಾಮಾನ್ಯರು, ಸರ್ಕಾರ, ವಾಣಿಜ್ಯ ಸಂಸ್ಥೆಗಳು, ಕಾರ್ಖಾನೆಗಳು, ಅಂತರರಾಷ್ಟ್ರೀಯ ಸಮುದಾಯ ಹಾಗೂ ಪರಿಸರ ಪ್ರೇಮಿ ಬಳಗಗಳು ಹೇಗೆ ನಿರ್ವಹಿಸುತ್ತವೆ ಎಂಬುದನ್ನು ಆಧರಿಸಿ ಮನುಷ್ಯಜೀವಿಯ ಭವಿಷ್ಯ ನಿರ್ಧರಿಸಲ್ಪಡುತ್ತದೆ.



ಚುರುಮುರಿ

ಕ್ರೂರ ಜಗತ್ತು!

● ಗುರು ಪಿ.ಎಸ್.

'ನಾನು ನಂಬಿದವರೇ ನನ್ನ ಬೆನ್ನಿಗೆ ಚೂರಿ ಹಾಕಿದರು' ಗೊಣಗತೊಡಗಿದ ಮುದ್ದಣ್ಣ.

'ಯಾಕೋ, ಏನಾಯ್ತು?' ಆತಂಕದಿಂದ ಕೇಳಿದ ಸ್ನೇಹಿತ ವಿಜಿ.

'ಎಲ್ಲವೂ ಅಂದುಕೊಂಡಂತೆ ಆಗಿದ್ದರೆ, ನಾನಿವತ್ತು ಎಮ್ಮೆಲ್ಲೆ ಆಗಿರ್ತಿದ್ದೆ'.

'ನೀನು ಮತದಾರರಿಗೆ 'ಎಲ್ಲ' ವ್ಯವಸ್ಥೆ ಮಾಡಿರಲಿಲ್ಲ ಅನಿಸುತ್ತೆ, ಅದಕ್ಕೇ ಸೋತಿದ್ದೀಯ'.

'ನನ್ನ ಕ್ಷೇತ್ರದಲ್ಲಿ ಒಂದೊಂದು ಕುಟುಂಬಕ್ಕೆ ಇಂತಿಷ್ಟು ಅಂತ ದುಡ್ಡು ಕೊಡೋಕೆ ನಿರ್ಧರಿಸಿ, ಆಪ್ತರ ಕೈಯಲ್ಲಿ ಕೊಟ್ಟು ಹಂಚೋಕೆ ಹೇಳಿದ್ದೆ'.

'ಹಾಗಿದ್ದರೆ ಗೆಲ್ಲಬೇಕಿತ್ತಲ್ಲ...'

'ಆ ದುಡ್ಡು ಜನರಿಗೆ ತಲುಪಿದ್ದರೆ ತಾನೆ?'

'ಮತ್ತೆ ಏನಾಯ್ತು?'

'ನಾನು ಹೇಗೆ ಸಂಪಾದನೆ ಮಾಡಿದ್ದೆನೋ ಅದು ಹಾಗೇ ಸೋರಿಹೋಯಿತು. ಸೋಲು ನನ್ನದಾಯಿತು' ತಲೆ ಮೇಲೆ ಕೈ ಹೊತ್ತ ಮುದ್ದಣ್ಣ.

'ದುಡ್ಡು ತೆಗೆದುಕೊಂಡೋರಿಗಾದರೂ ಉಪಕಾರ ಸ್ಮರಣೆ ಇರಬೇಡ್ವಾ? ಕ್ರೂರ ಜಗತ್ತು ಮುದ್ದಣ್ಣ ಇದು' ಗಾಯದ ಮೇಲೆ ಉಪ್ಪು ಸವರುವ ಮಾತನಾಡಿದ ವಿಜಿ.

'ನಾನು ಸೋಲು ಒಪ್ಪಿಕೊಳ್ಳುವುದಿಲ್ಲ. ಫೀನಿಕ್ಸ್‌ನಂತೆ ಮತ್ತೆ ಎದ್ದು ಬರ್ತೀನಿ. ಲೋಕಸಭಾ ಎಲೆಕ್ಷನ್‌ಗೆ ನಿಲ್ತೀನಿ ಮತ್ತು ಈ ಹಿಂದೆ ಮಾಡಿದ ತಪ್ಪನ್ನು ಮಾಡಲ್ಲ' .

'ಅಂದ್ರೆ, ಈ ಬಾರಿ ದುಡ್ಡು ಹಂಚಲ್ವಾ?'

'ಹಂಚುತ್ತೇನೆ. ಆದ್ರೆ, ನನ್ನ ಆಪ್ತರ ಕೈಗೆ ದುಡ್ಡು ಕೊಡಲ್ಲ. ನೇರವಾಗಿ ಮತದಾರರ ಕೈಗೆ ಹಣ ಸಿಗುವ ಹಾಗೆ ಮಾಡ್ತೀನಿ. ನನ್ನ ಕ್ಷೇತ್ರದ ಒಂದೊಂದು ಏರಿಯಾದ ಪ್ರಮುಖ ಮನೆಯಲ್ಲಿ ಒಂದೊಂದು ಫಂಕ್ಷನ್ ಮಾಡಿಸ್ತೀನಿ. ಅದಕ್ಕೆಲ್ಲ ನಾನೇ ದುಡ್ಡು ಕೊಡ್ತೀನಿ. ಬರ್ತ್‌ಡೇ, ಮದುವೆ, ಮುಂಜಿ, ನಾಮಕರಣ ಹೀಗೆ, ಆ ಫಂಕ್ಷನ್‌ಗೆ ಹೋದವರಿಗೆ ಆ ಮನೆಯವರೇ ಗಿಫ್ಟ್ ಕೊಡೋ ರೀತಿ ವ್ಯವಸ್ಥೆ ಮಾಡ್ತೀನಿ'.

'ಗುಡ್ ಐಡಿಯಾ. ಆದರೆ, ಗಿಫ್ಟ್ ತಗೊಂಡ ನಂತರವೂ ಜನ ನಿನಗೆ ವೋಟ್ ಹಾಕದಿದ್ರೆ?'

'ಏನ್ ಮಾಡೋದು, ಇದು ಕ್ರೂರ ಜಗತ್ತು ಎಂದುಕೊಂಡು ಸುಮ್ಮನಾಗೋದು' ಎನ್ನುತ್ತಾ ಆಕಾಶ ನೋಡತೊಡಗಿದ ಮುದ್ದಣ್ಣ.

ದಿನದ ಟ್ವೀಟ್

ಅನುಮತಿ ಇದೆಯೇ?

ನಿಗದಿತ ರ‍್ಯಾಂಕ್‌ಗಿಂತ ಮೇಲಿನ ಅಧಿಕಾರಿಗಳಿಗಷ್ಟೇ ಇಂಥದ್ದಕ್ಕೆ ಅನುಮತಿ ನೀಡಲಾಗುವುದೇ? ಗುಮಾಸ್ತ ದರ್ಜೆಯ ಸರ್ಕಾರಿ ಉದ್ಯೋಗಿಗೂ ಇಂತಹುದಕ್ಕೆ ಅವಕಾಶ ಇದೆಯೇ? ವೇತನ ಮತ್ತು ಇತರ ಆಡಳಿತಾತ್ಮಕ ಸವಲತ್ತುಗಳ ಹೊರತಾಗಿ ಉನ್ನತ ಮಟ್ಟದ ಅಧಿಕಾರಿಗಳು ಈ ಬಗೆಯ ಸೌಲಭ್ಯವನ್ನೂ ಅನುಭವಿಸುವರೇ?

(ಮಹಿಳಾ ಐಎಎಸ್ ಅಧಿಕಾರಿಯೊಬ್ಬರು, ಶಾಲೆಗೆ ರಜೆ ಇರುವ ಕಾರಣಕ್ಕೆ ತಮ್ಮ ಪುತ್ರನನ್ನು ಕಚೇರಿಗೆ ಕರೆತಂದು, ಆತ ತಮ್ಮ ಕಾರ್ಯನಿರ್ವಹಣೆಯ ಮೇಜಿನ ಮೇಲೆ ನೃತ್ಯ ಮಾಡುತ್ತಿರುವ ವಿಡಿಯೊ ದೃಶ್ಯವನ್ನು ಎಕ್ಸ್ ವೇದಿಕೆಯಲ್ಲಿ ಹಂಚಿಕೊಂಡಿರುವುದಕ್ಕೆ ಪ್ರತಿಕ್ರಿಯೆ)

ಭಗತ್ ಭೀಮ್

ಕಿಡಿನುಡಿ

ತಮ್ಮ ವಸಾಹತುಗಳಲ್ಲಿ ವಾಸಿಸುತ್ತಿದ್ದವರು ಏನನ್ನು ತಿನ್ನಬೇಕು ಎಂಬುದನ್ನು ಹೇಳುವ ಕೆಲಸವನ್ನು ದುಷ್ಟ ಪೀಡಕರು ಸಹ ಮಾಡಿರಲಿಲ್ಲ. ಮನು ಹಾಗೆ ಮಾಡಿದ್ದ.

(ವಿರೋಧ ಪಕ್ಷಗಳ ನಾಯಕರು ಶ್ರಾವಣ ಮಾಸದಲ್ಲಿ ಮಾಂಸಾಹಾರ ಸೇವಿಸುತ್ತಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಟೀಕಿಸಿರುವುದಕ್ಕೆ ಪ್ರತಿಕ್ರಿಯೆ)

ತಾರಾ ಕೃಷ್ಣಸ್ವಾಮಿ, ಸಹಸಂಸ್ಥಾಪಕಿ, 'ಪೊಲಿಟಿಕಲ್ ಶಕ್ತಿ' ಆಂದೋಲನ

25 ವರ್ಷಗಳ ಹಿಂದೆ

ಮಂಗಳವಾರ, 13-4-1999

● **ಸರ್ಕಾರಕ್ಕೆ ಬೆಂಬಲ ವಾಪಸು ಖಚಿತ: ಜಯಾ ಘೋಷಣೆ**

ನವದೆಹಲಿ, ಏ. 12 (ಯುಎನ್‌ಐ, ಪಿಟಿಐ)– ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ವಾಪಸು ಪಡೆಯುವುದು ಅನಿವಾರ್ಯ ಎಂದು ಎಐಎಡಿಎಂಕೆ ಮುಖ್ಯಸ್ಥೆ ಜಯಲಲಿತಾ ಅವರು ಇಂದು ಪ್ರಕಟಿಸುವುದರೊಂದಿಗೆ 14 ತಿಂಗಳ ಪ್ರಧಾನಿ ವಾಜಪೇಯಿ ನೇತೃತ್ವದ ಸರ್ಕಾರ ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ.

15ರಿಂದ ಪುನರಾರಂಭವಾಗುವ ಸಂಸತ್ತಿನ ಅಧಿವೇಶನದಲ್ಲಿ ಸರ್ಕಾರ ಬಲಾಬಲ ಪ್ರದರ್ಶಿಸುವುದು ಅನಿವಾರ್ಯವಾಗಿದೆ. ಈ ಮಧ್ಯೆ ಓಂಪ್ರಕಾಶ್ ಚೌತಾಲ ಅವರ ಭಾರತೀಯ ರಾಷ್ಟ್ರೀಯ ಲೋಕದಳದ ಬೆಂಬಲವನ್ನು ಗಳಿಸಲು ಬಿಜೆಪಿ ವಿಫಲವಾಗಿದೆ.

● **ಬಡ್ತಿ ಮೀಸಲಾತಿ: ಹೆಚ್ಚುವರಿ ಹುದ್ದೆ ಸೃಷ್ಟಿಸಲು ನಿರ್ಧಾರ**

ಬೆಂಗಳೂರು, ಏ. 12– ಬಡ್ತಿಯಲ್ಲಿ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದಂತೆ ಕಳೆದ ಫೆ. 3ರಂದು ಹೊರಡಿಸಿದ್ದ ಸರ್ಕಾರಿ ಆಜ್ಞೆಗೆ ಕೆಲವು ಮಾರ್ಪಾಡುಗಳನ್ನು ಮಾಡಲು ಹಾಗೂ 1978ರಿಂದ ಭರ್ತಿ ಮಾಡದಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ನಿಗದಿಪಡಿಸಲಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಹೆಚ್ಚುವರಿ ಹುದ್ದೆಗಳನ್ನು ಸೃಷ್ಟಿಸಲು ಇಂದು ನಡೆದ ಸಚಿವ ಸಂಪುಟ ಸಭೆ ನಿರ್ಧರಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 13-4-1974

● **ಕರ್ನಾಟಕಕ್ಕೆ ಬರಲು ಹೊರ ಉದ್ಯಮಿಗಳಿಗೆ ಅರಸು ಕರೆ**

ಸಿರುಗುಪ್ಪ, ಏ. 12– ಹೊರರಾಜ್ಯದ ಉದ್ಯಮಿಗಳು ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಮುಖ್ಯಮಂತ್ರಿ ಅರಸು ಅವರು ಇಂದು ಆಹ್ವಾನ ನೀಡಿದರು.

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಬಳಿಯ ದೇಶನೂರಿನಲ್ಲಿ ಕೊಠಾರಿ ಸಕ್ಕರೆ ಕಾರ್ಖಾನೆಯ ಉದ್ಘಾಟನೆಯನ್ನು ವಿಧ್ಯುಕ್ತವಾಗಿ ಅವರು ಇಂದು ನೆರವೇರಿಸಿದರು.

ಉತ್ತರ ಕರ್ನಾಟಕದಲ್ಲಿ ಹತ್ತಿ, ಕಬ್ಬು ಮತ್ತು ಎಣ್ಣೆ ಬೀಜಗಳ ಕೃಷಿ ಸುಧಾರಿಸಿರುವುದರಿಂದ ವ್ಯವಸಾಯ ಉತ್ಪನ್ನ ಪ್ರಧಾನ ಕೈಗಾರಿಕೆಗಳಿಗೆ ವಿಪುಲ ಅವಕಾಶ ಇದೆ ಎಂದು ಅವರು ಹೇಳಿದರು.

'ಉದ್ಯಮಗಳನ್ನು ಸ್ಥಾಪಿಸಲು ಇಲ್ಲಿಗೆ ಬಂದ ಮೇಲೆ ನಮ್ಮವರಿಗೇ ಬಹುಪಾಲು ಉದ್ಯೋಗಗಳನ್ನು ಕೊಡಿ' ಎಂದರು.

● **ಡೀಸೆಲ್ ಉಳಿಸುವ ಕ್ರಮ: ದೂರ ಪ್ರಯಾಣದ ಬಸ್‌ಗಳು ಬೇಡ ರಾಜ್ಯಗಳಿಗೆ ಕೇಂದ್ರದ ಸಲಹೆ**

ನವದೆಹಲಿ, ಏ. 12– ಇನ್ನು ಮುಂದೆ ದೂರ ಪ್ರಯಾಣದ ಬಸ್ ಮಾರ್ಗಗಳಿಗೆ ಅನುಮತಿ ನೀಡಬಾರದೆಂದೂ ಸಾಧ್ಯವಾದ ಕಡೆಗಳಲ್ಲಿ ಈಗಿರುವ ದೂರ ಪ್ರಯಾಣದ ಬಸ್ ಸಂಚಾರ ನಿಲ್ಲಿಸಬೇಕೆಂದೂ ರಸ್ತೆ ಸಾರಿಗೆ ಮತ್ತು ನೌಕಾ ಸಾರಿಗೆ ಸಚಿವ ಖಾತೆ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಿದೆ.

ಹೆದ್ದಾರಿಗಳಲ್ಲದ ಸಣ್ಣ ಉಪ ರಸ್ತೆಗಳಲ್ಲಿ ಸಂಚರಿಸುವ ಬಸ್ಸುಗಳ ಸಂಖ್ಯೆ ಕಡಿಮೆ ಮಾಡಬೇಕೆಂದೂ ರಾಜ್ಯಗಳಿಗೆ ತಿಳಿಸಲಾಗಿದೆ.

ಇಂಥ ಕ್ರಮಗಳಿಂದ ಡೀಸೆಲ್ ಎಣ್ಣೆ ಬಳಕೆಯನ್ನು ಕಡಿಮೆ ಮಾಡಲು ಹಾಗೂ ರಾಜ್ಯದ ಮುಖ್ಯ ಪಟ್ಟಣಗಳಲ್ಲಿ ಉಪಯೋಗಕ್ಕಾಗಿ ಹೆಚ್ಚುವರಿ ಬಸ್ಸುಗಳನ್ನು ಓಡಿಸಲು ನೆರವಾಗುವುದೆಂದು ಸಚಿವ ಖಾತೆ ತಿಳಿಸಿದೆ.

ಸಂಗತ

ಬಿಸಿಯೂಟಕ್ಕೆ ಬೇಕು ತಾಯಿ ಮಮತೆ!

ತರತಮಗಳಿರುವ ಸಮಾಜದಲ್ಲಿ ಬಡ ಮಕ್ಕಳ ಪರವಾಗಿ ಸರ್ಕಾರ ಗಟ್ಟಿಯಾಗಿ ನಿಲ್ಲಬೇಕಾಗುತ್ತದೆ

● ಮಲ್ಲಿಕಾರ್ಜುನ ಹೆಗ್ಗಳಗಿ

ರಾಜ್ಯದಲ್ಲಿ ತೀವ್ರ ಬರ ಆವರಿಸಿರುವುದರಿಂದ ಪ್ರಸಕ್ತ ಬೇಸಿಗೆ ರಜೆಯ ವೇಳೆ, 223 ಬರಪೀಡಿತ ತಾಲ್ಲೂಕುಗಳಲ್ಲಿರುವ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಇದೇ 11ರಿಂದ ಮೇ 28ರವರೆಗೆ, ಭಾನುವಾರ ಹೊರತುಪಡಿಸಿ ಉಳಿದೆಲ್ಲ ದಿನಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಪೂರೈಸಲು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಬಿಸಿಯೂಟದ ಜೊತೆಗೆ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಹಾಡು, ನೃತ್ಯ, ನಾಟಕದಂತಹ ಪಠ್ಯೇತರ ಚಟುವಟಿಕೆಗಳನ್ನೂ ಆಯೋಜಿಸಬೇಕೆಂದು ಇಲಾಖೆ ಸೂಚಿಸಿರುವುದು ಸೂಕ್ತವಾಗಿದೆ. ಆದರೆ ಕೆಲವು ಶಿಕ್ಷಕರು ಮತ್ತು ಆಡಳಿತ ಮಂಡಳಿಯವರು ಬೇಸಿಗೆ ರಜೆಯ ದಿನಗಳಲ್ಲಿ ಬಿಸಿಯೂಟ ಯೋಜನೆ ಆರಂಭಿಸಿರುವ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿರುವುದು ನೋವಿನ ಸಂಗತಿ. ಇವರಿಗೆ ಬಡ ವಿದ್ಯಾರ್ಥಿಗಳ ನೋವು, ಸಂಕಟ, ಸಾಮಾಜಿಕ ನ್ಯಾಯದ ಪರಿಕಲ್ಪನೆ ಗೊತ್ತಿಲ್ಲ ಎಂದು ಅನ್ನಿಸುತ್ತದೆ.

ಅಕ್ಷಯ ಪಾತ್ರ ಫೌಂಡೇಷನ್ 400 ಕೋಟಿ ಊಟಗಳನ್ನು ನೀಡಿರುವ ಸಾಧನೆಯ ಅಂಗವಾಗಿ, ವಿಶ್ವಸಂಸ್ಥೆಯಲ್ಲಿನ ಭಾರತದ ನಿಯೋಗವೊಂದು 'ಆಹಾರ ಭದ್ರತೆಯಲ್ಲಿನ ಸಾಧನೆಗಳು: ಸುಸ್ಥಿರ ಅಭಿವೃದ್ಧಿ ಗುರಿಗಳತ್ತ ಭಾರತದ ದಾಪುಗಾಲು' ವಿಷಯದ ಕುರಿತು ಇತ್ತೀಚೆಗೆ ಕಾರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. ಈ ಸಂದರ್ಭದಲ್ಲಿ ಭಾಷಣ ಮಾಡಿದ ಇನ್ಫೊಸಿಸ್ ಸಂಸ್ಥೆಯ ಸಹಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಅವರು ನೀಡಿದ ಎಚ್ಚರಿಕೆಯ ಮಾತುಗಳು ಲೋಕದ ಕಣ್ಣು ತೆರೆಸುವಂತಿವೆ.

ಭಾಷಣದ ಸಂಕ್ಷಿಪ್ತ ರೂಪ ಇಷ್ಟು: 'ಆ ಪಟ್ಟಣದ ಹೆಸರು ನಿಶ್. ಬಲ್ಗೇರಿಯಾ ಹಾಗೂ ಸರ್ಬಿಯಾದ ಗಡಿ ಭಾಗದಲ್ಲಿದೆ. ನಾನು ಐವತ್ತು ವರ್ಷಗಳ ಹಿಂದೆ ಅಲ್ಲಿದ್ದೆ. ಅಲ್ಲಿನ ರಸ್ತೆಗಳಲ್ಲಿ ಅಪರಿಚಿತ ವಾಹನಗಳ ಸಹಾಯದಿಂದ ಪ್ರಯಾಣಿಸುತ್ತಿದ್ದಾಗ ಸತತ 120 ಗಂಟೆ ಕಾಲ ಹಸಿವಿನಿಂದ ಬಳಲಿದ್ದೆ. ನನಗೆ ಹಸಿವಿನ ನರಕದ ದರ್ಶನವಾಯಿತು. ಬಡ ಮಕ್ಕಳು ಸಮಾಜದ ಮೇಲೆ ನಂಬಿಕೆ ಹಾಗೂ ನಿರೀಕ್ಷೆ ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕು. ಅವರೆಲ್ಲರೂ ಗುಣಮಟ್ಟದ ಶಿಕ್ಷಣ ಪಡೆಯಲು ನಾವು ಸಹಾಯಹಸ್ತ ಚಾಚಬೇಕು. ಒಂದು ವೇಳೆ ಅವರು ನಂಬಿಕೆ ಕಳೆದುಕೊಂಡರೆ ಸಮಾಜದಲ್ಲಿ ಸಂಘರ್ಷ ಸೃಷ್ಟಿಯಾಗುತ್ತದೆ'.

ಓದುವ ಮಕ್ಕಳಿಗೆ ಬರಗಾಲದ ಕಾರಣಕ್ಕೆ ಮಾತ್ರ ಅಲ್ಲ, ವರ್ಷದ ಎಲ್ಲ ದಿನಗಳಲ್ಲಿಯೂ ಉಪಾಹಾರ, ಊಟದ ಗ್ಯಾರಂಟಿ ಇರುವುದು ತೀರ ಅವಶ್ಯವಾಗಿದೆ. ಅನೇಕ ಮಕ್ಕಳಿಗೆ ನಿಶ್ಚಿತ ಉಪಾಹಾರ, ಊಟದ ವ್ಯವಸ್ಥೆ ಇರುವುದಿಲ್ಲ. ಬಡತನ, ಕೌಟುಂಬಿಕ ಕಲಹ, ತಂದೆ ಅಥವಾ ತಾಯಿಯ ಅಕಾಲಿಕ ಸಾವು, ಕುಟುಂಬದ ಒಳಗಿನ ಮತ್ಸರ ಮಕ್ಕಳನ್ನು ಬಹಳ ಕಾಡುತ್ತವೆ. ಬಾಲ್ಯ ಅನೇಕ ಮಕ್ಕಳಿಗೆ ಸಂಭ್ರಮವಾಗಿರುವುದಿಲ್ಲ. ಅವರಿಗೆ ಪ್ರತಿಭಟಿಸುವ, ನೋವನ್ನು ಬಿಚ್ಚಿ ಹೇಳುವ ಧೈರ್ಯ ಇರುವುದಿಲ್ಲ. ಅವರು ಒಳಗೇ ಕೊರಗುತ್ತಾರೆ. ಅದು ಹಿಂಸೆಯಾಗಿ, ಮಾನಸಿಕ ತೊಡಕಾಗಿ, ಕೀಳರಿಮೆಯಾಗಿ ಬೆಳೆಯುತ್ತದೆ. ಇನ್ನು ಕೆಲವು ಮಕ್ಕಳು ರಜೆಯ ದಿನಗಳಲ್ಲಿ ಊಟ, ಉಪಾಹಾರಕ್ಕಾಗಿ ಹೋಟೆಲ್, ಬಾರ್‌ನಂತಹ ಕಡೆ ಕೆಲಸ ಮಾಡುತ್ತಾರೆ. ಅಲ್ಲಿ ಅವರು ಅನುಭವಿಸುವ ಹಿಂಸೆ ಅಷ್ಟಿಷ್ಟಲ್ಲ.

ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಊಟ, ಉಪಾಹಾರ, ಒಳ್ಳೆಯ ಬಟ್ಟೆ, ಸರಿಯಾದ ವಸತಿ ವ್ಯವಸ್ಥೆ ದೊರಕಬೇಕು. ಇದನ್ನು ಸರ್ಕಾರ ಒಂದು ಗ್ಯಾರಂಟಿಯಾಗಿ ಪ್ರಕಟಿಸಬೇಕು. ತರತಮಗಳಿರುವ ಸಮಾಜದಲ್ಲಿ ಬಡ ಮಕ್ಕಳ ಪರವಾಗಿ ಸರ್ಕಾರ ಗಟ್ಟಿಯಾಗಿ ನಿಲ್ಲಬೇಕಾಗುತ್ತದೆ.

ಹಾಸ್ಟೆಲ್ ವ್ಯವಸ್ಥೆ ಇಲ್ಲದ ಕಾರಣಕ್ಕೆ ಕಾಲೇಜು ಮತ್ತು ಸ್ನಾತಕೋತ್ತರ ಪದವಿಯ ವ್ಯಾಸಂಗಕ್ಕೆ ಬಡ ವಿದ್ಯಾರ್ಥಿಗಳು ಹೆಚ್ಚಾಗಿ ಬರುತ್ತಿಲ್ಲ ಎಂಬ ಮಾತು ಕೇಳಿಬರುತ್ತಿದೆ. ಭವನಗಳನ್ನು, ಸಮಾಜ ಮಂದಿರಗಳನ್ನು, ಕಲಾಕೇಂದ್ರಗಳನ್ನು ಸರ್ಕಾರ ಎಲ್ಲಾ ನಗರ, ಪಟ್ಟಣಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಕಟ್ಟಿದೆ. ಇವುಗಳಲ್ಲಿ ಅನೇಕ ಕಟ್ಟಡಗಳು ಉದ್ಘಾಟನೆಯ ನಂತರ ಬಾಗಿಲು ತೆರೆದಿಲ್ಲ. ಇಂಥವುಗಳನ್ನು ಗುರುತಿಸಿ ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಬೇಕು.

ಅನೇಕ ಪಾಲಕರು ಬರದ ಕಾರಣಕ್ಕೆ ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶದಂತಹ ರಾಜ್ಯಗಳಿಗೆ ಗುಳೆ ಹೋಗಿದ್ದಾರೆ. ಮಕ್ಕಳು ಊಟ ಇಲ್ಲ ಎನ್ನುವ ಕಾರಣಕ್ಕೆ ಪಾಲಕರ ಜೊತೆಯಲ್ಲಿ ಹೋಗಿ ಕೂಲಿ ಕೆಲಸದಲ್ಲಿ ತೊಡಗುತ್ತಾರೆ. ನಂತರ ಅವರು ಶಾಲೆಗೆ ವಾಪಸ್ ಬರುವುದೇ ಅನುಮಾನ.

ಸಂಪತ್ತು ಮತ್ತು ಅನುಕೂಲಗಳು ಕೆಲವೇ ಜನರ ಪಾಲಾಗಿವೆ. ಉಳ್ಳವರು ಹಾಗೂ ಬಡವರ ನಡುವಿನ ಅಂತರ ಹೆಚ್ಚಾಗಿದೆ. ಬಹಳಷ್ಟು ಕುಟುಂಬಗಳು ಸರ್ಕಾರಿ ಸೌಲಭ್ಯಗಳನ್ನು ನೆಚ್ಚಿಕೊಂಡು ಬದುಕುತ್ತಿವೆ. ವಿದ್ಯಾರ್ಥಿಗಳಿಗೆ ಕೊಡುವ ಬಿಸಿಯೂಟವು ಬಸವಾದಿ ಶರಣರ ದಾಸೋಹ ಪರಿಕಲ್ಪನೆಯನ್ನು ಒಳಗೊಂಡಿದೆ. ಬಿಸಿಯೂಟದ ಸೌಲಭ್ಯದಿಂದ ಶಾಲೆಗೆ ಬರುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಎಂದು ಅಧ್ಯಯನ ವರದಿಗಳು ಹೇಳಿರುವುದನ್ನು ಗಮನಿಸಬಹುದು.

ಕೆಲವು ಶಿಕ್ಷಕರು ಮತ್ತು ಪಾಲಕರು ಶಾಲೆಯಲ್ಲಿ ಪಾಠ ಮಾಡುವುದೇ ಮುಖ್ಯ ಎಂದು ಭಾವಿಸಿದ್ದಾರೆ. ಮಗುವಿನ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗುವಂತೆ ಸೌಲಭ್ಯ ಕಲ್ಪಿಸುವುದು ಕೂಡ ಶಿಕ್ಷಣದ ಭಾಗವೇ ಆಗಿದೆ.

ನಮ್ಮ ಮೊಮ್ಮಗ ಭಾನುವಾರ ಸ್ನಾನ ಮಾಡುವುದಿಲ್ಲ ಎಂದು ಹಟ ಹಿಡಿದು ಕುಳಿತ. ಸ್ನಾನ ಮಾಡದಿದ್ದರೆ ಉಪಾಹಾರ ಇಲ್ಲ ಎಂದು ಅವನ ತಾಯಿ ಹೇಳಿದಳು. ಉಪಾಹಾರ ಇಲ್ಲದೆ ಆಟ ಆಡಲು ಹೊರಟದ್ದನ್ನು ಗಮನಿಸಿದ ಅವನ ತಾಯಿ ತಕ್ಷಣ ಉಪಾಹಾರದ ತಟ್ಟೆ ತಂದು ಮುಂದಿಟ್ಟು, ಗಲ್ಲ ತಟ್ಟಿ, ಆಟ ಆಡಿ ಬಂದು ಸ್ನಾನ ಮಾಡು ಎಂದಳು. ಎಲ್ಲ ವಿದ್ಯಾರ್ಥಿಗಳ ಊಟ, ಉಪಾಹಾರದ ಗ್ಯಾರಂಟಿಗೆ ಸರ್ಕಾರ ಮತ್ತು ಸಮಾಜ ತಾಯಿಯ ಮಮತೆ ತೋರಬೇಕು.

ವಾಚಕರ ವಾಣಿ

ಹೆದ್ದಾರಿಗೆ ಬೇಕು ಸಾಲುಮರ

ದೇಶದಾದ್ಯಂತ ಹಲವಾರು ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸುವ ಮೂಲಕ ಅಭಿವೃದ್ಧಿ ಪಥದಲ್ಲಿ ಮುನ್ನಡೆಯುತ್ತಿರುವುದು ಸಂತಸದ ವಿಚಾರ. ಆದರೆ ಈ ಕಾಮಗಾರಿಗಳಿಂದಾಗಿ ಮರಗಳ ಮಾರಣಹೋಮ ನಡೆಯುತ್ತಿದೆ. ಇದನ್ನುತಪ್ಪಿಸಿ ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳುವ ಪ್ರಯತ್ನ ಮಾಡಬೇಕಾಗಿದೆ. ಹೆದ್ದಾರಿಯ ಸರ್ವೆ ಕಾರ್ಯ ಮಾಡುವಾಗಲೇ ಸಾಲುಮರಗಳನ್ನು ನೆಡಲು ಬೇಕಾದ ಜಾಗವನ್ನು ಸಹ ಸೇರಿಸಿಕೊಳ್ಳಬೇಕು. ಸಾಲುಮರಗಳಾಗಿ ಬೆಳೆಯಬಲ್ಲ ಸಸ್ಯಗಳನ್ನು ಮೊದಲಿಗೇ ಅಲ್ಲಿ ನೆಟ್ಟು ಪೋಷಿಸಬೇಕು. ಅಂದರೆ, ಹಲಸು, ಮಾವು, ದೂಪದಂತಹ ನಿತ್ಯಹರಿದ್ವರ್ಣದ ಸಸ್ಯಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಹೆದ್ದಾರಿ ಕಾಮಗಾರಿ ನಡೆಯುತ್ತಿರುವಾಗ ಆ ಸಸ್ಯಗಳ ಸಂರಕ್ಷಣೆಯನ್ನು ಹೆದ್ದಾರಿ ಕೆಲಸ ನಿರ್ವಹಿಸುವ ಕಂಪನಿಯೇ ಮಾಡಬೇಕು. ಹೀಗೆ ಹೆದ್ದಾರಿ ಯೋಜನೆಗಳಲ್ಲಿ ಸೂಕ್ತ ಬದಲಾವಣೆ ತಂದು ಸಸ್ಯ ಸಂಪತ್ತನ್ನು ಹೆಚ್ಚಿಸಬೇಕು.

ಇಂತಹ ಯೋಜನೆಯು ನಮ್ಮ ಮುಂದಿನ ಪೀಳಿಗೆಯೂ ಸೇರಿದಂತೆ ಹಲವಾರು ಪಶುಪಕ್ಷಿಗಳಿಗೆ ಆಶ್ರಯ ತಾಣವಾಗಿ ಹೆದ್ದಾರಿಗಳ ಸೊಬಗನ್ನು ಸದಾ ನೂರ್ಮಡಿಗೊಳಿಸುತ್ತದೆ.

ಡಿ.ಜಿ.ಮಂಜುನಾಥ್, ತೀರ್ಥಹಳ್ಳಿ

ನೀವು ಯಾರಿಗೆ ವೋಟ್ ಹಾಕ್ತೀರಿ?!

ಭಾರತದಲ್ಲಿ ಗುಪ್ತ ಮತದಾನದ ಪದ್ಧತಿ ಇದೆ. ಯಾವ ಮತದಾರ ಯಾರಿಗೆ ಮತ ನೀಡಿದ್ದಾನೆ ಎಂಬ ಮಾಹಿತಿಯನ್ನು ಬಹಿರಂಗಪಡಿಸುವಂತಿಲ್ಲ. ಆದರೆ ನಮ್ಮ ಬಹುತೇಕ ಸುದ್ದಿವಾಹಿನಿಗಳಿಗೆ ಈ ವಿಚಾರ ತಿಳಿದಂತಿಲ್ಲ. 'ನೀವು ಯಾರಿಗೆ ವೋಟ್ ಹಾಕ್ತೀರಿ?' 'ನಿಮ್ಮ ವೋಟ್ ಯಾವ ಪಕ್ಷಕ್ಕೆ?' ಎಂಬಂಥ ಪ್ರಶ್ನೆಗಳನ್ನು ಕೇಳುತ್ತಾ ಸುದ್ದಿವಾಹಿನಿಗಳು ಮತದಾರರ ಬಾಯಿಗೆ ಮೈಕ್ ಹಿಡಿಯುತ್ತವೆ. ಆತ ಯಾವ ಪಕ್ಷಕ್ಕೆ ಮತ ಚಲಾಯಿಸಿದ್ದಾನೆ ಎಂಬ ಮಾಹಿತಿ ಜಗಜ್ಜಾಹೀರಾದಾಗ, ಊರಿನಲ್ಲಿ ಇತರ ಪಕ್ಷದವರು ಅವನ ವಿರುದ್ಧ ಸೇಡು ತೀರಿಸಿಕೊಳ್ಳಲು ಕತ್ತಿ ಮಸೆದರೆ ಆತನನ್ನು ಕಾಪಾಡುವವರಾರು? ಇಂತಹ ವಿಡಿಯೊ ತುಣುಕುಗಳು ಹೊಡೆದಾಟ, ಬಡಿದಾಟಕ್ಕೂ ಕಾರಣವಾಗಬಹುದು.

ಪಿ.ಜೆ.ರಾಘವೇಂದ್ರ, ಮೈಸೂರು

ಸ್ವಾಮೀಜಿಗಳೇಕೆ ಹೀಗೆ ಮಾಡಬಾರದು...?

ಸಾಮೂಹಿಕ ವಿವಾಹ ಸಮಾರಂಭವೊಂದರಲ್ಲಿ ಆಶೀರ್ವಚನ ನೀಡಿರುವ ವಿಜಯಪುರ ತಾಲ್ಲೂಕಿನ ಶಿರಶ್ಯಾಡದ ಅಭಿನವ ಮುರುಗೇಂದ್ರ ಶಿವಾಚಾರ್ಯ ಸ್ವಾಮೀಜಿ, ದೇಶಕ್ಕೊಬ್ಬ, ಪರಿವಾರಕ್ಕೊಬ್ಬ, ಧರ್ಮಕ್ಕೊಬ್ಬ ಮತ್ತು ಸಮಾಜಕ್ಕೊಬ್ಬ ಹೀಗೆ ಪ್ರತಿ ಮಾತೆಯೂ ನಾಲ್ವರು ಮಕ್ಕಳಿಗೆ ಜನ್ಮ ನೀಡಬೇಕೆಂದು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 12). ಹಸಿವು, ಬಡತನ, ಅಪೌಷ್ಟಿಕತೆ, ನಿರುದ್ಯೋಗ ತುಂಬಿರುವ ಈ ಸಮಾಜಕ್ಕೆ ಸ್ವಾಮೀಜಿ ಈ ರೀತಿಯಲ್ಲಿ ಆಶೀರ್ವಾದ ಮಾಡುವುದು ಎಷ್ಟು ಸರಿ? ಇದಕ್ಕೆ ಬದಲಾಗಿ, ಇಂತಹ ಅಭಿಪ್ರಾಯವನ್ನು ಹೊಂದಿರುವ ದೇಶದ ಎಲ್ಲ ಸ್ವಾಮಿಗಳೂ ಒಟ್ಟುಗೂಡಿ, ಒಂದು ಕಠಿಣ ತೀರ್ಮಾನಕ್ಕೆ ಬಂದು, ಮಠ ಬಿಟ್ಟು ಸಂಸಾರಸ್ಥರಾಗುವ ಮೂಲಕ ದೇಶಕ್ಕಾಗಿ ಮಕ್ಕಳನ್ನು ಹಡೆಯುವ ಕಾರ್ಯದಲ್ಲಿ ಏಕೆ ತೊಡಗಬಾರದು?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಶಬ್ದಮಾಲಿನ್ಯ: ಗಂಭೀರವಾಗಿ ಪರಿಗಣಿಸಿ

ದೇವಸ್ಥಾನದ ಧ್ವನಿವರ್ಧಕದ ಸದ್ದು ಕಡಿಮೆ ಮಾಡುವಂತೆ ಹೇಳಿದ್ದಕ್ಕೆ ದಲಿತಪರ ಹೋರಾಟಗಾರ, ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರ ಮೇಲೆ ಹಲ್ಲೆ ಮಾಡಿದ ವರದಿ (ಪ್ರ.ವಾ., ಏ. 12) ಓದಿ ಮನಸ್ಸಿಗೆ ತುಂಬಾ ನೋವಾಯಿತು. ರೈತರು ಇತ್ತೀಚೆಗೆ ಟ್ರ್ಯಾಕ್ಟರ್‌ಗಳಲ್ಲಿ ಧ್ವನಿವರ್ಧಕ ಅಳವಡಿಸಿ ಊರಿನ ಬೀದಿಗಳಲ್ಲಿ ಕರ್ಕಶ ಶಬ್ದ ಮಾಡುತ್ತಾ ಸಂಚರಿಸುವುದು ಹೆಚ್ಚಾಗುತ್ತಿದೆ. ಇದು ಸಹ ಶಬ್ದಮಾಲಿನ್ಯವೇ ಅಲ್ಲವೆ? ಅಷ್ಟೇ ಅಲ್ಲದೆ, ಹಲವಾರು ವ್ಯಾಪಾರಿಗಳು ಸಹ ಧ್ವನಿವರ್ಧಕ ಅಳವಡಿಸಿದ ವಾಹನಗಳ ಮೂಲಕ ರಸ್ತೆಯಲ್ಲಿಯೇ ವ್ಯಾಪಾರ ಮಾಡುತ್ತಿದ್ದಾರೆ. ಹೀಗಾಗಿ, ರಸ್ತೆಯಲ್ಲಿ ಸಾರ್ವಜನಿಕರು ಓಡಾಡುವುದೇ ಕಷ್ಟವಾಗುತ್ತಿದೆ. ಆದರೆ ಈ ಕಿರಿಕಿರಿಯನ್ನು ನಿಯಂತ್ರಣ ಮಾಡುವ ಕಾಯ್ದೆ ಕಾನೂನುಗಳೇ ನಮ್ಮಲ್ಲಿ ಇಲ್ಲದಂತಾಗಿದೆ.

ಶಬ್ದಮಾಲಿನ್ಯದಿಂದ ವಿದ್ಯಾರ್ಥಿಗಳ ಓದಿಗೆ, ಸಾರ್ವಜನಿಕರ ಓಡಾಟಕ್ಕೆ ತುಂಬಾ ತೊಂದರೆ ಆಗುತ್ತದೆ. ಆದ್ದರಿಂದ ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ವಾಹನಗಳಲ್ಲಿ ಧ್ವನಿವರ್ಧಕ ಬಳಕೆಯನ್ನು ನಿಷೇಧಿಸುವಂಥ ಕಾನೂನು ರೂಪಿಸಿ ರಸ್ತೆಯ ಸುರಕ್ಷತೆಯನ್ನು ಕಾಪಾಡಬೇಕು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಮತ ಚಲಾವಣೆಯಲ್ಲಿ ವಿವೇಚನೆ ಇರಲಿ

ಈ ಬಾರಿಯ ಲೋಕಸಭಾ ಚುನಾವಣೆಯು ಎಲ್ಲ ಚುನಾವಣೆಗಳಂತಲ್ಲ. ಇದು ಅತ್ಯಂತ ಬಿಕ್ಕಟ್ಟಿನ ಕಾಲದಲ್ಲಿ ನಡೆಯುತ್ತಿರುವ ಚುನಾವಣೆ. ಹಾಗೆಯೇ ಕೆಲವು ಮುಖ್ಯ ಸಂಗತಿಗಳನ್ನು ನಿರ್ಧರಿಸುವ ಚುನಾವಣೆಯೂ ಹೌದು. ಆದ್ದರಿಂದ ವಿವೇಚನೆಯಿಂದ ನಮ್ಮ ವೋಟನ್ನು ಚಲಾಯಿಸಬೇಕಾಗಿದೆ. ಸ್ವಾತಂತ್ರ್ಯ ಮತ್ತು ಸರ್ವಾಧಿಕಾರದ ನಡುವೆ ನಡೆಯುತ್ತಿರುವ, ಹಾಗೆಯೇ ಜಾತಿ, ಮತ, ಧರ್ಮನಿರಪೇಕ್ಷ ಮತ್ತು ಕೋಮುವಾದದ ನಡುವೆ ನಡೆಯುತ್ತಿರುವ ಚುನಾವಣೆಯೂ ಹೌದು. ನಮ್ಮ-ನಿಮ್ಮೆಲ್ಲರ ವೋಟು ಈ ದೇಶದ ಗತಿಯನ್ನು ಬದಲಿಸಬಲ್ಲದು. ನಮ್ಮ ಕಣ್ಮುಂದೆ ಇರುವ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸದೇ ಹೋದರೆ, ಕೋಮುಶಕ್ತಿಗಳು ವಿಜೃಂಭಿಸಿ ದೇಶ ದಿಕ್ಕು ತಪ್ಪುವ, ಬಿ.ಆರ್.ಅಂಬೇಡ್ಕರ್ ಅವರು ನೀಡಿರುವ ಸಂವಿಧಾನವು ಗಾಳಿಗೆ ತೂರಿಹೋಗುವ ಅಪಾಯ ಇದ್ದೇ ಇದೆ. ಆದ್ದರಿಂದ ನಾವೆಲ್ಲ ಗಂಭೀರವಾಗಿ ಚಿಂತಿಸಿ ಮತದಾನ ಮಾಡಬೇಕಾದದ್ದು ಅತ್ಯಗತ್ಯ. ವೋಟು ನಮ್ಮ ನಿಮ್ಮೆಲ್ಲರ ಪ್ರಬಲ ಆಯುಧ.

ನಿವೃತ್ತ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ, ನ.ರತ್ನ, ಪ್ರೊ. ಬಿ.ಎನ್.ಶ್ರೀರಾಮ, ದೇವನೂರ ಮಹಾದೇವ, ಹಿ.ಶಿ.ರಾಮಚಂದ್ರೇಗೌಡ, ಚ.ಸರ್ವಮಂಗಳ, ಜಿ.ಪಿ.ಬಸವರಾಜು, ಓ.ಎಲ್.ನಾಗಭೂಷಣಸ್ವಾಮಿ, ಅರವಿಂದ ಮಾಲಗತ್ತಿ, ಸಬಿಹಾ ಭೂಮಿಗೌಡ, ಸುಶೀ ಬಸವಲಿಂಗಯ್ಯ, ಪಂಡಿತಾರಾಧ್ಯ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಸಗೊಬ್ಬರ ಸಹಾಯಧನ ಇಳಿಕೆ ಮತ್ತು ಯೂರಿಯಾ ಬೆಲೆಯ ಸುತ್ತ

ದೇಶದ ಕೃಷಿಯ ಉತ್ಪಾದಕತೆಯನ್ನು ನಿರ್ಧರಿಸುವಲ್ಲಿ ಮುಂಗಾರು ಮಳೆಗೆ ಎಷ್ಟು ಮಹತ್ವವಿದೆಯೋ ರಸಗೊಬ್ಬರಗಳಿಗೂ ಅಷ್ಟೇ ಮಹತ್ವವಿದೆ. ರಸಗೊಬ್ಬರಗಳ ಬಳಕೆಯಿಂದಲೇ ಹಸಿರುಕ್ರಾಂತಿ ಸಾಧ್ಯವಾಯಿತು. ರಸಗೊಬ್ಬರಗಳ ಬಳಕೆ ಕಡಿಮೆ ಮಾಡಬೇಕು ಎಂಬ ಕೂಗು ಕೇಳುತ್ತಿದೆಯಾದರೂ, ಬಳಕೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಬೇಸಾಯದ ವೆಚ್ಚ ಮತ್ತು ರೈತರಿಗೆ ದೊರೆಯುವ ಲಾಭವನ್ನು ರಸಗೊಬ್ಬರಗಳ ಬೆಲೆ ನಿರ್ಧರಿಸುತ್ತದೆ. ಹೀಗಾಗಿಯೇ ರಸಗೊಬ್ಬರಗಳಿಗೆ ಈಗಲೂ ಕೃಷಿಯಲ್ಲಿ ಮಹತ್ವದ ಸ್ಥಾನವಿದೆ. ರಸಗೊಬ್ಬರಗಳ ಬಳಕೆಯಿಂದಾಗುವ ಹೊರೆ ರೈತನ ಮೇಲಾಗಬಾರದು ಎಂದು ಸಹಾಯಧನ ನೀಡುವ ಯೋಜನೆ ಜಾರಿಗೆ ತರಲಾಗಿತ್ತು. ಆದರೆ ಈಗಿನ ಕೇಂದ್ರ ಸರ್ಕಾರವು ರಸಗೊಬ್ಬರಗಳ ಮೇಲಿನ ಸಹಾಯಧನವನ್ನು ವರ್ಷದಿಂದ ವರ್ಷಕ್ಕೆ ಕಡಿತ ಮಾಡುತ್ತಲೇ ಇದೆ...

ಪ್ರಜಾವಾಣಿ ವಾರ್ತೆ

‘ಭಾರತವು 2025ರ ವೇಳೆಗೆ ಯೂರಿಯಾ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುತ್ತದೆ’ ಎಂದು ಕೇಂದ್ರ ರಸಗೊಬ್ಬರ ಸಚಿವ ಮನ್ಸುಖ್ ಮಾಂಡವೀಯ ಪಿಟಿಐಗೆ ಈಚೆಗಷ್ಟೇ ನೀಡಿದ್ದ ಸಂದರ್ಶನದಲ್ಲಿ ಘೋಷಿಸಿದ್ದರು. ಭಾರತಕ್ಕೆ ಪ್ರತಿ ವರ್ಷ ಅಂದಾಜು 350–360 ಲಕ್ಷ ಟನ್‌ಗಳಷ್ಟು ಯೂರಿಯಾ ಬೇಕಾಗುತ್ತದೆ. ದೇಶೀಯವಾಗಿ ಉತ್ಪಾದಿಸಲು ಸಾಧ್ಯವಿರುವುದು 310 ಲಕ್ಷ ಟನ್‌ಗಳಷ್ಟು ಮಾತ್ರ. 40–50 ಲಕ್ಷ ಟನ್‌ಗಳಷ್ಟು ಯೂರಿಯಾವನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ ಮುಂದಿನ ಒಂದೇ ವರ್ಷದಲ್ಲಿ ಆ ಅಂತರವನ್ನು ನಿವಾರಿಸುತ್ತೇವೆ ಎಂದು ಮಾಂಡವೀಯ ಹೇಳಿದ್ದರು. ದೇಶದಲ್ಲಿನ ಯೂರಿಯಾ ಬೆಲೆಯನ್ನೂ ಮಾಂಡವೀಯ ಅವರ ಹೇಳಿಕೆಯನ್ನೂ ಪರಸ್ಪರ ಸಂಬಂಧ ಕಲ್ಪಿಸಿ ನೋಡಬೇಕಾಗುತ್ತದೆ.

ವರ್ಷದ ಹಿಂದೆ ದೇಶದಾದ್ಯಂತ ಉತ್ತಮ ಮಳೆಯಾಗಿದ್ದಾಗ ರಸಗೊಬ್ಬರ, ಅದರಲ್ಲೂ ಯೂರಿಯಾದ ಕೊರತೆ ಉಂಟಾಗಿತ್ತು. ಕೊರತೆಯ ಜತೆಗೆ ಯೂರಿಯಾ ಬೆಲೆಯು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿತ್ತು. ಈ ಬಗ್ಗೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದಾಗ ಕೇಂದ್ರ ಸರ್ಕಾರವು, ‘ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯೂರಿಯಾ ಬೆಲೆ ಏರಿಕೆಯಾಗುತ್ತಿದೆ. ಹೀಗಾಗಿ ದೇಶದಲ್ಲಿ ಯೂರಿಯಾ ಬೆಲೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಆದರೆ ಅದಕ್ಕೆ ಸಹಾಯಧನ ನೀಡಲಾಗುತ್ತಿದೆ’ ಎಂದು ವಿವರಣೆ ನೀಡಿತ್ತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯೂರಿಯಾ ಬೆಲೆ ಏರಿಕೆಯಾಗುತ್ತಲೇ ಇದ್ದಿದ್ದರೆ, ಕೇಂದ್ರ ಸರ್ಕಾರವು ಯೂರಿಯಾ ಮೇಲೆ ಮಾಡುತ್ತಿರುವ ಸಹಾಯಧನದ ವೆಚ್ಚವೂ ಏರಿಕೆಯಾಗಬೇಕಿತ್ತು. ಆದರೆ ಹಾಗೆ ಆಗುತ್ತಿಲ್ಲ. ಬದಲಿಗೆ 2022–23ನೇ ಸಾಲಿನಿಂದ ಯೂರಿಯಾ ಸೇರಿದಂತೆ ಎಲ್ಲಾ ರಸಗೊಬ್ಬರಗಳ ಮೇಲೆ ಕೇಂದ್ರ ಸರ್ಕಾರದ ವೆಚ್ಚವು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುತ್ತಲೇ ಇದೆ. 2022–23ನೇ ಸಾಲಿನ ಬಜೆಟ್‌ನಲ್ಲಿ ರಸಗೊಬ್ಬರಕ್ಕೆ ನೀಡಿದ್ದ ಸಹಾಯಧನಕ್ಕಿಂತ ಶೇ 35ರಷ್ಟು ಕಡಿಮೆ ಸಹಾಯಧನವನ್ನು 2024–25ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಮೀಸಲಿರಿಸಿದೆ.

ಹೀಗೆ ಕೇಂದ್ರ ಸರ್ಕಾರವು ಯೂರಿಯಾ ಮತ್ತು ಇತರೆ ರಸಗೊಬ್ಬರಗಳ ಮೇಲಿನ ಸಹಾಯಧನ ಕಡಿತ ಮಾಡುತ್ತಲೇ ಇರುವುದರಿಂದ ಅವುಗಳ ಬೆಲೆ ಏರಿಕೆಯಾಗುತ್ತಲೇ ಇದೆ. ಆದರೆ ಆ ಬೆಲೆ ಏರಿಕೆ ರೈತರಿಗೆ ಗೊತ್ತಾಗದ ಹಾಗೆ ಬೆಲೆ ನಿಗದಿ ಮಾಡಲಾಗುತ್ತಿದೆ. 2014ರಲ್ಲಿ ಯೂರಿಯಾವನ್ನು 50 ಕೆ.ಜಿ. ಚೀಲದಲ್ಲಿ ಮಾರಾಟ ಮಾಡಲಾಗುತ್ತಿತ್ತು. ಆಗ ಅದರ ಬೆಲೆ ₹268ರಷ್ಟಿತ್ತು. ಅಂದರೆ ಆಗ ರೈತ ಪ್ರತಿ ಕೆ.ಜಿ. ಯೂರಿಯಾಗೆ ₹5.3ರೂ ಪಾವತಿ ಮಾಡಬೇಕಿತ್ತು. ಆದರೆ ಈಗ ಯೂರಿಯಾ ಚೀಲದ ತೂಕವನ್ನು 45 ಕೆ.ಜಿ.ಗೆ ಇಳಿಸಲಾಗಿದೆ. 45 ಕೆ.ಜಿ. ಚೀಲಕ್ಕೆ ಕೇಂದ್ರ ಸರ್ಕಾರವು ₹242 ಬೆಲೆ ನಿಗದಿ ಮಾಡಿದೆ. ಆದರೆ ಈ ಬೆಲೆಯಲ್ಲಿ ಬೇವು ಲೇಪನದ ವೆಚ್ಚ, ಸಾಗಣೆ ವೆಚ್ಚ ಮತ್ತು ತೆರಿಗೆ ವೆಚ್ಚಗಳು ಸೇರಿಲ್ಲ. ಈ ಎಲ್ಲವೂ ಸೇರಿ 45 ಕೆ.ಜಿ.ಯಷ್ಟು ಯೂರಿಯಾದ ಬೆಲೆ ₹260–₹280ರವರೆಗೂ ಆಗುತ್ತದೆ. ಅಂದರೆ ಪ್ರತಿ ಕೆ.ಜಿ. ಯೂರಿಯಾಗೆ ₹5.8ರಿಂದ ₹6.3ರವರೆಗೆ ವೆಚ್ಚ ಮಾಡಬೇಕಾಗಿದೆ.

ಕೇಂದ್ರ ಸರ್ಕಾರವು ಈಗ ಗಂಧಕ ಲೇಪಿತ ಯೂರಿಯಾವನ್ನೂ ಮಾರಾಟ ಮಾಡುತ್ತಿದೆ. ಗಂಧಕ ಲೇಪಿತ ಯೂರಿಯಾದ ಬೆಲೆ ಹೆಚ್ಚು. ಆದರೆ ಅದು ರೈತರಿಗೆ ಹೊರೆಯಾಗಬಾರದು ಎಂದು 40 ಕೆ.ಜಿ. ತೂಕದ ಚೀಲದಲ್ಲಷ್ಟೇ ಮಾರಾಟ ಮಾಡಲಾಗುತ್ತಿದೆ. ಈ ಮೊದಲು ನಾಲ್ಕು ಚೀಲಗಳನ್ನು ಬಳಸುತ್ತಿದ್ದ ಜಾಗದಲ್ಲಿ, ಐದು ಚೀಲವನ್ನು ಬಳಸಬೇಕಾಗಿದೆ. ಸಹಾಯಧನ ಕಡಿತ ಮಾಡುತ್ತಿರುವುದರಿಂದಲೇ ಹೀಗಾಗುತ್ತಿದೆ ಎಂಬುದು ವಿರೋಧ ಪಕ್ಷಗಳ ಆರೋಪ.

ಜಾಗತಿಕ ಮಾರುಕಟ್ಟೆಯ ಪ್ರಭಾವ: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಯೂರಿಯಾ ಬೆಲೆ ಏರಿಕೆಯಾಗಿದ್ದರಿಂದ, ದೇಶದಲ್ಲೂ ಬೆಲೆ ಏರಿಕೆಯಾಗುತ್ತಿದೆ ಎಂದು ಸರ್ಕಾರ ಹಲವು ಬಾರಿ ಹೇಳಿತ್ತು. ಆದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಏರಿಳಿತವು ದೇಶೀ ಮಾರುಕಟ್ಟೆಯಲ್ಲಿ ಯೂರಿಯಾದ ಬೆಲೆಯನ್ನು ಪ್ರಭಾವಿಸುತ್ತದೆಯೇ?

ದೇಶದ ಒಟ್ಟು ಯೂರಿಯಾ ಬಳಕೆಯಲ್ಲಿ ಆಮದು ಯೂರಿಯಾದ ಪ್ರಮಾಣ ಶೇ 20ಕ್ಕಿಂತಲೂ ಕಡಿಮೆ ಇದೆ. ಹೀಗಾಗಿ ಇದು ದೇಶದಲ್ಲಿನ ಯೂರಿಯಾ ಬೆಲೆಯನ್ನು ಪ್ರಭಾವಿಸುವ ಪ್ರಮಾಣ ತೀರಾ ಕಡಿಮೆ. ಆದರೆ ದೇಶದಲ್ಲಿ ಉತ್ಪಾದನೆಯಾಗುವ ಬಹುತೇಕ ಯೂರಿಯಾವು ದ್ರವೀಕೃತ ನೈಸರ್ಗಿಕ ಅನಿಲ (ಎಲ್‌ಎನ್‌ಜಿ) ಆಧಾರಿತ ಸ್ಥಾವರಗಳ ಮೂಲಕ ಬರುತ್ತದೆ. ಭಾರತವು ಶೇ 50ರಷ್ಟು ಎಲ್‌ಎನ್‌ಜಿಯನ್ನು ಆಮದು ಮಾಡಿಕೊಳ್ಳುತ್ತದೆ. ಅದರಲ್ಲಿ ಬಹುಪಾಲು ಇಂಧನ ಕ್ಷೇತ್ರಕ್ಕೆ ಹೋಗುತ್ತದೆ. ಹೀಗಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಎಲ್‌ಎನ್‌ಜಿ ಬೆಲೆ ಏರಿಳಿತವಾದರೂ, ಯೂರಿಯಾ ಬೆಲೆಯನ್ನು ಅದು ಪ್ರಭಾವಿಸುವ ಸಾಧ್ಯತೆ ಕಡಿಮೆ. ಒಟ್ಟಾರೆ ಈ ಅಂಶಗಳು, ಸಹಾಯಧನ ಕಡಿತ ಮಾಡಿದ್ದರಿಂದಲೇ ಯೂರಿಯಾ ಬೆಲೆ ಏರಿಕೆಯಾಗಿದೆ ಎಂಬುದರತ್ತ ಬೊಟ್ಟು ಮಾಡುತ್ತವೆ.

‘ಒಂದು ಚೀಲ ಯೂರಿಯಾಕ್ಕೆ ₹242’

ಕೇಂದ್ರ ಸರ್ಕಾರವು 45 ಕೆ.ಜಿ. ತೂಕದ ಯೂರಿಯಾ ಚೀಲಕ್ಕೆ ₹242 ಬೆಲೆ ನಿಗದಿ ಮಾಡಿದೆ. ಆದರೆ ಇದರಲ್ಲಿ ವಿವಿಧ ತೆರಿಗೆಗಳು ಮತ್ತು ಬೇವು ಲೇಪನದ ವೆಚ್ಚ ಸೇರಿಲ್ಲ. ಈ ಎಲ್ಲಾ ವೆಚ್ಚಗಳು ಸೇರಿದರೆ 45 ಕೆ.ಜಿ. ಚೀಲದ ಯೂರಿಯಾ ಎಷ್ಟಕ್ಕೆ ಬಿಕರಿಯಾಗುತ್ತದೆ ಎಂಬುದರ ಮಾಹಿತಿಯನ್ನು ಸರ್ಕಾರವು ನೀಡಿಲ್ಲ. ಹೀಗಾಗಿ ರಾಜ್ಯದಿಂದ ರಾಜ್ಯಕ್ಕೆ, ಜಿಲ್ಲೆಯಿಂದ ಜಿಲ್ಲೆಗೆ, ತಾಲ್ಲೂಕಿನಿಂದ ತಾಲ್ಲೂಕಿಗೂ ಯೂರಿಯಾ ಬೆಲೆಯಲ್ಲಿ ವ್ಯತ್ಯಾಸವಿರುತ್ತದೆ. ರಾಜ್ಯದ್ದೇ ಕೆಲವು ಭಾಗಗಳಲ್ಲಿ 45 ಕೆ.ಜಿ. ತೂಕದ ಚೀಲಕ್ಕೆ ₹300–₹320ರವರೆಗೂ ಪಾವತಿಸಬೇಕಾದ ಸ್ಥಿತಿ ಇದೆ.



ಯೂರಿಯಾ ಸಹಾಯಧನ



2022–23ರಲ್ಲಿ ಕೇಂದ್ರ ಸರ್ಕಾರವು ಯೂರಿಯಾಕ್ಕೆ ಒಟ್ಟು ₹1.65 ಲಕ್ಷ ಕೋಟಿಯಷ್ಟು ಸಹಾಯಧನ ವನ್ನು ನೀಡಿತ್ತು. ಅನಂತರದ ಎರಡೂ ವರ್ಷಗಳಲ್ಲಿ ಸಹಾಯಧವನ್ನು ಭಾರಿ ಪ್ರಮಾಣದಲ್ಲಿ ಕಡಿತ ಮಾಡಿದೆ. ಆ ವರ್ಷಕ್ಕೆ ಹೋಲಿಸಿದರೆ 2023–24ರಲ್ಲಿ ಯೂರಿಯಾಕ್ಕೆ ನೀಡಿದ ಸಹಾಯಧನವನ್ನು ₹37,000 ಕೋಟಿಯಷ್ಟು ಕಡಿತ ಮಾಡಲಾಗಿತ್ತು. 2024–25ನೇ ಆರ್ಥಿಕ ವರ್ಷದಲ್ಲಿ ಅಂದರೆ ಈ ಪ್ರಸಕ್ತ ವರ್ಷದಲ್ಲೂ ಸಹಾಯಧನ ಕಡಿತ ಮಾಡಿದ್ದು, ₹1.19 ಲಕ್ಷ ಕೋಟಿಗೆ ಇಳಿಸಿದೆ

ಇತರ ರಸಗೊಬ್ಬರಗಳ ಸಹಾಯಧನ



ಇತರ ರಸಗೊಬ್ಬರಗಳಿಗೆ ಕೇಂದ್ರ ಸರ್ಕಾರವು ನೀಡುತ್ತಿದ್ದ ಸಹಾಯಧನವೂ ಕಡಿಮೆಯಾಗಿದೆ. 2022–23ರಲ್ಲಿ ₹86 ಸಾವಿರ ಕೋಟಿಯಷ್ಟಿದ್ದ ಇಂತಹ ಸಹಾಯಧನವು ಈ ಆರ್ಥಿಕ ವರ್ಷದಲ್ಲಿ ₹45 ಸಾವಿರ ಕೋಟಿಗೆ ಇಳಿಕೆಯಾಗಿದೆ. ಅಂದರೆ ಈ ಸಹಾಯಧನವನ್ನು ಕೇಂದ್ರ ಸರ್ಕಾರವು ಅರ್ಧದಷ್ಟು ಕಡಿಮೆ ಮಾಡಿದೆ. ಹಿಂದಿನ ನಾಲ್ಕು ಆರ್ಥಿಕ ವರ್ಷಗಳಿಗೆ ಹೋಲಿಸಿದರೆ 2024–25ರಲ್ಲೇ ಅತ್ಯಂತ ಕಡಿಮೆ ಮೊತ್ತದ ಸಹಾಯಧನವನ್ನು ಮೀಸಲಿರಿಸಲಾಗಿದೆ

ಒಟ್ಟು ಸಹಾಯಧನ



ಯೂರಿಯಾ ಮತ್ತು ಇತರೆ ರಸಗೊಬ್ಬರಗಳಿಗೆ ನೀಡುತ್ತಿದ್ದ ಸಹಾಯಧನವನ್ನು ಕಡಿಮೆ ಮಾಡಿದ ಕಾರಣದಿಂದಲೇ ಕೇಂದ್ರ ಸರ್ಕಾರದ ರಸಗೊಬ್ಬರಗಳ ಮೇಲಿನ ಒಟ್ಟು ಸಹಾಯಧನ ವೆಚ್ಚವು ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. 2022–23ರಲ್ಲಿ ₹2.51 ಲಕ್ಷ ಕೋಟಿಯಷ್ಟಿದ್ದ ಈ ಸಹಾಯಧನವು 2024–25ರ ವೇಳೆಗೆ ₹1.64 ಲಕ್ಷ ಕೋಟಿಗೆ ಇಳಿಕೆಯಾಗಿದೆ

ಆಧಾರ: ಲೋಕಸಭೆ ಮತ್ತು ರಾಜ್ಯಸಭೆಗೆ ರಸಗೊಬ್ಬರ ಸಚಿವಾಲಯವು ನೀಡಿದ ಮಾಹಿತಿಗಳು, ಕೇಂದ್ರ ಸರ್ಕಾರದ ಬಜೆಟ್‌ಗಳು, ಪಿಟಿಐ

ಪ್ರಜಾ ಮತ — ಜನತಂತ್ರದ ಹಬ್ಬ — ಲೋಕಸಭಾ ಚುನಾವಣೆ - 2024

153 ಕ್ಷೇತ್ರಗಳಲ್ಲಿ ಅರಣ್ಯ ಹಕ್ಕು ವಿಚಾರವೇ ನಿರ್ಣಾಯಕ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಕಳೆದ ಐದು ವರ್ಷಗಳಲ್ಲಿ ಬುಡಕಟ್ಟು ಹಾಗೂ ಅರಣ್ಯವಾಸಿ ಸಮುದಾಯಗಳಿಂದ ಅರಣ್ಯದ ಮೇಲಿರುವ ಅವರ ಹಕ್ಕನ್ನು ಕಸಿದುಕೊಳ್ಳುವಂಥ ಹಲವಾರು ಬೆಳವಣಿಗೆಗಳು ನಡೆದಿವೆ. ಆದ್ದರಿಂದ, ಈ ಬೆಳವಣಿಗೆಗಳು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಯಾವ ರೀತಿಯ ಪರಿಣಾಮ ಬೀರಲಿದೆ ಎಂಬುದು ಕುತೂಹಲಕರ ಅಂಶ. ಆದರೆ, 2019ರ ಲೋಕಸಭಾ ಚುನಾವಣೆಯಲ್ಲಿ ಈ ಸಮುದಾಯದ ಜನರು ಬಿಜೆಪಿಗೆ ಮತ ನೀಡಿದ್ದರು. ಈ ಸಮುದಾಯಗಳು ವಾಸವಿರುವ ದೇಶದ 153 ಕ್ಷೇತ್ರಗಳಲ್ಲಿ 103 ಕ್ಷೇತ್ರಗಳಲ್ಲಿ ಬಿಜೆಪಿಯೇ ಗೆಲುವು ಸಾಧಿಸಿತ್ತು.

2006ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಅರಣ್ಯ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿತ್ತು. ‘ಪರಿಶಿಷ್ಟ ಪಂಗಡ ಹಾಗೂ ಅರಣ್ಯವಾಸಿಗಳಿಗೆ ಶತಮಾನಗಳಿಂದ ಆದ ಅನ್ಯಾಯಗಳನ್ನು ನಿವಾರಿಸುವಲ್ಲಿ ಈ ಕಾಯ್ದೆಯ ಜಾರಿಯು ಮೈಲಿಗಲ್ಲು’ ಎನ್ನುತ್ತಾರೆ ಅರಣ್ಯವಾಸಿಗಳ ಹಕ್ಕಿನ ಹೋರಾಟಗಾರರು.

ಆದರೆ, 2019ರ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದದ್ದು 11 ಕ್ಷೇತ್ರಗಳಲ್ಲಿ. ‘ವಸುಂಧರಾ’ ಎನ್ನುವ ಸ್ವತಂತ್ರ ಸಂಸ್ಥೆಯೊಂದು ಈ ಎಲ್ಲ ಮಾಹಿತಿಗಳನ್ನು ಕಲೆ ಹಾಕಿ ವರದಿಯನ್ನು ಸಿದ್ಧಪಡಿಸಿದೆ.

‘ನಮ್ಮ ಅರಣ್ಯ ಹಕ್ಕುಗಳನ್ನು ನಮಗೆ ನೀಡಿ’ ಎಂದು ಬುಡಕಟ್ಟು ಹಾಗೂ ಅರಣ್ಯವಾಸಿ ಸಮುದಾಯಗಳು 86 ಲೋಕಸಭಾ ಕ್ಷೇತ್ರಗಳಲ್ಲಿ ಬೇಡಿಕೆ ಇರಿಸಿವೆ. ಈ ಕ್ಷೇತ್ರಗಳಲ್ಲಿ ಈ ಸಮುದಾಯಗಳ ಮತದಾರರು ಶೇ 30ರಷ್ಟಿದ್ದಾರೆ. ಇಷ್ಟು ಮತಗಳು ಈ ಎಲ್ಲ ಕ್ಷೇತ್ರಗಳಲ್ಲಿ ನಿರ್ಣಾಯಕವಾಗಲಿವೆ. ಇನ್ನು 45 ಕ್ಷೇತ್ರಗಳಲ್ಲಿ ಇದೇ ಸಮುದಾಯದ ಮತದಾರರ ಪ್ರಮಾಣ ಶೇ 40ರಷ್ಟಿದೆ. ಈ 45 ಕ್ಷೇತ್ರಗಳ ಪೈಕಿ ಒಂದು ಕ್ಷೇತ್ರದಲ್ಲಿ ಈಗಿನ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಅವರು ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ.

2019ರ ಚುನಾವಣೆಯಲ್ಲಿ ಈ 153 ಕ್ಷೇತ್ರಗಳ ಪೈಕಿ 74 ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನೇರ ಹಣಾಹಣಿ ನಡೆಸಿದ್ದವು. ಇದರಲ್ಲಿ ಕಾಂಗ್ರೆಸ್ ಕೇವಲ ಐದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಪರಿಶಿಷ್ಟ ಪಂಗಡದ ಜನರು ಹೆಚ್ಚಿರುವ 47 ಲೋಕಸಭಾ ಕ್ಷೇತ್ರಗಳಿವೆ. ಇವುಗಳಲ್ಲಿ 42 ಕ್ಷೇತ್ರಗಳಲ್ಲಿ ಪರಿಶಿಷ್ಟ ಪಂಗಡದ ಮತದಾರರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ 47 ಕ್ಷೇತ್ರಗಳ ಪೈಕಿ 2019ರಲ್ಲಿ ಬಿಜೆಪಿಯು 31 ಕ್ಷೇತ್ರಗಳಲ್ಲಿ ಜಯ ಸಾಧಿಸಿತ್ತು. ಕಾಂಗ್ರೆಸ್ 3 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲಷ್ಟೇ ಶಕ್ತವಾಗಿತ್ತು. ಬುಡಕಟ್ಟು ಹಕ್ಕುಗಳ ವಿಚಾರವೇ ಈ ಎಲ್ಲ 153 ಕ್ಷೇತ್ರಗಳ ಮುಖ್ಯ ಚುನಾವಣಾ ವಿಷಯ. ಇದೇ ಕಾರಣಕ್ಕೆ ಅರಣ್ಯ ಹಕ್ಕುಗಳ ಕುರಿತು ಬಿಜೆಪಿ ಹಾಗೂ ವಿರೋಧ ಪಕ್ಷಗಳು ಪ್ರಚಾರದ ವೇಳೆ ಮಾತನಾಡುತ್ತಿವೆ. ಇವು ಮತದಾನವನ್ನೂ ಪ್ರಭಾವಿಸಲಿವೆ.

ಅರ್ಜಿಗಳ ತಿರಸ್ಕಾರ ಪ್ರಮಾಣ ಹೆಚ್ಚಳ

ಕಳೆದ ಐದು ವರ್ಷದಲ್ಲಿ ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸುವ ಪ್ರಕರಣಗಳು ದೇಶದಲ್ಲಿ ಹೆಚ್ಚಾಗಿವೆ. ಇದು ಬುಡಕಟ್ಟು ಹಾಗೂ ಅರಣ್ಯವಾಸಿ ಸಮುದಾಯದ ಜನರ ಆತಂತಕ್ಕೆ ಕಾರಣವಾಗಿದೆ. ಕಳೆದ ಐದು ವರ್ಷಗಳಲ್ಲಿ ಇಂಥ ಅರ್ಜಿಗಳನ್ನು ವಿಲೇವಾರಿ ಪ್ರಮಾಣವು ಶೇ 87.72ರಷ್ಟಿಂದ ಶೇ 84.44ರಷ್ಟಕ್ಕೆ ಕುಸಿದಿದೆ.

ಅಧಿಕಾರಿಗಳು ಹೇಳುವುದೇನು?: ಕೋವಿಡ್ ಕಾರಣದಿಂದಾಗಿ 2020–21ರಲ್ಲಿ ಅರಣ್ಯ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲಾಗಲಿಲ್ಲ.

ಹೋರಾಟಗಾರರು ಹೇಳುವುದೇನು?: ‘ರಾಜಕೀಯ ಇಚ್ಛಾಶಕ್ತಿಯ ಕೊರತೆ ಹಾಗೂ ಭ್ರಷ್ಟಾಚಾರವೇ ಅರ್ಜಿಗಳ ತಿರಸ್ಕಾರಕ್ಕೆ ಮುಖ್ಯ ಕಾರಣ. ಅರ್ಜಿ ಸಲ್ಲಿಕೆಯ ಪ್ರಕ್ರಿಯೆ, ಬೇಕಾಗುವ ಸಾಕ್ಷ್ಯಗಳು ಹಾಗೂ ನೀಡಬೇಕಾದ ದಾಖಲೆಗಳ ಕುರಿತು ಅರ್ಜಿದಾರರು ಹಾಗೂ ಅಧಿಕಾರಿಗಳಲ್ಲಿ ಸ್ಪಷ್ಟತೆ ಇಲ್ಲ. ಈಗಾಗಲೇ ಭೂಮಿಯ ಒಡೆತನ ಇದೆ ಹಾಗೂ ಕುಟುಂಬದಲ್ಲಿ ಉದ್ಯೋಗಸ್ಥರಿದ್ದಾರೆ ಎನ್ನುವ ಕಾರಣಗಳನ್ನೊಡ್ಡಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ’ ಎನ್ನುತ್ತಾರೆ ಅರಣ್ಯ ಹಕ್ಕು ಹೋರಾಟಗಾರರು.

- ಕಾಯ್ದೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ಉತ್ತರಾಖಂಡದಲ್ಲಿ 6,678 ಅರ್ಜಿಗಳನ್ನು ಸಲ್ಲಿಸಿದ್ದರೆ, ಕೇವಲ 185 ಅರ್ಜಿಗಳಷ್ಟೇ ವಿಲೇವಾರಿಯಾಗಿವೆ. ಅಂದರೆ, ಶೇ 97.23ರಷ್ಟು ಅರ್ಜಿಗಳು ಇಲ್ಲಿ ತಿರಸ್ಕೃತವಾಗಿವೆ
- ಕಾಯ್ದೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ ಛತ್ತೀಸಗಢದಲ್ಲಿ 9.41 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿದ್ದರೆ, 4 ಲಕ್ಷ ಅರ್ಜಿಗಳು ತಿರಸ್ಕೃತವಾಗಿವೆ
- ಕಾಯ್ದೆ ಜಾರಿಯಾದಾಗಿನಿಂದ ಇಲ್ಲಿಯವರೆಗೆ 2.94 ಲಕ್ಷ ಅರ್ಜಿಗಳು ಕರ್ನಾಟಕದಲ್ಲಿ ಸಲ್ಲಿಕೆಯಾಗಿವೆ. ಇವುಗಳಲ್ಲಿ 2.53 ಲಕ್ಷ ಅರ್ಜಿಗಳು ತಿರಸ್ಕೃತಗೊಂಡಿವೆ. ಅಂದರೆ, ಶೇ 86.01ರಷ್ಟು ಅರ್ಜಿಗಳು ತಿರಸ್ಕಾರಗೊಂಡಿವೆ

7.88 ಲಕ್ಷ ಕಳೆದ ಐದು ವರ್ಷಗಳಲ್ಲಿ ಸಲ್ಲಿಕೆಯಾದ ಅರ್ಜಿಗಳ ಒಟ್ಟು ಸಂಖ್ಯೆ

5,827 ಕಳೆದ ಐದು ವರ್ಷಗಳಲ್ಲಿ ತಿರಸ್ಕೃತಗೊಂಡ ಅರ್ಜಿಗಳ ಸಂಖ್ಯೆ



ಕೋವಿಡ್ ಕಾಲದ ಕರಾಳ ಮುಖ

ನಾವು ನೋಡಿದ ಸಿನಿಮಾ

ನೈಟ್ ಕರ್ಫ್ಯೂ
- ನಿರ್ಮಾಣ: ಚಂದ್ರಶೇಖರ ಬಿ.ಎಸ್.
- ನಿರ್ದೇಶನ: ರವೀಂದ್ರ ವೆಂಶಿ
- ತಾರಾಗಣ: ಮಾಲಾಶ್ರೀ, ರಂಜನಿ ರಾಘವನ್, ಪ್ರಮೋದ್ ಶೆಟ್ಟಿ, ಸಾಧು ಕೋಕಿಲ ಮತ್ತಿತರರು

ಕೋವಿಡ್–19 ಮನುಷ್ಯನ ಬದುಕಿಗೆ ಕಲಿಸಿದ ಪಾಠಗಳು ಸಾಕಷ್ಟು. ಆಸ್ಪತ್ರೆ ಸಿಗದೆ ಪರದಾಟ, ಚಿಕಿತ್ಸೆಗೆ ಹಾಸಿಗೆಯಿಲ್ಲದೆ ಒದ್ದಾಟ, ಸಾವು, ನೋವು... ಬದುಕಿನಿಂದ ಬಿಟ್ಟುಹೋದವರ ಚಿತೆಗೆ ಕುಟುಂಬಸ್ಥರು ಅಗ್ನಿಸ್ಪರ್ಶ ಮಾಡಲೂ ಸಾಧ್ಯವಾಗದಂತಹ ಕರಾಳ ಸ್ಥಿತಿಯನ್ನು ಈ ಮಹಾಮಾರಿ ಸೃಷ್ಟಿಸಿತ್ತು. ಇದೇ ಸನ್ನಿವೇಶಗಳನ್ನಿಟ್ಟುಕೊಂಡು ಹೆಣೆದ ಚಿತ್ರ ‘ನೈಟ್ ಕರ್ಫ್ಯೂ’.

ಚಿತ್ರದ ಪ್ರಮುಖ ಪಾತ್ರಧಾರಿಗಳಾದ ಮಾಲಾಶ್ರೀ ಮತ್ತು ರಂಜನಿ ರಾಘವನ್ ಇಬ್ಬರೂ ವೈದ್ಯರು. ಕರೋನಾ ಉತ್ತುಂಗದಲ್ಲಿದ್ದ ಕಾಲ. ಕರೋನಾ ಪೀಡಿತ ರೋಗಿಗಳನ್ನು ದಾಖಲು ಮಾಡಿಕೊಳ್ಳಲು ಆಸ್ಪತ್ರೆಗಳಲ್ಲಿ ಹಾಸಿಗೆಗಳೇ ಇಲ್ಲದಂತಹ ಸನ್ನಿವೇಶ. ಆಗ ಇವರ ಆಸ್ಪತ್ರೆಗೆ ಮಹಿಳೆಯೊಬ್ಬರನ್ನು ಕರೆತರಲಾಗುತ್ತದೆ. ಆಕೆಯನ್ನು ದಾಖಲಿಸಿಕೊಳ್ಳಲು ವೈದ್ಯರು ನಿರಾಕರಿಸುತ್ತಿರುವಾಗಲೇ ಆಕೆಯ ಜೀವ ಹೋಗಿರುತ್ತದೆ. ಇಲ್ಲಿಂದ ಚಿತ್ರದ ಕಥೆ ಪ್ರಾರಂಭವಾಗುತ್ತದೆ.

ಖಳನಟನಾಗಿ ಪ್ರಮೋದ್ ಶೆಟ್ಟಿ ಪ್ರವೇಶವಾಗುತ್ತದೆ. ಆಕೆಯ ಹೆಣ ಸುಡಲು ನಮಗೆ ಆಕೆ ಕರೋನಾದಿಂದ ಸತ್ತಿದ್ದು ಎಂಬ ಸರ್ಟಿಫಿಕೆಟ್ ಬೇಕು ಎಂದು ಶೆಟ್ಟರು ಮಾಲಾಶ್ರೀ ಬಳಿ ಪಟ್ಟುಹಿಡಿಯುತ್ತಾರೆ. ಆದರೆ ಆಕೆಯದ್ದು ಕೊಲೆ, ಕರೋನಾದಿಂದ ಸಂಭವಿಸಿದ ಸಾವಲ್ಲ ಎಂಬುದು ಮಾಲಾಶ್ರೀಗೆ ತಿಳಿದುಹೋಗುತ್ತದೆ. ಮುಂದೇನಾಗುತ್ತದೆ ಎಂಬುದೇ ಚಿತ್ರಕಥೆ.

ಚಿತ್ರದ ಕಥಾವಸ್ತು ಅನನ್ಯವಾಗಿದೆ. ಆದರೆ ಇವತ್ತಿಗೆ ಸ್ವಲ್ಪ ಹಳತೆನ್ನಿಸುತ್ತದೆ. ಮಾಲಾಶ್ರೀ ವೈದ್ಯೆಯಾಗಿದ್ದರೂ ನಿರ್ದೇಶಕರು ಕೆಲ ಫೈಟ್‌ಗಳನ್ನಿಟ್ಟು ಆ್ಯಕ್ಷನ್ ಮಾಡಿಸಿದ್ದಾರೆ. ಆದರೆ ಆಸ್ಪತ್ರೆ ಒಳಗೆ ನಡೆಯುವ ಈ ಹೊಡೆದಾಟ ತುಂಬ ಅಸಹಜ ಎನ್ನಿಸುತ್ತದೆ ಮತ್ತು ಕಥೆಗೆ ಅವಶ್ಯವಿರಲಿಲ್ಲ. ರಂಜನಿ ರಾಘವನ್ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಪ್ರಮೋದ್ ಶೆಟ್ಟಿ ಖಳನಾಯಕನಾಗಿ ಇಷ್ಟವಾಗುತ್ತಾರೆ. ಸಾಧು ಕೋಕಿಲ ಗಂಭೀರವಾದ, ಕುತೂಹಲಕಾರಿ ಕಥೆಯಲ್ಲಿ ನಗಿಸಲಿಕ್ಕಾಗಿಯೇ ಬರುತ್ತಾರೆ.

ಕಥಾವಸ್ತುವಿಗೆ ತಕ್ಕಂತೆ ಕಥೆಯನ್ನು ನಿರೂಪಿಸುವತ್ತ ನಿರ್ದೇಶಕರು ಇನ್ನಷ್ಟು ಗಮನಹರಿಸಬೇಕಿತ್ತು. ಕರೋನಾದಲ್ಲಿದ್ದ ಭಯ, ಕೊಲೆಯ ಸುತ್ತಲಿನ ಕುತೂಹಲಗಳು ದೃಶ್ಯಗಳಾಗಿ ಇನ್ನಷ್ಟು ಗಟ್ಟಿಯಾಗಬೇಕಿತ್ತು. ಹಿನ್ನೆಲೆ ಸಂಗೀತ, ಛಾಯಾಚಿತ್ರಗ್ರಹಣದಲ್ಲಿ ಹೊಸತೇನೂ ಕಾಣಿಸುವುದಿಲ್ಲ. ❖

ಪದಬಂಧ 5649

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮುರ ಹಾಕಿಕೊಳ್ಳಲು ಈ ದಾಕ್ಷಿಣ್ಯವೇ? (4)
3.ಮಂಜ ನಡುವಿದ್ದರೆ ಇದು ಸೂಕ್ತವಾದುದು (4)
5.ವರ ನೀಡಿರುವ ವಿಸ್ತೃತ ಹೇಳಿಕೆ (3)
6.ಜಳಕ ಮಾಡಿದ್ದಕ್ಕೇ ಹೀಗೆ ರೋಮಾಂಚನ! (3)
8.ಸಲಿಗೆ ತೋರುತ್ತಲೇ ಮಾಡಿದ ಡಕಾಯತಿ (3)
9.ವನವಿರುವುದಕ್ಕೇ ಇದು ಪವಿತ್ರ (3)
10.ಹೆಣ ಹೂಳುವ ಜಾಗ ತಿರುವುಮುರುವಾಗಿದೆ (3)
12.ಬಿರುಕು ಬಿಟ್ಟ ಮೇಲೆ ಎದ್ದಿರುವ ಪದರ (3)
14.ಈತ ಮೃತ್ಯುದೇವತೆಯ ಮಗ (4)
15.ಕೊನೆಗೆ ಹಾಸವಿರುವ ಪೂರ್ವಕಥೆ (4)

ಮೇಲಿಂದ ಕೆಳಕ್ಕೆ
1.ಪ್ರತ್ಯೇಕವಾಗಿ ತೆಗೆದಿರಿಸಿದ್ದು (3)
2.ವಿತರಣೆ ಮಾಡುವಾಗ ಉದಿಸಿದ ಸೂರ್ಯ(2)
3.ಸರಕ್ಕನೆ ಧರಿಸಿದ ಮಾಲೆ (2)
4.ಸುಲಿಗೆ ಮಾಡಲೆಂದೇ ತೋರಿದ ಸದರ (3)
7.ಕೈಯಿಂದ ತಟ್ಟಿದ ಚಪ್ಪಾಳೆ (5)
8.ಬಂಗಾರದಂಥಾ ಅವಕಾಶ (5)
9.ಕುಡಿಯಲು ಯೋಗ್ಯವಾದುದು (3)
11.ಒಂದಕ್ಕಿಂತ ಹೆಚ್ಚು ಪದಗಳು ಕೂಡಿ ಆದ ಸಂಯುಕ್ತಪದ (3)
12.ಅವ್ಯಾಹತದಲ್ಲೇ ಘಾಸಿಗೊಳಿಸಿದ್ದು ಕಾಣುತ್ತಿದೆ (2)
13.ಭೂಮಿಯಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)



5648ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಪರಂಜಿ 3.ಆಗಮಿಕ
5.ನಮೂನೆ 7.ಸುತ
8.ಪತ್ರ 11.ತಮ
13.ರಾಶಿ 14.ಸಾವಿರ
16.ಸರೋವರ 17.ನಕ್ತಂಚರ

ಮೇಲಿಂದ ಕೆಳಕ್ಕೆ:
1.ಅಪರೂಪ 2.ಜಿನ
3.ಆನೆ 4.ಕಡಿತ
6.ಮೂಸಂಡಿ 7.ಸುಸಂಸ್ಕೃತ
9.ತ್ರಯೋದಶಿ 10.ಕುಲಾವಿ
12.ಮನ್ವಂತರ 13.ರಾಯಸ
14.ಸಾರ 15.ರನ

ಸುಡೊಕು 6034

3				8		9		1
							6	
	4		9			3		8
6								9
	5		7	6	9		8	
8						6		
9			2			7		6
	6			9	7		3	
		7				4		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6033 ಸುಡೊಕು

4	5	6	9	7	1	8	3	2
1	9	2	6	8	3	5	7	4
8	7	3	4	2	5	9	6	1
7	2	1	3	4	9	6	5	8
3	8	5	1	6	2	4	9	7
6	4	9	7	5	8	2	1	3
2	3	8	5	1	6	7	4	9
9	6	4	8	3	7	1	2	5
5	1	7	2	9	4	3	8	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 13, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಪಂಚಮಿ ಗಂ. 12-05 ನಕ್ಷತ್ರ: ಮೃಗಶಿರಾ ಗಂ. 24-49 ಯೋಗ: ಶೋಭನಾ ಗಂ. 24-34 ಕರಣ: ಬಾಲವ ಗಂ. 12-05, ಮೀನ ಮಾಸದ 29 ನೇ ದಿನ, ಮಳೆನಕ್ಷತ್ರ: ರೇವತಿ 4.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-22 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 03 ಶವ್ವಾಲ್
ಅದೃಷ್ಟ ಸಂಖ್ಯೆ : 4, 1

ಮೇಷ: ಸಜ್ಜನರ ಸಹವಾಸ ಮಾಡುವುದರಿಂದ ಪ್ರಾಪಂಚಿಕ ಜ್ಞಾನ ವೃದ್ಧಿಯಾಗುತ್ತದೆ. ಕೃಷಿಗೆ ಸಂಬಂಧಿಸಿದಂತೆ ಪಡೆದ ಸಾಲವನ್ನು ಹಿಂದಿರುಗಿಸುವ ಶಕ್ತಿ ದೊರಕಲಿದೆ. ಇಂದು ಉತ್ಸಾಹದ ಕೊರತೆ ಕಾಣಿಸುವುದು.

ವೃಷಭ: ಅಕ್ಕ-ಪಕ್ಕದವರು ಭೂ ಸಂಬಂಧದ ಕಲಹಗಳನ್ನು ಬಿಟ್ಟು ರಾಜಿ ಮಾಡಿಕೊಳ್ಳುವ ಮನೋಭಾವಕ್ಕೆ ಬರುವರು. ಅದರಂತೆ ನಡೆಯುವುದು ಉತ್ತಮ. ಚಿಂತೆಯಿಂದ ಅನಾರೋಗ್ಯ ಕಂಡುಬರಲಿದೆ.

ಮಿಥುನ: ಆರೋಗ್ಯದಲ್ಲಿ ರಕ್ತದೊತ್ತಡಕ್ಕೆ ಸಂಬಂಧಿಸಿದಂತೆ ಏರುಪೇರಾಗುವ ಲಕ್ಷಣ ಇರುವುದು. ಯಾವುದೇ ರೀತಿಯ ಆತಂಕಕ್ಕೆ ಒಳಗಾಗಬೇಡಿ. ಅಸಹಾಯಕರಿಗೆ ಸಹಾಯ ಮಾಡುವುದರಿಂದ ಪುಣ್ಯ ಸಂಪಾದಿಸಬಹುದು.

ಕರ್ಕಾಟಕ: ಲಾಭ ತರುವಂಥ ಮತ್ತು ಅನಿವಾರ್ಯದ ನಿರ್ದಿಷ್ಟ ಕೆಲಸಗಳಿಗೆ ಮಾತ್ರ ಗಮನ ಕೊಡುವುದು ಒಳ್ಳೆಯದು. ಅವಿವಾಹಿತ ಯೋಗ್ಯ ವಯಸ್ಕರಿಗೆ ಹೊಸ ಸಂಬಂಧಗಳು ಹುಡುಕಿಕೊಂಡು ಬರುವ ಸಾಧ್ಯತೆಗಳಿವೆ.

ಸಿಂಹ: ಉತ್ತಮ ವ್ಯವಹಾರಗಳ ಫಲದಿಂದ ನಿಮ್ಮ ಕೈಬಿಟ್ಟ ಹಳೆಯ ಆಸ್ತಿಯು ಕೈಸೇರುವ ಯೋಗವಿದೆ. ಖರ್ಚು ವೆಚ್ಚಗಳ ಮೇಲೆ ಗಮನವಿದ್ದರೆ ಒಳ್ಳೆಯದು. ಸರಕು ಸಾಗಾಟದಿಂದ ಉತ್ತಮ ಲಾಭ ಪಡೆಯುವಿರಿ.

ಕನ್ಯಾ: ಮುಖ್ಯವಾದ ವ್ಯಕ್ತಿಯೊಬ್ಬರ ಪರಿಚಯದಿಂದ ವ್ಯಾಪಾರ ಅಭಿವೃದ್ಧಿಯ ದಾರಿ ಹಿಡಿಯಲು ಕಾರಣವಾಗುವುದು. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವಂಥವರಿಗೆ ಸಮಾಧಾನ ದೊರೆಯಲಿದೆ.

ತುಲಾ: ಸರ್ಕಾರಿ ಮೂರನೇ ದರ್ಜೆಯ ನೌಕರರಿಗೆ ಆರ್ಥಿಕವಾಗಿ ಅನುಕೂಲವಾಗುವುದು. ವ್ಯಾಪಾರದ ಬಂಡವಾಳ ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಬಹುದು. ಹಿರಿಯರ ಆರೋಗ್ಯದಲ್ಲಿ ಏರಿಳಿತ ಕಾಣುವಂತಾಗಲಿದೆ.

ವೃಶ್ಚಿಕ: ಬದುಕಿಗೊಂದು ಹೊಸ ಆಯಾಮ ಸಿಗಲಿದೆ. ಈ ತಿರುವಿನಲ್ಲಿ ಸ್ನೇಹಿತನ ಪಾತ್ರ ತುಂಬ ಪ್ರಮುಖವಾಗಿರುತ್ತದೆ. ಉದ್ಯೋಗದಲ್ಲಿ , ವ್ಯಾಪಾರ ವ್ಯವಹಾರದ ಅಭಿವೃದ್ಧಿಯಲ್ಲಿ ಹಿನ್ನಡೆ ಕಾಡಬಹುದು.

ಧನು: ಅವಿವೇಕಿಗಳ ನಡುವೆ ವಾದಿಸಲು ಹೋಗಬೇಡಿ. ವಿವೇಕಯುತ ನಡವಳಿಕೆಯು ಪ್ರಯೋಜನಗಳನ್ನು ನೀಡುತ್ತದೆ. ಹೊಸದನ್ನು ಕಲಿಯುವುದಕ್ಕೆ ಬಹಳ ಉತ್ಸುಕರಾಗಿದ್ದೀರಿ. ವಕೀಲರು ಯಶಸ್ಸು ಕಾಣುವಿರಿ.

ಮಕರ: ತಲೆಶೂನೆ, ಮಾನಸಿಕ ಅಸ್ವಸ್ಥತೆಯಂಥ ತೊಂದರೆಗಳು ಕಾಡುವ ಸಂಭವವಿದೆ. ಅನಗತ್ಯ ವಿಚಾರಗಳ ಬಗ್ಗೆ ಚಿಂತಿಸುವುದನ್ನು ಬಿಡಿ. ಹಣಕಾಸಿಗೆ ಸಂಬಂಧಿಸಿದಂತೆ ಹೊಸದಾದ ತೀರ್ಮಾನವನ್ನು ಕೈಗೊಳ್ಳುವುದು ಸರಿಯಲ್ಲ

ಕುಂಭ: ಬಹುಕಾಲದಿಂದ ಅನುಭವಿಸುತ್ತಿರುವ ರೋಗವು ಚೇತರಿಕೆಯ ಮೆಟ್ಟಿಲನ್ನು ನೋಡಲಿದೆ. ಕೆಲಸದಲ್ಲಿ ಈ ದಿನ ವಿಘ್ನಗಳು ಎದುರಾದರೂ, ಅಪೇಕ್ಷಿತ ಫಲ ದೊರಕುವುದು.

ಮೀನ: ಪ್ರಾರಂಭಿಸಿದ ಕಾರ್ಯಗಳು ಸೂಕ್ತ ಸಮಯದಲ್ಲಿ ಪೂರ್ಣಗೊಳ್ಳುವುದು. ವ್ಯವಹಾರಗಳ ಮೇಲೆ ಹೆಚ್ಚಿನ ನಿಗಾ ಇರಲಿ, ಹಿತಶತ್ರುಗಳ ಕಾಟ ಇರಬಹುದು. ಮಹಾಗಣಪತಿಯನ್ನು ಆರಾಧಿಸಿ.

ಯಾರನ್ನು ಜೈಲಿಗೆ ಕಳುಹಿಸಬೇಕು: ಪ್ರಧಾನಿ ನರೇಂದ್ರ ಮೋದಿಗೆ ಸಿದ್ದರಾಮಯ್ಯ ಪ್ರಶ್ನೆ

‘ಬಿಜೆಪಿ ತೆರಿಗೆ ಕಟ್ಟದ್ದಕ್ಕೆ ಯಾರು ಹೊಣೆ?’

ಪ್ರಜಾವಾಣಿ ವಾರ್ತೆ

ನಂಜನಗೂಡು (ಮೈಸೂರು): ‘ಭ್ರಷ್ಟರನ್ನು ಜೈಲಿಗೆ ಕಳಿಸುವುದೇ ತಮ್ಮ ಕರ್ತವ್ಯ ಎನ್ನುವ ನರೇಂದ್ರ ಮೋದಿ, ತಮ್ಮದೇ ಪಕ್ಷವು ಬಾಂಡ್ ಮೂಲಕ ಸಂಗ್ರಹಿಸಿರುವ ₹7,600 ಕೋಟಿಗೆ ಯಾಕೆ ತೆರಿಗೆ ಕಟ್ಟಿಲ್ಲ. ಇದನ್ನು ಯಾಕೆ ಐ.ಟಿ. ಇ.ಡಿ. ಪ್ರಶ್ನಿಸಿಲ್ಲ? ಇದಕ್ಕೆ ಯಾರನ್ನು ಜೈಲಿಗೆ ಕಳುಹಿಸಬೇಕು?’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಇಲ್ಲಿಗೆ ಸಮೀಪದ ಕಳಲೆ ಗೇಟ್ ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿ, ‘ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರನ್ನು ಸಾಕ್ಷ್ಯ ಇಲ್ಲದಿದ್ದರೂ ಜೈಲಿಗೆ ತಳ್ಳಿದ್ದಾರೆ. ಅದೇ ಐ.ಟಿ. ಇ.ಡಿ.ಯಂತಹ ಸಂಸ್ಥೆಗಳು ಬಿಜೆಪಿ ನಾಯಕರನ್ನು ಯಾಕೆ ಪ್ರಶ್ನಿಸುವುದಿಲ್ಲ’ ಎಂದು ಕೇಳಿದರು.

ರಾಜಕೀಯ ನಿವೃತ್ತಿ: ‘ಬಿಜೆಪಿಯವರು ಮಾತೆತ್ತಿದರೆ ದೇಶಭಕ್ತಿ ಎನ್ನುತ್ತಾರೆ. ಮೋದಿ, ಅಡ್ವಾಣಿ ಎಂದಾದರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಾರಾ? ಆರ್‌ಎಸ್‌ಎಸ್, ಜನಸಂಘದ ಯಾರಾದರೂ ಒಬ್ಬ

ಮುಖ್ಯಮಂತ್ರಿ ಸಿದ್ದರಾಮಯ್ಯ

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹುತಾತ್ಮನಾಗಿದ್ದನ್ನು ತೋರಿಸಿದರೆ ನಾನು ರಾಜಕೀಯ ನಿವೃತ್ತಿ ಪಡೆಯುತ್ತೇನೆ’ ಎಂದು ಸವಾಲು ಹಾಕಿದರು.

‘ರಾಜ್ಯದಲ್ಲಿ ಬಿಜೆಪಿ ಯಾವತ್ತೂ ಪೂರ್ಣ ಜನಾಶೀರ್ವಾದ ಪಡೆದು ಅಧಿಕಾರಕ್ಕೆ ಬಂದಿಲ್ಲ. ಅವರಿಗೆ ಮುಂಬಾಗಿಲ ರಾಜಕಾರಣ ಗೊತ್ತಿಲ್ಲ. ಆಪರೇಷನ್ ಕಮಲ ಹೆಸರು ಬಂದಿದ್ದೇ ಯಡಿಯೂರಪ್ಪ ಅವರಿಂದ’ ಎಂದು ಲೇವಡಿ ಮಾಡಿದರು.

‘ಸಿದ್ದರಾಮಯ್ಯ ಅವರಿಂದ ಸಮ್ಮಿಶ್ರ ಸರ್ಕಾರ ಬಿತ್ತು ಎನ್ನುತ್ತಿದ್ದ ಕುಮಾರಸ್ವಾಮಿ ಈಗ ಡಿಕೆಶಿಯತ್ತ ಬೆರಳು ಮಾಡುತ್ತಿದ್ದಾರೆ. ಆದರೆ ನಿಜವಾಗಿ ಸರ್ಕಾರ ಬೀಳಿಸಿದ್ದು ಯಡಿಯೂರಪ್ಪ’ ಎಂದರು.

ಅಭ್ಯರ್ಥಿ ಹೆಸರು ಹೇಳಿದರೆ ತಪ್ಪಲ್ಲ!

ತಮ್ಮ ಭಾಷಣದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಅವರಿಗೆ ಮತ ನೀಡುವಂತೆ ಕೋರಿದರು.

ಅಲ್ಲೇ ಇದ್ದ ಕೆಲವರು, ‘ಅಭ್ಯರ್ಥಿ ಹೆಸರು ಹೇಳಬೇಡಿ. ಇದೆಲ್ಲ ಅವರ ಲೆಕ್ಕಕ್ಕೆ ಹೋಗುತ್ತೆ’ ಎಂದು ಪಿಸುಮಾತಿನಲ್ಲಿ ನೆನಪಿಸಿದರು.

ಅವರನ್ನು ಗದರಿದ ಸಿದ್ದರಾಮಯ್ಯ ‘ಅಭ್ಯರ್ಥಿ ವೇದಿಕೆ ಮೇಲೆ ಇರುವಂತಿಲ್ಲ. ಆದರೆ ಅವರ ಹೆಸರು ಹೇಳಬೇಡಿ ಎಂದೇನು ನಿರ್ಬಂಧ ಇಲ್ಲ. ರಾಜ್ಯದ ಮುಖ್ಯಮಂತ್ರಿ ಆಗಿ ಸುನಿಲ್ ಸೇರಿದಂತೆ ಪಕ್ಷದ 28 ಅಭ್ಯರ್ಥಿಗಳ ಹೆಸರಿನಲ್ಲಿ ಮತಯಾಚನೆ ಮಾಡುವ ಅಧಿಕಾರ, ಅವಕಾಶ ನನಗೆ ಇದೆ’ ಎಂದು ಸಮಜಾಯಿಷಿ ನೀಡಿದರು.

‘ನನ್ನ ಮೇಲಿನ ದ್ವೇಷದಿಂದ ರಾಜ್ಯಕ್ಕೆ ಅನ್ಯಾಯ’



ಕಲಬುರಗಿ: ‘ಪ್ರಧಾನಿ ನರೇಂದ್ರ ಮೋದಿ ಅವರಿಗೆ ನನ್ನ ಮೇಲೆ ಏನು ದ್ವೇಷ ವಿದೆಯೋ ಗೊತ್ತಿಲ್ಲ. ಕರ್ನಾಟಕಕ್ಕೆ ಅದರಲ್ಲೂ ಕಲ್ಯಾಣ ಕರ್ನಾಟಕಕ್ಕೆ ನಾವು ಹೇಳಿದ ಒಂದು ಕೆಲಸವನ್ನೂ ಮಾಡಿಲ್ಲ. ಕಲಬುರಗಿಯಲ್ಲಿ ನಮ್ಮ ಸರ್ಕಾರವೇ ನಿರ್ಮಿಸಿದ್ದ ಇಎಸ್‌ಐ ಆಸ್ಪತ್ರೆಯನ್ನು ಏಮ್ಸ್ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸಬೇಕು ಎಂಬ ಮನವಿಯನ್ನೂ ತಿರಸ್ಕರಿಸಿದ-ರು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬೇಸರ ವ್ಯಕ್ತಪಡಿಸಿದರು.

ನಗರದ ಎನ್.ವಿ. ಮೈದಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಪಕ್ಷದ ಅಭ್ಯರ್ಥಿ ರಾಧಾಕೃಷ್ಣ ದೊಡ್ಡಮನಿ ಪರ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ವಿವಿಧ ಸಂದರ್ಭದಲ್ಲಿ ಮೋದಿ ಅವರು ನಾನು ಭೇಟಿ ಮಾಡುತ್ತಿರುತ್ತೇವೆ. ಆಗ ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಬಗ್ಗೆ ಮನವಿ ಮಾಡಿಕೊಂಡಾಗ ಅವುಗಳನ್ನು ಕಿವಿಗೆ ಹಾಕಿಕೊಳ್ಳಲಿಲ್ಲ’ ಎಂದು ಹರಿಹಾಯ್ದರು.

‘ನನ್ನ ಅವಧಿಯಲ್ಲಿ ಯಾದಗಿರಿ ಜಿಲ್ಲೆಗೆ ಮಂಜೂರಾಗಿದ್ದ ರೈಲ್ವೆ ಬೋಗಿ ಕಾರ್ಖಾನೆಗೆ ಬೇಕೆಂತಲೇ ನಿರ್ಲಕ್ಷ್ಯ ವಹಿಸಲಾಗಿದೆ. ಈಗ ಅಲ್ಲಿ 300 ಕಾರ್ಮಿಕರು ಮಾತ್ರ ಕೆಲಸ ಮಾಡುತ್ತಿದ್ದು, ಕೇಂದ್ರ ಸರ್ಕಾರ ಕಾರ್ಖಾನೆಗೆ ಉತ್ತೇಜನ ನೀಡಿದ್ದರೆ 2 ಸಾವಿರ ಕಾರ್ಮಿಕರಿಗೆ ಉದ್ಯೋಗ ನೀಡಬಹುದಿತ್ತು’ ಎಂದರು.

‘ನಾವು ಮಾಡಿದ ಕೆಲಸದ 10 ಪೈಸೆಯಷ್ಟನ್ನಾದರೂ ಮೋದಿ ಅವರು ಮಾಡಿದ್ದರೆ ತಿಳಿಸಲಿ’ ಎಂದು ಸವಾಲು ಹಾಕಿದ ಖರ್ಗೆ, ‘ಇದು ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ಉಳಿಸಲು ಜನರಿಗೆ ಇರುವ ಕೊನೆಯ ಅವಕಾಶ. ಹೀಗಾಗಿ, ಈ ಬಾರಿ ಬಿಜೆಪಿಯನ್ನು ಸೋಲಿಸಬೇಕು’ ಎಂದು ಕರೆ ನೀಡಿದರು.

ನಾನಿನ್ನೂ ಸತ್ತಿಲ್ಲ, ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವಗಳ ಆಧಾರದಲ್ಲಿ ಸಮಾಜವನ್ನು ಕಟ್ಟಲು ನಾನು ಬದುಕಿದ್ದೇನೆ

ಮಲ್ಲಿಕಾರ್ಜುನ ಖರ್ಗೆ
ಎಐಸಿಸಿ ಅಧ್ಯಕ್ಷ

371 (ಜೆ) ಕಲಂ ಜಾರಿಗೊಳಿಸಲು ಶ್ರಮಿಸುವ ಮೂಲಕ ಮಲ್ಲಿಕಾರ್ಜುನ ಖರ್ಗೆ ಅವರು ಕಲ್ಯಾಣ ಕರ್ನಾಟಕಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ

ಡಿ.ಕೆ. ಶಿವಕುಮಾರ್,
ಉಪ ಮುಖ್ಯಮಂತ್ರಿ

ಸಿಎಂ ಆಗುವ ಹಂಬಲ ವ್ಯಕ್ತಪಡಿಸಿದ ಡಿ.ಕೆ.ಶಿ

ಅಫಜಲಪುರ (ಕಲಬುರಗಿ ಜಿಲ್ಲೆ): ಇಲ್ಲಿನ ಪ್ರಸಿದ್ಧ ತೀರ್ಥಕ್ಷೇತ್ರ ದೇವಲ ಗಾಣಗಾಪುರದ ದತ್ತಾತ್ರೇಯ ದೇವಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದತ್ತಾತ್ರೇಯ ಮಹಾರಾಜರ ಆಶೀರ್ವಾದದಿಂದ ಮುಖ್ಯಮಂತ್ರಿ-ಯಾದರೆ ಮತ್ತೊಮ್ಮೆ ದೇವಸ್ಥಾನಕ್ಕೆ ಬರುತ್ತೇನೆ’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಬೇಕಾದವರನ್ನೂ ಜೋಶಿ ತುಳಿಯುತ್ತಾರೆ: ದಿಂಗಾಲೇಶ್ವರ ಶ್ರೀ

ಹುಬ್ಬಳ್ಳಿ: ‘ಸರ್ವಾಧಿಕಾರಿ ಹಿಟ್ಲರ್ ತನಗೆ ಬೇಡದವರನ್ನು ಮಾತ್ರ ತುಳಿಯುತ್ತಿದ್ದ. ಆದರೆ, ಪ್ರಲ್ಹಾದ ಜೋಶಿ ತಮಗೆ ಬೇಕಾದವರನ್ನೂ ತುಳಿಯುತ್ತಾರೆ. ಅವರನ್ನು ಯಾರಿಗೆ ಹೋಲಿಸಬೇಕು? ಜೋಶಿ ಕೈಯಲ್ಲಿ ಆ ಹಿಟ್ಲರ್ ತರಬೇತಿ ಪಡೆಯಬೇಕಿತ್ತು’ ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿ, ‘ಬಿ.ಎಸ್. ಯಡಿಯೂರಪ್ಪ, ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಕೆ.ಎಸ್. ಈಶ್ವರಪ್ಪ ಅವರನ್ನು ಕೆಳಗಿಳಿಸುವಾಗ ಜೋಶಿ ಬಾಯಿ ಮುಚ್ಚಿಕೊಂಡು ಕೂತಿದ್ದರು. ಈಗ ಅವರಿಗೆ ಈ ಸ್ಥಿತಿ ಬಂದಾಗ ಎಲ್ಲ ಸಮುದಾಯಗಳ ನಾಯಕರು ಇವರ ಪರ ಹೋರಾಟ ಮಾಡಬೇಕಾ’ ಎಂದರು.

‘ನಾನು ಸ್ಪರ್ಧಿಸುತ್ತಿರುವ ಕಾರಣ ಬಿಜೆಪಿಯ ಪ್ರಲ್ಹಾದ ಜೋಶಿ ಹತಾಶರಾಗಿದ್ದಾರೆ. ಎಲ್ಲಾ ಜಾತಿಯ ನಾಯಕರನ್ನು ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಅವರು ನಿಸ್ಸೀಮರು’ ಎಂದು ಟೀಕಿಸಿದರು.

‘ನನ್ನ ತೇಜೋವಧೆಗೆ ಸಮಾಜವನ್ನೇ ಒಡೆದು, ನನ್ನ ವಿರುದ್ಧ ನಿಲ್ಲಿಸುವ ಪ್ರಯತ್ನ ನಡೆದಿದೆ. ನನ್ನ ವಿರುದ್ಧ ಭಕ್ತರನ್ನು ಎತ್ತಿಕಟ್ಟಿ, ಅವರಿಂದ ಪತ್ರಿಕಾಗೋಷ್ಠಿ ಮಾಡಿಸಿದ್ದಾರೆ. ಇಂತಹ ಅನೇಕ ಕುತಂತ್ರ ಅವರು ಮಾಡಿದ್ದಾರೆ’ ಎಂದರು.

‘ತಮ್ಮ ಹಿರಿತನ ಉಳಿಸಿ ಕೊಳ್ಳಲು ಜೋಶಿ ಪಕ್ಷದ ಹಿರಿಯ ನಾಯಕರನ್ನು ಮೂಲೆಗುಂಪು ಮಾಡಿದ್ದಾರೆ. ಕರಡಿ ಸಂಗಣ್ಣ, ಶಿವಕುಮಾರ ಉದಾಸಿ, ಜಿ.ಎಂ. ಸಿದ್ದೇಶ್ವರ, ಮಹೇಶ ನಾಲವಾಡ ಸೇರಿ ಹಲವರನ್ನು ರಾಜಕೀಯವಾಗಿ ನಾಶ ಮಾಡಿದ್ದಾರೆ. ನಮ್ಮ ಸಮಾಜಕ್ಕೆ ಕಂಟಕಪ್ರಾಯರಾಗಿ ದ್ದಾರೆ’ ಎಂದು ಆರೋಪಿಸಿದರು.



ಸಚಿವ ಡಿ.ಸುಧಾಕರ್‌ಗೆ ಘೇರಾವ್

ಚಿತ್ರದುರ್ಗ: ಲೋಕಸಭಾ ಚುನಾವಣೆಯ ಚಿತ್ರದುರ್ಗ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಿ.ಎನ್. ಚಂದ್ರಪ್ಪ ಪರ ಪ್ರಚಾರಕ್ಕೆ ಬಂದಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಅವರಿಗೆ ಕುಡಿಯುವ ನೀರಿನ ಸಮಸ್ಯೆ ನೀಗಿಸುವಂತೆ ಕೋರಿ ಗ್ರಾಮಸ್ಥರು ಘೇರಾವ್ ಹಾಕಿದ ಘಟನೆ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ದಿಂಡಾವರ ಗ್ರಾಮದಲ್ಲಿ ಶುಕ್ರವಾರ ನಡೆಯಿತು.

‘2 ತಿಂಗಳಿನಿಂದ ನೀರಿಗಾಗಿ ಪಡಿಪಾಟಲು ಪಡುತ್ತಿದ್ದೇವೆ. ತೀವ್ರ ಸಮಸ್ಯೆ ಇದ್ದರೂ ತಾಲ್ಲೂಕು ಆಡಳಿತ ಕ್ರಮ ತೆಗೆದುಕೊಂಡಿಲ್ಲ’ ಎಂದು ದೂರಿದ ಗ್ರಾಮಸ್ಥರು ಸಚಿವರ ಕಾರು ತಡೆದರು. ಗ್ರಾಮಸ್ಥರ ಮನವೊಲಿಸುವ ಪ್ರಯತ್ನ ವಿಫಲವಾಗಿದ್ದರಿಂದ ಸಚಿವರು ಪ್ರಚಾರ ಕಾರ್ಯ ಮೊಟಕುಗೊಳಿಸಿ ಮರಳಿದರು. ಪ್ರತಿಭಟನೆಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

ಪ್ರಚಾರಕ್ಕೆ ಅನುವು ಮಾಡಿಕೊಡುವಂತೆ ಕಾಂಗ್ರೆಸ್ ಮುಖಂಡರ ಕೋರಿಕೆಗೆ ಗ್ರಾಮಸ್ಥರು ಮಣಿಯಲಿಲ್ಲ. ‘ದಿಂಡಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಟ್ಯಾಂಕರ್ ಮೂಲಕ ಪೂರೈಕೆ ಮಾಡುವ ನೀರು ಸಾಕಾಗುತ್ತಿಲ್ಲ. ನೀರು ಪೂರೈಕೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ಗ್ರಾಮದ ಕೆರೆಗಳಿಗೆ ವಾಣಿವಿಲಾಸ ಸಾಗರ ಜಲಾಶಯದಿಂದ ನೀರು ಹರಿಸಬೇಕು’ ಎಂದು ಗ್ರಾಮಸ್ಥರು ಆಗ್ರಹಿಸಿದರು.

ಪಕ್ಷದ ಮುಖಂಡರು ಉತ್ತರ ಕೊಡಲಿ: ವಿಪಕ್ಷ ನಾಯಕ ಅಶೋಕ ಸವಾಲು

‘ಕದ್ದಾಲಿಕೆ ಹಿಂದೆ ಕಾಂಗ್ರೆಸ್ ಕೈವಾಡ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ನಿರ್ಮಲಾನಂದನಾಥ ಶ್ರೀಗಳ ಫೋನ್ ಕದ್ದಾಲಿಕೆ ಪ್ರಕರಣದಲ್ಲಿ ಕಾಂಗ್ರೆಸ್ ಕೈವಾಡವಿದೆ. ಕುಮಾರಸ್ವಾಮಿ ನೇತೃತ್ವದ ಸಮ್ಮಿಶ್ರ ಸರ್ಕಾರದಲ್ಲಿ ಕಾಂಗ್ರೆಸ್‌ನ ಜಿ.ಪರಮೇಶ್ವರ ಅವರೇ ಗೃಹಸಚಿವರಾಗಿದ್ದರು, ಇದಕ್ಕೆ ಕಾಂಗ್ರೆಸ್ ಮುಖಂಡರೇ ಉತ್ತರ ಕೊಡಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಶುಕ್ರವಾರ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾಂಗ್ರೆಸ್‌ನವರು ಆದಿಚುಂಚನಗಿರಿ ಮಠಕ್ಕೆ ಹೋದರೆ ಏನೂ ತೊಂದರೆ ಇಲ್ಲ, ನಾವು ಹೋದರೆ ಮಾತ್ರ ದೊಡ್ಡದಾಗಿ ಟೀಕಿಸುತ್ತಾರೆ. ಬಿಜೆಪಿಯೇ ಕುಮಾರಸ್ವಾಮಿ ಸರ್ಕಾರ ಬೀಳಿಸಿತೆಂದು ಆರೋಪಿಸುತ್ತಾರೆ. ಶಾಸಕರನ್ನು ಬಿಜೆಪಿಗೆ ಕಳುಹಿಸಿದ್ದೇ ಸಿದ್ದರಾಮಯ್ಯ, ಸಿದ್ದವನದಲ್ಲಿ ಆದ ಯೋಜನೆಗಳ ಬಗ್ಗೆಯೂ ಮಾತನಾಡಲಿ’ ಎಂದರು.

‘ರಾಜ್ಯದಲ್ಲಿ ಲಿಂಗಾಯತರನ್ನು ಬಿಟ್ಟರೆ ಒಕ್ಕಲಿಗ ಸಮುದಾಯದವರೇ ಹೆಚ್ಚಿದ್ದರೂ ಸಮುದಾಯಕ್ಕೆ 6ನೇ ಸ್ಥಾನ ನೀಡಲಾಗಿದೆ. ಸಿದ್ದರಾಮಯ್ಯನವರೇ ಜಾತಿ ಗಣತಿಯಲ್ಲಿ ಇದನ್ನು ಬರೆಸಿದ್ದಾರೆ’ ಎಂದು ದೂರಿದರು.

‘ಏ.14ರಂದು ಮೈಸೂರಿನಲ್ಲಿ ನಡೆಯಲಿರುವ ಪ್ರಧಾನಿ ಮೋದಿ ಕಾರ್ಯಕ್ರಮದಲ್ಲಿ ಸಂಸದೆ ಸುಮಲತಾ ಅವರೂ ಪಾಲ್ಗೊಳ್ಳಲಿದ್ದಾರೆ. ಸ್ಟಾರ್ ಪ್ರಚಾರಕಿಯಾಗಿರುವ ಅವರು ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು ಕ್ಷೇತ್ರಗಳಲ್ಲಿ ಪ್ರಚಾರ ನಡೆಸಲಿದ್ದಾರೆ. ಮಣ್ಣಿನ ಮಗ ಕುಮಾರಣ್ಣ ಪ್ರಧಾನಿ ನರೇಂದ್ರ ಮೋದಿ ಪಕ್ಕ ಕೂರಬೇಕು, ಕೇಂದ್ರದಲ್ಲಿ ಉನ್ನತ ಸ್ಥಾನ ಪಡೆಯಬೇಕು’ ಎಂದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ‘ಅಲಹಾಬಾದ್‌ನಲ್ಲಿ ಹುಟ್ಟಿದ ಇಂದಿರಾಗಾಂಧಿ ಚಿಕ್ಕಮಗಳೂರಿನಲ್ಲಿ, ಇಟಲಿಯಲ್ಲಿ ಜನಿಸಿದ ಸೋನಿಯಾಗಾಂಧಿ ಬಳ್ಳಾರಿಯಲ್ಲಿ ಸ್ಪರ್ಧಿಸಬಹುದು. ದೆಹಲಿಯಲ್ಲಿ ಹುಟ್ಟಿದ ರಾಹುಲ್ ಗಾಂಧಿ ವಯನಾಡ್‌ನಲ್ಲಿ ನಿಲ್ಲಬಹುದು, ಮೈಸೂರಿನಲ್ಲಿ ಹುಟ್ಟಿದ ಸಿದ್ದರಾಮಯ್ಯ ಬಾದಾಮಿಗೆ ಓಡಿ ಹೋಗಬಹುದು. ಕಾವೇರಿ ಉಳಿಸಿದ ದೇವೇಗೌಡರ ಮಗ ಮಂಡ್ಯದಲ್ಲಿ ಏಕೆ ಸ್ಪರ್ಧಿಸಬಾರದು’ ಎಂದು ಪ್ರಶ್ನಿಸಿದರು.

‘ದೇಶ ಕಾಯಲು ಮೋದಿ ಇದ್ದರೆ, ಕಾವೇರಿ ನದಿ ಕಾಯಲು ಕುಮಾರಣ್ಣ ಇರುತ್ತಾರೆ. ಮೋದಿ ಸಂಪುಟದಲ್ಲಿ ಕುಮಾರಣ್ಣ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ. ಸ್ಟಾರ್ ಚಂದ್ರು ದುಡ್ಡು ಖಾಲಿಯಾಗುತ್ತದೆಯೇ ಹೊರತು ಮತ ಬೀಳುವುದಿಲ್ಲ. ಕುಮಾರಣ್ಣ 2 ಲಕ್ಷ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ. ಅಂಬರೀಷ್ ನಂತರ ಮಂಡ್ಯಕ್ಕೆ ಕೇಂದ್ರ ಸಚಿವ ಸ್ಥಾನ ಒಲಿದು ಬರಲಿದೆ’ ಎಂದರು.

‘ಒಕ್ಕಲಿಗರ ನಾಯಕತ್ವ ಯಾರ ಸ್ವತ್ತೂ ಅಲ್ಲ’


ಡಿ.ಕೆ.ಸುರೇಶ್

ರಾಮನಗರ: ‘ಒಕ್ಕಲಿಗರ ನಾಯಕತ್ವ ಯಾರ ಸ್ವತ್ತೂ ಅಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಾನು ಮಾತ್ರ ಒಕ್ಕಲಿಗರ ನಾಯಕ ಎಂಬ ಭಾವನೆಯನ್ನು ಇಟ್ಟುಕೊಂಡಿಲ್ಲ. ಸಮುದಾಯದವರು ಸ್ವಾಭಿಮಾನಿಗಳು. ಯಾರನ್ನು, ಯಾವಾಗ, ಏನು ಮಾಡಬೇಕೆಂಬುದು ಅವರಿಗೆ ಚನ್ನಾಗಿ ಗೊತ್ತಿದೆ’ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಹೇಳಿದರು.

ನಗರದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರ ಒಕ್ಕಲಿಗ ನಾಯಕತ್ವ ಕುರಿತ ಹೇಳಿಕೆಗೆ ತಿರುಗೇಟು ನೀಡಿದರು.

‘ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಬೀಳಿಸುವ ಸಂದರ್ಭದಲ್ಲಿ ಯಾರು ಅದರ ನೇತೃತ್ವ ವಹಿಸಿದ್ದರೋ, ಅವರನ್ನೇ ಕುಮಾರಸ್ವಾಮಿ ಆದಿಚುಂಚನಗಿರಿ ಮಠಕ್ಕೆ ಕರೆದುಕೊಂಡು ಹೋಗಿರುವ ವಿಚಾರವನ್ನು ಮಾತ್ರ ಶಿವಕುಮಾರ್ ಪ್ರಸ್ತಾಪಿಸಿದ್ದಾರೆ. ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರಾಗಿರುವ ಶಿವಕುಮಾರ್ ಅವರಿಗೆ ಸಮುದಾಯವನ್ನು ಒಗ್ಗಟ್ಟಿನಿಂದ ಮುಂದೆ ತೆಗೆದುಕೊಂಡು ಹೋಗುವ ಜವಾಬ್ದಾರಿ ಇದೆ. ಸಮುದಾಯವೂ ಅವರ ಬೆಂಬಲಕ್ಕಿದೆ’ ಎಂದರು.

‘ಒಕ್ಕಲಿಗರು ಈ ಬಾರಿ ನಿಮಗೆ ತಕ್ಕ ಪಾಠ ಕಲಿಸಲಿದ್ದಾರೆ’ ಎಂಬ ಎಚ್‌ಡಿಕೆ ಹೇಳಿಕೆ ಕುರಿತ ಪ್ರಶ್ನೆಗೆ, ‘ರಾಜಕೀಯವಾಗಿ ಅವರು ಈ ರೀತಿ ಹೇಳಿಕೆ ನೀಡುತ್ತಲೇ ಬಂದಿದ್ದಾರೆ. ಅವರು ಹೇಳುವುದೆಲ್ಲ ಸತ್ಯವೇ? ಪ್ರತಿ ಹಂತದಲ್ಲೂ ಅವರು ರಾಜಕೀಯ ಮಾಡಿಕೊಂಡು ಬರುತ್ತಿದ್ದಾರೆ. ದೇವೇಗೌಡರ ಕುಟುಂಬ ಹಿಂದಿನಿಂದಲೂ ಶಿವಕುಮಾರ್ ಅವರ ಮೇಲೆ ಹಗೆತನ ಸಾಧಿಸುತ್ತಿದೆ’ ಎಂದರು.

‘ಚುನಾವಣೆ ಸಂದರ್ಭದಲ್ಲಿ ಅವರು ಬೇರೆ ರೀತಿ ವ್ಯಾಖ್ಯಾನ ಮಾಡಿದರೆ ನಾನು ಅದಕ್ಕೆ ಉತ್ತರ ನೀಡಲಾರೆ. ವೈಯಕ್ತಿಕವಾಗಿ ಟೀಕೆ ಮಾಡುತ್ತಿರುವ ಕುಮಾರಸ್ವಾಮಿ, ಚುನಾವಣೆ ನಂತರ ಚರ್ಚೆಗೆ ಕರೆಯಲಿ. ಆಗ ನಾನು ಚರ್ಚಿಸಲು ಸಿದ್ಧ’ ಎಂದು ಸವಾಲು ಹಾಕಿದರು.

ಅಶೋಕ ವಿರುದ್ಧ ಚುನಾವಣಾಧಿಕಾರಿಗೆ ಕಾಂಗ್ರೆಸ್ ದೂರು

ಬೆಂಗಳೂರು: ಆದಿಚುಂಚನಗಿರಿ ಮಠದ ಬೆಂಗಳೂರಿನ ವಿಜಯನಗರ ಶಾಖಾ ಮಠವನ್ನು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಚುನಾವಣಾ ರಾಜಕೀಯಕ್ಕೆ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್ ಪಕ್ಷ, ಅವರ ವಿರುದ್ಧ ಕ್ರಮ ಜರುಗಿಸುವಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ಸಲ್ಲಿಸಿದೆ.

ಅಶೋಕ ಅವರು ಬುಧವಾರ (ಏಪ್ರಿಲ್ 10) ಮಠಕ್ಕೆ ಭೇಟಿ ನೀಡಿ ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದ ಸ್ವಾಮೀಜಿ ಅವರೊಂದಿಗೆ ಮಾತುಕತೆ ನಡೆಸಿದ್ದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿ, ‘ಆದಿಚುಂಚನಗಿರಿ ಮಠವು ಬಿಜೆಪಿಯ ಶಕ್ತಿ ಕೇಂದ್ರ. ಈ ಮಠದ ಆಶೀರ್ವಾದ ಪಡೆದ ನಮ್ಮ ಎಲ್ಲ ಅಭ್ಯರ್ಥಿಗಳೂ ಗೆಲ್ಲುತ್ತಾರೆ. ಅದೇ ವಿಶ್ವಾಸದಿಂದ ಹೊರಡುತ್ತಿದ್ದೇವೆ’ ಎಂದು ಹೇಳಿದ್ದರು.

ಅಶೋಕ ಅವರ ಹೇಳಿಕೆಯ ವಿಡಿಯೊ ತುಣುಕನ್ನು ಲಗತ್ತಿಸಿ ಕೆಪಿಸಿಸಿ ಮುಖ್ಯ ವಕ್ತಾರ ನಟರಾಜ್ ಗೌಡ ಹಾಗೂ ಕಾನೂನು ಘಟಕದ ಪ್ರಧಾನ ಕಾರ್ಯದರ್ಶಿ ಸೂರ್ಯ ಮುಕುಂದರಾಜ್ ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರಿಗೆ ಶುಕ್ರವಾರ ದೂರು ಸಲ್ಲಿಸಿದ್ದಾರೆ.

‘ರಾಜಕೀಯಕ್ಕೆ ಮಠ ಎಳೆಯಬೇಡಿ’

ಪ್ರಜಾವಾಣಿ ವಾರ್ತೆ

ಆರ್. ಅಶೋಕ

ಬೆಂಗಳೂರು: ‘ಮಂಡ್ಯದಲ್ಲಿ ಸೋಲುವ ಭೀತಿಯಿಂದ ಕಾಂಗ್ರೆಸ್ ಪಕ್ಷ ಆದಿಚುಂಚನಗಿರಿ ಮಠವನ್ನು ಚುನಾವಣಾ ರಾಜಕೀಯಕ್ಕೆ ಎಳೆದು ತಂದು ಗೊಂದಲ ಸೃಷ್ಟಿಸುವ ಹತಾಶ ಪ್ರಯತ್ನ ನಡೆಸಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದ್ದಾರೆ.

ಈ ಕುರಿತು ‘ಎಕ್ಸ್’ ಮಾಡಿರುವ ಅವರು, ‘ಸೋಲಿನ ಸುಳಿವು ಸಿಗುತ್ತಿದ್ದಂತೆ ಮಾನಸಿಕ ಸ್ಥಿಮಿತ ಕಳೆದುಕೊಂಡಿರುವ ಸಚಿವ ಚಲುವರಾಯಸ್ವಾಮಿ ಅವರು ಆದಿಚುಂಚನಗಿರಿ ಮಠ ಮತ್ತು ಸ್ವಾಮೀಜಿಯವರನ್ನು ರಾಜಕೀಯಕ್ಕೆ ಎಳೆದು ತಂದಿದ್ದಾರೆ’ ಎಂದು ಹರಿಹಾಯ್ದಿದ್ದಾರೆ.

‘ಚಲುವರಾಯಸ್ವಾಮಿ ಅವರೇ, ಮಠಗಳು ಅಂದರೆ ಅದು ಸಮಾಜಕ್ಕೆ ಸನ್ಮಾರ್ಗ ತೋರುವ ಅಧ್ಯಾತ್ಮದ ಕೇಂದ್ರಗಳು. ಬಡ ಬಗ್ಗರಿಗೆ ಅನ್ನ, ಅಕ್ಷರ, ಆಶ್ರಯ, ಆರೋಗ್ಯ ದಾಸೋಹ ನೀಡುವ ಸೇವಾ ಕೇಂದ್ರಗಳು. ಮಸೀದಿಗಳು, ಮದರಸಾಗಳು, ಮೌಲ್ವಿಗಳನ್ನು ಬಳಸಿಕೊಂಡು ವೋಟ್ ಬ್ಯಾಂಕ್ ಗ್ಯಾರಂಟಿ ಮಾಡಿಕೊಳ್ಳುವ ರಾಜಕಾರಣಕ್ಕೆ ಒಗ್ಗಿಕೊಂಡಿರುವ ನಿಮ್ಮ ಕಾಂಗ್ರೆಸ್ ಪಕ್ಷದ ಕಾಮಾಲೆ ಕಣ್ಣಿಗೆ ಎಲ್ಲವೂ ಹಳದಿಯಾಗಿಯೇ ಕಾಣುವುದು ಸಹಜ’ ಎಂದು ಕುಟುಕಿದ್ದಾರೆ.

‘ಮಠಗಳು ರಾಜಕೀಯ ನಾಯಕರನ್ನು ಸೃಷ್ಟಿಸುವ ಕೇಂದ್ರಗಳಲ್ಲ. ರಾಜಕೀಯ ನಾಯಕರನ್ನು ಬೆಳೆಸುವುದು ಅಂದರೆ ಅದು ಕಮಿಷನ್ ಕೊಟ್ಟು ಕಾಂಟ್ರಾಕ್ಟ್ ಪಡೆದುಕೊಂಡಷ್ಟು ಸುಲಭವೂ ಅಲ್ಲ. ಆದಿಚುಂಚನಗಿರಿ ಮಠಕ್ಕೆ ತನ್ನದೇ ಆದ ಘನತೆ ಇದೆ. ನಿಮ್ಮ ಕೀಳು ರಾಜಕೀಯಕ್ಕೆ ಆದಿಚುಂಚನಗಿರಿ ಮಠವನ್ನು ಎಳೆದು ತಂದು ಶ್ರೀಗಳಿಗೆ ಮುಜುಗರ ಉಂಟು ಮಾಡುವ ಪಾಪದ ಕೆಲಸ ಮಾಡಬೇಡಿ’ ಎಂದು ಹೇಳಿದ್ದಾರೆ.

ಬಿಜೆಪಿ–ಟಿಎಂಸಿ ವಾಕ್ಸಮರ

ಒಂದನೇ ಪುಟದಿಂದ...

ಈ ಬೆನ್ನಲ್ಲೇ ಟಿಎಂಸಿ ನಾಯಕ ಕುನಾಲ್ ಘೋಷ್, ‘ಆರೋಪಿಗಳನ್ನು ಪಶ್ಚಿಮ ಬಂಗಾಳ ಪೊಲೀಸರ ನೆರವಿನಿಂದ ಎನ್‌ಐಎ ಬಂಧಿಸಿದೆ’ ಎಂದು ತಿರುಗೇಟು ನೀಡಿದ್ದಾರೆ.

‘ಸಮಾಜ ವಿರೋಧಿಗಳು ಯಾರೇ ಆಗಿರಲಿ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪ್ರಕರಣದ ಆರೋಪಿಗಳನ್ನು ಬಂಧಿಸಿದ್ದು ಪಶ್ಚಿಮ ಬಂಗಾಳದ ಕಾಂಥಿಯಲ್ಲಿ. ಬಿಜೆಪಿಯ ಪ್ರಮುಖ ನಾಯಕ ಮತ್ತು ಅವರ ಕುಟುಂಬದವರು ಕಾಂಥಿಯಲ್ಲಿ ಅಕ್ರಮ ಚಟುವಟಿಕೆ ನಡೆಸುತ್ತಾರೆ ಎಂದು ಎಲ್ಲರಿಗೂ ತಿಳಿದಿದೆ’ ಎಂದು ಹೇಳಿದ್ದಾರೆ.

ಕಾಂಥಿ ಕ್ಷೇತ್ರವು ಬಿಜೆಪಿಯ ಸುವೇಂದು ಅಧಿಕಾರಿ ಅವರ ಭದ್ರಕೋಟೆಯಾಗಿದೆ.

ಕೂಚ್ ಬಿಹಾರ್‌ನಲ್ಲಿ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ‘ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಸುಳ್ಳುಸುದ್ದಿ ಹರಡುತ್ತಿದೆ’ ಎಂದು ಕಿಡಿಕಾರಿದ್ದಾರೆ.

‘ಬಂಗಾಳ ಸುರಕ್ಷಿತ ಅಲ್ಲ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದ್ದಾರೆ. ರಾಜ್ಯದ ಪೊಲೀಸರ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಆರೋಪಿಗಳನ್ನು 2 ಗಂಟೆಗಳಲ್ಲಿ ಬಂಧಿಸಲಾಗಿದೆ’ ಎಂದು ಹೇಳಿದ್ದಾರೆ.

ಬಿಜೆಪಿ ಆರೋಪವನ್ನು ಪಶ್ಚಿಮ ಬಂಗಾಳ ಪೊಲೀಸ್ ಇಲಾಖೆ ಕೂಡ ತಳ್ಳಿಹಾಕಿದೆ. ‘ಬಿಜೆಪಿಯ ಸುಳ್ಳನ್ನು ಪಶ್ಚಿಮ ಬಂಗಾಳ ಪೊಲೀಸ್ ಇಲಾಖೆಯು ಬಹಿರಂಗಪಡಿಸುತ್ತದೆ. ಆರೋಪಿಗಳನ್ನು ಗುಪ್ತಚರ ದಳ ಮತ್ತು ಪೊಲೀಸ್ ಇಲಾಖೆಯ ಜಂಟಿ ಕಾರ್ಯಾಚರಣೆಯಲ್ಲಿ ಬಂಧಿಸಲಾಗಿದೆ. ಕಾರ್ಯಾಚರಣೆಯಲ್ಲಿ ಪಶ್ಚಿಮ ಬಂಗಾಳ ಪೊಲೀಸ್ ಇಲಾಖೆಯ ಪಾತ್ರ ಏನೆಂದು ಎನ್‌ಐಎ ದೃಢಪಡಿಸಿದೆ’ ಎಂದು ಅದು ಸ್ಪಷ್ಟನೆ ನೀಡಿದೆ.

ಸೋಲಿನ ಭೀತಿಗೆ ಅಪಪ್ರಚಾರ: ಜೆಡಿಎಸ್

ಬೆಂಗಳೂರು: ಕಾಂಗ್ರೆಸ್ ನಾಯಕರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಲಿನ ಭೀತಿಯಿಂದ ಅಪಪ್ರಚಾರದಲ್ಲಿ ತೊಡಗಿದ್ದಾರೆ ಎಂದು ಜೆಡಿಎಸ್ ಟೀಕಿಸಿದೆ.

ಈ ಕುರಿತು ‘ಎಕ್ಸ್’ನಲ್ಲಿ ಹೇಳಿಕೆ ನೀಡಿರುವ ಜೆಡಿಎಸ್ ರಾಜ್ಯ ಘಟಕ, ಸೋಲುವ ಭೀತಿಯಿಂದ ಕಾಂಗ್ರೆಸ್ ನಾಯಕರು ಜೆಡಿಎಸ್ ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುವ ಕೆಲಸ ಮಾಡಲಾತ್ತಿದ್ದಾರೆ. ಕಾಂಗ್ರೆಸ್ ಕಾರ್ಯಕರ್ತರನ್ನೇ ಜೆಡಿಎಸ್ ನಾಯಕರು ಎಂದು ಬಿಂಬಿಸುತ್ತಾ ಪಕ್ಷದ ಶಾಲು ಹಾಕಿಸಿ ಕಾಂಗ್ರೆಸ್‌ಗೆ ಸೇರುತ್ತಿದ್ದಾರೆ ಎಂದು ಬಿಂಬಿಸುತ್ತಿದ್ದಾರೆ ಎಂದು ದೂರಿದೆ.

ಸೋಲಿನ ಭೀತಿಯಿಂದ ಗಿಮಿಕ್ ಮಾಡುತ್ತಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸುಳ್ಳು ಹೇಳಿ ಅಪಪ್ರಚಾರ ಮಾಡುವುದನ್ನು ಕರಗತ ಮಾಡಿಕೊಂಡಿದ್ದಾರೆ. ಇಂತಹ ಬುದ್ದಿಯನ್ನು ಬಿಡಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಕಾಂಗ್ರೆಸ್‌ನಿಂದ ಶಂಕಿತ ಉಗ್ರರ ಓಲೈಕೆ: ಬಿಜೆಪಿ ಆರೋಪ

ಬೆಂಗಳೂರು: ಭಯೋತ್ಪಾದನಾ ಪ್ರಕರಣದ ಶಂಕಿತರನ್ನೂ ಕಾಂಗ್ರೆಸ್ ಪಕ್ಷ ಓಲೈಕೆ ಮಾಡುತ್ತಿರುವುದು ಕಳವಳಕಾರಿ ವಿಚಾರ ಎಂದು ಬಿಜೆಪಿ ಮುಖ್ಯ ವಕ್ತಾರ ಅಶ್ವತ್ಥನಾರಾಯಣಗೌಡ ಹೇಳಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಸಚಿವರಿಗೆ ದೇಶ ಸುರಕ್ಷತೆ, ಭದ್ರತೆ ಮತ್ತು ನಾಗರಿಕ ಸಮಾಜದ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ. ಕರ್ನಾಟಕ ಮತ್ತು ಬೆಂಗಳೂರಿನಲ್ಲಿ ಭಯೋತ್ಪಾದಕರು ನೆಲೆವೂರಲು ಅವಕಾಶ ನೀಡುತ್ತಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಆಪಾದಿಸಿದರು.

ಭಯೋತ್ಪಾದಕ ಕೃತ್ಯದ ಶಂಕಿತರನ್ನು ನಿರಪರಾಧಿಗಳು ಎಂದು ಹೇಳುವುದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಚಾಳಿ ಆಗಿದೆ. ರಾಮೇಶ್ವರಂ ಕೆಫೆ ಸ್ಫೋಟಕ್ಕೂ ಬಿಜೆಪಿಗೂ ಸಂಬಂಧವಿದೆ ಎಂದು ಕೆಟ್ಟದಾಗಿ ಬಿಂಬಿಸಲು ಕಾಂಗ್ರೆಸ್ ಯತ್ನ ನಡೆಸಿತು. ಈ ಸ್ಫೋಟದ ತನಿಖೆಯ ದಾರಿ ತಪ್ಪಿಸಲು ಇನ್ನಿಲ್ಲದ ಪ್ರಯತ್ನ ನಡೆಸಿತು. ಉದ್ಯಮಗಳ ನಡುವಿನ ದ್ವೇಷದ ಘಟನೆ ಎಂಬುದಾಗಿ ಬಿಂಬಿಸಲೂ ಯತ್ನಿಸಿತು. ಆದರೆ, ಅವರ ಪ್ರಯತ್ನ ವಿಫಲವಾಯಿತು. ಆರೋಪಿಗಳಿಗೆ ಐಎಸ್ ಭಯೋತ್ಪಾದನಾ ಸಂಘಟನೆ ಜತೆ ಸಂಪರ್ಕ ಇರುವುದು ಬಯಲಾಗಿದೆ ಎಂದರು.

‘ಆರೋಪಿಗಳು ಪಶ್ಚಿಮ ಬಂಗಾಳದಲ್ಲಿ ಆಧಾರ್ ಕಾರ್ಡ್ ಮತ್ತಿತರ ದಾಖಲೆಗಳನ್ನು ಸಿದ್ಧಪಡಿಸಿಕೊಂಡಿದ್ದರು ಎಂದೂ ತಿಳಿದು ಬಂದಿದೆ. ಕರ್ನಾಟಕ ಮತ್ತು ಬೆಂಗಳೂರನ್ನು ಭಯೋತ್ಪಾದನಾ ಚಟುವಟಿಕೆಯ ಕೇಂದ್ರ ತಾಣವಾಗಿ ಮಾಡಿಕೊಂಡಿದ್ದಾರೆ’ ಎಂದು ಅವರು ಆರೋಪಿಸಿದರು.

ಪಶ್ಚಿಮ ಬಂಗಾಳ, ತಮಿಳುನಾಡು ಸೇರಿ ‘ಇಂಡಿ’ ಒಕ್ಕೂಟ ಅಧಿಕಾರ ಇರುವ ರಾಜ್ಯಗಳಲ್ಲಿ ಇಂಥವರಿಗೆ ನೆಲೆ ನೀಡಲಾಗುತ್ತಿದೆ. ಇವರು ನಿರಾತಂಕವಾಗಿ ವಿವಿಧ ದಾಖಲೆ ಪತ್ರಗಳನ್ನೂ ಮಾಡಿಸಿಕೊಳ್ಳುತ್ತಿದ್ದಾ-ರೆ. ಆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಭಯೋತ್ಪಾದಕ ಚಟುವಟಿಕೆ-ಗಳನ್ನು ನಿರ್ಲಕ್ಷಿಸಿದೆ. ಮಂಗಳೂರಿನಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಆದಾಗಲೂ ಭಯೋತ್ಪಾದಕ ಶಂಕಿತರ ಬಗ್ಗೆ ಮೃದು ಧೋರಣೆ ಅನುಸರಿಸಿತ್ತು ಎಂದು ಅಶ್ವತ್ಥನಾರಾಯಣ ದೂರಿದರು.

ಮುಸಾವೀರ್, ತಾಹಾ ಸೆರೆ

ಒಂದನೇ ಪುಟದಿಂದ...

‘ಕೇಂದ್ರ ಗುಪ್ತಚರ ದಳ, ಪಶ್ಚಿಮ ಬಂಗಾಳ, ತೆಲಂಗಾಣ, ಕರ್ನಾಟಕ ಹಾಗೂ ಕೇರಳ ಪೊಲೀಸರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ ಹೋಟೆಲ್‌ನಲ್ಲಿಯೇ ಶಂಕಿತರನ್ನು ಬಂಧಿಸಲಾಯಿತು’ ಎಂದು ಅವರು ಹೇಳಿದರು.

ಹಲವು ವರ್ಷಗಳ ಸಂಚು: ‘ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಭಯೋತ್ಪಾದನಾ ಸಂಘಟನೆಯ ಉಗ್ರರ ಜೊತೆ ಸಂಪರ್ಕದಲ್ಲಿದ್ದ ವ್ಯಕ್ತಿಗಳ ಜೊತೆ ಮುಸಾವೀರ್ ಹಾಗೂ ಅಬ್ದುಲ್ ಮಥೀನ್ ಒಡನಾಟ ಇಟ್ಟುಕೊಂಡಿದ್ದರು. ಭಯೋತ್ಪಾದನಾ ಕೃತ್ಯ ಎಸಗಲು ಹಲವು ವರ್ಷಗಳಿಂದ ಇವರಿಬ್ಬರು ಸಂಚು ರೂಪಿಸುತ್ತಿದ್ದರು. ಶಿವಮೊಗ್ಗದ ಟ್ರಯಲ್ ಬಾಂಬ್ ಸ್ಫೋಟ ಪ್ರಕರಣದಲ್ಲೂ ಇವರಿಬ್ಬರು ಭಾಗಿಯಾಗಿದ್ದರು’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟಿಸುವ ಬಗ್ಗೆ ಅಬ್ದುಲ್ ಮಥೀನ್ ಸಂಚು ರೂಪಿಸಿದ್ದ. ಯಾವ ಬಾಂಬ್ ಇರಿಸಬೇಕು? ಯಾವ ಸಮಯದಲ್ಲಿ ಇರಿಸಬೇಕು? ಯಾರು ಇರಿಸಬೇಕು? ಎಂಬಿತ್ಯಾದಿ ವಿಷಯಗಳ ಕುರಿತು ನಿರ್ಧರಿಸಿ ಸಿದ್ಧತೆ ಮಾಡಿಕೊಂಡಿದ್ದ. ಮುಸಾವೀರ್‌ಗೆ ವಿಷಯ ತಿಳಿಸಿ, ಬಾಂಬ್ ಇಟ್ಟು ಬರುವಂತೆ ಸೂಚಿಸಿದ್ದ. ನಂತರ, ಇಬ್ಬರೂ ಸೇರಿ ಕಚ್ಚಾ ಬಾಂಬ್ (ಐಇಡಿ) ತಯಾರಿಸಿದ್ದರು. ಅದನ್ನು ಮುಸಾವೀರ್, ರಾಮೇಶ್ವರಂ ಕೆಫೆಯಲ್ಲಿ ಇರಿಸಿ ಪರಾರಿಯಾಗಿದ್ದ’ ಎಂದು ತಿಳಿಸಿವೆ.

ಬಾಂಬ್ ಸ್ಫೋಟ ಪ್ರಕರಣದಲ್ಲಿ ಚಿಕ್ಕಮಗಳೂರಿನ ಮುಜಮ್ಮಿಲ್ ಶರೀಫ್ ಹಾಗೂ ತೀರ್ಥಹಳ್ಳಿಯ ಮಾಝ್ ಮುನೀರ್ ಅಹಮದ್‌ನನ್ನು ಎನ್‌ಐಎ ಅಧಿಕಾರಿಗಳು ಈಗಾಗಲೇ ಬಂಧಿಸಿದ್ದಾರೆ. ಇದೀಗ ಪ್ರಮುಖ ರೂವಾರಿಗಳನ್ನು ಬಂಧಿಸಿದ್ದು, ಪ್ರಕರಣದಲ್ಲಿ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ. ಮತ್ತಷ್ಟು ಮಂದಿ ಪ್ರಕರಣದಲ್ಲಿ ಭಾಗಿಯಾಗಿರುವ ಶಂಕೆ ಇದ್ದು, ತನಿಖೆ ಮುಂದುವರಿದಿದೆ.

ಕ್ಯಾಪ್ ಸುಳಿವು, ಜೈಲಿನಲ್ಲಿದ್ದ ಶಂಕಿತರ ಮಾಹಿತಿ ● ಪೂರ್ವ ಮೇದಿನಿಪುರದ ಹೋಟೆಲ್‌ನಲ್ಲಿ ತಂಗಿದ್ದರು

‘ಹಿಂದೂ ಹೆಸರು, ಕಲಬುರಗಿ ವಿಳಾಸ ನೀಡಿದ್ದ ಶಂಕಿತರು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಿ ಪರಾರಿಯಾಗಿದ್ದ ಮುಸಾವೀರ್ ಹುಸೇನ್ ಶಾಜೇಬ್ ಹಾಗೂ ಅಬ್ದುಲ್ ಮಥೀನ್ ಅಹಮದ್ ತಾಹಾ, ಪಶ್ಚಿಮ ಬಂಗಾಳದ ಹೋಟೆಲ್‌ವೊಂದರಲ್ಲಿ ಕೊಠಡಿ ಪಡೆಯಲು ನಕಲಿ ವಿಳಾಸ ನೀಡಿದ್ದರು ಎಂಬುದು ತನಿಖೆಯಿಂದ ಪತ್ತೆಯಾಗಿದೆ.

‘ಕೋಲ್ಕತ್ತ ಮಹಾನಗರಕ್ಕೆ ಹೊಂದಿಕೊಂಡಿರುವ ಪೂರ್ವ ಮೇದಿನಿಪುರ ಜಿಲ್ಲೆಯ ಹೋಟೆಲ್‌ನಲ್ಲಿ ಮುಸಾವೀರ್ ಹಾಗೂ ಅಬ್ದುಲ್ ಮಥೀನ್ ತಂಗಿದ್ದರು. ಹೋಟೆಲ್ ಕೊಠಡಿಯಲ್ಲಿಯೇ ಇಬ್ಬರೂ ಸಿಕ್ಕಿಬಿದ್ದರು. ಇದೇ ಸಂದರ್ಭದಲ್ಲಿ ಹೋಟೆಲ್ ಗ್ರಾಹಕರ ಪಟ್ಟಿಯನ್ನು ಪರಿಶೀಲಿಸಿದಾಗ, ಅವರಿಬ್ಬರು ನಕಲಿ ಹೆಸರು ಹಾಗೂ ಅನ್ಯ ವಿಳಾಸ ಬರೆದಿದ್ದು ಗಮನಕ್ಕೆ ಬಂತು’ ಎಂದು ತನಿಖಾ ಸಂಸ್ಥೆ ಮೂಲಗಳು ಹೇಳಿವೆ.

‘ಅನಮೋಲ್ ಕುಲಕರ್ಣಿ (33) ತಂದೆ ಉದಯ್ ಕುಲಕರ್ಣಿ, ರಂಗ ನಿಲಯ, ವರದಾ ನಗರ, ಕಲಬುರಗಿ, ಕರ್ನಾಟಕ– ಆಧಾರ್ 8632 **** 2668’ ಎಂಬುದಾಗಿ ಶಂಕಿತನೊಬ್ಬ ಗ್ರಾಹಕರ ಪಟ್ಟಿಯಲ್ಲಿ ಹಿಂದೂ ಹೆಸರು ಬರೆದಿದ್ದ. ಇನ್ನೊಬ್ಬ ಶಂಕಿತ, ‘ಯೂಸ್ ಶಹನವಾಜ್ (30) ತಂದೆ ಹರೂನ್ ಪಟೇಲ್, ಠಾಣೆ, ಮಹಾರಾಷ್ಟ್ರ – ಆಧಾರ್ 5158 ****9147’ ಎಂದೂ ಬರೆದಿದ್ದ. ಜೊತೆಗೆ, ಇಬ್ಬರೂ ನಕಲಿ ಆಧಾರ್ ಕಾರ್ಡ್ ಸಹ ನೀಡಿದ್ದರು. ಈ ಬಗ್ಗೆ ಹೋಟೆಲ್ ಸಿಬ್ಬಂದಿಯಿಂದ ಹೇಳಿಕೆ ಪಡೆಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಅಬ್ದುಲ್ ಮಥೀನ್ ತಾಹಾ ಹಾಗೂ ಮುಸಾವೀರ್‌ನನ್ನು ಕೋಲ್ಕತ್ತ ವಿಶೇಷ ನ್ಯಾಯಾಲಯಕ್ಕೆ ಶುಕ್ರವಾರ ಹಾಜರುಪಡಿಸಿದ್ದ ಎನ್‌ಐಎ ಅಧಿಕಾರಿಗಳು, ವಿಚಾರಣೆ ಬಳಿಕ ನ್ಯಾಯಾಲಯದಿಂದ ಕರೆದೊಯ್ದರು

‘ನಗರದಿಂದ ಪರಾರಿಯಾಗಿದ್ದ ಮುಸಾವೀರ್, ಗುರುತು ಸಿಗಬಾರದೆಂದು ತಲೆ ಬೋಳಿಸಿದ್ದ. ಹೋಟೆಲ್‌ನಲ್ಲಿ ಮುಸಾವೀರ್ ಸೆರೆ ಸಿಕ್ಕಾಗ, ಚಿಕ್ಕ ಕೂದಲುಗಳು ಇದ್ದವು. ಈ ಬಗ್ಗೆ ಪ್ರಶ್ನಿಸಿದಾಗ, ತಲೆ ಬೋಳಿಸಿರುವುದಾಗಿ ಆತ ಹೇಳಿಕೊಂಡ’ ಎಂದು ಮೂಲಗಳು ಮಾಹಿತಿ ನೀಡಿವೆ.

ಕ್ಯಾಪ್ ಸುಳಿವು, ಜೈಲಿನಲ್ಲಿದ್ದ ಶಂಕಿತರ ಮಾಹಿತಿ: ‘ಬಾಂಬ್ ಇರಿಸಲು ಬಂದಿದ್ದ ಮುಸಾವೀರ್, ಕಂಪನಿಯೊಂದರ ಕ್ಯಾಪ್ ಧರಿಸಿದ್ದ. ಬಾಂಬ್ ಇಟ್ಟ ನಂತರ ನಗರದಿಂದ ಪರಾರಿಯಾಗಿದ್ದ ಈತ, ಹೊರ ಜಿಲ್ಲೆಯ ಶೌಚಾಲಯವೊಂದರಲ್ಲಿ ಬಟ್ಟೆ ಬದಲಿಸಿದ್ದ. ಅಲ್ಲಿಯೇ ಕ್ಯಾಪ್ ಬಿಟ್ಟು ಹೋಗಿದ್ದ. ಅದರೊಳಗೆ ಕೂದಲುಗಳು ಇದ್ದವು. ಕ್ಯಾಪ್ ಜಪ್ತಿ ಮಾಡಿದ್ದ ಅಧಿಕಾರಿಗಳು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದರು’ ಎಂದು ಮೂಲಗಳು ಹೇಳಿವೆ.

ಸ್ಫೋಟವನ್ನು ಗೃಹಸಚಿವ ಪರಮೇಶ್ವರ ಅವರು ಸಾಮಾನ್ಯ ಪ್ರಕರಣವೆಂದಿದ್ದರು. ಈಗ ಅವರು ಏನು ಹೇಳುತ್ತಾರೆ?

ಆರ್.ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

‘ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಇತರೆ ಪುರಾವೆಗಳನ್ನು ಆಧರಿಸಿ ಎನ್‌ಐಎ ಅಧಿಕಾರಿಗಳು ತನಿಖೆ ಮುಂದುವರಿಸಿದ್ದರು. ಬಳ್ಳಾರಿ, ಕಲಬುರಗಿ, ತೀರ್ಥಹಳ್ಳಿ, ಬೆಂಗಳೂರು ಹಾಗೂ ಇತರೆ ಸ್ಥಳಗಳಲ್ಲಿ ದಾಳಿ ಮಾಡಿ ಮಾಹಿತಿ ಕಲೆಹಾಕಿದ್ದರು. ಈ ಹಿಂದೆ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದ-ಲ್ಲಿ ಜೈಲು ಸೇರಿರುವ ಶಂಕಿತರ ವಿಚಾರಣೆ ನಡೆಸಿದ್ದರು. ಶಿವಮೊಗ್ಗದಲ್ಲಿ ಟ್ರಯಲ್ ಬಾಂಬ್ ಸ್ಫೋಟ, ತಾಲಿಬಾನ್ ಪರ ಗೋಡೆ ಬರಹ, ಮಂಗಳೂರಿನ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಗಳ ಶಂಕಿತರ ಮೇಲೆ ಅನುಮಾನ ಬಂದಿತ್ತು. ಹೆಚ್ಚಿನ ವಿಚಾರಣೆ ನಡೆಸಿದಾಗ, ಅಬ್ದುಲ್ ಮಥೀನ್ ಹಾಗೂ ಮುಸಾವೀರ್ ಹೆಸರು ಗೊತ್ತಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಅಬ್ದುಲ್ ಮಥೀನ್ ಹಾಗೂ ಮುಸಾವೀರ್ ಕುಟುಂಬದವರನ್ನು ಸಂಪರ್ಕಿಸಿದ್ದ ಅಧಿಕಾರಿಗಳು, ಕೂದಲುಗಳ ಮಾದರಿ ಸಂಗ್ರಹಿಸಿದ್ದರು. ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಿದ್ದರು. ಕ್ಯಾಪ್‌ನಲ್ಲಿದ್ದ ಕೂದಲು ಹಾಗೂ ಮುಸಾವೀರ್ ಕುಟುಂಬದ ಸದಸ್ಯರ ಕೂದಲುಗಳ ಡಿಎನ್‌ಎ ಶೇ 100ರಷ್ಟು ಹೊಂದಾಣಿಕೆ ಆಗಿತ್ತು. ಬಾಂಬ್ ಇಟ್ಟಿದ್ದು ಮುಸಾವೀರ್ ಎಂಬುದು ಗೊತ್ತಾಗಿತ್ತು’ ಎಂದು ಹೇಳಿವೆ.

ಮೆಮೊರಿ ಕಾರ್ಡ್‌ನಲ್ಲಿ ಕೋಡ್ ವರ್ಡ್

‘ಕರ್ನಾಟಕ, ತಮಿಳುನಾಡು ಹಾಗೂ ಉತ್ತರ ಪ್ರದೇಶದ 18 ಸ್ಥಳಗಳ ಮೇಲೆ ಎನ್‌ಐಎ ಅಧಿಕಾರಿಗಳು ದಾಳಿ ನಡೆಸಿದ್ದರು. ಇದೇ ಸಂದರ್ಭದಲ್ಲಿ ಚಿಕ್ಕಮಗಳೂರಿನ ಮುಜಮ್ಮಿಲ್ ಶರೀಫ್ ಸಿಕ್ಕಿಬಿದ್ದಿದ್ದ. ಈತ ಸಹ ಬಾಂಬ್ ಸ್ಫೋಟದ ಸಂಚಿನಲ್ಲಿದ್ದ. ಈತನಿಂದ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಒಂದು ಮೊಬೈಲ್‌ನಲ್ಲಿ ಮೆಮೊರಿ ಕಾರ್ಡ್ ಸಿಕ್ಕಿತ್ತು. ಸ್ಫೋಟದ ಸಂಚಿನ ಬಗ್ಗೆ ಕೆಲ ಮಾಹಿತಿ, ಕೋಡ್ ವರ್ಡ್ ರೂಪದಲ್ಲಿತ್ತು. ಮುಜಮ್ಮಿಲ್‌ನನ್ನು ಪುನಃ ಕಸ್ಟಡಿಗೆ ಪಡೆದು ವಿಚಾರಿಸಿದಾಗ, ಶಂಕಿತರು ಪಶ್ಚಿಮ ಬಂಗಾಳದ ಮೂಲಕ ಬಾಂಗ್ಲಾದೇಶಕ್ಕೆ ಹೋಗುವ ಬಗ್ಗೆ ಮಾಹಿತಿ ಸಿಕ್ಕಿತ್ತು. ಇದೇ ಸುಳಿವು ಶಂಕಿತರ ಬಂಧನಕ್ಕೆ ನೆರವಾಯಿತು’ ಎಂದು ಹೇಳಿವೆ.

ತಮಿಳುನಾಡಿನಲ್ಲಿ ಬಾಂಬ್ ತಯಾರಿ

‘ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಲು ತೀರ್ಮಾನಿಸಿದ್ದ ಮುಸಾವೀರ್ ಹಾಗೂ ಅಬ್ದುಲ್ ಮಥೀನ್, ತಮಿಳುನಾಡಿನ ಹಳ್ಳಿಯೊಂದರ ಕೊಠಡಿಯೊಂದರಲ್ಲಿ ಸೇರಿದ್ದರು. ಇದೇ ಸಂದರ್ಭದಲ್ಲಿ ತಮಿಳುನಾಡಿನ ಹಲವು ನಗರಗಳಲ್ಲಿ ಸುತ್ತಾಡಿದ್ದರು. ಶಾಪಿಂಗ್ ಮಾಲ್‌ವೊಂದರಲ್ಲಿ ಕ್ಯಾಪ್ ಖರೀದಿಸಿದ್ದರು. ಅದೇ ಕ್ಯಾಪ್ ಮುಸಾವೀರ್ ಧರಿಸಿದ್ದ’ ಎಂದು ಮೂಲಗಳು ಹೇಳಿವೆ.

‘ಆನ್‌ಲೈನ್ ಹಾಗೂ ಪರಿಚಯಸ್ಥರ ಮೂಲಕ ಕಚ್ಚಾ ಸಾಮಗ್ರಿಗಳನ್ನು ತರಿಸಿಕೊಂಡು ಕಚ್ಚಾ ಬಾಂಬ್ (ಐಇಡಿ) ತಯಾರಿಸಿದ್ದರು. ಬಾಂಬ್ ಸಮೇತ ಮುಸಾವೀರ್, ಫೆಬ್ರುವರಿ 29ರಂದು ಚೆನ್ನೈಗೆ ಬಂದಿದ್ದ. ಅಲ್ಲಿಂದ ರಾತ್ರಿ ಹೊರಟು, ಮರುದಿನ ಮಾರ್ಚ್ 1ರಂದು ಬೆಂಗಳೂರಿನ ಹೊಸೂರು ರಸ್ತೆಗೆ ಬಂದಿದ್ದ. ಬಳಿಕ, ಕೆ.ಆರ್. ಪುರಕ್ಕೆ ತೆರಳಿದ್ದ. ಅಲ್ಲಿಂದ, ಕುಂದಲಹಳ್ಳಿಗೆ ಬಂದಿದ್ದ. ಪುನಃ ಬಿಎಂಟಿಸಿ ಬಸ್‌ನಲ್ಲಿ ರಾಮೇಶ್ವರಂ ಕೆಫೆ ಬಳಿ ಇಳಿದಿದ್ದ. ನೇರವಾಗಿ ಕೆಫೆಗೆ ಹೋಗಿ, ಇಡ್ಲಿ ಖರೀದಿಸಿದ್ದ. ನಂತರ, ಕೆಫೆಯಲ್ಲಿ ಬಾಂಬ್ ಇರಿಸಿ ಸ್ಥಳದಿಂದ ಪರಾರಿಯಾಗಿದ್ದ. ಕೆಲ ನಿಮಿಷಗಳ ನಂತರ ಬಾಂಬ್ ಸ್ಫೋಟಗೊಂಡಿತ್ತು’ ಎಂದು ಮೂಲಗಳು ತಿಳಿಸಿವೆ.

ರೈಲು, ಬಸ್‌ನಲ್ಲಿ ಮುಸಾವೀರ್ ಪ್ರಯಾಣ

‘ಬಾಂಬ್ ಇಟ್ಟ ನಂತರ ಮುಸಾವೀರ್, ಗೊರಗುಂಟೆಪಾಳ್ಯಕ್ಕೆ ಬಂದಿದ್ದ. ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಬಳ್ಳಾರಿಗೆ ತಲುಪಿ, ಅಲ್ಲಿಂದ ಕಲಬುರಗಿಗೆ ಹೋಗಿದ್ದ. ಅಲ್ಲಿಂದ ಮುಸಾವೀರ್ ಹಾಗೂ ಅಬ್ದುಲ್ ಮಥೀನ್ ಇಬ್ಬರೂ ತೆಲಂಗಾಣ, ಆಂಧ್ರಪ್ರದೇಶದಲ್ಲಿ ಸುತ್ತಾಡಿದ್ದರು. ನಂತರ, ಒಡಿಶಾ ಮೂಲಕ ಪಶ್ಚಿಮ ಬಂಗಾಳಕ್ಕೆ ತೆರಳಿದ್ದರು’ ಎಂದು ಮೂಲಗಳು ಹೇಳಿವೆ. ಹೊರದೇಶದಿಂದ ‘ಶಂಕಿತರು ಪರಾರಿಯಾಗಲು ಹಲವರು ಸಹಾಯ ಮಾಡಿದ್ದರು. ಹೊರ ದೇಶದಲ್ಲಿರುವ ಕೆಲವರು, ಸ್ಥಳೀಯ ವ್ಯಕ್ತಿಗಳ ಮೂಲಕ ಶಂಕಿತರಿಗೆ ಹಣ ನೀಡಿದ್ದ ಮಾಹಿತಿಯೂ ಇದೆ’ ಎಂದು ತನಿಖಾ ಸಂಸ್ಥೆ ಮೂಲಗಳು ತಿಳಿಸಿವೆ.

‘ಇಸ್ರೇಲ್, ಇರಾನ್‌ಗೆ ತೆರಳದಂತೆ ಸಲಹೆ’

ನವದೆಹಲಿ (ಪಿಟಿಐ): ಇಸ್ರೇಲ್ ಮತ್ತು ಇರಾನ್ ನಡುವೆ ಬಿಕ್ಕಟ್ಟು ಸೃಷ್ಟಿಯಾಗಿರುವ ಹಿನ್ನೆಲೆ ಭಾರತೀಯರು ಆ ದೇಶಗಳಿಗೆ ಪ್ರಯಾಣಿಸದಂತೆ ಕೇಂದ್ರ ಸರ್ಕಾರ ಶುಕ್ರವಾರ ಸೂಚಿಸಿದೆ.

‘ಇರಾನ್ ಮತ್ತು ಇಸ್ರೇಲ್‌ನಲ್ಲಿರುವ ಭಾರತೀಯರು ಜಾಗರೂಕರಾಗಿರಬೇಕು ಮತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಮಾಡುವುದನ್ನು ಕಡಿಮೆ ಮಾಡಬೇಕು. ಭಾರತೀಯ ರಾಯಭಾರ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳಿ ಮತ್ತು ಸಂಪರ್ಕದಲ್ಲಿರಿ’ ಎಂದು ವಿದೇಶಾಂಗ ಇಲಾಖೆ ಸಲಹೆ ನೀಡಿದೆ. ಏಪ್ರಿಲ್ 1ರಂದು ಸಿರಿಯಾದಲ್ಲಿರುವ ಇರಾನ್‌ನ ಕಾನ್ಸುಲೇಟ್ ಮೇಲೆ ಇಸ್ರೇಲ್ ವೈಮಾನಿಕ ದಾಳಿ ನಡೆಸಿತ್ತು. ಇದರಿಂದ ಆಕ್ರೋಶಗೊಂಡಿದ್ದ ಇರಾನ್, ಇಸ್ರೇಲ್ ವಿರುದ್ಧ ಪ್ರತಿಕಾರ ತೀರಿಸಿಕೊಳ್ಳುವುದಾಗಿ ತಿಳಿಸಿತ್ತು.

ಇವಿಎಂ, ವಿವಿ–ಪ್ಯಾಟ್ ವಿಶ್ವಾಸಾರ್ಹತೆ ಕುರಿತ ಪ್ರಶ್ನೆಗೆ ಮಾಹಿತಿ ನಿರಾಕರಣೆ

ಇ.ಸಿ ನಡೆಗೆ ಸಿಐಸಿ ಅಸಮಾಧಾನ

ಮುಖ್ಯಾಂಶಗಳು

- ಚುನಾವಣಾ ಆಯೋಗದ ಕ್ರಮವು ಕಾನೂನಿನ ಸ್ಪಷ್ಟ ಉಲ್ಲಂಘನೆ: ಸಿಐಸಿ
- ಅಂದಿನ ಪಿಐಒ ಕಾಲಮಿತಿಯಲ್ಲಿ ಮಾಹಿತಿ ಒದಗಿಸದ್ದಕ್ಕೆ ಅಸಮಾಧಾನ

ನವದೆಹಲಿ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳು (ಇವಿಎಂ) ಹಾಗೂ ಮತದಾನ ದೃಢೀಕರಣ ರಸೀದಿ ಯಂತ್ರಗಳ (ವಿವಿ-ಪ್ಯಾಟ್) ವಿಶ್ವಾಸಾರ್ಹತೆಯ ವಿಚಾರವಾಗಿ ಮಾಹಿತಿ ಹಕ್ಕು ಕಾಯ್ದೆಯ (ಆರ್‌ಟಿಐ) ಅಡಿಯಲ್ಲಿ ಕೇಳಿದ್ದ ಪ್ರಶ್ನೆಗೆ ಉತ್ತರ ನೀಡದ ಕೇಂದ್ರ ಚುನಾವಣಾ ಆಯೋಗದ ನಡೆ ಬಗ್ಗೆ ಕೇಂದ್ರ ಮಾಹಿತಿ ಆಯೋಗ (ಸಿಐಸಿ) ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಇವಿಎಂ ಹಾಗೂ ವಿವಿ–ಪ್ಯಾಟ್‌ಗಳ ವಿಶ್ವಾಸಾರ್ಹತೆಯ ಕುರಿತು ಪ್ರಶ್ನೆಗಳನ್ನು ಎತ್ತಿ ಹಲವಾರು ಮಂದಿ ಪ್ರಾಜ್ಞರು ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದ್ದರು. ಈ ಮನವಿಯ ಕುರಿತಾಗಿ ಕೈಗೊಂಡ ಕ್ರಮಗಳು ಏನು ಎಂದು ಆರ್‌ಟಿಐ ಅಡಿ ಪ್ರಶ್ನಿಸಲಾಗಿತ್ತು.

ಉತ್ತರವನ್ನು ಒದಗಿಸದೆ ಇರುವ ಚುನಾವಣಾ ಆಯೋಗದ ಕ್ರಮವು ಕಾನೂನಿನ ಸ್ಪಷ್ಟ ಉಲ್ಲಂಘನೆ ಎಂದು ಸಿಐಸಿ ಹೇಳಿದೆ. ಈ ಬಗ್ಗೆ ಲಿಖಿತ ರೂಪದಲ್ಲಿ ವಿವರಣೆ ನೀಡುವಂತೆ ಚುನಾವಣಾ ಆಯೋಗಕ್ಕೆ ಸಿಐಸಿ ಸೂಚಿಸಿದೆ.

ಇವಿಎಂ, ವಿವಿ–ಪ್ಯಾಟ್ ಹಾಗೂ ಮತ ಎಣಿಕೆ ಪ್ರಕ್ರಿಯೆಯ ವಿಶ್ವಾಸಾರ್ಹತೆ ಕುರಿತು ಮನವಿ ಸಲ್ಲಿಸಿದ್ದ ಪ್ರಾಜ್ಞರ ಪೈಕಿ ಒಬ್ಬರಾದ ಮಾಜಿ ಐಎಎಸ್ ಅಧಿಕಾರಿ ಎಂ.ಜಿ. ದೇವಸಹಾಯಂ ಅವರು, ಆ ಮನವಿ ಕುರಿತು ಕೈಗೊಂಡ ಕ್ರಮ ಏನು ಎಂಬುದರ ವಿವರ ನೀಡುವಂತೆ ಆಯೋಗಕ್ಕೆ ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು.

ಆಯೋಗಕ್ಕೆ ಮನವಿಯನ್ನು 2022ರ ಮೇ 2ರಂದು ಸಲ್ಲಿಸಲಾಗಿತ್ತು. ಆರ್‌ಟಿಐ ಅಡಿ ಮಾಹಿತಿ ಕೋರಿ 2022ರ ನವೆಂಬರ್ 22ರಂದು ಅರ್ಜಿ ಸಲ್ಲಿಸಲಾಗಿತ್ತು. ಮನವಿಯನ್ನು ಯಾವ ಅಧಿಕಾರಿಗಳಿಗೆ ರವಾನಿಸಲಾಗಿದೆ, ಅದಕ್ಕೆ ಸಂಬಂಧಿಸಿದಂತೆ ಸಭೆಗಳು ನಡೆದಿವೆಯೇ, ಆ ಸಭೆಯ ವಿವರಗಳು ಬೇಕು ಎಂದು ಆರ್‌ಟಿಐ ಮೂಲಕ ಮಾಹಿತಿ ಕೋರಲಾಗಿತ್ತು.

ಮೂವತ್ತು ದಿನಗಳಲ್ಲಿ ಚುನಾವಣಾ ಆಯೋಗದಿಂದ ಯಾವುದೇ ಉತ್ತರ ಸಿಗದಿದ್ದಾಗ ದೇವಸಹಾಯಂ ಅವರು ಮೊದಲ ಮೇಲ್ಮನವಿ ಸಲ್ಲಿಸಿದರು. ಅದು ಪ್ರಯೋಜನಕ್ಕೆ ಬರಲಿಲ್ಲ. ಮುಖ್ಯ ಮಾಹಿತಿ ಆಯುಕ್ತರಿಗೆ ಅವರು ಎರಡನೆಯ ಮೇಲ್ಮನವಿ ಸಲ್ಲಿಸಿದರು.

ದೇವಸಹಾಯಂ ಅವರಿಗೆ ಉತ್ತರ ಒದಗಿಸದೆ ಇದ್ದುದಕ್ಕೆ ಕಾರಣ ಏನು ಎಂದು ಮುಖ್ಯ ಮಾಹಿತಿ ಆಯುಕ್ತ ಹೀರಾಲಾಲ್ ಸಾಮರಿಯಾ ಅವರು ಕೇಳಿದಾಗ, ಚುನಾವಣಾ ಆಯೋಗದ ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯು ತೃಪ್ತಿಕರ ಉತ್ತರ ಒದಗಿಸಲಿಲ್ಲ.

‘ಆರ್‌ಟಿಐ ಕಾಯ್ದೆಯು ವಿಧಿಸಿರುವ ಕಾಲಮಿತಿಯಲ್ಲಿ ಅಂದಿನ ಸಾರ್ವಜನಿಕ ಮಾಹಿತಿ ಅಧಿಕಾರಿಯು (ಪಿಐಒ) ಮಾಹಿತಿ ಒದಗಿಸದೆ ಇದ್ದುದಕ್ಕೆ ಮಾಹಿತಿ ಆಯೋಗವು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದೆ’ ಎಂದು ಸಾಮರಿಯಾ ಅವರು ಹೇಳಿದ್ದಾರೆ.

ಲೋಪಕ್ಕೆ ಇತರರೂ ಕಾರಣರಾಗಿದ್ದರೆ, ಕೇಂದ್ರ ಸಾರ್ವಜನಿಕ ಮಾಹಿತಿ ಅಧಿಕಾರಿಯು, ಮಾಹಿತಿ ಆಯೋಗದ ಆದೇಶದ ಪ್ರತಿಯನ್ನು ಅವರಿಗೂ ತಲುಪಿಸಬೇಕು. ಅವರಿಂದ ಲಿಖಿತ ಉತ್ತರ ಪಡೆದು ಮಾಹಿತಿ ಆಯೋಗಕ್ಕೆ ಸಲ್ಲಿಸಬೇಕು ಎಂದು ಸೂಚಿಸಿದ್ದಾರೆ. ಅಲ್ಲದೆ, ಆರ್‌ಟಿಐ ಅಡಿ ಸಲ್ಲಿಸಿದ್ದ ಅರ್ಜಿಗೆ ಮೂವತ್ತು ದಿನಗಳಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚನೆ ನೀಡಿದ್ದಾರೆ.

ಭಾರತೀಯ ತಂತ್ರಜ್ಞಾನ ಸಂಸ್ಥೆಗಳು (ಐಐಟಿ), ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಗಳ (ಐಐಎಂ) ಕೆಲವು ಪ್ರಾಧ್ಯಾಪಕರು, ನಾಗರಿಕ ಸೇವೆಗಳಲ್ಲಿ ಇದ್ದ ಕೆಲವು ಅಧಿಕಾರಿಗಳು ಇವಿಎಂ, ವಿವಿ–ಪ್ಯಾಟ್ ಯಂತ್ರಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರು.

ಬಹು ಮಾಧ್ಯಮ ಪ್ರಜಾವಾಣಿ www.prajavani.net
mahindra ಪ್ರಜಾವಾಣಿ ಸಾಧಕಿಯರು
ಪ್ರಜಾವಾಣಿ ಸಾಧಕಿಯರು
ರಾಜ್ಯದ 10 ಸಾಧಕಿಯರ ಪ್ರೇರಣಾದಾಯಕ ಪಯಣ

ಬಡವರ ಪಾಲಿನ ತೆರೇಸಮ್ಮ
ಸಿಸ್ಟರ್ ಶೋಭನಾ
Prajavani.net Prajavani Prajavani

15ರ ವರೆಗೆ ಸಿಬಿಐ ವಶಕ್ಕೆ ಕವಿತಾ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರನ್ನು ದೆಹಲಿ ನ್ಯಾಯಾಲಯವು ಇದೇ 15ರವರೆಗೆ ಸಿಬಿಐ ವಶಕ್ಕೆ ಒಪ್ಪಿಸಿದೆ.

ಸಿಬಿಐ ಹಾಗೂ ಕವಿತಾ ಅವರ ಪರ ವಕೀಲರ ವಾದ, ಪ್ರತಿವಾದವನ್ನು ಆಲಿಸಿದ ಬಳಿಕ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಈ ಕುರಿತು ಶುಕ್ರವಾರ ಆದೇಶ ನೀಡಿದರು.

ಕವಿತಾ ಅವರು ತನಿಖೆಗೆ ಸಹಕರಿಸುತ್ತಿಲ್ಲ ಮತ್ತು ಸಮರ್ಪಕ ಉತ್ತರ ನೀಡದೆ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ನ್ಯಾಯಾಲಯಕ್ಕೆ ತಿಳಿಸಿದ ಸಿಬಿಐ ಪರ ವಕೀಲರು, ಹೆಚ್ಚಿನ ವಿಚಾರಣೆಗಾಗಿ ಅವರನ್ನು ಐದು ದಿನಗಳವರೆಗೆ ಸಿಬಿಐ ವಶಕ್ಕೆ ಒಪ್ಪಿಸುವಂತೆ ಕೋರಿದರು.

ಆರೋಪಿ ಪರ ವಕೀಲರಾದ ನಿತೇಶ್ ರಾಣಾ ಅವರು ಸಿಬಿಐ ಅರ್ಜಿಯನ್ನು ವಿರೋಧಿಸಿದರು. ಕವಿತಾ ಅವರ ಬಂಧನವನ್ನು ಕಾನೂನುಬಾಹಿರ ಎಂದು ಬಣ್ಣಿಸಿದ ಅವರು, ತನಿಖಾ ಸಂಸ್ಥೆಯು ಅವರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸಿದೆ ಎಂದು ಆರೋಪಿಸಿದರು.

ಈ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕವಿತಾ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿತ್ತು. ತಿಹಾರ್ ಜೈಲಿನಲ್ಲಿದ್ದ ಅವರನ್ನು ವಿಶೇಷ ನ್ಯಾಯಾಲಯದ ಅನುಮತಿ ಪಡೆದು ಸಿಬಿಐ ಅಧಿಕಾರಿಗಳು ಇತ್ತೀಚೆಗೆ ವಿಚಾರಣೆ ನಡೆಸಿದ್ದರು. ಬಳಿಕ ಅವರನ್ನು ಸಿಬಿಐ ಗುರುವಾರ ಬಂಧಿಸಿತ್ತು.

ಸಂಕ್ಷಿಪ್ತ ಸುದ್ದಿ

ಖಾಲಿಸ್ತಾನಿ ಉಗ್ರನಿಗೆ ಸೇರಿದ ಸ್ಥಿರಾಸ್ತಿ ಎನ್‌ಐಎ ವಶಕ್ಕೆ

ನವದೆಹಲಿ (ಪಿಟಿಐ): ಪಂಜಾಬ್‌ನ ಫಿರೋಜ್‌ಪುರದಲ್ಲಿರುವ, ಖಾಲಿಸ್ತಾನಿ ಉಗ್ರ ರಾಮ್‌ದೀಪ್ ಸಿಂಗ್‌ಗೆ ಸೇರಿದ ಸ್ಥಿರಾಸ್ತಿಗಳನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಶುಕ್ರವಾರ ಮುಟ್ಟುಗೋಲು ಹಾಕಿಕೊಂಡಿದೆ.

‘ಎನ್‌ಐಎ ನ್ಯಾಯಾಲಯದ ನಿರ್ದೇಶನದ ಅನ್ವಯ ಆರೋಪಿಗೆ ಸಂಬಂಧಿಸಿದ, ಝೋಕ್ ನೋದ್ ಗ್ರಾಮದಲ್ಲಿದ್ದ ಸುಮಾರು 4.5 ಎಕರೆಯಷ್ಟು ಜಾಗವನ್ನು ವಶಪಡಿಸಿಕೊಳ್ಳಲಾಗಿದೆ’ ಎಂದು ಎನ್‌ಐಎ ಪ್ರಕಟಣೆ ತಿಳಿಸಿದೆ.

‘ಖಾಲಿಸ್ತಾನ ಪರ ಭಯೋತ್ಪಾದಕ ಸಂಘಟನೆಗಳಾದ ಖಾಲಿಸ್ತಾನ ಲಿಬರೇಷನ್ ಫ್ರಂಟ್ (ಕೆಎಲ್‌ಎಫ್), ಬಾಬರ್ ಖಾಲ್ಸಾ ಇಂಟರ್‌ನ್ಯಾಷನಲ್ (ಬಿಕೆಐ) ಮತ್ತು ಅಂತರರಾಷ್ಟ್ರೀಯ ಸಿಖ್ ಯುವ ಘಟಕದ (ಐಎಸ್‌ವೈಎಫ್) ನಾಯಕರು ಮತ್ತು ಸದಸ್ಯರ ಜತೆ ನಂಟು ಹೊಂದಿರುವ ಪ್ರಕರಣಕ್ಕೆ ಸಂಬಂಧಿಸಿ ರಾಮ್‌ದೀಪ್ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ’ ಎಂದು ತಿಳಿಸಿದೆ.

2023 ಜುಲೈ 27ರಂದು ನ್ಯಾಯಾಲಯವು ರಾಮ್‌ದೀಪ್‌ನನ್ನು ಅಪರಾಧಿಯೆಂದು ಘೋಷಿಸಿತ್ತು.

ಸಂದೇಶ್‌ಖಾಲಿ ಪ್ರಕರಣ: 50 ದೂರುಗಳ ದಾಖಲು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಮತ್ತು ಭೂಕಬಳಿಕೆಗೆ ಸಂಬಂಧಿಸಿ ದೂರುಗಳನ್ನು ಸಲ್ಲಿಸಲು ಸಿಬಿಐ ಪ್ರತ್ಯೇಕವಾದ ಇ–ಮೇಲ್ ಐಡಿಯನ್ನು ನೀಡಿದ ಮೊದಲ ದಿನವೇ ಸುಮಾರು 50 ದೂರುಗಳು ದಾಖಲಾಗಿವೆ.

ಸಿಬಿಐ ತನ್ನ ಇ–ಮೇಲ್ ಐಡಿಯಲ್ಲಿ ಸ್ವೀಕರಿಸಿದ ಪ್ರತಿಯೊಂದು ದೂರನ್ನು ಕೂಲಂಕಷವಾಗಿ ಪರಿಶೀಲಿಸುವ ಪ್ರಕ್ರಿಯೆ ಆರಂಭಿಸಿದ್ದು, ಶೀಘ್ರದಲ್ಲೇ ಎಫ್‌ಐಆರ್ ದಾಖಲಿಸಲಾಗುವುದು ಮತ್ತು ಮೇ 2 ರಂದು ಕಲ್ಕತ್ತಾ ಹೈಕೋರ್ಟ್‌ಗೆ ಸಂಪೂರ್ಣ ವರದಿ ಸಲ್ಲಿಸಲಾಗುವುದು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇದೇ ತಿಂಗಳ 10ರಂದು ಕಲ್ಕತ್ತಾ ಹೈಕೋರ್ಟ್‌ನ ವಿಭಾಗೀಯ ಪೀಠವು ನೀಡಿದ ಆದೇಶದಂತೆ ಸಿಬಿಐ ಇ–ಮೇಲ್ ಐಡಿಯನ್ನು ನೀಡಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಬಲವಂತವಾಗಿ ಭೂಮಿಯನ್ನು ವಶಪಡಿಸಿಕೊಂಡಿರುವ ಬಗ್ಗೆ ಸಂದೇಶ್‌ಖಾಲಿಯ ಜನರು ಮುಕ್ತವಾಗಿ ದೂರುಗಳನ್ನು ಸಲ್ಲಿಸಬಹುದು ಎಂದು ಸಿಬಿಐ ಗುರುವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಸರ್ವೋದಯ ನಾಯಕ ಮುರಾರಿ ಲಾಲ್ ನಿಧನ

ಗೋಪೇಶ್ವರ (ಉತ್ತರಾಖಂಡ), (ಪಿಟಿಐ): ಸಾಮಾಜಿಕ ಕಾರ್ಯಗಳಿಗಾಗಿಯೇ ತಮ್ಮ ಬದುಕನ್ನು ಮುಡುಪಾಗಿಟ್ಟಿದ್ದ ಸರ್ವೋದಯ ಹಾಗೂ ಚಿಪ್ಕೊ ಚಳವಳಿಯ ನಾಯಕ ಮುರಾರಿ ಲಾಲ್ (91) ಅವರು ರಿಷಿಕೇಶದ ಏಮ್ಸ್‌ನಲ್ಲಿ ಶುಕ್ರವಾರ ನಿಧನರಾದರು.

ಉಸಿರಾಟದ ತೊಂದರೆಯಿಂದ ಮೂರು ದಿನದ ಹಿಂದೆ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ (ಏಮ್ಸ್) ಚಿಕಿತ್ಸೆಗಾಗಿ ಅವರು ದಾಖಲಾಗಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಾಲ್ ಅವರು ಚಿಪ್ಕೊ ಚಳವಳಿಯ ಮಾತೃ ಸಂಘಟನೆಯಾದ ದಶೋಲಿ ಗ್ರಾಮ ಸ್ವರಾಜ್ಯ ಮಂಡಲದ ಅಧ್ಯಕ್ಷರಾಗಿದ್ದರು.

ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ಬಳಕೆಯಲ್ಲಿ ನವೀನ ಮಾದರಿಗಳನ್ನು ರೂಪಿಸುವ ಮೂಲಕ ಖ್ಯಾತರಾಗಿದ್ದ ಲಾಲ್, ತನ್ನೂರಿನ ಬಂಜರು ಭೂಮಿಯನ್ನು ಹಸಿರಾಗಿಸಿದ್ದರು. ಇವರ ಕೆಲಸವನ್ನು ಉತ್ತರಾಖಂಡ ಸರ್ಕಾರ ಹಾಗೂ ದೇಶದಾದ್ಯಂತ ಅನೇಕ ಸಂಸ್ಥೆಗಳು ಗುರುತಿಸಿ ಗೌರವಿಸಿವೆ.

ಪಶ್ಚಿಮ ಬಂಗಾಳ: ಶಿಕ್ಷಕರ ನೇಮಕಾತಿ ಹಗರಣ– ಇ.ಡಿ ಕ್ರಮ

₹365 ಕೋಟಿ ಮೌಲ್ಯದ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಸರ್ಕಾರಿ ಶಾಲೆಗಳ ಶಿಕ್ಷಕರ ನೇಮಕಾತಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದ ಎರಡು ಪ್ರತ್ಯೇಕ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇಲ್ಲಿಯವರೆಗೆ ₹365 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ತಿಳಿಸಿದೆ.

ಸಹಾಯಕ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಶಾಲಾ ಸೇವಾ ಆಯೋಗದ (ಡಬ್ಲ್ಯುಬಿಎಸ್‌ಎಸ್‌ಸಿ) ಮಾಜಿ ಸಲಹೆಗಾರ ಸಂತಿ ಪ್ರಸಾದ್ ಸಿನ್ಹಾ ಮತ್ತು ಪ್ರಮುಖ ಮಧ್ಯವರ್ತಿ ಪ್ರಸನ್ನ ಕುಮಾರ್ ರಾಯ್ ಅವರ ಹೆಸರಿನಲ್ಲಿದ್ದ ₹230 ಕೋಟಿ ಮೌಲ್ಯದ ಜಮೀನು ಮತ್ತು ಫ್ಲಾಟ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಇ.ಡಿ ತಿಳಿಸಿದೆ. ಈ ಇಬ್ಬರನ್ನು ಇ.ಡಿ ಬಂಧಿಸಿದ್ದು, ಪ್ರಸ್ತುತ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಇದಲ್ಲದೆ, ಪ್ರಾಥಮಿಕ ಶಿಕ್ಷಕರ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರದ ಮತ್ತೊಂದು ಪ್ರಕರಣದಲ್ಲಿ ಇಲ್ಲಿಯವರೆಗೆ ₹135 ಕೋಟಿ ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ ಎಂದು ಜಾರಿ ನಿರ್ದೇಶನಾಲಯ ಮಾಹಿತಿ ನೀಡಿದೆ. ಈ ಎರಡೂ ಪ್ರಕರಣಗಳಲ್ಲಿ ಜಪ್ತಿ ಮಾಡಿರುವ ಒಟ್ಟಾರೆ ಆಸ್ತಿಯ ಮೌಲ್ಯ ₹365.60 ಕೋಟಿ ಆಗುತ್ತದೆ ಎಂದು ಅದು ಹೇಳಿದೆ.

ಶಿಕ್ಷಕರ ನೇಮಕಾತಿ ಪ್ರಕರಣ ಕುರಿತು ಸಿಬಿಐ ಆರಂಭದಲ್ಲಿ ಎಫ್‌ಐಆರ್ ದಾಖಲಿಸಿದ್ದು, ದೋಷಾರೋಪ ಪಟ್ಟಿಯನ್ನು ಸಲ್ಲಿಸಿದೆ. ಅದರ ಪ್ರಕಾರ, ಒಟ್ಟು 2,081 ಅಭ್ಯರ್ಥಿಗಳ ನೇಮಕಾತಿಯಲ್ಲಿ ಡಬ್ಲ್ಯುಬಿಎಸ್‌ಎಸ್‌ಸಿ ಅಧಿಕಾರಿಗಳು ಕ್ರಿಮಿನಲ್ ಪಿತೂರಿ ನಡೆಸಿ, ಶಿಕ್ಷಕರ ಹುದ್ದೆಗೆ ಅಕ್ರಮವಾಗಿ ನೇಮಕ ಮಾಡಿದ್ದಾರೆ ಅಥವಾ ಶಿಫಾರಸು ಮಾಡಿದ್ದಾರೆ ಎಂದು ಇ.ಡಿ ತಿಳಿಸಿದೆ.

ಪಡಿತರ ಹಗರಣ: ₹150 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಪಡಿತರ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪಶ್ಚಿಮ ಬಂಗಾಳದ ಮಾಜಿ ಆಹಾರ ಸಚಿವ ಜ್ಯೋತಿ ಪ್ರಿಯ ಮಲ್ಲಿಕ್ ಮತ್ತು ಇತರ ಇಬ್ಬರಿಗೆ ಸಂಬಂಧಿಸಿದ ₹150 ಕೋಟಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ಜಪ್ತಿ ಮಾಡಿದೆ.

ಬಕೀಬುರ್ ರಹಮಾನ್ ಮತ್ತು ಟಿಎಂಸಿ ನಾಯಕ ಶಂಕರ್ ಆಧ್ಯಾ ಇತರ ಇಬ್ಬರು ಆರೋಪಿಗಳು. ಮೂವರನ್ನು ತನಿಖಾ ಸಂಸ್ಥೆ ಬಂಧಿಸಿದೆ.

ಮಲ್ಲಿಕ್ ಅವರ ನಿವಾಸ, ಆಪ್ತರ ಹೆಸರಿನಲ್ಲಿದ್ದ ಹಲವು ಬೇನಾಮಿ ಆಸ್ತಿ, ಕೋಲ್ಕತ್ತ ಮತ್ತು ಬೆಂಗಳೂರಿನಲ್ಲಿರುವ ರಹಮಾನ್ ಅವರ ಎರಡು ಹೋಟೆಲ್‌ಗಳು, ಹಲವು ಬ್ಯಾಂಕ್ ಖಾತೆಗಳಲ್ಲಿದ್ದ ಹಣ, ನಿಶ್ಚಿತ ಠೇವಣಿ ಸೇರಿದಂತೆ 48 ಸ್ಥಿರಾಸ್ತಿಗಳನ್ನು ಜಪ್ತಿ ಮಾಡಲಾಗಿದೆ ಎಂದು ಇ.ಡಿ ಹೇಳಿಕೆಯಲ್ಲಿ ತಿಳಿಸಿದೆ.

ಮಲ್ಲಿಕ್ ಅವರು ತಮ್ಮ ಕುಟುಂಬಸ್ಥರು ಮತ್ತು ಆಪ್ತರ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಸ್ಥಿರಾಸ್ತಿಗಳನ್ನು ಉಡುಗೊರೆಯಾಗಿ ಪಡೆದಿದ್ದರು ಎಂದು ಇ.ಡಿ ಆರೋಪಿಸಿದೆ.

‘ಅನ್ಯಭಾಷೆಯ ನಾಮಫಲಕಕ್ಕೆ ನಿರ್ಬಂಧ ಇಲ್ಲ’

ಮುಂಬೈ (ಪಿಟಿಐ): ಮುನಿಸಿಪಲ್ ಕೌನ್ಸಿಲ್‌ಗಳಲ್ಲಿ ಮಹಾರಾಷ್ಟ್ರದ ಆಡಳಿತ ಭಾಷೆಯಾದ ಮರಾಠಿಯ ಜೊತೆ ಬೇರೆ ಭಾಷೆಗಳಲ್ಲಿಯೂ ನಾಮಫಲಕ ಅಳವಡಿಸುವುದಕ್ಕೆ ಯಾವುದೇ ನಿರ್ಬಂಧ ಇಲ್ಲ ಎಂದು ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠವು ಹೇಳಿದೆ.

ಪಾತೂರ್ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಮರಾಠಿ ಮತ್ತು ಉರ್ದು ಭಾಷೆಗಳಲ್ಲಿ ನಾಮಫಲಕ ಅಳವಡಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಲಾಗಿತ್ತು. ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅವಿನಾಶ್ ಘರೋಟೆ ಮತ್ತು ಎಂ.ಎಸ್. ಜಾವಲಕರ್ ಅವರು ಇದ್ದ ವಿಭಾಗೀಯ ಪೀಠವು ಈ ಮಾತು ಹೇಳಿದೆ.

ಉರ್ದುವಿನಲ್ಲಿ ನಾಮಫಲಕ ಅಳವಡಿಸಿದ್ದಕ್ಕಾಗಿ ತಕ್ಷಣ ಕ್ರಮ ಜರುಗಿಸುವಂತೆ ಅಕೋಲಾ ಜಿಲ್ಲಾ ಮರಾಠಿ ಭಾಷಾ ಸಮಿತಿಯ ಅಧ್ಯಕ್ಷರಿಗೆ ಸೂಚಿಸಬೇಕು ಎಂದು ವರ್ಷಾ ಬಾಗಡೆ ಅವರು ಸಲ್ಲಿಸಿದ್ದ ಅರ್ಜಿಯಲ್ಲಿ ಕೋರಲಾಗಿತ್ತು.

ಖುಲಾಸೆ ಆದೇಶ: ಮೇಲ್ಮನವಿ ಕೋರ್ಟ್ ಅಧಿಕಾರಕ್ಕೆ ಮಿತಿ

ನವದೆಹಲಿ (ಪಿಟಿಐ): ಯಾವುದೇ ಪ್ರಕರಣಕ್ಕೆ ಮತ್ತೊಂದು ಆಯಾಮವಿರಬಹುದು ಎಂಬ ಏಕೈಕ ಕಾರಣಕ್ಕೆ ಮೇಲ್ಮನವಿ ನ್ಯಾಯಾಲಯವು ಆ ಪ್ರಕರಣದ ಆರೋಪಿಗಳ ಖುಲಾಸೆ ಆದೇಶವನ್ನು ರದ್ದುಪಡಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಖುಲಾಸೆಗೊಳಿಸಿದ ತೀರ್ಪು ತಪ್ಪಿನಿಂದ ಕೂಡಿದೆ ಎಂಬುದಾಗಿ ಮೇಲ್ಮನವಿ ನ್ಯಾಯಾಲಯವು ಕಂಡುಕೊಳ್ಳದ ಹೊರತು, ಯಾವುದೇ ಕಾರಣಕ್ಕೆ ಖುಲಾಸೆ ಆದೇಶದಲ್ಲಿ ಮಧ್ಯಪ್ರವೇಶ ಮಾಡುವಂತಿಲ್ಲ’ ಎಂದು ಕೋರ್ಟ್‌ನ ವಿಭಾಗೀಯ ಪೀಠವು ಹೇಳಿದೆ.

1996ರಲ್ಲಿ ಗುಜರಾತ್‌ನಲ್ಲಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಿದ ಪ್ರಕರಣದಲ್ಲಿ ತಂದೆ ಮತ್ತು ಮಗ ಶಿಕ್ಷೆಗೆ ಗುರಿಯಾಗಿದ್ದರು. 1998ರಲ್ಲಿ ಈ ಇಬ್ಬರು ವಿಚಾರಣಾ ನ್ಯಾಯಾಲಯದಿಂದ ಖುಲಾಸೆಯಾಗಿದ್ದರು. ಆದರೆ, ಈ ತೀರ್ಪಿನ ವಿರುದ್ಧ ಮೇಲ್ಮನವಿ ಹೋಗಿದ್ದರಿಂದಾಗಿ 2018ರಲ್ಲಿ ಈ ಇಬ್ಬರ ಖುಲಾಸೆ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತ್ತು.

ಗಣಗೌರ್ ಸಂಭ್ರಮ ಭೋಪಾಲ್‌ನಲ್ಲಿ ಶುಕ್ರವಾರ ನಡೆದ ಗಣಗೌರ್ ಸಂಭ್ರಮಾಚರಣೆಯಲ್ಲಿ ಶ್ರೀ ಮೈಥ ಕ್ಷತ್ರಿಯ ಸ್ವರ್ಣಕಾರ ಸಮಾಜದ ಮಹಿಳೆಯರು ಸಂಭ್ರಮದಿಂದ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಕಾಕ್ಸ್ ಆ್ಯಂಡ್ ಕಿಂಗ್ಸ್ ಮಾಲೀಕರ ಆಪ್ತನ ಸೆರೆ

₹400 ಕೋಟಿ ವಂಚನೆ ಪ್ರಕರಣ ತನಿಖೆ ನಡೆಸುತ್ತಿರುವ ಮುಂಬೈ ಪೊಲೀಸ್

ಮುಂಬೈ (ಪಿಟಿಐ): ಯೆಸ್‌ಬ್ಯಾಂಕ್ ಭಾಗಿಯಾಗಿರುವ ₹400 ಕೋಟಿ ವಂಚನೆಯ ಪ್ರಕರಣದಲ್ಲಿ ಟೂರ್ ಆ್ಯಂಡ್ ಟ್ರಾವೆಲ್‌ನ ಕಾಕ್ಸ್ ಆ್ಯಂಡ್ ಕಿಂಗ್ಸ್ ಕಂಪನಿಯ ಮಾಲೀಕರ ಆಪ್ತನನ್ನು ಮುಂಬೈ ಆರ್ಥಿಕ ಅಪರಾಧ ವಿಭಾಗದ (ಇಒಡಬ್ಲ್ಯು) ಪೊಲೀಸರು ಬಂಧಿಸಿದ್ದಾರೆ.

ಬ್ರಿಟನ್ ಪ್ರಜೆ ಅಜಿತ್ ಮೆನನ್ (67) ಬಂಧಿತ ಆರೋಪಿ. ಇವರ ವಿರುದ್ಧ ಲುಕ್ ಔಟ್ ನೋಟಿಸ್ ಜಾರಿಯಾಗಿತ್ತು. ಮಂಗಳವಾರ ಲಂಡನ್‌ನಿಂದ ಬಂದ ಮೆನನ್ ಅವರನ್ನು ಕೇರಳದ ಕೊಚ್ಚಿನ್ ವಿಮಾನ ನಿಲ್ದಾಣದಲ್ಲಿ ಮುಂಬೈ ಪೊಲೀಸರ ತಂಡ ಬಂಧಿಸಿದ್ದು, ಗುರುವಾರ ಬೆಳಿಗ್ಗೆ ಮುಂಬೈಗೆ ಕರೆತಂದು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಆರೋಪಿಯನ್ನು ನ್ಯಾಯಾಲಯವು ಇದೇ 15ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಕಾಕ್ಸ್ ಆ್ಯಂಡ್ ಕಿಂಗ್ಸ್‌ನ ಮಾಲೀಕ ಅಜಯ್ ಪೀಟರ್ ಕೇರ್ಕರ್ ಅವರಿಗೆ ಅಜಿತ್ ಮೆನನ್ ಅತ್ಯಂತ ಆಪ್ತ. ಯೆಸ್‌ಬ್ಯಾಂಕ್ ಭಾಗಿಯಾಗಿರುವ ₹400 ಕೋಟಿ ವಂಚನೆ ಪ್ರಕರಣದ ತನಿಖೆ ವೇಳೆ ಇದರಲ್ಲಿ ಮೆನನ್ ಅವರು ಕೂಡ ಭಾಗಿಯಾಗಿರುವುದು ಕಂಡುಬಂದಿತ್ತು. ಯೆಸ್‌ಬ್ಯಾಂಕ್‌ನಿಂದ ಪಡೆದ ಸಾಲದ ಹಣವನ್ನು ಅನ್ಯ ಉದ್ದೇಶಕ್ಕೆ ಅಕ್ರಮವಾಗಿ ವರ್ಗಾಯಿಸಿರುವುದನ್ನು ಪತ್ತೆ ಹಚ್ಚಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಯುರೋಪ್‌ನಲ್ಲಿ ಕಂಪನಿಯ ಚಟುವಟಿಕೆ ನೋಡಿಕೊಳ್ಳುತ್ತಿದ್ದ ಮೆನನ್, ಸಾಲದ ಮೊತ್ತದಿಂದ ₹56 ಕೋಟಿಯನ್ನು ಬ್ರಿಟನ್ ಮೂಲದ ಕಂಪನಿಗೆ ವರ್ಗಾಯಿಸಿರುವುದನ್ನು ತನಿಖೆಯಲ್ಲಿ ಇಒಡಬ್ಲ್ಯು ಪತ್ತೆ ಮಾಡಿದೆ ಎಂದು ಅವರು ತಿಳಿಸಿದ್ದಾರೆ.

ಕಾಕ್ಸ್ ಆ್ಯಂಡ್ ಕಿಂಗ್ಸ್ ಸರ್ವಿಸಸ್ ಲಿಮಿಟೆಡ್ ಮತ್ತು ಇದರ ಸೋದರ ಕಂಪನಿ ಟೂರ್ ಆ್ಯಂಡ್ ಟ್ರಾವೆಲ್‌ನ ಕಾಕ್ಸ್ ಆ್ಯಂಡ್ ಕಿಂಗ್ಸ್ ವಿರುದ್ಧ 2021ರಲ್ಲಿ ಇಒಡಬ್ಲ್ಯು ದೂರು ದಾಖಲಿಸಿತ್ತು. ಕಂಪನಿಯ ಮಾಲೀಕ ಕೇರ್ಕರ್, ಅವರ ಪತ್ನಿ, ಮೆನನ್ ಮತ್ತು ಇತರರನ್ನು ಎಫ್‌ಐಆರ್‌ನಲ್ಲಿ ಹೆಸರಿಸಲಾಗಿದೆ ಎಂದು ಅವರು ಹೇಳಿದರು.

ಕಾಕ್ಸ್ ಆ್ಯಂಡ್ ಕಿಂಗ್ಸ್ ಸರ್ವಿಸಸ್ ಲಿಮಿಟೆಡ್, ವಿದೇಶಿ ವಿನಿಮಯ ವ್ಯವಹಾರ, ವಿದ್ಯಾರ್ಥಿ ಸಾಲಗಳು ಮತ್ತು ಬ್ಯಾಂಕೇತರ ಇತರ ಹಣಕಾಸು ಸೇವೆಗಳನ್ನು ಒದಗಿಸುತ್ತದೆ.

ಮದ್ಯ ಅಕ್ರಮ ಸಾಗಣೆ: ಶಿಕ್ಷೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇವಲ ಪಂಚನಾಮೆ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲು ಕಾನೂನಿನಲ್ಲಿ ಅವಕಾಶವಿಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಮದ್ಯ ಅಕ್ರಮ ಸಾಗಣೆ ಆರೋಪದಡಿ ಇಬ್ಬರು ಆರೋಪಿಗಳಿಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಿದೆ.

ಮದ್ಯವನ್ನು ಅಕ್ರಮವಾಗಿ ಸಾಗಿಸಿದ ಆರೋಪದಲ್ಲಿ ಶಿಕ್ಷೆಗೆ ಗುರಿಯಾಗಿದ್ದ ದಯಾನಂದ ಮತ್ತು ರವಿ ಎಂಬುವರು ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

‘ಆರೋಪ ಎದುರಾದಲ್ಲಿ ಮಾಹಿತಿದಾರರು ಸಹಿ ಹಾಕಿ ನೀಡಿದ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಬಹುದು. ಇಲ್ಲವೇ, ನಿಖರ ಮಾಹಿತಿಯ ಆಧಾರದಲ್ಲಿ ಪೊಲೀಸ್ ಅಧಿಕಾರಿಯೇ ಖುದ್ದು ದೂರು ಪಡೆದು ಎಫ್‌ಐಆರ್ ದಾಖಲಿಸುತ್ತಾರೆ. ಈ ಎರಡರಲ್ಲಿಯೂ ಮೊದಲು ಮಾಹಿತಿಯನ್ನು ಲಿಖಿತವಾಗಿ ದಾಖಲಿಸಿ ನಂತರ ತನಿಖೆ ನಡೆಸಲಾಗುತ್ತದೆ. ಆದರೆ, ಈ ಪ್ರಕರಣದಲ್ಲಿ ಅಂತಹ ಪ್ರಕ್ರಿಯೆ ನಡೆದಿಲ್ಲ. ಬದಲಿಗೆ ಅಕ್ರಮವಾಗಿ ಸಾಗಿಸುತ್ತಿದ್ದ ಮದ್ಯ ವಶಪಡಿಸಿಕೊಂಡು ಪಂಚನಾಮೆ ನಡೆಸಿದ ಆಧಾರದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಇದು ಕಾನೂನು ಬಾಹಿರ. ಈ ಅಂಶವನ್ನು ಪರಿಗಣಿಸದೆ ಶಿಕ್ಷೆ ವಿಧಿಸಿರುವುದು ದೋಷದಿಂದ ಕೂಡಿದೆ’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಹುಣಸೂರಿನ ಅಬಕಾರಿ ವಿಭಾಗದ ಸಬ್ ಇನ್‌ಸ್ಪೆಕ್ಟರ್ 2008ರ ನವೆಂಬರ್ 24ರಂದು ಚಲ್ಲಹಳ್ಳಿ ಬಳಿ ಗಸ್ತು ತಿರುಗುವಾಗ, ಆರೋಪಿಗಳು ಬೈಕ್‌ನಲ್ಲಿ ಒರಿಜಿನಲ್ ಚಾಯ್ಸ್ ಬ್ರಾಂಡ್‌ನ 48 ವಿಸ್ಕಿ ಬಾಟಲ್‌ಗಳನ್ನು ಸಾಗಿಸಿದ್ದಕ್ಕೆ ಪ್ರಕರಣ ದಾಖಲಿಸಿದ್ದರು. ಮೈಸೂರಿನ ಜೆಎಂಎಫ್‌ಸಿ ನ್ಯಾಯಾಲಯ ಆರೋಪಿಗಳಿಗೆ 5 ವರ್ಷ ಜೈಲು ಶಿಕ್ಷೆ ಮತ್ತು ₹ 1 ಲಕ್ಷ ದಂಡ ವಿಧಿಸಿತ್ತು. ಸೆಷನ್ಸ್ ನ್ಯಾಯಾಲಯ ಈ ಆದೇಶ ಎತ್ತಿ ಹಿಡಿದಿತ್ತು. ಅರ್ಜಿದಾರರು ಇದನ್ನು ಪ್ರಶ್ನಿಸಿದ್ದರು.

ಸೌದಿ ಜೈಲಿನಲ್ಲಿರುವ ಕೇರಳದ ವ್ಯಕ್ತಿ ಬಿಡುಗಡೆಗೆ ಕ್ರಮ

₹34 ಕೋಟಿ ದೇಣಿಗೆ ಸಂಗ್ರಹ

ಕೋಯಿಕ್ಕೋಡ್ (ಪಿಟಿಐ): ಸೌದಿ ಅರೇಬಿಯಾದಲ್ಲಿ ಮರಣದಂಡನೆಗೆ ಗುರಿಯಾದ ವ್ಯಕ್ತಿಯನ್ನು ರಕ್ಷಿಸಲು ಕೇರಳದ ಜನರು ಒಗ್ಗಟ್ಟು ಮತ್ತು ಸಹಾನುಭೂತಿ ಪ್ರದರ್ಶಿಸಿದ್ದು, ದೇಣಿಗೆ ಮೂಲಕ ಒಟ್ಟಾರೆ ₹34 ಕೋಟಿ ಸಂಗ್ರಹಿಸಿದ್ದಾರೆ.

ಕೋಯಿಕ್ಕೋಡ್ ಮೂಲದ ಅಬ್ದುಲ್ ರಹೀಂ ಅವರು 2006ರಲ್ಲಿ ಸೌದಿಯ ಬಾಲಕನನ್ನು ಕೊಂದ ಆರೋಪದ ಮೇಲೆ, ಗಲ್ಫ್ ರಾಷ್ಟ್ರದಲ್ಲಿ 18 ವರ್ಷಗಳಿಂದ ಜೈಲಿನಲ್ಲಿದ್ದಾರೆ.

ರಹೀಂ ಅವರ ಬಿಡುಗಡೆಗಾಗಿ ಕೆಲಸ ಮಾಡಲು ಐದು ದಿನಗಳ ಹಿಂದೆ ರಚನೆಯಾದ ಕ್ರಿಯಾ ಸಮಿತಿಗೆ ಆರಂಭದಲ್ಲಿ ಅಲ್ಪ ಮೊತ್ತವನ್ನು ಮಾತ್ರ ಸಂಗ್ರಹಿಸಲು ಸಾಧ್ಯವಾಗಿತ್ತು. ಅದರೆ ಕ್ರಮೇಣ ತೀವ್ರಗೊಂಡ ಅಭಿಯಾನಕ್ಕೆ, ವಿಶ್ವದಾದ್ಯಂತ ನೆಲೆಸಿರುವ ಕೇರಳದ ಜನರು ನೆರವಿನ ಹಸ್ತ ಚಾಚಿದರು ಎಂದು ಸಂಘಟಕರು ಶುಕ್ರವಾರ ಮಾಹಿತಿ ನೀಡಿದರು.

2006ರಲ್ಲಿ ರಹೀಂ ಅವರು ತಾನು ಆರೈಕೆ ಮಾಡುತ್ತಿದ್ದ ಅಂಗವಿಕಲ ಬಾಲಕನ ಸಾವಿಗೆ ಕಾರಣರಾದರು. ಈ ಪ್ರಕರಣದಲ್ಲಿ ಜೈಲು ಸೇರಿದ ಅವರಿಗೆ, ಕ್ಷಮಾದಾನ ನೀಡಲು ಬಾಲಕನ ಕುಟುಂಬ ನಿರಾಕರಿಸಿತು. ಇದರ ಪರಿಣಾಮ ಅವರಿಗೆ 2018ರಲ್ಲಿ ಮರಣದಂಡನೆ ಶಿಕ್ಷೆ ವಿಧಿಸಲಾಯಿತು.

ಈ ಸಂಬಂಧ ಸಲ್ಲಿಕೆಯಾದ ಮೇಲ್ಮನವಿಗಳನ್ನು ಉನ್ನತ ನ್ಯಾಯಾಲಯಗಳು ತಿರಸ್ಕರಿಸಿದವು. ಆದರೆ, ರಹೀಂ ಅವರು ಪರಿಹಾರ ಮೊತ್ತ ನೀಡಿದರೆ ಕ್ಷಮಿಸುವುದಾಗಿ ಮೃತ ಬಾಲಕನ ಕುಟುಂಬ ಒಪ್ಪಿಕೊಂಡಿತು ಎಂದು ಕ್ರಿಯಾ ಸಮಿತಿ ಸದಸ್ಯರು ಮಾಧ್ಯಮಗಳಿಗೆ ತಿಳಿಸಿದರು.

ರಿಯಾದ್‌ನಲ್ಲಿರುವ ಕೇರಳ ಮೂಲದ 75ಕ್ಕೂ ಹೆಚ್ಚು ಸಂಸ್ಥೆಗಳು, ಉದ್ಯಮಿ ಬಾಬ್ಬಿ ಚೆಮ್ಮನ್ನೂರ್, ರಾಜ್ಯದ ವಿವಿಧ ರಾಜಕೀಯ ಸಂಘಟನೆಗಳು, ಸಾಮಾನ್ಯ ಜನರು ಆರ್ಥಿಕ ನೆರವು ನೀಡಿದ್ದಾರೆ ಎಂದು ಅವರು ವಿವರಿಸಿದರು.

‘ಇಷ್ಟೊಂದು ಮೊತ್ತ ಸಂಗ್ರಹಿಸಬಹುದು ಎಂದು ನಾನು ಯೋಚಿಸಿಯೇ ಇರಲಿಲ್ಲ. ₹ 34 ಕೋಟಿ ಸಂಗ್ರಹಿಸುವುದು ಹೇಗೆ ಎಂಬುದು ತಿಳಿಯದೆ ದಿಕ್ಕು ತೋಚದಂತಾಗಿತ್ತು. ಅದರೆ ಈಗ ಅದು ಸಾಧ್ಯವಾಗಿದೆ’ ಎಂದು ರಹೀಂ ತಾಯಿ ಪ್ರತಿಕ್ರಿಯಿಸಿದ್ದಾರೆ.

ಹಣ ಸಂಗ್ರಹಿಸಲು ಬಾಬ್ಬಿ ಚೆಮ್ಮನ್ನೂರ್ ಅವರು ಕೆಲವು ದಿನಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಅಲ್ಲದೆ ತಮ್ಮ ಕೆಲ ಉತ್ಪನ್ನಗಳನ್ನು ಮಾರಾಟ ಮಾಡಿ, ಅದರಿಂದ ಬಂದ ಹಣವನ್ನು ನೆರವು ನೀಡಿದರು ಎಂದು ಕ್ರಿಯಾ ಸಮಿತಿ ಸದಸ್ಯರು ತಿಳಿಸಿದರು. ನಿಧಿ ಸಂಗ್ರಹ ವಿಷಯದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಸಮಿತಿಯು ಮೊಬೈಲ್ ಅಪ್ಲಿಕೇಷನ್ ಸಿದ್ಧಪಡಿಸಿತ್ತು.

ಉಪವಾಸದ ವಿರುದ್ಧದ ಪ್ರಕರಣ ರದ್ದು ಕೋರಿದ್ದ ಅರ್ಜಿ ತಿರಸ್ಕೃತ

ನವದೆಹಲಿ (ಪಿಟಿಐ): ಮಣಿಪುರದ ಜನಾಂಗೀಯ ಘರ್ಷಣೆಯನ್ನು ವಿರೋಧಿಸಿ ಆಮರಣಾಂತ ಉಪವಾಸ ಕೈಗೊಂಡಿರುವುದಕ್ಕಾಗಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಗೊಳಿಸುವಂತೆ ನಿರ್ದೇಶನ ನೀಡುವಂತೆ ಕೋರಿ ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಸಲ್ಲಿಸಿದ್ದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು, ಅರ್ಜಿದಾರರಾದ ಮಾಲೆಮ್ ಥೊಂಗಮ್ ಅವರಿಗೆ, ಮಣಿಪುರ ಹೈಕೋರ್ಟ್ ಮೊರೆ ಹೋಗುವಂತೆ ಸೂಚಿಸಿದೆ.

ಫೆಬ್ರವರಿ 22ರಂದು ದೆಹಲಿ ವಿಶ್ವವಿದ್ಯಾಲಯದಲ್ಲಿ ಥೊಂಗಮ್ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಬಳಿಕ ಫೆಬ್ರುವರಿ 27ರಂದು ಅವರು ದೆಹಲಿಯಿಂದ ಮಣಿಪುರಕ್ಕೆ ತೆರಳಿದರು. ಮಣಿಪುರದ ಇಂಫಾಲ್‌ನ ಕಾಂಗ್ಲಾ ಪಶ್ಚಿಮ ಗೇಟ್‌ನಲ್ಲಿ ಉಪವಾಸ ಮುಂದುವರಿಸಿದರು.

ಮಾರ್ಚ್ 2 ರಂದು ಥೊಂಗಮ್ ಅವರನ್ನು ಆತ್ಮಹತ್ಯೆಯ ಪ್ರಯತ್ನ ಹಾಗೂ ಗುಂಪುಗಳ ನಡುವೆ ದ್ವೇಷ ಮೂಡಿಸಲು ಯತ್ನಿಸಿದ ಆರೋಪದ ಅಡಿ ಮಣಿಪುರ ಪೊಲೀಸರು ಬಂಧಿಸಿದ್ದರು. ಬಳಿಕ ಮಾರ್ಚ್ 5ರಂದು ಬಿಡುಗಡೆ ಮಾಡಿದ್ದರು.

ಇದಾದ ನಂತರ ಸಾರ್ವಜನಿಕವಾಗಿ ಪ್ರತಿಭಟನೆ ನಡೆಸಿದ ಆರೋಪದ ಅಡಿ ಥೊಂಗಮ್ ಅವರನ್ನು ಮತ್ತೆ ಬಂಧಿಸಲಾಯಿತು.

ಕೇಂದ್ರ ಸರ್ಕಾರದ ವಿರುದ್ಧ ಆಮ್ ಆದ್ಮಿ ಪಕ್ಷದ ನಾಯಕರ ಆರೋಪ

‘ದೆಹಲಿಯಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಸಂಚು’

ಆತಿಶಿ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೊಡ್ಡ ರಾಜಕೀಯ ಸಂಚು ರೂಪಿಸುತ್ತಿದೆ ಎಂದು ದೆಹಲಿ ಸರ್ಕಾರದ ಸಂಪುಟ ಸಚಿವೆ ಆತಿಶಿ ಶುಕ್ರವಾರ ಆರೋಪಿಸಿದರು.

ಅರವಿಂದ ಕೇಜ್ರಿವಾಲ್ ಅವರ ಬಂಧನವು, ಆಮ್ ಆದ್ಮಿ ಪಕ್ಷದ (ಎಎಪಿ) ನೇತೃತ್ವದ ಸರ್ಕಾರವನ್ನು ಉರುಳಿಸುವ ರಾಜಕೀಯ ಪಿತೂರಿಯಾಗಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲಾಗುತ್ತಿದೆ ಎನ್ನುವುದು ನಮಗೆ ವಿಶ್ವಾಸಾರ್ಹ ಮೂಲಗಳಿಂದ ತಿಳಿದುಬಂದಿದೆ ಎಂದು ಅವರು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ದೆಹಲಿಯಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂಬುದು ಬಿಜೆಪಿಗೆ ಈಗಾಗಲೇ ಅರಿವಾಗಿದೆ. ಹಾಗಾಗಿಯೇ, ಕಳೆದ ಕೆಲವು ತಿಂಗಳುಗಳಿಂದ ಯಾವುದೇ ಹಿರಿಯ ಐಎಎಸ್ ಅಧಿಕಾರಿಯನ್ನು ದೆಹಲಿ ಸರ್ಕಾರದಲ್ಲಿ ಕೆಲಸ ಮಾಡಲು ನಿಯೋಜಿಸಿಲ್ಲ. ರಾಷ್ಟ್ರಪತಿ ಆಳ್ವಿಕೆ ಹೇರುವುದು ಕಾನೂನುಬಾಹಿರ ಮತ್ತು ಜನರ ಆದೇಶಕ್ಕೆ ವಿರುದ್ಧವಾದದ್ದು ಎಂದು ಆತಿಶಿ ಹೇಳಿದರು.

ಆತಿಶಿ ಅವರ ಧಾಟಿಯಲ್ಲೇ ಮಾತನಾಡಿರುವ ಮತ್ತೊಬ್ಬ ಸಂಪುಟ ಸಚಿವ ಸೌರಭ್ ಭಾರದ್ವಾಜ್, ‘ಬಿಜೆಪಿ ಮತ್ತು ಲೆಫ್ಟಿನೆಂಟ್ ಗವರ್ನರ್ ದೆಹಲಿಯಲ್ಲಿ ಸಾಂವಿಧಾನಿಕ ಬಿಕ್ಕಟ್ಟಿನ ಬಗ್ಗೆ ಮಾತನಾಡುತ್ತಿದ್ದಾರೆ. ಇದು ದೆಹಲಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವ ಷಡ್ಯಂತ್ರವನ್ನು ಹೊಂದಿದೆ’ ಎಂದು ಅವರು ಆಪಾದಿಸಿದರು.

‘2015 ಮತ್ತು 2020ರ ಚುನಾವಣೆಗಳಲ್ಲಿ ದೆಹಲಿಯಲ್ಲಿ ಬಿಜೆಪಿ ಎರಡು ಬಾರಿ ಸೋತಿದೆ. ತಮ್ಮಿಂದ ಸರ್ಕಾರ ರಚಿಸಲು ಸಾಧ್ಯವಿಲ್ಲವೆಂಬುದು ಆ ಪಕ್ಷಕ್ಕೆ ತಿಳಿದಿದೆ. ದೆಹಲಿಯಲ್ಲಿ ಇವತ್ತು ಚುನಾವಣೆ ನಡೆದರೂ ಅರವಿಂದ ಕೇಜ್ರಿವಾಲ್ ಗೆಲ್ಲುತ್ತಾರೆ’ ಎಂದು ಅವರು ಹೇಳಿದರು.

ಎಎಪಿ ನಾಯಕಿಯ ಆರೋಪಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ, 70 ಸದಸ್ಯ ಬಲದ ದೆಹಲಿ ವಿಧಾನಸಭೆಯಲ್ಲಿ 62 ಶಾಸಕರನ್ನು ಹೊಂದಿರುವ ಎಎಪಿಗೆ ರಾಷ್ಟ್ರಪತಿ ಆಳ್ವಿಕೆಯ ಭಯ ಕಾಡುತ್ತಿರುವುದು ಅಚ್ಚರಿ ಮೂಡಿಸಿದೆ ಎಂದಿದೆ.

ರಾಜ್‌ಕುಮಾರ್ ಆನಂದ್ ನಿವಾಸದ ಎದುರು ಪ್ರತಿಭಟನೆ

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷ (ಎಎಪಿ), ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದನ್ನು ವಿರೋಧಿಸಿ ಪಟೇಲ್ ನಗರದಲ್ಲಿರುವ ರಾಜ್‌ಕುಮಾರ್ ಆನಂದ್ ಅವರ ನಿವಾಸದ ಎದುರು ಪಕ್ಷದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

‘ಆನಂದ್ ಅವರು ಕಳೆದ ನಾಲ್ಕು ವರ್ಷಗಳಿಂದ ಪಕ್ಷಕ್ಕಾಗಿ ಕೆಲಸ ಮಾಡಿದ್ದಾರೆ. ತಮಗೆ ಮತ ಹಾಕಿದರೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಾಗಿ ಭರವಸೆ ನೀಡಿದ್ದರು. ರಾಜೀನಾಮೆಯಿಂದಾಗಿ ಅವರು ಪ್ರತಿನಿಧಿಸಿದ ಕ್ಷೇತ್ರದ ಜನರಿಗೆ ಅನ್ಯಾಯವಾಗಿದೆ’ ಎಂದು ಕಾರ್ಯಕರ್ತ ಅಂಕುಶ್ ನಾರಂಗ್ ಹೇಳಿದರು.

‘ಪಕ್ಷದ ಹಲವು ಕಾರ್ಯಕರ್ತರು ಮತ್ತು ಪಟೇಲ್ ನಗರದ ನಿವಾಸಿಗಳು ಅವರ ವಿರುದ್ಧ ಪ್ರತಿಭಟನೆ ನಡೆಸಿದರು. ಕೆಲವು ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ’ ಎಂದು ಹೇಳಿದರು.

‘ಆನಂದ್ ಅವರು ಜಾರಿ ನಿರ್ದೇಶನಾಲಯದ ದಾಳಿಗೆ ಹೆದರಿ ಪಕ್ಷ ತೊರೆದಿದ್ದಾರೆ’ ಎಂದು ಆರೋಪಿಸಿದರು.

ಆನಂದ್ 2020ರಲ್ಲಿ ನಡೆದ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಪಟೇಲ್ ನಗರ ಕ್ಷೇತ್ರದಿಂದ ಜಯಗಳಿಸಿದ್ದರು.

ಜಾಮೀನಿಗೆ ಸಿಸೋಡಿಯಾ ಅರ್ಜಿ: ಇ.ಡಿ, ಸಿಬಿಐಗೆ ನೋಟಿಸ್



ಮನಿಶ್ ಸಿಸೋಡಿಯಾ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದಲ್ಲಿ ಬಂಧಿತರಾಗಿರುವ ಎಎಪಿ ನಾಯಕ ಮನಿಶ್ ಸಿಸೋಡಿಯಾ ಅವರು ಸಾರ್ವತ್ರಿಕ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲು ಮಧ್ಯಂತರ ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ, ದೆಹಲಿ ನ್ಯಾಯಾಲಯವು ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಸಿಬಿಐಗೆ ನೋಟಿಸ್ ಜಾರಿಗೊಳಿಸಿದೆ.

ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಇದೇ 20ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ತನಿಖಾ ಸಂಸ್ಥೆಗಳಿಗೆ ಸೂಚಿಸಿದ್ದಾರೆ. ಈ ಕುರಿತು ಇದೇ 20ರಂದು ವಿಚಾರಣೆ ನಡೆಸುವ ಸಾಧ್ಯತೆಯೂ ಇದೆ.

ದೆಹಲಿ ಅಬಕಾರಿ ನೀತಿಯ ಹಗರಣದಲ್ಲಿನ ಪಾತ್ರಕ್ಕಾಗಿ ಸಿಬಿಐ ಸಿಸೋಡಿಯಾ ಅವರನ್ನು 2023ರ ಫೆಬ್ರುವರಿ 26ರಂದು ಬಂಧಿಸಿತ್ತು. ಇದೇ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಇ.ಡಿಯು ಅವರನ್ನು 2023ರ ಮಾರ್ಚ್ 9ರಂದು ಬಂಧಿಸಿತ್ತು. ಅವರು 2023ರ ಫೆಬ್ರುವರಿ 28ರಂದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಅಬಕಾರಿ ನೀತಿಯನ್ನು ಮಾರ್ಪಡಿಸುವಾಗ ಹಲವು ಅಕ್ರಮಗಳು ನಡೆದಿವೆ ಎಂಬುದು ಸಿಬಿಐ ಮತ್ತು ಇ.ಡಿ ಆರೋಪವಾಗಿದ್ದು, ಪರವಾನಗಿದಾರರಿಗೆ ಅನುಕೂಲಗಳನ್ನು ಮಾಡಿಕೊಡಲಾಗಿದೆ ಎಂದು ಅವು ದೂರಿವೆ.

'ಕೈ'ಗೆ ಸಿಕ್ಕೀತೇ ಮತಗಂಟಿನ ಗ್ಯಾರಂಟಿ

• ವೈ.ಗ. ಜಗದೀಶ್

ಬೆಂಗಳೂರು: ಕರ್ನಾಟಕದ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಘೋಷಿಸಿದ್ದ 'ಐದು ಗ್ಯಾರಂಟಿ' ದೊಡ್ಡ ಸದ್ದು ಮಾಡಿತ್ತು. 'ಗ್ಯಾರಂಟಿ'ಗಳ ಬಗ್ಗೆ ಟೀಕೆ ಮಾಡುತ್ತಲೇ ಇರುವ ಬಿಜೆಪಿಯವರು ಈಗ 'ಮೋದಿ ಗ್ಯಾರಂಟಿ'ಯ ಅಸ್ತ್ರ ಹೂಡಿದ್ದಾರೆ. ಈ ಬೆನ್ನಲ್ಲೇ, ಗ್ಯಾರಂಟಿಗಳು ಕಾಂಗ್ರೆಸ್‌ಗೆ ಮತಗಂಟನ್ನು ಕೊಡಲಿದೆಯೇ ಎಂಬ ಚರ್ಚೆಯೂ ಶುರುವಾಗಿದೆ.

ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ವಿಜಯ ಸಾಧಿಸಲು 'ಗ್ಯಾರಂಟಿ' ಒಂದೇ ಕಾರಣವಲ್ಲ; ಚುನಾವಣೆ ಪ್ರಣಾಳಿಕೆಯಲ್ಲಿನ ಆಮಿಷ, ಅಧಿಕಾರ ದಕ್ಕಿಸಿಕೊಂಡ ಬಳಿಕ ಜಾರಿಯಾಗುವ ಬಗ್ಗೆ ಜನರಿಗೆ ನಂಬಿಕೆ ಇರುವುದಿಲ್ಲ. ಆಡಳಿತಾರೂಢ ಬಿಜೆಪಿ ವಿರುದ್ಧ ಭ್ರಷ್ಟಾಚಾರದ ಆರೋಪವನ್ನೇ ಬಳಸಿ, ಕಾಂಗ್ರೆಸ್ ನಡೆಸಿದ ಅಭಿಯಾನ, ಮತದಾರರಲ್ಲಿ ಇದ್ದಿರಬಹುದಾದ ಆಡಳಿತವಿರೋಧಿ ಮನಃಸ್ಥಿತಿ, ಬಿ.ಎಸ್. ಯಡಿಯೂರಪ್ಪ ಅವರನ್ನು ಬಿಜೆಪಿ ಕಡೆಗಣಿಸಿದ್ದು ಆ ಪಕ್ಷದ ಸೋಲಿಗೆ ಪ್ರಮುಖ ಕಾರಣಗಳು ಆಗಿರಬಹುದು. ಈ ಎಲ್ಲದರ ಜತೆಗೆ ಗ್ಯಾರಂಟಿಗಳೂ ಕಾಂಗ್ರೆಸ್ ಕೈಹಿಡಿದು, ಅಧಿಕಾರದ ಗದ್ದುಗೆಗೆ ಕೂರಿಸಿದವು.

ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಘೋಷಿಸಿದ 'ಗ್ಯಾರಂಟಿ'ಗಳ ಬಗ್ಗೆ ಬಿಜೆಪಿ ಕಟು ಟೀಕೆ ಮಾಡಿತ್ತು. ಪ್ರಧಾನಿ ನರೇಂದ್ರ ಮೋದಿಯವರು, ಕರ್ನಾಟಕದಲ್ಲಿ ಚುನಾವಣೆ ಪ್ರಚಾರ ನಡೆಸಿದ ವೇಳೆ, 'ಮೇ ತಿಂಗಳ ಬಳಿಕ ಕಾಂಗ್ರೆಸ್ ಗ್ಯಾರಂಟಿಗಳಿಗೆ ವಾರಂಟಿ ಇರುವುದಿಲ್ಲ. ಇಂತಹ ಉಚಿತ ಕೊಡುಗೆಗಳಿಂದ ದೇಶ–ರಾಜ್ಯಗಳ ಆರ್ಥಿಕತೆ ದಿವಾಳಿಯಾಗಲಿದೆ' ಎಂದು ಹೇಳಿದ್ದರು. ಆದರೆ, ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ, ಚುನಾವಣೆ ಪ್ರಣಾಳಿಕೆಯಲ್ಲಿ ಹಲವು 'ಉಚಿತ' ಕೊಡುಗೆಗಳನ್ನು ಘೋಷಿಸಿತ್ತು. ಕರ್ನಾಟಕದ ಚುನಾವಣೆ ಬಳಿಕ ನಡೆದ ವಿವಿಧ ರಾಜ್ಯಗಳ ಚುನಾವಣೆ ವೇಳೆ, ಬಿಜೆಪಿ ಅನೇಕ ಉಚಿತ ಕೊಡುಗೆಗಳ ಘೋಷಿಸಿತ್ತು. ಲೋಕಸಭೆ ಚುನಾವಣೆ ಆರಂಭವಾಗುವುದಕ್ಕೆ ಮುನ್ನ ಪ್ರತಿನಿತ್ಯವೂ 'ಮೋದಿ ಗ್ಯಾರಂಟಿ'ಯ ಜಾಹೀರಾತುಗಳು ಮಾಧ್ಯಮಗಳಲ್ಲಿ ಕಾಣಿಸಿಕೊಂಡಿದ್ದವು.

ಹಾಗಂತ ಈ ನೇರ ನಗದು ನೀಡುವುದನ್ನು ಮೊದಲು ಆರಂಭಿಸಿದ್ದು ಕಾಂಗ್ರೆಸ್ ಅಲ್ಲ. 2016ರಲ್ಲಿ ಮೋದಿ ಸರ್ಕಾರ ಘೋಷಿಸಿದ 'ಉಜ್ವಲ' ಎಂಬ ಜನಪ್ರಿಯ ಯೋಜನೆಯಡಿ ಪ್ರತಿ ಸಿಲಿಂಡರ್‌ಗೆ ₹300 ಸಹಾಯಧನ ಘೋಷಣೆ ಮಾಡಲಾಗಿತ್ತು. 2019ರ ಲೋಕಸಭೆ ಚುನಾವಣೆಗೆ ಮುನ್ನ ಘೋಷಿಸಿದ 'ಕಿಸಾನ್ ಸಮ್ಮಾನ್' ಯೋಜನೆಯಡಿ ಪ್ರತಿ ರೈತ ಕುಟುಂಬಕ್ಕೆ ವಾರ್ಷಿಕ ₹6 ಸಾವಿರ ನೀಡಲಾಗುತ್ತಿದೆ. ಇದು ನೇರ ನಗದು ನೀಡುವ ಯೋಜನೆಗಳೇ ಆಗಿವೆ.

ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲಲೇಬೇಕೆಂದು ಛಲತೊಟ್ಟ ಕಾಂಗ್ರೆಸ್ ನಾಯಕರು ಐದು ಗ್ಯಾರಂಟಿಗಳನ್ನು ಘೋಷಣೆ ಮಾಡಿದರು. ಅದರಲ್ಲೂ ಮಹಿಳಾ ಕೇಂದ್ರಿತ ಯೋಜನೆಗಳಾದ 'ಗೃಹಲಕ್ಷ್ಮಿ' ಮತ್ತು 'ಶಕ್ತಿ'ಯೋಜನೆಗಳು ಮಹಿಳೆಯರ ಮತ ಸೆಳೆಯುವಲ್ಲಿ ಯಶಸ್ವಿಯಾದಂತೆ ಕಾಣಿಸುತ್ತವೆ. ಅದರಲ್ಲೂ ಕೋವಿಡೋತ್ತರ ಆರ್ಥಿಕ ಸಂಕಷ್ಟದಲ್ಲಿದ್ದ ಜನರಿಗೆ, ಅದರಲ್ಲೂ ಮಹಿಳೆಯರಿಗೆ ನೆರವಿಗೆ ನಿಂತವು. 'ಇವೆಲ್ಲವೂ ಜನರನ್ನು ಸ್ವಾವಲಂಬನೆ ಮತ್ತು ಸ್ವಾಭಿಮಾನ ತಂದುಕೊಡುವ ಯೋಜನೆಗಳಾಗಿದ್ದು, ಈ ಬಾರಿಯೂ ತಮ್ಮ ಪಕ್ಷದ ಕೈಹಿಡಿಯಲಿವೆ' ಎಂಬ ವಿಶ್ವಾಸ ಕಾಂಗ್ರೆಸ್ ನಾಯಕರದ್ದಾಗಿದೆ.

ಚುನಾವಣೆಯಲ್ಲಿ ಉಚಿತ ಕೊಡುಗೆಗಳನ್ನೂ ಘೋಷಿಸಿಯೂ ಗೆಲ್ಲಲಾಗದ ಬಿಜೆಪಿ ನಾಯಕರು 'ಗ್ಯಾರಂಟಿ'ಗಳನ್ನು ಹೀಗಳೆಯುತ್ತಲೇ ಬಂದಿದ್ದಾರೆ. ಗ್ಯಾರಂಟಿ ಜಾರಿಯೇ ಆಗಿಲ್ಲ; ಬಿಟ್ಟಿಭಾಗ್ಯದಿಂದ ಸರ್ಕಾರ ದಿವಾಳಿಯಾಗಿದೆ ಎಂದು ಟೀಕಿಸುತ್ತಲೇ ಬಂದಿದ್ದಾರೆ. ವಿಧಾನಸಭೆ ಚುನಾವಣೆ ಫಲಿತಾಂಶದ ಬಳಿಕ, ಗ್ಯಾರಂಟಿಗಳು ಕಾಂಗ್ರೆಸ್ ಕೈಹಿಡಿದಿವೆ ಎಂಬುದು ಮನವರಿಕೆಯಾಗಿದ್ದರಿಂದ ಬಿಜೆಪಿ ನಾಯಕರು, ಅದನ್ನೇ ಟೀಕಾ ವಿಷಯವಾಗಿ ಮಾಡಿಕೊಂಡಿದ್ದಾರೆ.

ವಿಧಾನಸಭೆ ಚುನಾವಣೆಗೆ ಮುನ್ನ ಘೋಷಣೆಯಾಗಿದ್ದ 'ಗ್ಯಾರಂಟಿ'ಗಳು ಈಗ ಜಾರಿಯಲ್ಲಿವೆ. ಸರ್ಕಾರ ಹೇಳುತ್ತಿರುವ ಅಂಕಿ ಅಂಶಕ್ಕೂ, ವಾಸ್ತವ ಅಂಕಿ ಅಂಶಕ್ಕೂ ವ್ಯತ್ಯಾಸ ಇರಬಹುದು. ಆದರೆ, ಶಕ್ತಿಯೋಜನೆಯಡಿ ಬಸ್ಸುಗಳಲ್ಲಿ ಮಹಿಳೆಯರು ಉಚಿತವಾಗಿ ಓಡಾಡುತ್ತಲೇ ಇದ್ದಾರೆ. ವಿದ್ಯುತ್ ಬಿಲ್ ಕಟ್ಟುವ ತಾಪತ್ರಯ ಬಹುತೇಕ ಕುಟುಂಬಗಳಿಗೆ ತಪ್ಪಿದೆ. ಇದು 'ಮತ'ವಾಗಬಹುದೆಂಬ ಆತಂಕ ಬಿಜೆಪಿಯವರಿಗೂ ಇದೆ. ಈ ಕುರಿತು ಪ್ರತಿಕ್ರಿಯಿಸಿದ್ದ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು, 'ಮಹಿಳಾ ಮತಗಳು ಕಾಂಗ್ರೆಸ್‌ಗೆ ಬೀಳುವುದಿಲ್ಲ. ಮಹಿಳೆಯರು ಬಿಜೆಪಿ ಜತೆಗೆ ಇದ್ದಾರೆ' ಎಂದು ಹೇಳಿದ್ದುಂಟು.

ಪತ್ರಿಕಾಗೋಷ್ಠಿ ನಡೆಸಿದ್ದ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಸಿ. ಮಂಜುಳಾ, 'ರಾಜ್ಯದಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನ ಗೆಲ್ಲದೇ ಇದ್ದರೆ ಗ್ಯಾರಂಟಿಗಳು ನಿಂತುಹೋಗುತ್ತವೆ ಎಂದು ಕಾಂಗ್ರೆಸ್‌ನವರು ಮತದಾರರನ್ನು ಬೆದರಿಸುತ್ತಿದ್ದಾರೆ' ಎಂದು ಹೇಳಿದ್ದರು. 'ಗ್ಯಾರಂಟಿ ಕಾರ್ಡ್‌ಗಳನ್ನು ಹಂಚುವುದಕ್ಕೆ ತಡೆಯೊಡ್ಡಬೇಕು' ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ಕೊಟ್ಟಿದೆ. ಅಂದರೆ, ಗ್ಯಾರಂಟಿಗಳು ಕಾಂಗ್ರೆಸ್‌ಗೆ ಅಲ್ಪಮಟ್ಟಿಗೆ ವರವಾಗಬಹುದೆಂಬ ಲೆಕ್ಕಾಚಾರ ಇದರ ಹಿಂದಿದೆ ಎಂಬುದು ಸ್ಪಷ್ಟ.

ಹಾಗಂತ, ಜನಪ್ರಿಯ–ಜನಪರ ಯೋಜನೆಗಳು ಮತವಾಗಿ ಪರಿವರ್ತಿತವಾಗುತ್ತವೆ ಎಂಬುದಕ್ಕೆ ಆಧಾರಗಳೇನು ಸಿಗುವುದಿಲ್ಲ. ಅತ್ಯುತ್ತಮ ಆಡಳಿತ ನೀಡಿದವರು ಚುನಾವಣೆಯಲ್ಲಿ ಸೋತಿದ್ದುಂಟು. 2018ರಲ್ಲಿ ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್ ಸೇರಿದಂತೆ ಹಲವು 'ಭಾಗ್ಯ'ಗಳನ್ನು ಕೊಟ್ಟಿದ್ದರೂ ಕಾಂಗ್ರೆಸ್ ಅನ್ನು ಜನ ಮರು ಆಯ್ಕೆ ಮಾಡಲಿಲ್ಲ. ಮತದಾನದ ಆಸುಪಾಸು ಘಟಿಸುವ ವಿದ್ಯಮಾನಗಳು, ರಾಜಕೀಯ ಲೆಕ್ಕಾಚಾರಗಳು, ರಾಷ್ಟ್ರೀಯ ವಿಚಾರಗಳು ಲೋಕಸಭೆ ಚುನಾವಣೆಯಲ್ಲಿ ಪರಿಣಾಮ ಬೀರುವ ಅಂಶಗಳಾಗಿವೆ. ಇವುಗಳ ಮಧ್ಯೆಯೂ ಗ್ಯಾರಂಟಿಯ ಲಾಭ ಕಾಂಗ್ರೆಸ್‌ಗೆ ದಕ್ಕೀತೇ ಎಂಬ ಕುತೂಹಲವಂತೂ ಇದೆ. ❖

ಮತ ಮಂಥನ

ಅನ್ನ ಭಾಗ್ಯ
2 ಕೋಟಿ ಕುಟುಂಬ
ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರತಿ ತಿಂಗಳು 10 ಕೆ.ಜಿ. ಅಕ್ಕಿ ವಿತರಿಸುವ ವಾಗ್ದಾನ. ಬೇಡಿಕೆಗೆ ತಕ್ಕಷ್ಟು ಅಕ್ಕಿ ಸಿಗದೇ ಇರುವುದರಿಂದ 5 ಕೆ.ಜಿ ಅಕ್ಕಿ, ಉಳಿದ 5 ಕೆ.ಜಿ. ಲೆಕ್ಕದಲ್ಲಿ ನೇರ ನಗದು ವರ್ಗಾವಣೆ ಮಾಡಲಾಗುತ್ತಿದೆ.

ಶಕ್ತಿಯೋಜನೆ
65 ಲಕ್ಷ ಪ್ರತಿದಿನ ಸರಾಸರಿ ಪ್ರಯಾಣಿಕರು
ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರು, ಯುವತಿಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ. ಈ ಯೋಜನೆ ಶುರುವಾಗುವ ಮೊದಲು ಪ್ರತಿದಿನ ಸರಾಸರಿ 84 ಲಕ್ಷ ಜನ ಓಡಾಡುತ್ತಿದ್ದರು. ಈಗ ಪ್ರತಿನಿತ್ಯ ಓಡಾಡುವವರ ಸಂಖ್ಯೆ 1.08 ಕೋಟಿಗೆ ತಲುಪಿದೆ. ಈ ಪೈಕಿ ಶೇ 59ರಷ್ಟು ಮಹಿಳೆಯರಿದ್ದಾರೆ.

ಗೃಹ ಲಕ್ಷ್ಮಿ
87.58 ಲಕ್ಷ ಫಲಾನುಭವಿಗಳು
ಪ್ರತಿ ಕುಟುಂಬದ ಯಜಮಾನಿಗೆ ತಿಂಗಳಿಗೆ ₹2 ಸಾವಿರ ನೀಡುವ ಯೋಜನೆ.

ಗೃಹ ಜ್ಯೋತಿ
1.23 ಕೋಟಿ ಕುಟುಂಬ
ಪ್ರತಿ ತಿಂಗಳು ಗರಿಷ್ಠ 200 ಯೂನಿಟ್‌ವರೆಗೆ ಗೃಹ ಬಳಕೆಗೆ ಬಳಸುವ ವಿದ್ಯುತ್ ಉಚಿತ. ನೋಂದಾಯಿಸಿಕೊಂಡವರಿಗೆ ಮಾತ್ರ ಸೌಲಭ್ಯ. ಸರಾಸರಿ ಬಳಕೆ ಆಧರಿಸಿ, ಉಚಿತ ವಿದ್ಯುತ್ ಪ್ರಮಾಣ ನಿಗದಿ

ಯುವ ನಿಧಿ
4.7 ಲಕ್ಷ ಫಲಾನುಭವಿಗಳು
ವಿದ್ಯಾಭ್ಯಾಸ ಮುಗಿದು ಆರು ತಿಂಗಳಾದರೂ ಉದ್ಯೋಗ ಸಿಗದವರಿಗೆ 24 ತಿಂಗಳ ಕಾಲ ಯುವ ನಿಧಿ ನೀಡಲಾಗುತ್ತಿದೆ. ಡಿಪ್ಲೊಮಾ ಪಾಸಾದವರಿಗೆ ತಿಂಗಳಿಗೆ ₹1,500 ಹಾಗೂ ಪದವೀಧರರಿಗೆ ₹3 ಸಾವಿರ

ಮಾಹಿತಿ: ಸರ್ಕಾರದ ವಿವಿಧ ಇಲಾಖೆಗಳು

ಮತ ಪತ್ರ

ಸಾಧಾರಣವಾಗಿ ನಮ್ಮಲ್ಲಿ ಬಹುತೇಕರು ಚುನಾವಣೆ ದಿನದ ರಜೆಯಂದು ಪಿಕ್‌ನಿಕ್‌ಗೆ ಹೊರಟು ಹೋಗ್ತಾರೆ. ಅದು ಸರಿಯಲ್ಲ. ಮತದಾನ ನಮ್ಮ ಹಕ್ಕು ಮತ್ತು ಕರ್ತವ್ಯ ಕೂಡ. ಮತದಾನ ಮಾಡದೇ ಇರುವುದು ಬೇಜವಾಬ್ದಾರಿತನ. ಯಾರೇ ಆಗಲಿ, ತೀರಾ ತುರ್ತು ಅಥವಾ ಅನಿವಾರ್ಯ ಪರಿಸ್ಥಿತಿಯಲ್ಲಿರದ ಹೊರತು ಮತದಾನವನ್ನು ತಪ್ಪಿಸಿಕೊಳ್ಳಬಾರದು.

ದೇಶ, ಸಮಾಜವನ್ನು ಯಾರು ಉದ್ಧಾರ ಮಾಡ್ತಾರೆ ಎಂದು ಅನಿಸುತ್ತದೆಯೋ ಅವರಿಗೇ ಮತ ಹಾಕಿ. ಅದು ಅವರವರ ವೈಯಕ್ತಿಕ ಆಯ್ಕೆ. ನಾವು ಹೇಗೆ ಆಸ್ತಿ ತೆರಿಗೆ, ಆದಾಯ ತೆರಿಗೆಗಳನ್ನು ಕಟ್ಟುತ್ತೇವೆಯೋ ಅದೇ ರೀತಿ ಮತದಾನ ಮಾಡುವುದೂ ಆದ್ಯ ಕರ್ತವ್ಯ. ಎಲ್ಲಕ್ಕಿಂತ ಮುಖ್ಯವಾಗಿ ಮತ ಚಲಾವಣೆ ಮಾಡುವುದನ್ನು ತಪ್ಪಿಸಿಕೊಂಡು, ಅರ್ಹರು ಅಧಿಕಾರಕ್ಕೆ ಬರಲಿಲ್ಲ, ಅಭಿವೃದ್ಧಿಯಾಗಲಿಲ್ಲ ಎಂದು ಗೊಣಗುವುದಕ್ಕಿಂತ ಕರ್ತವ್ಯ ನಿಭಾಯಿಸುವುದು ಮುಖ್ಯ.

(ಶಾಂತಾ ರಂಗಸ್ವಾಮಿ)
ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ

ಮತ ಆಮಿಷ: ಆಯೋಗದ ವಶ

₹46.01 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹79.67 ಕೋಟಿ
ಮದ್ಯ	₹147.03 ಕೋಟಿ (1.39 ಕೋಟಿ ಲೀ)
ಮಾದಕವಸ್ತು	₹9.75 ಕೋಟಿ (399 ಕೆ.ಜಿ.)
ಚಿನ್ನ	₹24.38 ಕೋಟಿ (42.67 ಕೆ.ಜಿ.)
ಬೆಳ್ಳಿ	₹69 ಲಕ್ಷ (230 ಕೆ.ಜಿ.)

ಎಂಥಾ ಮಾತು!

ಕಾಂಗ್ರೆಸಿಗರಿಗೆ, ಅದರಲ್ಲೂ ಡೂಪ್ಲಿಕೇಟ್ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಸೋಲಿನ ಭೀತಿ ಎಷ್ಟರಮಟ್ಟಿಗೆ ಕಾಡುತ್ತಿದೆ ಎಂದರೆ, ಯುವ ಕಾಂಗ್ರೆಸ್ ಕಾರ್ಯಕರ್ತರಿಗೇ ಕಾಂಗ್ರೆಸ್ ಶಾಲು ಹಾಕಿ, ಅವರನ್ನು ಜೆಡಿಎಸ್ ಕಾರ್ಯಕರ್ತರು ಎಂದು ಬಿಂಬಿಸಿ, ಅವರೆಲ್ಲ ಕಾಂಗ್ರೆಸ್ ಸೇರಿದ್ದಾರೆ ಎಂದು ಪ್ರಚಾರ ಪಡೆಯುತ್ತಿದ್ದಾರೆ. ಸೋಲಿನ ಭೀತಿ, ಹತಾಶೆ ಎಂತೆಂತಹ ಗಿಮಿಕ್‌ಗಳನ್ನು ಮಾಡಿಸುತ್ತದೆ ಎನ್ನುವುದಕ್ಕೆ ಇದು ಜೀವಂತ ಸಾಕ್ಷಿ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ರಾಜ್ಯಘಟಕದ ಅಧ್ಯಕ್ಷ

ಮೊದಲ ಮತದ ಸಂಭ್ರಮ

ಕೆ.ಎಂ.ರಕ್ಷಿತಾ, ತುಮಕೂರು

ಮೊದಲ ಬಾರಿಗೆ ನನ್ನ ಹಕ್ಕು ಚಲಾಯಿಸುತ್ತಿದ್ದೇನೆ ಎಂಬ ಖುಷಿ ಇದೆ. ಮತಗಟ್ಟೆ ಯಾವ ರೀತಿ ಇರುತ್ತದೆ, ಮತದಾನ ಪ್ರಕ್ರಿಯೆ ಹೇಗೆ ನಡೆಯುತ್ತದೆ ಎಂಬ ಕುತೂಹಲ ಸಹಜವಾಗಿ ಇದ್ದೇ ಇರುತ್ತದೆ. ಯಾವಾಗ ಮತದಾನ ಮಾಡುತ್ತೇನೆ ಎಂದು ಕಾತರದಿಂದ ಕಾಯುತ್ತಿದ್ದೇನೆ. ಚುನಾವಣೆಯಲ್ಲಿ ಆಯ್ಕೆಯಾಗುವ ವ್ಯಕ್ತಿ ಸರ್ವರ ಅಭಿವೃದ್ಧಿಗೆ ಶ್ರಮಿಸಬೇಕು. ಯಾವುದೇ ಒಂದು ಸಮುದಾಯಕ್ಕೆ ಅಂಟಿಕೊಂಡು ಕೂರಬಾರದು. ಜಿಲ್ಲೆ, ರಾಜ್ಯದ ಸಮಸ್ಯೆಗಳ ಬಗ್ಗೆ ಸಂಸತ್ತಿನಲ್ಲಿ ಧ್ವನಿ ಎತ್ತುವ ಅಭ್ಯರ್ಥಿ ಆಯ್ಕೆಗೆ ಎಲ್ಲರೂ ಒತ್ತು ನೀಡಬೇಕು. ಯಾವುದೇ ಆಮಿಷಗಳಿಗೆ ಬಲಿಯಾಗದೆ ಮತದಾನ ಮಾಡಬೇಕು. ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅಗತ್ಯ ಸೌಲಭ್ಯ ಕಲ್ಪಿಸಲು ಪ್ರಯತ್ನಿಸುವ ವ್ಯಕ್ತಿಗೆ ನಮ್ಮ ಮತ. ಅರ್ಹ ಎಲ್ಲ ಮತದಾರರು ತಪ್ಪದೇ ಮತ ಚಲಾಯಿಸಬೇಕು. ನಮಗೆ ಸಿಕ್ಕ ಅವಕಾಶ ಬಳಸಿಕೊಳ್ಳಬೇಕು.

ಕಣ ಸ್ವಾರಸ್ಯ

ಕಿರಿಯರ ಕಲರವ

ಬೆಂಗಳೂರು: ದೇಶದ ರಾಜಕಾರಣ ಶುದ್ಧೀಕರಣಗೊಳ್ಳಲು ಯುವಪೀಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕು ಎನ್ನುವುದು ಪ್ರಜ್ಞಾವಂತರ, ಪ್ರಜಾಪ್ರಭುತ್ವವಾದಿಗಳ ಆಶಯ. ಸ್ವಾತಂತ್ರ್ಯ ನಂತರ ನಡೆದ ಹೆಚ್ಚಿನ ಚುನಾವಣೆಗಳಲ್ಲಿ ಹಲವು ಯುವ ಜನರು ಚುನಾವಣೆಯಲ್ಲಿ ಸ್ಪರ್ಧಿಸಿ ಸಂಸತ್ ಪ್ರವೇಶಿಸಿದ್ದಾರೆ. ಸಂಸತ್‌ಗೆ ಯೌವನದ ಕಳೆ ತುಂಬಲು ಯತ್ನಿಸಿದ್ದಾರೆ.

ಬಿಜು ಜನತಾ ದಳದ (ಬಿಜೆಡಿ) ಚಂದ್ರಾನಿ ಮುರ್ಮು 25ನೇ ವಯಸ್ಸಿನಲ್ಲಿ 17ನೇ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು. ಕರ್ನಾಟಕದ ತೇಜಸ್ವಿ ಸೂರ್ಯ (28), ಪಶ್ಚಿಮ ಬಂಗಾಳದ ಟಿಎಂಸಿ ಸಂಸದೆ ನುಸ್ರತ್ ಜಹಾಂ (29), ಮಿಮಿ ಚಕ್ರವರ್ತಿ (30) ಮುಕ್ತಾಯಗೊಳ್ಳುತ್ತಿರುವ ಪ್ರಸ್ತುತ ಲೋಕಸಭೆಯ ಅತ್ಯಂತ ಕಿರಿಯ ಸಂಸತ್ ಸದಸ್ಯರು. 17ನೇ ಲೋಕಸಭೆಯ ಒಟ್ಟು ಸದಸ್ಯರಲ್ಲಿ ಶೇ 12ರಷ್ಟು ಮಂದಿ 40 ವರ್ಷದ ಒಳಗಿನ ವಯೋಮಾನದವರು. 40ನೇ ವಯಸ್ಸಿಗೆ ರಾಜೀವ್ ಗಾಂಧಿ 1984ರಲ್ಲಿ ದೇಶದ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸುವ ಮೂಲಕ ಅತ್ಯಂತ ಕಿರಿಯ ಪ್ರಧಾನಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲೂ ಹಲವು ಯುವ ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ರಾಜ್ಯದಲ್ಲಿಯೂ ಹಲವು ಯುವಕ–ಯುವತಿಯರು ಕಣಕ್ಕೆ ಇಳಿದಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳಾದ ಬೀದರ್‌ನ ಸಾಗರ್ ಖಂಡ್ರೆ (26), ಬಾಗಲಕೋಟೆಯ ಸಂಯುಕ್ತಾ ಪಾಟೀಲ (26) ಅತ್ಯಂತ ಕಿರಿಯ ಅಭ್ಯರ್ಥಿಗಳು. ರಾಜ್ಯದಿಂದ ಸ್ಪರ್ಧಿಸಿರುವ ಮೂರು ಪಕ್ಷಗಳಲ್ಲಿ 25ರಿಂದ 35ರ ವಯೋಮಾನದ 10 ಅಭ್ಯರ್ಥಿಗಳು ಇದ್ದಾರೆ. 35ರಿಂದ 40 ವರ್ಷದ ಯಾವ ಅಭ್ಯರ್ಥಿಯೂ ಇಲ್ಲ. ಉಳಿದವರು 40ರ ಮೇಲಿನ ವಯಸ್ಸಿನವರು.

	ಕ್ಷೇತ್ರ	ಅಭ್ಯರ್ಥಿ ಹೆಸರು	ವಯಸ್ಸು
ಕಾಂಗ್ರೆಸ್	ಬಾಗಲಕೋಟೆ	ಸಂಯುಕ್ತಾ ಪಾಟೀಲ	26
ಕಾಂಗ್ರೆಸ್	ಬೀದರ್	ಸಾಗರ್ ಖಂಡ್ರೆ	26
ಕಾಂಗ್ರೆಸ್	ಚಿಕ್ಕೋಡಿ	ಪ್ರಿಯಾಂಕಾ ಜಾರಕಿಹೊಳಿ	27
ಕಾಂಗ್ರೆಸ್	ಬೆಳಗಾವಿ	ಮೃಣಾಲ್ ಹೆಬ್ಬಾಳಕರ	31
ಕಾಂಗ್ರೆಸ್	ಹಾಸನ	ಶ್ರೇಯಸ್ ಪಟೇಲ್	32
ಕಾಂಗ್ರೆಸ್	ಚಾಮರಾಜನಗರ	ಸುನಿಲ್ ಬೋಸ್	34
ಕಾಂಗ್ರೆಸ್	ಧಾರವಾಡ	ವಿನೋದ್ ಅಸೂಟಿ	35
ಬಿಜೆಪಿ	ಮೈಸೂರು	ಯದುವೀರ ಒಡೆಯರ್	32
ಬಿಜೆಪಿ	ಬೆಂಗಳೂರು ದಕ್ಷಿಣ	ತೇಜಸ್ವಿ ಸೂರ್ಯ	34
ಜೆಡಿಎಸ್	ಹಾಸನ	ಪ್ರಜ್ವಲ್ ರೇವಣ್ಣ	34

ಕ್ಯಾವಟರ್ ಬಳಿ ₹65 ಲಕ್ಷದ ಕಾರಿದೆ, ಸ್ವಂತ ಮನೆಯಿಲ್ಲ

₹10.92 ಕೋಟಿ ಒಟ್ಟು ಆಸ್ತಿಯ ಮೌಲ್ಯ

ಕೊಪ್ಪಳ: ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿಗೆ ಆಯ್ಕೆ ಬಯಸಿರುವ ಕೊಪ್ಪಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಬಸವರಾಜ ಕ್ಯಾವಟರ್ ಬಳಿ ಮನೆಯಿಲ್ಲ. ಆದರೆ ಅವರಲ್ಲಿ ₹65 ಲಕ್ಷ ಮೌಲ್ಯದ ಲೆಕ್ಸಸ್ ಕಾರಿದೆ. ಮೊದಲ ಬಾರಿಗೆ ಅವರು ಚುನಾವಣೆಗೆ ಸ್ಪರ್ಧೆ ಮಾಡಿದ್ದಾರೆ.

ಡಾ. ಬಸವರಾಜ ಕ್ಯಾವಟರ್

ರಾಜಶೇಖರ ಹಿಟ್ನಾಳ 22 ವಾಹನಗಳ ಮಾಲೀಕ

ಒಟ್ಟು ಆಸ್ತಿಯ ಮೌಲ್ಯ ₹19.06 ಕೋಟಿ | ಪತ್ನಿ: ಕೆ.ರಶ್ಮಿ ₹5.22 ಕೋಟಿ

ಕೊಪ್ಪಳ: ಕೊಪ್ಪಳ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೆ. ರಾಜಶೇಖರ ಹಿಟ್ನಾಳ ಅವರ ಆಸ್ತಿ ಐದು ವರ್ಷಗಳಲ್ಲಿ ₹10.59 ಕೋಟಿ ಹೆಚ್ಚಾಗಿದೆ. 2019ರ ಚುನಾವಣೆಗೆ ಸ್ಪರ್ಧಿಸಿದ್ದಾಗ ಸಲ್ಲಿಸಿದ ಅಫಿಡವಿಟ್‌ನಲ್ಲಿ ₹8.47 ಕೋಟಿ ಆಸ್ತಿ ಘೋಷಣೆ ಮಾಡಿದ್ದರು. ಈಗ ಘೋಷಣೆ ಮಾಡಿದ ಪ್ರಕಾರ ಅವರ ಆಸ್ತಿಯ ಮೌಲ್ಯ ₹19.06 ಕೋಟಿ. ಅವರ ಬಳಿ 22 ವಾಹನಗಳಿವೆ. ಸತತ ಎರಡನೇ ಬಾರಿಗೆ ಸ್ಪರ್ಧೆ ಮಾಡಿರುವ ಅವರು ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಅವರು ಸೋಲು ಕಂಡಿದ್ದರು.



ರಾಜಶೇಖರ ಹಿಟ್ನಾಳ

ಬಿ.ಶ್ರೀರಾಮುಲು: ಆದಾಯ ಖೋತಾ, ಸಾಲ ಹೆಚ್ಚಳ

ಒಟ್ಟು ಆಸ್ತಿಯ ಮೌಲ್ಯ ₹45.88 ಕೋಟಿ | ಪತ್ನಿಯ ಆಸ್ತಿ ₹22.57 ಕೋಟಿ

ಬಳ್ಳಾರಿ: ಬಿ.ಶ್ರೀರಾಮುಲು ಅವರು ಕಳೆದ ವರ್ಷ ವಿಧಾನಸಭಾ ಚುನಾವಣೆ ವೇಳೆ ಘೋಷಿಸಿಕೊಂಡಿದ್ದ ಆಸ್ತಿ ವಿವರವನ್ನು ಗಮನಿಸಿದರೆ ಒಂದು ವರ್ಷದಲ್ಲಿ ಅವರ ಒಟ್ಟು ವರಮಾನದಲ್ಲಿ ₹69 ಲಕ್ಷ ನಷ್ಟವಾಗಿದೆ ಮತ್ತು ಸಾಲ ₹1.27 ಕೋಟಿ ಹೆಚ್ಚಾಗಿದೆ. ಬಿಎಂಡಬ್ಲ್ಯು ಕಾರಿನ ಒಡೆಯರಾದ ಅವರ ಬಳಿ ಕಳೆದ ಬಾರಿ ಬೆಂಜ್ ಕಾರು ಸಹ ಇತ್ತು. ಈ ಬಾರಿ ಇನ್ನೋವಾ ಕಾರು ಇದೆ. 2014ರಲ್ಲಿ ಲೋಕಸಭೆಗೆ ಸ್ಪರ್ಧಿಸಿದ್ದಾಗ ಅವರು ಘೋಷಿಸಿಕೊಂಡಿದ್ದ ಆಸ್ತಿಯ ಮೌಲ್ಯ ₹15.13 ಕೋಟಿ.

ಬಿ.ಶ್ರೀರಾಮುಲು

ವಿಶ್ವೇಶ್ವರ ಹೆಗಡೆ ಕಾಗೇರಿ ಆಸ್ತಿ ವರ್ಷಕ್ಕೆ ₹46 ಲಕ್ಷ ಏರಿಕೆ

ಒಟ್ಟು ಆಸ್ತಿಯ ಮೌಲ್ಯ ₹10.28 ಕೋಟಿ | ಪತ್ನಿ: ಭಾರತಿ ಹೆಗಡೆ ₹79 ಕೋಟಿ

ಉತ್ತರ ಕನ್ನಡ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿಶ್ವೇಶ್ವರ ಹೆಗಡೆ ಕಾಗೇರಿ ಈ ಹಿಂದೆ ಏಳು ಬಾರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದರು. ಆರು ಬಾರಿ ಶಾಸಕರಾಗಿ ಆಯ್ಕೆ ಆಗಿದ್ದರು. ಕಳೆದ ವರ್ಷ ಮೊದಲ ಬಾರಿ ಸೋಲು ಅನುಭವಿಸಿದ್ದರು. ಆ ವೇಳೆ ಅವರ ಆಸ್ತಿ ಮೌಲ್ಯ ₹9.82 ಕೋಟಿ ಇತ್ತು. ವರ್ಷದೊಳಗೆ ₹46 ಲಕ್ಷ ಏರಿಕೆಯಾಗಿದೆ.

ವಿಶ್ವೇಶ್ವರ ಹೆಗಡೆ ಕಾಗೇರಿ

ಖರ್ಗೆ ಅಳಿಯ ₹29 ಕೋಟಿ ಆಸ್ತಿಯ ಒಡೆಯ

ಒಟ್ಟು ಆಸ್ತಿಯ ಮೌಲ್ಯ ₹29.48 ಕೋಟಿ | ಪತ್ನಿ: ಡಾ. ಜಯಶ್ರೀ ರಾಧಾಕೃಷ್ಣ ₹13.03 ಕೋಟಿ

ಕಲಬುರಗಿ: ಕಾಂಗ್ರೆಸ್ ಪಕ್ಷದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಅವರ ಆಸ್ತಿ ₹29.48 ಕೋಟಿ ಇದೆ. ಅವರ ಬಳಿ ಎರಡು ವಾಹನಗಳಿವೆ. ₹4.18 ಕೋಟಿ ಸಾಲವೂ ಇದೆ. ಪತ್ನಿ ಡಾ. ಜಯಶ್ರೀ ಅವರ ಬಳಿ ₹13.03 ಕೋಟಿ ಮೌಲ್ಯದ ಆಸ್ತಿ ಇದೆ. ₹2.53 ಕೋಟಿ ಸಾಲವಿದೆ.

ರಾಧಾಕೃಷ್ಣ ದೊಡ್ಡಮನಿ

ಜಾಧವಗಿಂತ ಪತ್ನಿ ಶ್ರೀಮಂತೆ

ಒಟ್ಟು ಆಸ್ತಿಯ ಮೌಲ್ಯ ₹1.92 ಕೋಟಿ | ಪತ್ನಿ: ಗಾಯತ್ರಿ ₹4.18 ಕೋಟಿ

ಕಲಬುರಗಿ: ಮರು ಆಯ್ಕೆ ಬಯಸಿರುವ ಬಿಜೆಪಿ ಅಭ್ಯರ್ಥಿ, ಸಂಸದ ಡಾ. ಉಮೇಶ ಜಾಧವ ಅವರಿಗಿಂತ ಪತ್ನಿ ಗಾಯತ್ರಿ ಜಾಧವ ಅವರ ಆಸ್ತಿ ಹೆಚ್ಚಿದೆ. ಉಮೇಶ ಜಾಧವ ಬಳಿ ₹1.92 ಕೋಟಿಯ ಆಸ್ತಿ ಇದ್ದರೆ, ಪತ್ನಿಯ ಬಳಿ ₹4.18 ಕೋಟಿ ಮೌಲ್ಯದ ಆಸ್ತಿ ಇದೆ.



ಡಾ. ಉಮೇಶ ಜಾಧವ

ವಿನಯ್ ಕುಮಾರ್ ಆಸ್ತಿ ₹56.21 ಕೋಟಿ

ಒಟ್ಟು ಆಸ್ತಿಯ ಮೌಲ್ಯ ₹56.21 ಕೋಟಿ | ಪತ್ನಿ: ಸ್ವಾತಿ ₹1.74 ಕೋಟಿ

ಜಿ.ಬಿ.ವಿನಯ್ ಕುಮಾರ್

ದಾವಣಗೆರೆ: ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿರುವ ಇನ್‌ಸೈಟ್ಸ್ ಐಎಎಸ್ ಅಕಾಡೆಮಿ ಸಂಸ್ಥಾಪಕ ಜಿ.ಬಿ. ವಿನಯ್‌ಕುಮಾರ್ ₹56.21 ಕೋಟಿ ಆಸ್ತಿ ಹೊಂದಿದ್ದರೂ ಅವರ ಬಳಿ ಚಿನ್ನ, ವಾಹನ ಇಲ್ಲ. ₹9.07 ಕೋಟಿ ಮೌಲ್ಯದ ಚರಾಸ್ತಿ ಹೊಂದಿದ್ದು, ₹9.58 ಕೋಟಿ ಸಾಲ ಇದೆ. ₹47.14 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ.

ವರ್ಷದೊಳಗೆ ₹2 ಕೋಟಿಗೆ ಏರಿದ ಆಸ್ತಿ ಮೌಲ್ಯ

ಒಟ್ಟು ಆಸ್ತಿಯ ಮೌಲ್ಯ ₹2.01 ಕೋಟಿ | ಪತ್ನಿ: ಇ. ಅನ್ನಪೂರ್ಣ ₹1 ಕೋಟಿ

ಇ. ತುಕಾರಾಂ

ಬಳ್ಳಾರಿ: ಇ.ತುಕಾರಾಂ ಅವರು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದವರು. ಒಂದು ಬಾರಿ ಅಲ್ಪ ಅವಧಿಗೆ ಅವರು ಸಚಿವರೂ ಆಗಿದ್ದರು. ಕಳೆದ ವಿಧಾನಸಭಾ ಚುನಾವಣೆ ವೇಳೆ ಅವರ ಆಸ್ತಿ ಮೌಲ್ಯ ₹1.27 ಕೋಟಿ ಇತ್ತು. ವರ್ಷದೊಳಗೆ ಅವರ ಆಸ್ತಿ ₹2 ಕೋಟಿಗೆ ಏರಿದೆ. ವರ್ಷದ ಹಿಂದೆ ಅವರು ತಮ್ಮ ಪತ್ನಿಗೆ ನೀಡಿದ್ದ ಸಾಲದ ಮೊತ್ತ ₹78 ಲಕ್ಷ ಇತ್ತು. ಈಗ ಅದು ₹83 ಲಕ್ಷಕ್ಕೆ ಏರಿದೆ.

ಆಸ್ತಿ ಮೂರು ಪಟ್ಟು ಹೆಚ್ಚಳ

ಒಟ್ಟು ಆಸ್ತಿಯ ಮೌಲ್ಯ ₹26.63 ಕೋಟಿ | ಪತ್ನಿ: ಜಯಲಕ್ಷ್ಮಿ ₹6.87 ಕೋಟಿ

ಶಿವಮೊಗ್ಗ: 2018ರ ವಿಧಾನಸಭಾ ಚುನಾವಣೆಯಲ್ಲಿ ಕೆ.ಎಸ್.ಈಶ್ವರಪ್ಪ ಅವರ ಹೆಸರಲ್ಲಿ ₹10.31 ಕೋಟಿ ಮೌಲ್ಯದ ಆಸ್ತಿ ಘೋಷಣೆಯಾಗಿತ್ತು. ಈ ಬಾರಿ ಕೆ.ಎಸ್. ಈಶ್ವರಪ್ಪ ಹಾಗೂ ಅವರ ಪತ್ನಿ ಜಯಲಕ್ಷ್ಮಿ ಹೆಸರಲ್ಲಿ ಒಟ್ಟು ₹33.50 ಕೋಟಿ ಆಸ್ತಿ ಘೋಷಣೆ ಮಾಡಿಕೊಂಡಿದ್ದಾರೆ. ಕಳೆದ 6 ವರ್ಷಗಳಲ್ಲಿ ಕೆ.ಎಸ್. ಈಶ್ವರಪ್ಪ ದಂಪತಿಯ ಆಸ್ತಿ ಮೂರು ಪಟ್ಟು ಹೆಚ್ಚಳಗೊಂಡಿದೆ.

ಕೆ.ಎಸ್.ಈಶ್ವರಪ್ಪ

ಪ್ರಭಾ ಆಸ್ತಿ ₹44.53 ಕೋಟಿ

ಒಟ್ಟು ಆಸ್ತಿಯ ಮೌಲ್ಯ ₹44.53 ಕೋಟಿ | ಪತಿ: ಮಲ್ಲಿಕಾರ್ಜುನ ₹194 ಕೋಟಿ

ದಾವಣಗೆರೆ: ಮೊದಲ ಬಾರಿಗೆ ಸ್ಪರ್ಧಿಸಿರುವ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ ₹44.53 ಕೋಟಿ ಆಸ್ತಿಯ ಒಡತಿಯಾಗಿದ್ದರೂ ಅವರ ಬಳಿ ಒಂದೂ ವಾಹನ ಇಲ್ಲ. ನಾಮಪತ್ರದೊಂದಿಗೆ ನೀಡಿದ ಪ್ರಮಾಣಪತ್ರದಲ್ಲಿ ಅವರು ಈ ವಿವರ ಘೋಷಿಸಿಕೊಂಡಿದ್ದಾರೆ.

ಡಾ.ಪ್ರಭಾ

'ಗ್ಯಾರಂಟಿ ಬಲದಲ್ಲೇ ಗೆಲುವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಯಾವ ಭಾಗದಲ್ಲೂ ಪ್ರಧಾನಿ ನರೇಂದ್ರ ಮೋದಿಯವರ ಪರವಾದ ಅಲೆ ಇಲ್ಲ. ಕಾಂಗ್ರೆಸ್ ಪಕ್ಷವು ಗ್ಯಾರಂಟಿಗಳ ಬಲದಲ್ಲೇ ಗೆಲುವು ಸಾಧಿಸಲಿದೆ' ಎಂದು ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಭಿವೃದ್ಧಿಯನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ಪಕ್ಷವು ಚುನಾವಣೆ ಎದುರಿಸಲಿದೆ. ನಮ್ಮ ಸರ್ಕಾರದ ಗ್ಯಾರಂಟಿ ಯೋಜನೆಗಳು ನಾಡಿನ ಜನರ ಹಿತ ರಕ್ಷಿಸುತ್ತಿವೆ. ಅದಕ್ಕೆ ಪ್ರತಿಯಾಗಿ ಜನರು ಕಾಂಗ್ರೆಸ್ ಪಕ್ಷದ ಕೈ ಹಿಡಿಯಲಿದ್ದಾರೆ' ಎಂದರು.

'ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯ ಎಂದು ಟೀಕಿಸಿದ್ದ ವಿರೋಧ ಪಕ್ಷದವರು ಈಗ ಗ್ಯಾರಂಟಿಗಳ ಮೊರೆ ಹೋಗಿದ್ದಾರೆ. ಬಿಜೆಪಿಯವರ ಬಳಿ ಮತದಾರರಿಗೆ ತಿಳಿಸಲು ಯಾವ ಯೋಜನೆಗಳೂ ಇಲ್ಲ. ಗ್ಯಾರಂಟಿ ಯೋಜನೆಗಳು ಸುಳ್ಳು ಎನ್ನುತ್ತಿರುವ ಬಿಜೆಪಿಗೆ ಜನರು ಈ ಚುನಾವಣೆಯಲ್ಲಿ ಬುದ್ಧಿ ಕಲಿಸುತ್ತಾರೆ' ಎಂದು ಹೇಳಿದರು.

ಬಿಜೆಪಿ ನಡೆಸುತ್ತಿರುವ ಮಹಿಳಾ ಸಮಾವೇಶಗಳಲ್ಲಿ ಅಭಿಪ್ರಾಯ ಸಂಗ್ರಹಿಸಲಿ. ರಾಜ್ಯದ ಮಹಿಳೆಯರೆಲ್ಲರೂ ಗ್ಯಾರಂಟಿ ಯೋಜನೆಗಳ ಲಾಭ ಪಡೆದಿರುವುದು ಗೊತ್ತಾಗುತ್ತದೆ ಎಂದರು.

ವಿನಯ್ ಕುಮಾರ್ ಸೊರಕೆ

ಮನೆ ಮನೆಗೂ ಗ್ಯಾರಂಟಿ ಯೋಜನೆಗಳ ಮಾಹಿತಿಯುಳ್ಳ ಕಾರ್ಡ್‌ಗಳನ್ನು ವಿತರಿಸಲಾಗುವುದು. ವಿದ್ಯಾರ್ಥಿಗಳ ಶೈಕ್ಷಣಿಕ ಸಾಲ ಮನ್ನಾ, ಮಹಾಲಕ್ಷ್ಮಿ ಯೋಜನೆ, ಸರ್ಕಾರಿ ಹುದ್ದೆಗಳ ಭರ್ತಿ ಸೇರಿದಂತೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿನ ಭರವಸೆಗಳನ್ನೂ ಪ್ರತಿ ಮನೆಗೆ ತಲುಪಿಸಲು ಕಾರ್ಯಕ್ರಮ ರೂಪಿಸಲಾಗಿದೆ ಎಂದು ಸೊರಕೆ ಹೇಳಿದರು.

'ಬಿಜೆಪಿ ಹೆದರಿದೆ': ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಸಹ ಅಧ್ಯಕ್ಷ ಎಲ್. ಹನುಮಂತಯ್ಯ ಮಾತನಾಡಿ, 'ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳಿಂದ ಬಿಜೆಪಿ ಹೆದರಿದೆ. ಈ ಕಾರಣದಿಂದ ಗ್ಯಾರಂಟಿ ಯೋಜನೆ ಕುರಿತ ಮಾಹಿತಿಯುಳ್ಳ ಪತ್ರಗಳನ್ನು ವಿತರಿಸದಂತೆ ತಡೆಯಲು ಪ್ರಯತ್ನಿಸುತ್ತಿದೆ' ಎಂದರು.

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಆದಂತೆ ಲೋಕಸಭಾ ಚುನಾವಣೆಯಲ್ಲೂ ಹೀನಾಯ ಸೋಲಿನ ಭೀತಿಯಲ್ಲಿ ಬಿಜೆಪಿ ಇದೆ. ಚುನಾವಣಾ ಬಾಂಡ್‌ಗಳ ಮೂಲಕ ₹ 6,500 ಕೋಟಿಯನ್ನು ಬಿಜೆಪಿ ಲೂಟಿ ಮಾಡಿದೆ. ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ಮತ್ತು ಸಿಬಿಐನಂತಹ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಬಾಂಡ್ ಪಡೆಯಲಾಗಿದೆ. ಇವೆಲ್ಲವೂ ಬಿಜೆಪಿಗೆ ಚುನಾವಣೆಯಲ್ಲಿ ಮುಳುವಾಗಲಿವೆ ಎಂದು ಹೇಳಿದರು.

ಕೆಪಿಸಿಸಿ ಮಾಧ್ಯಮ ಮತ್ತು ಸಂವಹನ ವಿಭಾಗದ ಅಧ್ಯಕ್ಷ ರಮೇಶ್ ಬಾಬು ಪತ್ರಿಕಾಗೋಷ್ಠಿಯಲ್ಲಿದ್ದರು.

ಏ.17ರಂದು ರಾಹುಲ್ ಮಂಡ್ಯಕ್ಕೆ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಬುಧವಾರ (ಏಪ್ರಿಲ್ 17) ಮಂಡ್ಯದಲ್ಲಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ. ಕೋಲಾರಕ್ಕೂ ಬರಲಿದ್ದಾರೆ ಎಂದು ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ ತಿಳಿಸಿದರು.

'ರಾಹುಲ್ ಗಾಂಧಿಯವರ ವ್ಯಕ್ತಿತ್ವವನ್ನು ತೇಜೋವಧೆ ಮಾಡುವುದನ್ನು ಬಿಜೆಪಿ ಕಾಯಂ ಕಾರ್ಯಸೂಚಿಯನ್ನಾಗಿ ಮಾಡಿಕೊಂಡಿದೆ. ರಾಹುಲ್ ಗಾಂಧಿಯವರ ವ್ಯಕ್ತಿತ್ವ ಏನು ಎನ್ನುವುದು ದೇಶದ ಜನರಿಗೆ ಚೆನ್ನಾಗಿ ಗೊತ್ತಿದೆ' ಎಂದರು.

'ಪ್ರಜಾಪ್ರಭುತ್ವಕ್ಕೆ 'ಇವಿಎಂ' ಮಾರಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾನ ಮತ್ತು ಮತ ಎಣಿಕೆಗೆ ಸಂಬಂಧಿಸಿದ ನಿರ್ಣಾಯಕ ಮಾಹಿತಿಯನ್ನು ಸಾರ್ವಜನಿಕರಿಂದ ಮುಚ್ಚಿಡುವ ಮತಯಂತ್ರ (ಇವಿಎಂ) ವ್ಯವಸ್ಥೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ. ಇವಿಎಂ ರದ್ದು ಮಾಡಬೇಕು. ಮತಪತ್ರ (ಬ್ಯಾಲೆಟ್ ಪೇಪರ್) ಬಳಸಿಯೇ ಚುನಾವಣೆ ಮಾಡಬೇಕು ಎಂದು ಫೋರಂ ಫಾರ್ ಎಲೆಕ್ಟೋರಲ್ ಇಂಟೆಗ್ರಿಟಿ ಸಂಚಾಲಕ, ನಿವೃತ್ತ ಐಎಎಸ್ ಅಧಿಕಾರಿ ಎಂ.ಜಿ. ದೇವಸಹಾಯಂ ಆಗ್ರಹಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮತಪತ್ರದಲ್ಲಿ ಮತ ಚಲಾಯಿಸಿದ ಬಳಿಕ ತನ್ನ ಮತ ಸರಿ ಇದೆಯೇ ಎಂದು ಮತದಾರ ನೋಡಬಹುದು. ಬಳಿಕ ಮತಪೆಟ್ಟಿಗೆಗೆ ಹಾಕಬಹುದು. ಇವಿಎಂನಲ್ಲಿ ನೀವು ಮತ ಹಾಕಿದವರಿಗೇ ಮತ ಬಿದ್ದಿದೆಯೇ ಎಂಬುದು ಖಚಿತವಾಗುವುದಿಲ್ಲ' ಎಂದರು.

'ಚುನಾವಣೆ ಮತ್ತು ಪ್ರಜಾಪ್ರಭುತ್ವ ಸಮಾನಾರ್ಥಕವಾಗಿವೆ. ನಮ್ಮನ್ನು ನಾವು ಆಳಿಕೊಳ್ಳಲು ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ಇರುವ ಏಕೈಕ ಮಾರ್ಗ ಚುನಾವಣೆ. ಭಾರತದಲ್ಲಿ ಚುನಾವಣೆಗೆ ಬಳಸುವ ಎಲೆಕ್ಟ್ರಾನಿಕ್ ವೋಟಿಂಗ್ ಮಷಿನ್ (ಇವಿಎಂ) ಬಗ್ಗೆ ನಿವೃತ್ತ ನ್ಯಾಯಮೂರ್ತಿ, ರಾಷ್ಟ್ರೀಯ, ಅಂತರರಾಷ್ಟ್ರೀಯ ಪರಿಣತರನ್ನು ಒಳಗೊಂಡ ಚುನಾವಣೆಗಳ ನಾಗರಿಕ ಆಯೋಗ ಕೂಲಂಕಶವಾಗಿ ಅಧ್ಯಯನ ನಡೆಸಿ 2021ರ ಜನವರಿಯಲ್ಲಿ ವರದಿ ಪ್ರಕಟಿಸಿತ್ತು. ಅದರ ಪ್ರತಿಯನ್ನು ಚುನಾವಣಾ ಆಯೋಗಕ್ಕೆ ರವಾನಿಸಿತ್ತು. ಇವಿಎಂ ಹೇಗೆ ನ್ಯಾಯಸಮ್ಮತವಲ್ಲ ಎಂಬುದು ಆ ಅಧ್ಯಯನ ವರದಿಯಲ್ಲಿದೆ' ಎಂದು ಮಾಹಿತಿ ನೀಡಿದರು.

ಮತ ಚಲಾವಣೆಗೆ ಮುಂಚೆ ಚೀಟಿ ಪರಿಶೀಲಿಸಲು ಅವಕಾಶವಿಲ್ಲ. ಕದಿಯುವ, ತಿರುಚುವ, ನಕಲಿ ಮತ ಚಲಾಯಿಸುವ ಸಾಧ್ಯತೆಗಳ ವಿರುದ್ಧ ಇವಿಎಂ ಯಾವುದೇ ಖಾತ್ರಿ ನೀಡುವುದಿಲ್ಲ ಎಂಬುದು ವರದಿಯಲ್ಲಿತ್ತು. ಚುನಾವಣಾ ಆಯೋಗವು ಇದಕ್ಕೆ ಪ್ರತಿಕ್ರಿಯಿಸುವುದಿರಲಿ, ಅಧಿಕೃತ ಸ್ವೀಕೃತಿಯನ್ನೇ ನೀಡಲಿಲ್ಲ ಎಂದರು.

ಇವಿಎಂ ಮತ್ತು ವಿವಿ ಪ್ಯಾಟ್

ಬಳಿಕ 112 ತಂತ್ರಜ್ಞರು, ಪರಿಣತರು, ಹಿರಿಯ ನಾಗರಿಕರು, ನಾಗರಿಕ ಸೇವಾ ಅಧಿಕಾರಿಗಳು ಸಹಿ ಮಾಡಿದ ಮನವಿಯನ್ನು ಚುನಾವಣಾ ಆಯೋಗಕ್ಕೆ ರವಾನಿಸಿದರು. ಇವಿಎಂ ಪದ್ಧತಿಯಡಿ ಮತದಾನದಲ್ಲಿ ಹಸ್ತಕ್ಷೇಪ ಮಾಡಬಹುದು, ಫಲಿತಾಂಶವನ್ನು ತಿರುಚಬಹುದು ಎಂದು ಅದರಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿತ್ತು. ವಿವಿಪ್ಯಾಟ್ ಚೀಟಿ ನಿಜವಾದ ಮತದಾಖಲೆಯಾಗಿದ್ದು ಇವಿಎಂ ಮೆಮೊರಿ ಅಲ್ಲ ಎಂದು ಚುನಾವಣಾ ನಿರ್ವಹಣೆ (ತಿದ್ದುಪಡಿ) ನಿಯಮಾವಳಿ–2013 ನಿಯಮ 56 ಡಿ (4) (ಬಿ) ತಿಳಿಸಿದೆ. ಆದರೆ, ವಿವಿಪ್ಯಾಟ್ ಚೀಟಿಗಳನ್ನು ಎಣಿಕೆ ಮಾಡಲು ನಿರಾಕರಿಸಿ ಇವಿಎಂ ಮೆಮೊರಿ ಮೂಲಕವೇ ಮತ ಎಣಿಕೆಯನ್ನು ಚುನಾವಣಾ ಆಯೋಗ ನಡೆಸುತ್ತಿದೆ ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ವಕೀಲ ಮೆಹಮ್ಮೂದ್ ಪ್ರಾಚ ಮಾತನಾಡಿ, 'ಇವಿಎಂ ಅನ್ನು ಹ್ಯಾಕ್ ಮಾಡಲು ಸಾಧ್ಯ ಎಂಬುದನ್ನು ತಂತ್ರಜ್ಞರು ಕಂಡುಕೊಂಡಿದ್ದಾರೆ. ವೈರಸ್ ಅಟ್ಯಾಕ್ ಮಾಡಲು ಕೂಡ ಸಾಧ್ಯ. ಹಾಗಾಗಿ ಮತಪತ್ರಗಳ ಮೂಲಕವೇ ಮತದಾನ ನಡೆಯಬೇಕು. ಅದರಲ್ಲಿ ಅಕ್ರಮ ನಡೆಯದಂತೆ ತಡೆಯಲು ಮಾತ್ರ ಆಧುನಿಕ ತಂತ್ರಜ್ಞಾನಗಳನ್ನು ಬಳಸಬೇಕು' ಎಂದು ಆಗ್ರಹಿಸಿದರು. ಬರಹಗಾರ ಅಗ್ರಹಾರ ಕೃಷ್ಣಮೂರ್ತಿ, ಪತ್ರಕರ್ತ ಎಸ್.ಆರ್. ಆರಾಧ್ಯ ಉಪಸ್ಥಿತರಿದ್ದರು.

ಲೋಕನೀತಿ–ಸಿಎಸ್‌ಡಿಎಸ್ ಸಮೀಕ್ಷೆ ವರದಿಯಲ್ಲಿ ಉಲ್ಲೇಖ • ಸವಾಲಾಗಿಯೇ ಉಳಿದ ಉದ್ಯೋಗಸೃಷ್ಟಿ

ಮತದಾರರನ್ನು ಕಾಡುತ್ತಿರುವ ನಿರುದ್ಯೋಗ

ಸಮೀಕ್ಷೆಯಲ್ಲಿ ದೇಶದ 19 ರಾಜ್ಯಗಳ 10 ಸಾವಿರ ಮಂದಿಯ ಅಭಿಪ್ರಾಯ ಸಂಗ್ರಹಿಸಲಾಗಿದೆ. ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಶೇಕಡ 27ರಷ್ಟು ಮಂದಿ ನಿರುದ್ಯೋಗವು ಪ್ರಮುಖ ಸಮಸ್ಯೆ ಎಂದು ಹೇಳಿದ್ದಾರೆ

ನವದೆಹಲಿ (ರಾಯಿಟರ್ಸ್): ನಿರುದ್ಯೋಗ ಮತ್ತು ಬೆಲೆ ಏರಿಕೆಯು ಭಾರತದ ಮತದಾರರ ಪಾಲಿಗೆ ಪ್ರಮುಖ ಸಮಸ್ಯೆಗಳು ಎಂದು ಲೋಕನೀತಿ–ಸಿಎಸ್‌ಡಿಎಸ್ ಸಂಸ್ಥೆಗಳು ನಡೆಸಿರುವ ಸಮೀಕ್ಷೆಯು ಕಂಡುಕೊಂಡಿದೆ.

ಆದರೆ, ಪ್ರಧಾನಿ ನರೇಂದ್ರ ಮೋದಿ ಅವರ ಬಲಿಷ್ಠ ನಾಯಕತ್ವ, ಬಿಜೆಪಿ ಪ್ರತಿಪಾದಿಸುವ ಹಿಂದೂ ರಾಷ್ಟ್ರೀಯವಾದದ ಕಾರ್ಯಸೂಚಿ, ಜಾಗತಿಕ ಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚಾಗುತ್ತಿರುವುದು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ನೆರವಿಗೆ ಬರಲಿವೆ ಎಂದು ಸಮೀಕ್ಷೆಯು ಹೇಳಿದೆ.

ಜಗತ್ತಿನ ಬೇರೆ ದೇಶಗಳ ಬೆಳವಣಿಗೆ ಪ್ರಮಾಣಕ್ಕಿಂತ ಭಾರತದ ಆರ್ಥಿಕ ಬೆಳವಣಿಗೆ ಪ್ರಮಾಣವು ಹೆಚ್ಚಾಗಿದ್ದರೂ, ತಯಾರಿಕಾ ವಲಯಕ್ಕೆ ಮೋದಿ ಅವರು 10 ವರ್ಷಗಳಿಂದ ಆದ್ಯತೆ ನೀಡಿದ್ದರೂ, ಉದ್ಯೋಗ ಸೃಷ್ಟಿಯು ಇಂದಿಗೂ ಸವಾಲಾಗಿಯೇ ಉಳಿದಿರುವುದು ಬೆಳವಣಿಗೆಯ ಪ್ರಯೋಜನವು ಎಲ್ಲರಿಗೂ ಸಮಾನವಾಗಿ ದೊರಕಿಲ್ಲ ಎಂಬ ಸಂಗತಿಯನ್ನು ಹೇಳುತ್ತಿದೆ ಎಂದು ವರದಿಯು ಉಲ್ಲೇಖಿಸಿದೆ.

ದೇಶದ 19 ರಾಜ್ಯಗಳಲ್ಲಿ ಸಮೀಕ್ಷೆ ನಡೆಸಲಾಗಿದೆ. 10 ಸಾವಿರ ಮಂದಿಯಿಂದ ಅಭಿಪ್ರಾಯ ಸಂಗ್ರಹಿಸಲಾಗಿದೆ. ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಶೇಕಡ 27ರಷ್ಟು ಮಂದಿ ನಿರುದ್ಯೋಗವು ಪ್ರಮುಖ ಸಮಸ್ಯೆ ಎಂದು ಹೇಳಿದ್ದಾರೆ. ಬೆಲೆ ಏರಿಕೆಯು ಪ್ರಮುಖ ಸಮಸ್ಯೆ ಎಂದು ಹೇಳಿದವರ ಪ್ರಮಾಣವು ಶೇ 23ರಷ್ಟಿದೆ ಎಂದು ಸಮೀಕ್ಷೆಯನ್ನು ಉಲ್ಲೇಖಿಸಿ 'ದ ಹಿಂದೂ' ಪತ್ರಿಕೆಯು ವರದಿ ಮಾಡಿದೆ.

ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಆಗುತ್ತಿರುವುದು ಭಾರತದಲ್ಲಿ. ಭಾರತದ ಅರ್ಥ ವ್ಯವಸ್ಥೆಯು ವಿಶ್ವದ ಐದನೆಯ ಅತಿದೊಡ್ಡ ಅರ್ಥವ್ಯವಸ್ಥೆ ಕೂಡ ಹೌದು. ಆದರೆ, ಕಳೆದ ಐದು ವರ್ಷಗಳ ಅವಧಿಯಲ್ಲಿ ಉದ್ಯೋಗ ಹುಡುಕಿಕೊಳ್ಳುವುದು ಬಹಳ ಕಷ್ಟವಾಗಿದೆ ಎಂದು ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಶೇ 62ರಷ್ಟು ಮಂದಿ ಹೇಳಿದ್ದಾರೆ.

ಮೋದಿ ಅವರು ಮೊದಲು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ದೇಶದಲ್ಲಿ ನಿರುದ್ಯೋಗ ಪ್ರಮಾಣವು ಶೇ 4.9ರಷ್ಟು ಇತ್ತು. ಇದು 2022–23ರಲ್ಲಿ ಶೇ 5.4ಕ್ಕೆ ಏರಿಕೆ ಆಗಿದೆ. 2022–23ರಲ್ಲಿ 15ರಿಂದ 29 ವರ್ಷದ ನಡುವಿನ ವಯಸ್ಸಿನ ನಗರವಾಸಿ ಯುವಕರ ಪೈಕಿ ಶೇಕಡ 16ರಷ್ಟು ಮಂದಿ ನಿರುದ್ಯೋಗಿಗಳಾಗಿದ್ದರು. ಇದಕ್ಕೆ ಕಾರಣ ಅಗತ್ಯ ಕೌಶಲಗಳು ಇಲ್ಲದಿರುವುದು ಹಾಗೂ ಗುಣಮಟ್ಟದ ಉದ್ಯೋಗಗಳ ಕೊರತೆ ಎಂಬುದನ್ನು ಸರ್ಕಾರಿ ಅಂಕಿ–ಅಂಶಗಳು ಹೇಳುತ್ತಿವೆ.

ರಾಮ ಮಂದಿರ ಮತ್ತು ಹಿಂದೂ ಅಸ್ಮಿತೆ...

- **27%** ನಿರುದ್ಯೋಗವು ಪ್ರಮುಖ ಸಮಸ್ಯೆ ಎಂದು ಹೇಳಿದವರ ಪ್ರಮಾಣ
- **23%** ಬೆಲೆ ಏರಿಕೆಯು ಪ್ರಮುಖ ಸಮಸ್ಯೆ ಎಂದು ಹೇಳಿದವರ ಪ್ರಮಾಣ
- **22%** ಮೋದಿ ನೇತೃತ್ವದ ಸರ್ಕಾರ ಮಾಡಿದ 'ಅತ್ಯಂತ ಇಷ್ಟವಾದ ಕೆಲಸ' ರಾಮ ಮಂದಿರ ನಿರ್ಮಾಣ ಎಂದು ಹೇಳಿದವರ ಪ್ರಮಾಣ
- **8%** ರಾಮ ಮಂದಿರ ನಿರ್ಮಾಣವು ತಮ್ಮ ಪಾಲಿಗೆ ಅತ್ಯಂತ ಮುಖ್ಯವಾದ ಸಂಗತಿ ಎಂದವರ ಪ್ರಮಾಣ
- **48%** ರಾಮ ಮಂದಿರ ನಿರ್ಮಾಣವು ಹಿಂದೂ ಅಸ್ಮಿತೆಯನ್ನು ಗಟ್ಟಿಗೊಳಿಸಲಿದೆ ಎಂದವರ ಪ್ರಮಾಣ
- **79%** ಭಾರತವು ಎಲ್ಲ ಧರ್ಮೀಯರಿಗೂ ಸಮಾನವಾಗಿ ಸೇರುತ್ತದೆ ಎಂದವರ ಪ್ರಮಾಣ

ಬಾರಾಮುಲ್ಲಾ: ಒಮರ್ ಸ್ಪರ್ಧೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಬಾರಾಮುಲ್ಲಾ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂದು ನ್ಯಾಷನಲ್ ಕಾನ್ಫರೆನ್ಸ್ ಶುಕ್ರವಾರ ಘೋಷಿಸಿದೆ.

ಶಿಯಾ ಮುಖಂಡರಾದ ಅಗಾ ಸೈಯದ್ ರುಹುಲ್ಲಾ ಮೆಹದಿ ಅವರು ಮಧ್ಯ ಕಾಶ್ಮೀರದ ಶ್ರೀನಗರ ಕ್ಷೇತ್ರದಿಂದ ಸ್ಪರ್ಧಿಸುವರು ಎಂದು ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಸುದ್ದಿಗಾರರಿಗೆ ತಿಳಿಸಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ಮರಳಿ ಸಿಗುವವರೆಗೆ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಒಮರ್ ಅಬ್ದುಲ್ಲಾ ಅವರು ಈ ಹಿಂದೆ ಘೋಷಿಸಿದ್ದರು.

ಬಾರಾಮುಲ್ಲ ಲೋಕಸಭಾ ಕ್ಷೇತ್ರವು 18 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, ತೀವ್ರ ಕುತೂಹಲ ಕೆರಳಿಸಿರುವ ಕ್ಷೇತ್ರಗಳಲ್ಲೊಂದಾಗಿದೆ. ಈ ಬಾರಿ ಬಾರಾಮುಲ್ಲಾ ಕ್ಷೇತ್ರವು ಒಮರ್ ಮತ್ತು ಪೀಪಲ್ಸ್ ಕಾನ್ಫರೆನ್ಸ್ ಮುಖ್ಯಸ್ಥ ಸಜ್ಜಾದ್ ಗನಿ ಲೋನ್ ನಡುವಿನ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ ಎಂದು ಮೂಲಗಳು ಹೇಳಿವೆ.

ಈ ಕ್ಷೇತ್ರದಲ್ಲಿ ಶಿಯಾ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರ ಬೆಂಬಲ ಒಮರ್ ಅವರಿಗೆ ಲಭಿಸಲಿದೆ ಎಂದು ಮೂಲಗಳು ತಿಳಿಸಿವೆ.

ಅಂಬೇಡ್ಕರ್ ಬಂದರೂ ಸಂವಿಧಾನ ರದ್ದು ಮಾಡಲು ಸಾಧ್ಯವಿಲ್ಲ: ಪ್ರಧಾನಿ

ಬಿಜೆಪಿಗೆ ಸಂವಿಧಾನವೇ ಸರ್ವಸ್ವ: ಮೋದಿ

ಜೈಪುರ (ಪಿಟಿಐ): ಬಿಜೆಪಿಯು ಸಂವಿಧಾನವನ್ನು ನಾಶಮಾಡಲು ಹೊರಟಿದೆ ಎಂದು ಆರೋಪಿಸುತ್ತಿರುವ ವಿರೋಧ ಪಕ್ಷಗಳಿಗೆ ತಿರುಗೇಟು ನೀಡಿರುವ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಸರ್ಕಾರವು ಸಂವಿಧಾನವನ್ನು ಪೂಜ್ಯಭಾವನೆಯಿಂದ ಕಾಣುತ್ತದೆ ಎಂದು ಪ್ರತಿಪಾದಿಸಿದ್ದಾರೆ.

ರಾಜಸ್ಥಾನದ ಬಾಡ್ಮೆರ್‌ನಲ್ಲಿ ಶುಕ್ರವಾರ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದ ಅವರು, 'ಬಿಜೆಪಿ ಸರ್ಕಾರಕ್ಕೆ ಸಂವಿಧಾನವೇ ಸರ್ವಸ್ವವಾಗಿದ್ದು, ಸ್ವತಃ ಬಾಬಾಸಾಹೇಬ್ ಅಂಬೇಡ್ಕರ್ ಅವರೇ ಬಂದರೂ ಈಗ ಸಂವಿಧಾನವನ್ನು ರದ್ದುಗೊಳಿಸಲು ಸಾಧ್ಯವಿಲ್ಲ' ಎಂದು ಹೇಳಿದರು.

'ದೇಶದಲ್ಲಿ ತುರ್ತುಪರಿಸ್ಥಿತಿ ಹೇರುವ ಮೂಲಕ ಸಂವಿಧಾನವನ್ನು ನಾಶಪಡಿಸಲು ಯತ್ನಿಸಿದ್ದ ಕಾಂಗ್ರೆಸ್ ಈಗ ಸಂವಿಧಾನದ ಹೆಸರಿನಲ್ಲಿ ಮೋದಿ ಅವರನ್ನು ತೆಗಳಲು ಮುಂದಾಗಿದೆ' ಎಂದರು.

ಸಂವಿಧಾನಕ್ಕೆ ತಿದ್ದುಪಡಿ ತರಲು ಬಿಜೆಪಿಯು ಮೂರನೇ ಎರಡರಷ್ಟು ಬಹುಮತದೊಂದಿಗೆ ಅಧಿಕಾರಕ್ಕೇರುವುದು ಅಗತ್ಯ ಎಂದು ಬಿಜೆಪಿ ಸಂಸದ ಅನಂತಕುಮಾರ್ ಹೆಗಡೆ ಈಚೆಗೆ ಹೇಳಿಕೆ ನೀಡಿದ್ದರು. ಇದರ ಬೆನ್ನಲ್ಲೇ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳು, ಬಿಜೆಪಿ ವಿರುದ್ಧ ಟೀಕಾಪ್ರಹಾರ ನಡೆಸಿದ್ದವು. 'ಅಂಬೇಡ್ಕರ್ ಅವರ ಸಂವಿಧಾನವನ್ನು ನಾಶಮಾಡುವುದು ಮೋದಿ ಮತ್ತು ಬಿಜೆಪಿಯ ಅಂತಿಮ ಗುರಿ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದರು. ಅನಂತಕುಮಾರ್ ಅವರ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದ್ದ ಬಿಜೆಪಿ, 'ಅದು ಅವರ ವೈಯಕ್ತಿಕ ಅಭಿಪ್ರಾಯ' ಎಂದಿತ್ತು.

'ದೇಶದ ಶಕ್ತಿಗುಂದಿಸುವ ವಿಪಕ್ಷಗಳ ಮೈತ್ರಿ': 'ಇಂಡಿಯಾ' ಮೈತ್ರಿಕೂಟದ ಒಂದು ಪಕ್ಷವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಅಣ್ವಸ್ತ್ರ ನಿಶ್ಶಸ್ತ್ರೀಕರಣದ ಪ್ರಸ್ತಾವ ಮಾಡಿರುವುದನ್ನು ಉಲ್ಲೇಖಿಸಿದ ಪ್ರಧಾನಿ, 'ಭಾರತವನ್ನು ಶಕ್ತಿಹೀನಗೊಳಿಸುವ ಇದು ಯಾವ ರೀತಿಯ ಮೈತ್ರಿಯಾಗಿದೆ' ಎಂದು ಪ್ರಶ್ನಿಸಿದರು. 'ನಮ್ಮ ಎರಡೂ ಕಡೆ ಅಣ್ವಸ್ತ್ರಗಳನ್ನು ಹೊಂದಿರುವ ದೇಶಗಳು ಇರುವಾಗ, ಭಾರತವು ನಿಶ್ಶಸ್ತ್ರೀಕರಣದ ಬಗ್ಗೆ ಯೋಚಿಸಬೇಕೆ? 'ಇಂಡಿ' ಮೈತ್ರಿಕೂಟವು ಯಾರ ಸೂಚನೆಯಂತೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ನಾನು ಕಾಂಗ್ರೆಸ್ ಅನ್ನು ಕೇಳಲು ಬಯಸುತ್ತೇನೆ' ಎಂದರು.

'ವಿಪಕ್ಷಗಳದ್ದು ಮೊಘಲರ ಮನಃಸ್ಥಿತಿ'

ಮಾಂಸ ಸೇವನೆ ವಿಚಾರ

ಉಧಂಪುರ (ಜಮ್ಮು ಮತ್ತು ಕಾಶ್ಮೀರ) (ಪಿಟಿಐ): 'ಶ್ರಾವಣ ಮಾಸದಲ್ಲಿ ಮಾಂಸ ತಿಂದು ಅದರ ವಿಡಿಯೊ ಹರಿಯಬಿಡುವ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳದ್ದು ಮೊಘಲರ ಮನಃಸ್ಥಿತಿ' ಎಂದು ಪ್ರಧಾನಿ ಮೋದಿ ಟೀಕಿಸಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕಳೆದ ಸೆಪ್ಟೆಂಬರ್‌ನಲ್ಲಿ ಲಾಲು ಪ್ರಸಾದ್ ಅವರ ದೆಹಲಿಯ ನಿವಾಸಕ್ಕೆ ಭೇಟಿ ನೀಡಿದ್ದರು. ಈ ವೇಳೆ ಇಬ್ಬರೂ ಜತೆಯಾಗಿ ಕುರಿ ಮಾಂಸದ ಅಡುಗೆ ಮಾಡಿದ್ದ ವಿಡಿಯೊವನ್ನು ರಾಹುಲ್ ಹಂಚಿಕೊಂಡಿದ್ದರು.

ಉಧಂಪುರದಲ್ಲಿ ಶುಕ್ರವಾರ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡುವಾಗ ಈ ವಿಷಯ ಪ್ರಸ್ತಾಪಿಸಿದ ಮೋದಿ, 'ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರುವ, ಜಾಮೀನಿನಲ್ಲಿ ಹೊರಬಂದಿರುವ ವ್ಯಕ್ತಿಯೊಬ್ಬರ ಮನೆಗೆ ಇನ್ನೊಬ್ಬ ವ್ಯಕ್ತಿ ಹೋಗಿದ್ದರು. ಶ್ರಾವಣ ತಿಂಗಳಲ್ಲಿ ನಡೆದ ಔತಣ ಕೂಟದಲ್ಲಿ ಅವರು ಕುರಿ ಮಾಂಸ ತಿಂದಿದ್ದರು. ಅಷ್ಟು ಮಾತ್ರವಲ್ಲದೆ, ದೇಶದ ಬಹುಸಂಖ್ಯಾತರ ಭಾವನೆಗಳಿಗೆ ನೋವುಂಟು ಮಾಡಬೇಕೆಂಬ ಉದ್ದೇಶದಿಂದ ಅದರ ವಿಡಿಯೊ ಮಾಡಿ ಹರಿಯಬಿಟ್ಟಿದ್ದರು' ಎಂದು ದೂರಿದರು.

'ಸಸ್ಯಾಹಾರ ಅಥವಾ ಮಾಂಸಾಹಾರ ಸೇವಿಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಅವರು ಬೇರೆಯದೇ ಉದ್ದೇಶ (ಭಾವನೆಗಳಿಗೆ ನೋವುಂಟುಮಾಡುವ) ಹೊಂದಿದ್ದರು. ಮೊಘಲರಿಗೆ ಭಾರತದ ರಾಜರನ್ನು ಸೋಲಿಸಿದಾಗ ತೃಪ್ತಿ ಸಿಗಲಿಲ್ಲ. ಇಲ್ಲಿನ ದೇವಾಲಯಗಳನ್ನು ನಾಶ ಮಾಡಿದಾಗ ಮಾತ್ರ ತೃಪ್ತಿ ಸಿಗುತ್ತಿತ್ತು' ಎಂದರು.

ಪ್ರಧಾನಿ ಕಂಗಾಲು: ಜೈರಾಮ್

ನವದೆಹಲಿ (ಪಿಟಿಐ): ಶ್ರಾವಣ ಮಾಸದಲ್ಲಿ ಮಾಂಸ ಸೇವನೆ ವಿಚಾರ ಉಲ್ಲೇಖಿಸಿದ ಪ್ರಧಾನಿಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿರುಗೇಟು ನೀಡಿದ್ದು, 'ಪ್ರಧಾನಿ ಅವರು ತಮ್ಮ ರೋಗಗ್ರಸ್ತ ಮನಃಸ್ಥಿತಿಯ ಹೊಸ ಉದಾಹರಣೆಯನ್ನು ಪ್ರತಿದಿನವೂ ನಮಗೆ ಒದಗಿಸುತ್ತಿದ್ದಾರೆ. ಕಂಗಾಲಾಗಿರುವ ಅವರು ಜನರ ಗಮನ ಬೇರೆಡೆ ತಿರುಗಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ದೂರಿದರು.

'ಪ್ರಧಾನಿ ಅವರಂತೆ ನಾವು ಯಾವ ನಾಯಕ, ಯಾವ ತಿಂಗಳಲ್ಲಿ ಏನನ್ನು ತಿಂದ ಎಂಬುದರ ಮಾಹಿತಿ ಇಟ್ಟುಕೊಂಡಿಲ್ಲ. ಆದರೆ ಪೌಷ್ಟಿಕತೆಗೆ ಸಂಬಂಧಿಸಿದ ಅಂಕಿ–ಅಂಶ ನಮ್ಮಲ್ಲಿ ಇದೆ' ಎಂದು ಜೈರಾಮ್ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

'2015–16 ಮತ್ತು 2019–21ರ ಅವಧಿಯಲ್ಲಿ ಐದು ವರ್ಷದೊಳಗಿನ ಮಕ್ಕಳಲ್ಲಿ ರಕ್ತಹೀನತೆ ಸಮಸ್ಯೆ ಸುಮಾರು ಶೇ 10 ರಷ್ಟು ಹೆಚ್ಚಳವಾಗಿದೆ. 15 ರಿಂದ 19 ವರ್ಷದೊಳಗಿನ ಹೆಣ್ಣುಮಕ್ಕಳಲ್ಲಿ ರಕ್ತಹೀನತೆ ಪ್ರಮಾಣ ಶೇ 9.2 ರಷ್ಟು ಏರಿಕೆಯಾಗಿದೆ' ಎಂದು ತಿಳಿಸಿದರು.



ಚುನಾವಣಾ ಕಣದಲ್ಲಿ...

ಬಿಎಸ್‌ಪಿ: ನಾಲ್ಕನೇ ಪಟ್ಟಿ ಬಿಡುಗಡೆ

ಲಖನೌ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ನಾಲ್ಕನೇ ಪಟ್ಟಿಯನ್ನು ಬಹುಜನ ಸಮಾಜ ಪಕ್ಷವು (ಬಿಎಸ್‌ಪಿ) ಶುಕ್ರವಾರ ಬಿಡುಗಡೆ ಮಾಡಿದೆ.

ಪಕ್ಷದ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಭೀಮ್ ರಾಜ್‌ಭರ್ ಅವರು ಆಜಂಗಢದಿಂದ ಹಾಗೂ ಮಾಜಿ ಸಂಸದ ಬಾಲಕೃಷ್ಣ ಚೌಹಾಣ್ ಅವರು ಘೋಸಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಎಟಾ ಕ್ಷೇತ್ರದಿಂದ ಮೊಹಮ್ಮದ್ ಇರ್ಫಾನ್, ಧೌರಹರ ಕ್ಷೇತ್ರದಿಂದ ಶ್ಯಾಮ್ ಕಿಶೋರ್ ಅವಸ್ಥಿ ಕಣಕ್ಕಿಳಿಯಲಿದ್ದಾರೆ ಎಂದು ಪಕ್ಷದ ಹೇಳಿಕೆ ತಿಳಿಸಿದೆ.

ಅಣ್ಣಾಮಲೈ ವಿರುದ್ಧ ಪ್ರಕರಣ

ಕೊಯಮತ್ತೂರು (ಪಿಟಿಐ): ಚುನಾವಣೆ ನೀತಿ ಸಂಹಿತೆ ಉಲ್ಲಂಘನೆ ಆರೋಪದಲ್ಲಿ ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಮತ್ತು ಕೊಯಮತ್ತೂರು ಕ್ಷೇತ್ರದ ಅಭ್ಯರ್ಥಿ ಕೆ.ಅಣ್ಣಾಮಲೈ ಹಾಗೂ ಪಕ್ಷದ ಕೆಲವು ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಾಗಿದೆ.

ಗುರುವಾರ ರಾತ್ರಿ 10 ಗಂಟೆಯ ಬಳಿಕವೂ ಅಣ್ಣಾಮಲೈ ಅವರು ಪ್ರಚಾರ ರ‍್ಯಾಲಿ ನಡೆಸಿದ್ದಾರೆ ಎಂದು ಡಿಎಂಕೆ ಮತ್ತು ಎಡಪಕ್ಷಗಳು ದೂರು ನೀಡಿದ್ದವು. 'ಸಮಯದ ಮಿತಿಯನ್ನು ಉಲ್ಲಂಘಿಸಿಲ್ಲ. ಡಿಎಂಕೆಯು ಸೋಲಿನ ಭೀತಿಯಿಂದ ಸುಳ್ಳು ದೂರು ನೀಡಿದೆ' ಎಂದು ಅಣ್ಣಾಮಲೈ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿ ರೋಡ್ ಶೋ

ದೇವರ ವೇಷ ತಮಿಳುನಾಡಿನ ಮಧುರೈನಲ್ಲಿ ಶುಕ್ರವಾರ ನಡೆದ ಬಿಜೆಪಿ ರೋಡ್ ಶೋ ವೇಳೆ ಹಿಂದೂ ದೇವರ ವೇಷ ತೊಟ್ಟಿದ್ದ ಕಲಾವಿದರು ಗಮನ ಸೆಳೆದರು –ಪಿಟಿಐ ಚಿತ್ರ

ನೀಟ್: ರಾಜ್ಯಗಳಿಗೆ ಅಧಿಕಾರ ರಾಹುಲ್ ಗಾಂಧಿ ಭರವಸೆ

ತಿರುನೆಲ್ವೇಲಿ, ತಮಿಳುನಾಡು (ಪಿಟಿಐ): 'ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ನೀಟ್ ಪರೀಕ್ಷೆ, ಬಡವರ ವಿರೋಧಿ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಹೇಳಿದರು.

ತಿರುನೆಲ್ವೇಲಿಯಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡ ಅವರು, 'ತಮಿಳುನಾಡಿನಲ್ಲಿ ನೀಟ್ ದೊಡ್ಡ ಚರ್ಚಾ ವಿಷಯವಾಗಿದೆ. ಕೇಂದ್ರದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ನೀಟ್ ಪರೀಕ್ಷೆ ಬೇಕೆ, ಬೇಡವೆ ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ನಾವು ರಾಜ್ಯಗಳಿಗೆ ನೀಡುತ್ತೇವೆ' ಎಂದು ಭರವಸೆ ಕೊಟ್ಟರು.

ತಮಿಳರ ಜತೆ ಇದ್ದೇವೆ: 'ಈಗ ನಡೆಯುತ್ತಿರುವ ಚುನಾವಣೆ ಸೈದ್ಧಾಂತಿಕ ಹೋರಾಟ. ನಿಮ್ಮ ಇತಿಹಾಸ, ಸಂಪ್ರದಾಯ, ಸಂಸ್ಕೃತಿ ಮತ್ತು ಜೀವನಶೈಲಿಯ ಉಳಿವಿಗಾಗಿ ನಡೆಯುವ ಹೋರಾಟ ಆಗಿದೆ. ತಮಿಳರ ಭಾಷೆ, ಸಂಸ್ಕೃತಿ ಮತ್ತು ಇತಿಹಾಸದ ಉಳಿವಿಗಾಗಿ ನಡೆಯುತ್ತಿರುವ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷವು ನಿಮ್ಮ ಜತೆ ಇರಲಿದೆ' ಎಂದು ಹೇಳಿದರು.

'ತಮಿಳು ಭಾಷೆಯು ಯಾವುದೇ ಭಾಷೆಗಿಂತ ಕಡಿಮೆಯಿಲ್ಲ. ತಮಿಳು ಭಾಷೆಯ ಮೇಲಿನ ದಾಳಿಯು ತಮಿಳರ ಮೇಲಿನ ಆಕ್ರಮಣಕ್ಕಿಂತ ಕಡಿಮೆಯೇನೂ ಅಲ್ಲ' ಎಂದರು.

ಉತ್ತರದ ರಾಜ್ಯಗಳಲ್ಲಿ ಟಿಕೆಟ್ ಹಂಚಿಕೆ ವಿಳಂಬ: ನಾಯಕರ ಅಸಮಾಧಾನ

ಅಲೆ ಇಲ್ಲದ ಹೊತ್ತಲ್ಲಿ ಕಾಂಗ್ರೆಸ್ ತೊಳಲಾಟ

ಪ್ರಜಾವಾಣಿ ವಾರ್ತೆ

'ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ನಮ್ಮ ರಾಷ್ಟ್ರೀಯ ನಾಯಕರ ಒಲವು ದಕ್ಷಿಣದ ಕಡೆಗೆ ಹೆಚ್ಚಾಗಿದೆ. ಬರೀ ದಕ್ಷಿಣ ಭಾರತವನ್ನು ನೆಚ್ಚಿಕೊಂಡರೆ ಸಾಲದು. ಹಿಂದಿ ಬಾಹುಳ್ಯದ ರಾಜ್ಯಗಳ ಕಡೆಗೆ ಗಮನ ಹರಿಸದಿದ್ದರೆ ಮೂರಂಕಿ ದಾಟಲು ಸಾಧ್ಯವೇ' ಎಂಬುದು ಕಾಂಗ್ರೆಸ್ ನಾಯಕರೊಬ್ಬರ ಪ್ರಶ್ನೆ

ನವದೆಹಲಿ: '2014ರಲ್ಲಿ ಸರ್ಕಾರದ ವಿರುದ್ಧದ ಅಲೆ ಇತ್ತು. 2019ರಲ್ಲಿ ಸರ್ಜಿಕಲ್ ಸ್ಟ್ರೈಕ್‌ನಿಂದಾಗಿ ಜನರಲ್ಲಿ ರಾಷ್ಟ್ರಾಭಿಮಾನ ಉಕ್ಕಿ ಹರಿದಿತ್ತು. ಈ ಸಲ ಅಂತಹ ಯಾವುದೇ ಅಲೆ ಇಲ್ಲ. ಬಿಜೆಪಿ ವಿರುದ್ಧದ ಆಡಳಿತ ವಿರೋಧಿ ಅಲೆಯನ್ನು ಮತವನ್ನಾಗಿ ಪರಿವರ್ತಿಸುವ ರಣೋತ್ಸಾಹ ನಮ್ಮಲ್ಲಿ ಕಾಣುತ್ತಿಲ್ಲ. ಗೆಲ್ಲಲು ಅವಕಾಶ ಇರುವ ರಾಜ್ಯಗಳಲ್ಲೇ ಟಿಕೆಟ್ ಹಂಚಿಕೆ ಪ್ರಕ್ರಿಯೆಯನ್ನು ಇನ್ನೂ ಪೂರ್ಣಗೊಳಿಸಿಲ್ಲ'.

–ಕಾಂಗ್ರೆಸ್‌ನ ಕೆಲವು ನಾಯಕರ ಬೇಸರದ ನುಡಿಗಳಿವು. ಮೊದಲ ಹಂತದ ಲೋಕಸಭಾ ಚುನಾವಣೆಗೆ ಒಂದು ವಾರವಷ್ಟೇ ಉಳಿದಿದೆ. ಬಿಜೆಪಿ ಬಹುತೇಕ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಖೈರುಗೊಳಿಸಿದೆ. ಕಾಂಗ್ರೆಸ್ ಈವರೆಗೆ 240 ಕ್ಷೇತ್ರಗಳಿಗೆ ಹುರಿಯಾಳುಗಳನ್ನು ಅಂತಿಮಗೊಳಿಸಿದೆ. ದೆಹಲಿ, ಹರಿಯಾಣ, ಪಂಜಾಬ್, ಹಿಮಾಚಲ ಪ್ರದೇಶದಂತಹ ಹಲವು ರಾಜ್ಯಗಳಿಗೆ ಅಭ್ಯರ್ಥಿಗಳ ಹೆಸರನ್ನೇ ಅಂತಿಮಗೊಳಿಸಿಲ್ಲ. 'ದೆಹಲಿ, ಹರಿಯಾಣ, ಜಾರ್ಖಂಡ್, ಹಿಮಾಚಲ ಪ್ರದೇಶದಲ್ಲಿ ಪಕ್ಷದ ಪರ ಅಲೆ ಇದೆ. ಆದರೆ, ಅಭ್ಯರ್ಥಿಗಳ ಆಯ್ಕೆಗೆ ಮೀನಮೇಷ ಎಣಿಸಲಾಗುತ್ತಿದೆ. ಈ ರಾಜ್ಯಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಒಂದು ಸುತ್ತಿನ ಪ್ರಚಾರ ಪೂರ್ಣಗೊಳಿಸಿದ್ದಾರೆ. ಕೊನೆ ಕ್ಷಣದಲ್ಲಿ ಟಿಕೆಟ್ ಘೋಷಿಸಿದರೆ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವೇ' ಎಂದು ಪ್ರಶ್ನಿಸುತ್ತಾರೆ ಟಿಕೆಟ್ ಆಕಾಂಕ್ಷಿಗಳು.

'ಹರಿಯಾಣದಲ್ಲಿ ಕಳೆದ ಚುನಾವಣೆಯಲ್ಲಿ ಬಿಜೆಪಿ ಎಲ್ಲ ಕ್ಷೇತ್ರಗಳಲ್ಲಿ ಗೆದ್ದುಕೊಂಡಿತ್ತು. ಈ ಸಲ ಪರಿಸ್ಥಿತಿ ಭಿನ್ನವಾಗಿದೆ. ಬಿಜೆಪಿ ವಿರುದ್ಧ ರೈತರು ಮುನಿಸಿಕೊಂಡಿದ್ದಾರೆ. ಜಾಟರ ಮತಗಳು ದೊಡ್ಡ ಪ್ರಮಾಣದಲ್ಲಿ ಕಾಂಗ್ರೆಸ್‌ಗೆ ಬರುವ ಸಾಧ್ಯತೆ ಇದೆ. ಆರೇಳು ಕ್ಷೇತ್ರಗಳಲ್ಲಿ ಗೆಲ್ಲುವ ವಾತಾವರಣ ಇದೆ. ಆದರೆ, ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಲು ಹೈಕಮಾಂಡ್ ಮನಸ್ಸು ಮಾಡುತ್ತಿಲ್ಲವಲ್ಲ' ಎಂದು ಹರಿಯಾಣದ ನಾಯಕರೊಬ್ಬರು ಬೇಸರ ವ್ಯಕ್ತಪಡಿಸಿದರು.

'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನದ ಬಳಿಕ ಕಾಂಗ್ರೆಸ್–ಎಎಪಿ ಮೈತ್ರಿ ಮತ್ತಷ್ಟು ಗಟ್ಟಿಯಾಗಿದೆ. ದೆಹಲಿಯಲ್ಲಿ ಎರಡೂ ಪಕ್ಷಗಳ ನಾಯಕರು ವೈಮನಸ್ಸು ಮರೆತು ಬಿಜೆಪಿ ವಿರುದ್ಧ ಹೋರಾಟಕ್ಕೆ ಅಣಿಯಾಗಿದ್ದಾರೆ. ಬಿಜೆಪಿ ಎಲ್ಲ ಏಳು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ. ಎಎಪಿ ನಾಲ್ಕು ಕ್ಷೇತ್ರಗಳಿಗೆ ಹುರಿಯಾಳುಗಳ ಪಟ್ಟಿ ಪ್ರಕಟಿಸಿ ಎರಡು ತಿಂಗಳು ಮೇಲಾಯಿತು. ನಮ್ಮ ಪಕ್ಷದ ಟಿಕೆಟ್ ಆಕಾಂಕ್ಷಿಗಳು ನಿತ್ಯ ಎಐಸಿಸಿ ಕಚೇರಿಗೆ ಅಲೆದಾಡುತ್ತಿದ್ದಾರೆ. ಇನ್ನೆಷ್ಟು ದಿನ ಅಲೆದಾಡಬೇಕೋ ಗೊತ್ತಿಲ್ಲ' ಎಂದು ದೆಹಲಿಯ ನಾಯಕರೊಬ್ಬರು ಹೇಳಿದರು.

'ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಬಂಧನದ ಬಳಿಕ ಬುಡಕಟ್ಟು ಸಮುದಾಯದವರು ಬಿಜೆಪಿ ವಿರುದ್ಧ ಅಸಮಾಧಾನಗೊಂಡಿದ್ದಾರೆ. ರಾಜ್ಯದಲ್ಲಿ ಈ ಸಮುದಾಯವರು ಶೇ 26ರಷ್ಟು ಇದ್ದಾರೆ. ಮುಸ್ಲಿಂ ಜನಸಂಖ್ಯೆ ಶೇ 18ರಷ್ಟು ಇದೆ. ಸೊರೇನ್ ಬಂಧನವನ್ನು ನಮ್ಮ ನಾಯಕರು ಗಟ್ಟಿ ಧ್ವನಿಯಲ್ಲಿ ಖಂಡಿಸಿಲ್ಲ. ಬಂಧನ ವಿರೋಧಿಸಿ ದೊಡ್ಡ ಮಟ್ಟದ ಹೋರಾಟ ನಡೆಸಿಲ್ಲ. ಈಗ ರ‍್ಯಾಲಿ ನಡೆಸಲು ಮುಂದಾಗಿದ್ದಾರೆ. ಹೀಗಾದರೆ, ಬಿಜೆಪಿ ವಿರುದ್ಧ ಹೋರಾಟ ಮಾಡಲು ಸಾಧ್ಯವೇ. ಅನುಕೂಲಕರ ವಾತಾವರಣವನ್ನು ಕೈಚೆಲ್ಲುವುದರಲ್ಲಿ ನಮ್ಮಷ್ಟು ನಿಷ್ಣಾತರು ಬೇರೆ ಯಾರೂ ಇಲ್ಲ' ಎಂದು ಜಾರ್ಖಂಡ್‌ನ ನಾಯಕರೊಬ್ಬರು ಬೇಸರದಿಂದ ಹೇಳಿದರು.

ಚುಟುಕು

370ನೇ ವಿಧಿ: ಕಾಂಗ್ರೆಸ್ ವಿರುದ್ಧ ಶಾ ಟೀಕೆ

ಮೊರಾದಾಬಾದ್ (ಪಿಟಿಐ): ಕಾಶ್ಮೀರ ವಿಚಾರವಾಗಿ ಕಾಂಗ್ರೆಸ್ ವಿರುದ್ಧ ಹರಿಹಾಯ್ದ ಗೃಹ ಸಚಿವ ಅಮಿತ್ ಶಾ ಅವರು, '370ನೇ ವಿಧಿಯನ್ನು ಆ ಪಕ್ಷವು ದಶಕಗಳ ಕಾಲ ಮಡಿಲಲ್ಲಿರಿಸಿ ಮಗುವಿನಂತೆ ಮುದ್ದು ಮಾಡಿದೆ' ಎಂದು ಶುಕ್ರವಾರ ಇಲ್ಲಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಬೇರೆ ರಾಜ್ಯಗಳಲ್ಲಿ ಚುನಾವಣಾ ರ‍್ಯಾಲಿಗಳನ್ನುದ್ದೇಶಿಸಿ ಮಾತನಾಡುವಾಗ ಜಮ್ಮು ಮತ್ತು ಕಾಶ್ಮೀರದ ವಿಚಾರಗಳನ್ನು ಪ್ರಸ್ತಾಪಿಸಬಾರದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈಚೆಗೆ ನೀಡಿದ್ದ ಸಲಹೆಗೆ ಪ್ರತಿಕ್ರಿಯಿಸಿದ ಶಾ ಅವರು, 'ಉತ್ತರ ಪ್ರದೇಶ ಮತ್ತು ರಾಜಸ್ಥಾನದವರು ಕಾಶ್ಮೀರದ ಜೊತೆ ಏನು ಸಂಬಂಧ ಹೊಂದಿದ್ದಾರೆ ಎಂದು ಖರ್ಗೆ ಅವರು ಕೇಳುತ್ತಿದ್ದಾರೆ. ಕಾಶ್ಮೀರ ನಮ್ಮದಲ್ಲವೇ' ಎಂದು ಪ್ರಶ್ನಿಸಿದರು.

ಹೇಳಿಕೆ ತಿರುಚಲಾಗಿದೆ: ಮೀಸಾ ಭಾರತಿ

ಪಟ್ನಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಕುರಿತ ತಮ್ಮ ಹೇಳಿಕೆಯನ್ನು ತಿರುಚಲಾಗಿದೆ ಎಂದು ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರ ಹಿರಿಯ ಪುತ್ರಿ ಮೀಸಾ ಭಾರತಿ ಹೇಳಿದ್ದಾರೆ.

'ಇಂಡಿಯಾ' ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಪ್ರಧಾನಿ ಮೋದಿ ಅವರು ಜೈಲು ಸೇರಲಿದ್ದಾರೆ ಎಂದು ಮೀಸಾ ಹೇಳಿದ್ದಾಗಿ ವರದಿಯಾಗಿತ್ತು. ಪಾಟಲಿಪುತ್ರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ಅವರು ಈಚೆಗೆ ನಡೆದ ಸಾರ್ವಜನಿಕ ಸಭೆಯಲ್ಲಿ ನೀಡಿದ್ದಾರೆ ಎನ್ನಲಾದ ಹೇಳಿಕೆಗೆ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿತ್ತು.

'ಪ್ರಧಾನಿ ಬಗ್ಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಮಾಧ್ಯಮಗಳು ನನ್ನ ಪೂರ್ಣ ಹೇಳಿಕೆಯನ್ನು ಪ್ರಸಾರ ಮಾಡದೆ, ತಿರುಚಿದ ತುಣಕನ್ನು ಮಾತ್ರ ಬಿತ್ತರಿಸಿವೆ. ಅದು ಬಿಜೆಪಿಯ ಕಾರ್ಯಸೂಚಿ' ಎಂದು ಮೀಸಾ, ಶುಕ್ರವಾರ ಸ್ಪಷ್ಟನೆ ನೀಡಿದ್ದಾರೆ.

'ಚುನಾವಣಾ ಬಾಂಡ್ ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಮತ್ತು ಇಂಡಿಯಾ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಈ ಬಗ್ಗೆ ಸಮಗ್ರ ತನಿಖೆ ನಡೆಸುವ ಸಂಬಂಧ ಮಾತನಾಡಿದ್ದೇನೆ. ಪ್ರಧಾನಿ ಅವರನ್ನು ಗುರಿಯಾಗಿಸಿ ಯಾವುದೇ ಹೇಳಿಕೆ ನೀಡಿಲ್ಲ' ಎಂದಿದ್ದಾರೆ.

ಎಂಥಾ ಮಾತು!

ಉದ್ಧವ್ ಠಾಕ್ರೆ ನೇತೃತ್ವದ ನಕಲಿ ಶಿವಸೇನಾ, ಶರದ್ ಪವಾರ್ ನೇತೃತ್ವದ ನಕಲಿ ಎನ್‌ಸಿಪಿ ಹಾಗೂ ಅಳಿದುಳಿದ ಕಾಂಗ್ರೆಸ್ ಪಕ್ಷವು ಮಹಾರಾಷ್ಟ್ರದಲ್ಲಿ ಜೊತೆಯಾಗಿವೆ. ಈ ಮೂರು ಪಕ್ಷಗಳು ಬಿಡಿಭಾಗಗಳು ಹೊಂದಾಣಿಕೆಯಾಗದ ಆಟೊ ರಿಕ್ಷಾ ಇದ್ದಂತೆ. ಇವುಗಳಿಂದ ಮಹಾರಾಷ್ಟ್ರಕ್ಕೆ ಏನಾದರೂ ಒಳ್ಳೆಯದನ್ನು ನಿರೀಕ್ಷಿಸಲು ಸಾಧ್ಯವೇ?

ಅಮಿತ್ ಶಾ, ಕೇಂದ್ರ ಗೃಹಸಚಿವ

ನಕಲಿ ಎನ್‌ಸಿಪಿ ಮತ್ತು ನಕಲಿ ಶಿವಸೇನಾವು ಬಿಜೆಪಿಯ ಜೊತೆಗೆ ಹೊಂದಾಣಿಕೆ ಮಾಡಿಕೊಂಡಿವೆ. ನಮ್ಮನ್ನು ನಕಲಿಗಳೆಂದು ಕರೆಯಲು ಅಮಿತ್ ಶಾ ಯಾರು? ಬಿಜೆಪಿಯು ಮಹಾರಾಷ್ಟ್ರ ಸರ್ಕಾರದೊಳಗೆ ನಕಲಿ ನಾಯಕರನ್ನು ಸೇರಿಸಿಕೊಂಡಿದೆ. ಮುಖ್ಯಮಂತ್ರಿ ಏಕನಾಥ ಶಿಂದೆ ಬಣದ ಶಿವಸೇನಾ ಮತ್ತು ಅಜಿತ್ ಪವಾರ್ ಬಣದ ಎನ್‌ಸಿಪಿ ಕಾರ್ಯಕರ್ತರ ಬಗ್ಗೆ ಬಿಜೆಪಿಯು ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಈ ಎರಡು ಬಣಗಳ ಕಾರ್ಯಕರ್ತರು ಅಸಮಾಧಾನಗೊಂಡಿದ್ದಾರೆ. ಈ ಕುರಿತು ಚಿಂತನೆ ನಡೆಸಲಿ. ಮಹಾರಾಷ್ಟ್ರಕ್ಕೆ ಬಂದು ಶರದ್ ಪವಾರ್ ಅವರನ್ನು ಟೀಕಿಸದಿದ್ದರೆ ಮಾಧ್ಯಮಗಳಲ್ಲಿ ಸುದ್ದಿಯಾಗದು ಎಂಬುದು ಅಮಿತ್ ಶಾ ಅವರಿಗೆ ಚೆನ್ನಾಗಿ ತಿಳಿದಿದೆ

ಮಹೇಶ್ ತಾಪಸೆ, ಎನ್‌ಸಿಪಿ ಶರದ್ ಪವಾರ್ ಬಣದ ವಕ್ತಾರ

ಕ್ಷೇತ್ರ ಮಹಾತ್ಮೆ

ಛತ್ತೀಸಗಢದ ನಕ್ಸಲ್‌ಪೀಡಿತ ಪ್ರದೇಶಗಳಲ್ಲೊಂದಾದ ಬಸ್ತರ್‌ನ ಲೋಕಸಭಾ ಕ್ಷೇತ್ರವು ಈ ಬಾರಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ನಡುವಣ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ. ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರವಾದ ಇಲ್ಲಿಂದ ಕಾಂಗ್ರೆಸ್, ಶಾಸಕ ಹಾಗೂ ಮಾಜಿ ಸಚಿವ ಕವಾಸಿ ಲಖ್ಮಾ ಅವರನ್ನು ಸ್ಪರ್ಧೆಗಿಳಿಸಿದೆ. ಇವರೊಂದಿಗೆ ಸೆಣಸಲು ಬಿಜೆಪಿಯು ಆರ್‌ಎಸ್‌ಎಸ್ ಹಿನ್ನೆಲೆಯ ಮಹೇಶ್ ಕಶ್ಯಪ್ ಅವರನ್ನು ಅಖಾಡಕ್ಕಿಳಿಸಿದೆ. ಸಿಪಿಐ ಫೂಲ್‌ಸಿಂಗ್ ಕಚ್ಲಾಂ ಅವರನ್ನು ಕಣಕ್ಕಿಳಿಸಿದರೆ, ಬಿಎಸ್‌ಪಿ ಆಯತು ರಾಮ್ ಮಾಂಡವಿ ಅವರನ್ನು ಹಾಗೂ ಗೊಂಡ್ವಾನಾ ಗಣತಂತ್ರ ಪಕ್ಷವು (ಜಿಜಿಪಿ) ಟಿಕಂ ನಾಗವಂಶಿ ಅವರನ್ನು ಅಭ್ಯರ್ಥಿಯಾಗಿಸಿವೆ. 2019ರಲ್ಲಿ ಕಾಂಗ್ರೆಸ್‌ನ ದೀಪಕ್ ಬೈಜ್ ಅವರು 38,982 ಮತಗಳ ಅಂತರದಿಂದ ಬಿಜೆಪಿಯ ಬೈದುರಾಮ್ ಕಶ್ಯಪ್ ಅವರನ್ನು ಸೋಲಿಸಿದ್ದರು. ಈ ಕ್ಷೇತ್ರವು ದಶಕಗಳ ಕಾಲ ಬಿಜೆಪಿಯ ಭದ್ರಕೋಟೆಯಾಗಿತ್ತು. ಈ ಬಾರಿ ಈ ಕ್ಷೇತ್ರವನ್ನು ಮರಳಿ ತೆಕ್ಕೆಗೆ ತೆಗೆದುಕೊಳ್ಳುತ್ತೇವೆಂಬ ವಿಶ್ವಾಸ ಬಿಜೆಪಿ ಮುಖಂಡರದ್ದಾಗಿದೆ. ಮಹೇಶ್ ಕಶ್ಯಪ್ ಅವರು ಆದಿವಾಸಿಗಳ ಪರ ಹೋರಾಟದಿಂದ ಮುಂಚೂಣಿಗೆ ಬಂದಿದ್ದು, ಸ್ಥಳೀಯವಾಗಿಯೂ ಸಾಕಷ್ಟು ಪ್ರಭಾವವನ್ನು ಹೊಂದಿರುವ ಮುಖಂಡರಾಗಿದ್ದಾರೆ. ಇದೇ ಕಾರಣಕ್ಕೆ ಇವರು ಮೊದಲ ಬಾರಿ ಲೋಕಸಭಾ ಚುನಾವಣೆಯಲ್ಲಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಕವಾಸಿ ಲಖ್ಮಾ ಅವರು ಕೊಂಟಾ ಕ್ಷೇತ್ರದಿಂದ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಕ್ಷೇತ್ರದಲ್ಲಿ ಜನಜನಿತರಾಗಿದ್ದಾರೆ. 2013ರಲ್ಲಿ ದರ್ಭಾ ಕಣಿವೆಯಲ್ಲಿ ನಡೆದ ನಕ್ಸಲ್ ದಾಳಿಯಲ್ಲಿ ಬದುಕುಳಿದವರಲ್ಲಿ ಇವರೂ ಒಬ್ಬರಾಗಿದ್ದಾರೆ. ಈ ದಾಳಿಯಲ್ಲಿ ಕಾಂಗ್ರೆಸ್ ಮುಖಂಡರೂ ಸೇರಿದಂತೆ ಹಲವು ಮಂದಿ ಮೃತಪಟ್ಟಿದ್ದರು. ಈ ದಾಳಿಯ ಸಂಚಿನ ಕುರಿತ ಮಾಹಿತಿ ಪಡೆಯಲು ಕವಾಸಿ ಅವರನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು ಎಂದು ಬಿಜೆಪಿ ಒತ್ತಾಯಿಸಿತ್ತು.

ಮುಖಾಮುಖಿ

ರಾಜಮಂಡ್ರಿ (ಆಂಧ್ರಪ್ರದೇಶ)

ಡಿ. ಪುರಂದೇಶ್ವರಿ (ಬಿಜೆಪಿ)

ಆಂಧ್ರಪ್ರದೇಶದ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ರಾಜಮಂಡ್ರಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಕೇಂದ್ರದ ಮಾಜಿ ಸಚಿವೆ ದಗ್ಗುಬಾಟಿ ಪುರಂದೇಶ್ವರಿ ಅವರನ್ನು ಸ್ಪರ್ಧೆಗಿಳಿಸಿದೆ. ಇವರು ಪಕ್ಷದ ಆಂಧ್ರಪ್ರದೇಶ ಘಟಕದ ಅಧ್ಯಕ್ಷೆ. ಪುರಂದೇಶ್ವರಿ ಅವರು 2004ರಲ್ಲಿ ಬಾಪಟ್ಲ ಕ್ಷೇತ್ರದಲ್ಲಿ ಹಾಗೂ 2009ರಲ್ಲಿ ವಿಶಾಖಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಿ ಸಂಸತ್‌ಗೆ ಆಯ್ಕೆಯಾಗಿದ್ದರು. ಯುಪಿಎ ಸರ್ಕಾರದ ಅವಧಿಯಲ್ಲಿ ಕೇಂದ್ರ ಸಚಿವೆಯಾಗಿದ್ದರು. ಆಂಧ್ರಪ್ರದೇಶ ಇಬ್ಭಾಗವಾಗುವುದನ್ನು ವಿರೋಧಿಸಿ ಇವರು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದರು. 2014ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದ ಪುರಂದೇಶ್ವರಿ ಅವರು, ಅದೇ ವರ್ಷ ರಾಜಂಪೇಟ ಲೋಕಸಭಾ ಕ್ಷೇತ್ರದಿಂದ ವೈಎಸ್‌ಆರ್‌ಸಿಪಿ ಅಭ್ಯರ್ಥಿ ವಿರುದ್ಧ ಸ್ಪರ್ಧಿಸಿ ಸೋತಿದ್ದರು. 2019ರಲ್ಲೂ ವಿಶಾಖಪಟ್ಟಣ ಕ್ಷೇತ್ರದಲ್ಲಿ ಪರಾಭವಗೊಂಡಿದ್ದರು. ಈ ಬಾರಿಯಾದರೂ ಮತದಾರರು ಇವರ ಕೈಹಿಡಿಯುತ್ತಾರೋ ಎಂದು ಕಾದು ನೋಡಬೇಕಾಗಿದೆ.

V/S

ಡಾ. ಗೂಡೂರಿ ಶ್ರೀನಿವಾಸ್ (ವೈಎಸ್‌ಆರ್‌ಸಿಪಿ)

ರಾಜಮಂಡ್ರಿ ಕ್ಷೇತ್ರದಲ್ಲಿ ಪುರಂದೇಶ್ವರಿ ಅವರ ವಿರುದ್ಧ ಸೆಣಸಲು ವೈಎಸ್‌ಆರ್‌ಸಿಪಿ ಡಾ. ಗೂಡೂರಿ ಶ್ರೀನಿವಾಸ್ ಅವರನ್ನು ಅಖಾಡಕ್ಕಿಳಿಸಿದೆ. ರಾಜಕೀಯದಲ್ಲಿ ಅನನುಭವಿಯಾದರೂ ಶ್ವಾಸಕೋಶ ತಜ್ಞರಾಗಿ ಹೆಸರು ಮಾಡಿರುವ ಶ್ರೀನಿವಾಸ್ ಅವರನ್ನು ಜನರು ಗೆಲ್ಲಿಸುತ್ತಾರೆಂಬ ವಿಶ್ವಾಸ ವೈಎಸ್‌ಆರ್‌ಸಿಪಿ ನಾಯಕರದ್ದಾಗಿದೆ. 'ವಿಜಯ ಭಾರತಿ ಚೆಸ್ಟ್ ಇನ್‌ಸ್ಟಿಟ್ಯೂಟ್' ಮೂಲಕ ಇವರು ರಾಜಮಂಡ್ರಿಯಲ್ಲಿ ಚಿರಪರಿಚಿತ ವೈದ್ಯರಾಗಿದ್ದಾರೆ. 2019ರ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ವೈಎಸ್‌ಆರ್‌ಸಿಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಭರತ್ ಮಾರ್ಗಾನಿ ಅವರು 1,21,634 ಮತಗಳ ಅಂತರದಿಂದ ಟಿಡಿಪಿ ಅಭ್ಯರ್ಥಿಯನ್ನು ಸೋಲಿಸಿದ್ದರು. ಭರತ್ ಮಾರ್ಗಾನಿ ಅವರನ್ನು ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕಿಳಿಸುವ ಲೆಕ್ಕಾಚಾರದಿಂದ ಪಕ್ಷದ ಮುಖ್ಯಸ್ಥ ಜಗನ್ ಮೋಹನ್ ರೆಡ್ಡಿ ಅವರು ಈ ಬಾರಿ ಇಲ್ಲಿ ಅಭ್ಯರ್ಥಿಯನ್ನು ಬದಲಿಸಿದ್ದಾರೆ ಎನ್ನಲಾಗುತ್ತಿದೆ.

ಷೇರುಪೇಟೆ ವಹಿವಾಟು 793



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,753
ಇಂದಿನ ಅಂತ್ಯ	22,519
▼	234
ದಿನದ ಗರಿಷ್ಠ	22,503

ವಿನಿಮಯ ದರ

$ ಡಾಲರ್	83.38
£ ಪೌಂಡ್	104.24
€ ಯುರೊ	88.92
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1500)
ಸೋಯಾ (ರಿಫೈನ್ಡ್)	₹960 (965)
ಸೂರ್ಯಕಾಂತಿ (ರಿಫೈನ್ಡ್)	₹950 (955)
ಪಾಮೋಲಿನ್	₹960 (967)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹172-415

ದ್ವಿತಳಿ (ಬಿ.ವಿ) ₹222-590

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15500
ಎಸಿ	₹8960
ಆರ್‌ಪಿ	₹15750
ಆರ್‌ಸಿ	₹9800

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8000-9010
ತಿಪಟೂರು	₹8000-9108
ತುರುವೇಕೆರೆ	₹8700-8700

ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	18000-28500
ಹೊಸತು	28500-36500
ಹಳತು	36500-44500
ಕಾರ್ಕಳ	
ಹೊಸತು	25000-36500
ಹಳತು	30000-43500
ಕುಮಟ	
ಚಿಪ್ಪು	26509-28299
ಕೋಕ	14029-23019
ಫ್ಯಾಕ್ಟರಿ	11090-21711
ಹಳೆಚಾಲಿ	36509-38619
ಹೊಸಚಾಲಿ	30890-34469
ಸಿದ್ದಾಪುರ	
ಬಿಳಿಗೋಟು	24249-28899
ಚಾಲಿ	33499-34809
ಕೋಕ	24899-29719
ಹಳೆಚಾಲಿ	33899-35299
ಕೆಂಪುಗೋಟು	28699-31489
ರಾಶಿ	42899-47209
ತಟ್ಟಿಬೆಟ್ಟೆ	34699-44099
ಶಿರಸಿ	
ಬೆಟ್ಟೆ	33421-45299
ಬಿಳಿಗೋಟು	22169-31599
ಚಾಲಿ	31006-36001
ಕೆಂಪುಗೋಟು	22600-32899
ರಾಶಿ	43698-48299
ಯಲ್ಲಾಪುರ	
ಅಪಿ	53589-68909
ಬಿಳಿಗೋಟು	20899-31490
ಕೋಕ	14899-29699
ಹಳೆಚಾಲಿ	35599-38111
ಹೊಸಚಾಲಿ	31730-35501
ಕೆಂಪುಗೋಟು	26899-34399
ರಾಶಿ	43358-53309
ತಟ್ಟಿಬೆಟ್ಟೆ	36399-43000

ಮುಂಬೈ ಧಾರಣೆ

ಶೇಂಗಾ

12-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1510)
ಒಂದು ವಾರದ ಡೆಲಿವರಿ	1495 (1505)
ಸೋಯಾ ಕಚ್ಚಾ	915 (930)
ಪಾಮ್ ವಾರದ ಡೆಲಿವರಿ	958 (965)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹72,950 (71,650)

ಬೆಳ್ಳಿ ಕೆ.ಜಿ ₹83,900 (82,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1400-1800
ಮಧ್ಯಮ	₹1000-1400
ಸಣ್ಣ	₹400-1000

ಫೆಡರಲ್ ರಿಸರ್ವ್ ಬಡ್ಡಿದರ ಕಡಿತದ ಅನಿಶ್ಚಿತತೆ • ಸೆನ್ಸೆಕ್ಸ್ 793 ಅಂಶ ಕುಸಿತ

ಗೂಳಿ ನಾಗಾಲೋಟಕ್ಕೆ ತಡೆ

ಮುಂಬೈ (ಪಿಟಿಐ): ಹೂಡಿಕೆದಾರರು ಲಾಭ ಗಳಿಕೆಗಾಗಿ ಷೇರು ಮಾರಾಟಕ್ಕೆ ಮುಂದಾಗಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಅಲ್ಲದೆ, ಮಾರ್ಚ್ ತಿಂಗಳಲ್ಲಿ ಅಮೆರಿಕದ ಚಿಲ್ಲರೆ ಹಣದುಬ್ಬರವು ನಿರೀಕ್ಷೆಗೂ ಮೀರಿ ಏರಿಕೆಯಾಗಿದೆ. ಹಾಗಾಗಿ, ಅಲ್ಲಿನ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್, ಜೂನ್‌ನಲ್ಲಿ ಬಡ್ಡಿದರ ಕಡಿತ ಮಾಡುವುದು ಅನಿಶ್ಚಿತತೆಯಿಂದ ಕೂಡಿದೆ. ಇದು ಷೇರುಪೇಟೆಯಲ್ಲಿ ಕರಡಿ ಕುಣಿತಕ್ಕೆ ಕಾರಣವಾಯಿತು. ಇದರಿಂದಾಗಿ ಮೂರು ದಿನಗಳ ಗೂಳಿಯ ನಾಗಾಲೋಟವು ಕೊನೆಗೊಂಡಿತು.

ಹೂಡಿಕೆದಾರರ ಸಂಪತ್ತು ಒಂದೇ ದಿನ ₹2.52 ಲಕ್ಷ ಕೋಟಿ ಕರಗಿದೆ.

ಎರಡು ದಿನಗಳ ಹಿಂದೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದ್ದ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 793 ಅಂಶ (ಶೇ 1.06ರಷ್ಟು) ಇಳಿಕೆ ಕಂಡು 74,244 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ದಿನದ ವಹಿವಾಟಿನಲ್ಲಿ 848 ಅಂಶಗಳಷ್ಟು ಇಳಿಕೆ ಕಂಡಿತ್ತು. ಸೆನ್ಸೆಕ್ಸ್ ಗುಚ್ಛದಲ್ಲಿ 27 ಕಂಪನಿಗಳ ಷೇರಿನ ಮೌಲ್ಯ ಇಳಿಕೆ ಕಂಡಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ, 234 ಅಂಶ (ಶೇ 1.03ರಷ್ಟು) ಇಳಿಕೆ ಕಂಡು 22,519 ಅಂಶಗಳಲ್ಲಿ ಅಂತ್ಯಗೊಂಡಿತು.

ಸನ್ ಫಾರ್ಮಾ, ಮಾರುತಿ, ಪವರ್ ಗ್ರಿಡ್, ಟೈಟನ್, ಜೆಎಸ್‌ಡಬ್ಲ್ಯು ಸ್ಟೀಲ್, ಟೆಕ್ ಮಹೀಂದ್ರ, ಲಾರ್ಸನ್ ಆ್ಯಂಡ್ ಟೂಬ್ರೊ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರುಗಳು ಕುಸಿತ ಕಂಡಿವೆ. ಟಾಟಾ ಮೋಟರ್ಸ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಹಾಗೂ ನೆಸ್ಲೆ ಷೇರು ಗಳಿಕೆ ಕಂಡಿವೆ.

‘ಫೆಬ್ರುವರಿಯಲ್ಲಿ ದಾಖಲಾಗಿದ್ದ-ಕ್ಕಿಂತಲೂ ಮಾರ್ಚ್‌ನಲ್ಲಿ ಅಮೆರಿಕದ ಚಿಲ್ಲರೆ ಹಣದುಬ್ಬರವು ಶೇ 0.4ರಷ್ಟು ಏರಿಕೆಯಾಗಿದೆ. ಪ್ರಸಕ್ತ ವರ್ಷದಲ್ಲಿ ಫೆಡರಲ್ ರಿಸರ್ವ್ ಮೂರು ಬಾರಿ ಬಡ್ಡಿದರ ಇಳಿಸುವ ಮುನ್ಸೂಚನೆ ನೀಡಿತ್ತು. ಆದರೆ, ಹಣದುಬ್ಬರದ ಏರಿಕೆಯು ಕೇಂದ್ರೀಯ ಬ್ಯಾಂಕ್‌ನ ನಿರ್ಧಾರಕ್ಕೆ ಸವಾಲೊಡ್ಡಿದೆ’ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆದರೆ, ಯುರೋಪ್ ಸೆಂಟ್ರಲ್ ಬ್ಯಾಂಕ್‌ನ ಬಡ್ಡಿದರ ನೀತಿಯಿಂದಾಗಿ ಯುರೋಪ್ ಮಾರುಕಟ್ಟೆಯು ಸದೃಢವಾಗಿದೆ. ಅಲ್ಲದೆ, ಬ್ಯಾಂಕ್ ಶೀಘ್ರವೇ ಬಡ್ಡಿದರ ಕಡಿತಗೊಳಿಸುವ ಸುಳಿವು ನೀಡಿದೆ ಎಂದು ಹೇಳಿದ್ದಾರೆ.

‘ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತ ವಿಳಂಬ, ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ತೈಲದ ಬೆಲೆ ಏರಿಕೆ ಹಾಗೂ ಕಂಪನಿಗಳ ನಾಲ್ಕನೇ ತ್ರೈಮಾಸಿಕ ಫಲಿತಾಂಶವು ಭಾರತೀಯ ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿವೆ. ಹಾಗಾಗಿ, ಸೂಚ್ಯಂಕಗಳು ಕುಸಿತ ದಾಖಲಿಸಿವೆ’ ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಶೇ 0.60ರಷ್ಟು ಹಾಗೂ ಮಿಡ್ ಕ್ಯಾಪ್ ಸೂಚ್ಯಂಕ ಶೇ 0.49ರಷ್ಟು ಕುಸಿತ ಕಂಡಿವೆ. ಆಯಿಲ್ ಆ್ಯಂಡ್ ಗ್ಯಾಸ್ ಶೇ1.28, ಯುಟಿಲಿಟಿ ಶೇ1.02, ರಿಯಾಲ್ಟಿ ಶೇ0.96, ಬ್ಯಾಂಕೆಕ್ಸ್ ಶೇ 0.91, ಐ.ಟಿ ಶೇ0.84 ಹಾಗೂ ಹಣಕಾಸು ಸೇವಾ ಸೂಚ್ಯಂಕ ಶೇ 0.81ರಷ್ಟು ಇಳಿಕೆ ಕಂಡಿವೆ.

ಬ್ರೆಂಟ್ ಕಚ್ಚಾ ತೈಲ ದರವು ಶೇ0.95ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 90.55 ಡಾಲರ್‌ಗೆ ತಲುಪಿದೆ.



ಇಳಿಕೆ ಕಂಡ ಕಂಪನಿಗಳು

4.01%	ಸನ್ ಫಾರ್ಮಾ
3.17%	ಮಾರುತಿ ಸುಜುಕಿ
2.57%	ಪವರ್ ಗ್ರಿಡ್
2.40%	ಟೈಟನ್
2.04%	ಎಲ್ ಆ್ಯಂಡ್ ಟಿ
1.96%	ಜೆಎಸ್‌ಡಬ್ಲ್ಯು ಸ್ಟೀಲ್
1.91%	ಟೆಕ್ ಮಹೀಂದ್ರ
1.76%	ಅಲ್ಟ್ರಾಟೆಕ್ ಸಿಮೆಂಟ್
1.57%	ಎಸ್‌ಬಿಐ
1.56%	ಐಟಿಸಿ

₹75 ಸಾವಿರ ದಾಟಿದ ಚಿನ್ನದ ಧಾರಣೆ

ನವದೆಹಲಿ/ ಬೆಂಗಳೂರು (ಪಿಟಿಐ): ಬೆಂಗಳೂರಿನಲ್ಲಿ ಗುರುವಾರ ಅಲ್ಪ ಇಳಿಕೆ ಕಂಡಿದ್ದ ಚಿನ್ನದ ಧಾರಣೆಯು ಶುಕ್ರವಾರ ಮತ್ತೆ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ ಬೆಲೆಯು ₹75,180ಕ್ಕೆ ತಲುಪಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹85,700ಕ್ಕೆ ಮುಟ್ಟಿದೆ. ಹಿಂದಿನ ದಿನದ ವಹಿವಾಟಿನಲ್ಲಿ ಚಿನ್ನದ ಬೆಲೆ 10 ಗ್ರಾಂಗೆ ₹73,910 ಇದ್ದರೆ, ಬೆಳ್ಳಿ ಕೆ.ಜಿಗೆ ₹84,600 ಆಗಿತ್ತು.

ನವದೆಹಲಿಯಲ್ಲೂ ಏರಿಕೆ: ನವದೆಹಲಿ ಮಾರುಕಟ್ಟೆಯಲ್ಲಿ 10 ಗ್ರಾಂ ಚಿನ್ನದ ದರವು ₹1,050 ಏರಿಕೆಯಾಗಿ ₹73 ಸಾವಿರದಂತೆ ಮಾರಾಟವಾಗಿದೆ. ಒಂದು ಕೆ.ಜಿ ಬೆಳ್ಳಿಗೆ 1,400 ಹೆಚ್ಚಳವಾಗಿ, ₹86,300ಕ್ಕೆ ಮುಟ್ಟಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,388 ಡಾಲರ್ (ಅಂದಾಜು ₹1.99 ಲಕ್ಷ) ಮತ್ತು 28.95 (ಅಂದಾಜು ₹2,419) ಡಾಲರ್‌ನಂತೆ ಮಾರಾಟವಾಗಿದೆ.

‘ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನದತ್ತ ಗಮನಹರಿಸಿದ್ದಾರೆ. ಹಾಗಾಗಿ, ಹಳದಿ ಲೋಹದ ಬೆಲೆಯು ಏರುಗತಿಯಲ್ಲಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸೌಮಿಲ್ ಗಾಂಧಿ ಹೇಳಿದ್ದಾರೆ.

ಟಿಸಿಎಸ್‌ಗೆ ₹12,434 ಕೋಟಿ ನಿವ್ವಳ ಲಾಭ

ಮುಂಬೈ (ಪಿಟಿಐ): ಸಾಫ್ಟ್‌ವೇರ್ ಸೇವೆ ಒದಗಿಸುವ ದೇಶದ ಅತಿದೊಡ್ಡ ಕಂಪನಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್), 2023–24ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹12,434 ಕೋಟಿ ನಿವ್ವಳ ಲಾಭಗಳಿಸಿದೆ.

ಕಳೆದ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹11,392 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 9.1ರಷ್ಟು ಏರಿಕೆಯಾಗಿದೆ.

2023–24ನೇ ಹಣಕಾಸು ವರ್ಷದಲ್ಲಿ ಕಂಪನಿಯ ನಿವ್ವಳ ಲಾಭದಲ್ಲಿ ಶೇ 9ರಷ್ಟು ಏರಿಕೆಯಾಗಿದ್ದು, ₹45,908 ಕೋಟಿಗೆ ಮುಟ್ಟಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನವು ಶೇ3.5ರಷ್ಟು ಏರಿಕೆಯಾಗಿದ್ದು, ₹61,237 ಕೋಟಿ ಆಗಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ನಾಲ್ಕನೇ ತ್ರೈಮಾಸಿಕದಲ್ಲಿ ಎರಡು ಸಾವಿರ ಸಿಬ್ಬಂದಿಯು ಕಂಪನಿಯನ್ನು ತೊರೆದಿದ್ದು, ಒಟ್ಟು ಸಿಬ್ಬಂದಿಯ ಸಂಖ್ಯೆ 6.01 ಲಕ್ಷ ಆಗಿದೆ ಎಂದು ತಿಳಿಸಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ನಿಧನ

ಶ್ರೀಮತಿ ಲಕ್ಷ್ಮಿ ಮೂರ್ತಿ

W/o ದೀಪಕ್ ಸಮಗ

ಜನನ: 29/02/1972 ಮರಣ: 11/04/2024

ದಿನಾಂಕ 11–04–2024ರಂದು ಶ್ರೀಮತಿ ಲಕ್ಷ್ಮಿ ಮೂರ್ತಿರವರು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಇಂತಿ ದುಃಖತಪ್ತರು

ಪತಿ- ಶ್ರೀ ದೀಪಕ್ ಸಮಗ,

ತಾಯಿ- ಶ್ರೀಮತಿ ಲಲಿತಾ ಮೂರ್ತಿ ಮತ್ತು

ತಂದೆ- ಶ್ರೀ ಕೇಶವ ಮೂರ್ತಿ

ಅತ್ತೆ - ಶ್ರೀಮತಿ ಲಲಿತ ಸಮಗ,

ಕುಟುಂಬ ಹಾಗೂ ಬಂಧು ಮಿತ್ರರು

ಮೊಬೈಲ್: 98451 76366

ಆಹಾರ ಪದಾರ್ಥಗಳ ಬೆಲೆ ಇಳಿಕೆ: ಕೇಂದ್ರ ಸರ್ಕಾರ ಸ್ವಲ್ಪ ನಿರಾಳ

ಚಿಲ್ಲರೆ ಹಣದುಬ್ಬರ 9 ತಿಂಗಳ ಕನಿಷ್ಠ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಚಿಲ್ಲರೆ ಹಣದುಬ್ಬರವು ಮಾರ್ಚ್‌ನಲ್ಲಿ ಒಂಬತ್ತು ತಿಂಗಳ ಕನಿಷ್ಠ ಮಟ್ಟವಾದ ಶೇ 4.85ಕ್ಕೆ ಇಳಿಕೆಯಾಗಿದೆ.

ಆಹಾರ ಪದಾರ್ಥಗಳ ದರ ಕಡಿಮೆಯಾಗಿರುವುದೇ ಹಣದುಬ್ಬರದ ಇಳಿಕೆಗೆ ಕಾರಣವಾಗಿದೆ. ಲೋಕಸಭಾ ಚುನಾವಣೆ ನಡೆಯುತ್ತಿರುವ ಈ ಹೊತ್ತಿನಲ್ಲಿ ಬೆಲೆ ಇಳಿಕೆಯಿಂದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸ್ವಲ್ಪ ನಿರಾಳವಾಗಿದೆ.

ಫೆಬ್ರುವರಿಯಲ್ಲಿ ಶೇ 8.66ರಷ್ಟಿದ್ದ ಆಹಾರ ಪದಾರ್ಥಗಳ ಹಣದುಬ್ಬರವು ಮಾರ್ಚ್‌ನಲ್ಲಿ ಶೇ8.52ಕ್ಕೆ ಇಳಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಶುಕ್ರವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ (ಸಿಪಿಐ) ಚಿಲ್ಲರೆ ಹಣದುಬ್ಬರವು ಫೆಬ್ರುವರಿಯಲ್ಲಿ ಶೇ5.09ಕ್ಕೆ ಇಳಿಕೆಯಾಗಿತ್ತು. 2023ರ ಮಾರ್ಚ್‌ನಲ್ಲಿ ಹಣದುಬ್ಬರವು ಶೇ5.66ರಷ್ಟು ದಾಖಲಾಗಿತ್ತು. ಅದೇ ವರ್ಷದ ಅಕ್ಟೋಬರ್‌ನಲ್ಲಿ ಶೇ 4.87ರಷ್ಟು ಕಡಿಮೆ ದಾಖಲಾಗಿತ್ತು.



ಶೇ 4ರ ಮಿತಿಗೆ ಹಣದುಬ್ಬರವನ್ನು ತಗ್ಗಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಹಲವು ಕ್ರಮಗಳನ್ನು ಕೈಗೊಂಡಿದೆ.

‘ಆಹಾರ ಪದಾರ್ಥಗಳ ಬೆಲೆಯು ಅನಿಶ್ಚಿತತೆಯಿಂದ ಕೂಡಿದೆ. ಹಾಗಾಗಿ, ಹಣದುಬ್ಬರವನ್ನು ನಿಗದಿತ ಮಿತಿಯಲ್ಲಿ ಕಾಯ್ದುಕೊಳ್ಳುವುದು ಸವಾಲಿನಿಂದ ಕೂಡಿದೆ’ ಎಂದು ಇತ್ತೀಚೆಗೆ ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯು ಹೇಳಿತ್ತು.

ಅಲ್ಲದೆ, ಮುಂಗಾರು ಸಾಮಾನ್ಯವಾಗಿರಲಿದ್ದು, 2024-25ನೇ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ4.5ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಇಸ್ರೇಲ್–ಪ್ಯಾಲೆಸ್ಟೀನ್, ರಷ್ಯಾ–ಉಕ್ರೇನ್ ಬಿಕ್ಕಟ್ಟು ಸರಕುಗಳ ಬೆಲೆ ಏರಿಕೆಗೆ ಕಾರಣವಾಗಲಿದ್ದು, ಪೂರೈಕೆ ಸರಪಳಿಯ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಿದೆ.

2024–25ನೇ ಆರ್ಥಿಕ ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 4.9ರಷ್ಟು ಹಾಗೂ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 3.8ರಷ್ಟು ಹಣದುಬ್ಬರ ದಾಖಲಾಗಲಿದೆ ಎಂದು ಅಂದಾಜಿಸಿದೆ.

ಗ್ರಾಮೀಣರಿಗೆ ಬೆಲೆ ಏರಿಕೆ ಬಿಸಿ

ಗ್ರಾಮೀಣ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದರೆ ನಗರ ಪ್ರದೇಶದ ಗ್ರಾಹಕರು ಕೊಂಚ ನಿರಾಳರಾಗಿದ್ದಾರೆ. ಫೆಬ್ರುವರಿಯಲ್ಲಿ ನಗರ ಪ್ರದೇಶದಲ್ಲಿ ಶೇ 5.45ರಷ್ಟಿದ್ದ ಹಣದುಬ್ಬರವು ಶೇ 4.14ರಷ್ಟಕ್ಕೆ ತಗ್ಗಿದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಶೇ 5.34ರಿಂದ ಶೇ 5.45ಕ್ಕೆ ಏರಿಕೆಯಾಗಿದೆ.

ಒಡಿಶಾದಲ್ಲಿ ಅತಿಹೆಚ್ಚು ಹಣದುಬ್ಬರ (ಶೇ 7.05) ದಾಖಲಾಗಿದ್ದರೆ, ನವದೆಹಲಿಯಲ್ಲಿ ಅತಿಕಡಿಮೆ (ಶೇ 2.29ರಷ್ಟು) ದಾಖಲಾಗಿದೆ.

ಮೊಟ್ಟೆ, ಮಸಾಲೆ, ಬೇಳೆಕಾಳು ಬೆಲೆಯಲ್ಲಿ ಇಳಿಕೆಯಾಗಿದ್ದರೆ, ಹಣ್ಣುಗಳು ಮತ್ತು ತರಕಾರಿ ಬೆಲೆಯಲ್ಲಿ ಏರಿಕೆಯಾಗಿದೆ.

ಹಸಿ ಕೊಕ್ಕೊ ಕೆ.ಜಿಗೆ ₹285 ದರ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಲ್ಲಿನ ಕೇಂದ್ರೀಯ ಅಡಿಕೆ ಮತ್ತು ಕೊಕ್ಕೊ ಮಾರುಕಟ್ಟೆ ಮತ್ತು ಸಂಸ್ಕರಣಾ ಸಹಕಾರಿ ಸಂಸ್ಥೆಯು (ಕ್ಯಾಂಪ್ಕೊ) ಹಸಿ ಕೊಕ್ಕೊ ಖರೀದಿ ದರವನ್ನು ಪ್ರತಿ ಕೆ.ಜಿಗೆ ₹280ರಿಂದ ₹285ಕ್ಕೆ ಹೆಚ್ಚಿಸಿದೆ. ಪರಿಷ್ಕೃತ ದರವು ಶುಕ್ರವಾರದಿಂದ ಜಾರಿಗೆ ಬಂದಿದ್ದು, ಮುಂದಿನ ಆದೇಶದ ವರೆಗೆ ಜಾರಿಯಲ್ಲಿ ಇರಲಿದೆ ಎಂದು ಕ್ಯಾಂಪ್ಕೊ ಪ್ರಕಟಣೆ ತಿಳಿಸಿದೆ.

ಇತ್ತೀಚಿನ ತಿಂಗಳು ಗಳಲ್ಲಿ ಕೊಕ್ಕೊ ದರ ಏರುಗತಿ ಯಲ್ಲಿದ್ದು, ಕಳೆದ ತಿಂಗಳು ಕೆ.ಜಿಗೆ ₹205 ಇತ್ತು. ಉತ್ಪಾದನೆ ಇಳಿಮುಖವಾಗಿರುವುದು, ದಾಸ್ತಾನು ಕಡಿಮೆ ಇರುವುದು ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ.

ಸುದ್ದಿ 2 ನಿಮಿಷ

ವೊಡಾಫೋನ್ ಐಡಿಯಾ 18ರಿಂದ ಎಫ್‌ಪಿಒ ಆರಂಭ

ನವದೆಹಲಿ (ಪಿಟಿಐ): ಆರ್ಥಿಕ ಬಿಕ್ಕಟ್ಟಿನ ಸುಳಿಗೆ ಸಿಲುಕಿರುವ ವೊಡಾಫೋನ್ ಐಡಿಯಾ ಕಂಪನಿಯು, ಷೇರು ಮಾರಾಟ ಪ್ರಕ್ರಿಯೆ (ಎಫ್‌ಪಿಒ) ಮೂಲಕ ₹18 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ.

ಇದು ದೇಶದ ಷೇರು ಮಾರು-ಕಟ್ಟೆಯಲ್ಲಿನ ಅತಿದೊಡ್ಡ ಎಫ್‌ಪಿಒ ಆಗಿದ್ದು, ಪ್ರತಿ ಷೇರಿಗೆ ₹10ರಿಂದ ₹11 ಬೆಲೆ ನಿಗದಿಪಡಿಸಿದೆ.

ಏಪ್ರಿಲ್ 18ರಂದು ಎಫ್‌ಪಿಒ ಆರಂಭವಾಗಲಿದ್ದು, ಏಪ್ರಿಲ್ 22ರಂದು ಮುಕ್ತಾಯವಾಗಲಿದೆ. ಬಂಡವಾಳ ಸಂಗ್ರಹಿಸಲು ಆಡಳಿತ ಮಂಡಳಿಯು ಎಫ್‌ಪಿಒಗೆ ಒಪ್ಪಿಗೆ ನೀಡಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ವೊಡಾಫೋನ್ ಐಡಿಯಾದ ಪ್ರವರ್ತಕ ಘಟಕಗಳಲ್ಲಿ ಆದಿತ್ಯ ಬಿರ್ಲಾ ಗ್ರೂಪ್ ಕೂಡ ಒಂದಾಗಿದೆ. ಇದರ ಅಂಗಸಂಸ್ಥೆಯಾದ ಒರಿಯಾನಾ ಇನ್ವೆಸ್ಟ್‌ಮೆಂಟ್ಸ್ ಪ್ರೈವೆಟ್ ಲಿಮಿಟೆಡ್‌ಗೆ ಆದ್ಯತೆಯ ಷೇರುಗಳ ವಿತರಣೆ ಮೂಲಕ ಕಂಪನಿಯು ಒಟ್ಟು ₹2,075 ಕೋಟಿ ಬಂಡವಾಳ ಸಂಗ್ರಹಿಸಿದೆ.

ಭಾರತೀಯ ದೂರಸಂಪರ್ಕ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿಗಳಾದ ರಿಲಯನ್ಸ್ ಜಿಯೊ ಮತ್ತು ಭಾರ್ತಿ ಏರ್‌ಟೆಲ್ ವಿರುದ್ಧ ತನ್ನ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಲು ಕಂಪನಿಗೆ ಈ ಮೊತ್ತವು ನೆರವಾಗಲಿದೆ.

ಈಗಾಗಲೇ, ಪ್ರತಿಸ್ಪರ್ಧಿ ಕಂಪನಿಗಳು 5ಜಿ ಸೇವೆ ಆರಂಭಿಸಿವೆ. ಆದರೆ, ವೊಡಾಫೋನ್ ಐಡಿಯಾದಿಂದ 5ಜಿ ಸೇವೆ ಆರಂಭಕ್ಕೆ ವಿಳಂಬವಾಗಿದೆ. ಹಾಗಾಗಿ, ತನ್ನ 4ಜಿ ಸೇವೆಯನ್ನು ಬಲಪಡಿಸಲು ಮತ್ತು ವ್ಯಾಪಾರಿಗಳ ಬಾಕಿ ಪಾವತಿಗೆ ಈ ಮೊತ್ತವು ಸಹಕಾರಿ-ಯಾಗಲಿದೆ ಎಂದು ಹೇಳಲಾಗಿದೆ.

ಕಂಪನಿಯು ₹2.1 ಲಕ್ಷ ಕೋಟಿ ಸಾಲ ಹೊಂದಿದ್ದು, ತ್ರೈಮಾಸಿಕ ಅವಧಿಯಲ್ಲಿ ನಷ್ಟ ದಾಖಲಿಸುತ್ತಿದೆ. ಜೊತೆಗೆ, ಪ್ರತಿ ತಿಂಗಳು ಕಂಪನಿಯ ಚಂದಾದಾರರ ಸಂಖ್ಯೆಯಲ್ಲಿ ಇಳಿಮುಖವಾಗುತ್ತಿದೆ.

ಕೈಗಾರಿಕಾ ಉತ್ಪಾದನೆ ಶೇ 5.7ರಷ್ಟು ದಾಖಲು

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಪ್ರಸಕ್ತ ವರ್ಷದ ಫೆಬ್ರುವರಿ ತಿಂಗಳಿನಲ್ಲಿ ಶೇ 5.7ರಷ್ಟು ಬೆಳವಣಿಗೆ ದಾಖಲಿಸಿದ್ದು, ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ.

ಕೈಗಾರಿಕಾ ಉತ್ಪಾದನೆ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಲೆಕ್ಕ ಹಾಕುವ ಈ ಬೆಳವಣಿಗೆಯು 2023ರ ಫೆಬ್ರುವರಿಯಲ್ಲಿ ಶೇ 6ರಷ್ಟು ದಾಖಲಾಗಿತ್ತು ಎಂದು ಶುಕ್ರವಾರ ಬಿಡುಗಡೆಯಾಗಿರುವ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ವರದಿ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 5.9ರಷ್ಟಿದ್ದ ತಯಾರಿಕಾ ವಲಯದ ಬೆಳವಣಿಗೆಯು ಶೇ 5ಕ್ಕೆ ಕುಗ್ಗಿದೆ. ಆದರೆ, ಗಣಿಗಾರಿಕೆ ಶೇ 8ರಷ್ಟು ಹಾಗೂ ಇಂಧನ ವಲಯದ ಉತ್ಪಾದನೆಯು ಶೇ 7.5ರಷ್ಟು ಏರಿಕೆಯಾಗಿದೆ. ವಿದ್ಯುತ್ ವಲಯದ ಉತ್ಪಾದನೆಯು ಶೇ 7.5ರಷ್ಟು ಹೆಚ್ಚಳವಾಗಿದೆ ಎಂದು ವಿವರಿಸಿದೆ.

ಜಿಡಿಪಿ ಶೇ 6.1ರಷ್ಟು ಪ್ರಗತಿ: ಮೂಡೀಸ್

ನವದೆಹಲಿ (ಪಿಟಿಐ): ಭಾರತದ ಆರ್ಥಿಕತೆಯು 2024ರಲ್ಲಿ ಶೇ 6.1ರಷ್ಟು ಪ್ರಗತಿ ಕಾಣಲಿದೆ ಎಂದು ಮೂಡೀಸ್ ಇನ್‌ವೆಸ್ಟರ್ಸ್ ಸಂಸ್ಥೆ ಅಂದಾಜಿಸಿದೆ. ಇದು 2023ರಲ್ಲಿನ ಶೇ 7.7ರಷ್ಟು ಬೆಳವಣಿಗೆಗಿಂತಲೂ ಕಡಿಮೆ ಆಗಿದೆ.

ದಕ್ಷಿಣ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳ ಆರ್ಥಿಕತೆಯು ಈ ವರ್ಷ ದೃಢವಾಗಿರಲಿದೆ. ಏಷ್ಯಾ ಪೆಸಿಫಿಕ್ ಆರ್ಥಿಕತೆಯು ಶೇ 3.8ರಷ್ಟು ಪ್ರಗತಿ ಕಾಣಲಿದೆ ಎಂದು ಶುಕ್ರವಾರ ತಿಳಿಸಿದೆ.

ಕೊರೊನಾ ಅವಧಿಯಲ್ಲಿ ಭಾರತ ಮತ್ತು ಆಗ್ನೇಯ ಏಷ್ಯಾದಲ್ಲಿ ಉತ್ಪಾದನೆ ಕುಸಿದಿತ್ತು. ಈಗ ಚೇತರಿಕೆ ಕಂಡುಬರುತ್ತಿದೆ. ಚೀನಾ ಮತ್ತು ಭಾರತದಲ್ಲಿ ಹಣದುಬ್ಬರ ನಿಯಂತ್ರಣವು ಅನಿಶ್ಚಿತತೆಯಿಂದ ಕೂಡಿದೆ ಎಂದು ಹೇಳಿದೆ.

ಬುದ್ಧನಿಗೆ ಅಲಂಕಾರ ಏಪ್ರಿಲ್ 14ರಂದು ನಡೆಯಲಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಮುಂಬೈನಲ್ಲಿ ಶುಕ್ರವಾರ ಕಾರ್ಮಿಕರು, ಬುದ್ಧನ ಪ್ರತಿಮೆಗೆ ಬಣ್ಣ ಬಳಿದು ಅಲಂಕರಿಸಿದರು –ಪಿಟಿಐ ಚಿತ್ರ

42 ಲಕ್ಷ ಪ್ರಯಾಣಿಕ ವಾಹನ ಮಾರಾಟ

ನವದೆಹಲಿ (ಪಿಟಿಐ): ದೇಶದಲ್ಲಿ 2023–24ನೇ ಆರ್ಥಿಕ ವರ್ಷದಲ್ಲಿ ಪ್ರಯಾಣಿಕ ವಾಹನಗಳ ಸಗಟು ಮಾರಾಟದಲ್ಲಿ ಶೇ 8.4ರಷ್ಟು ಏರಿಕೆಯಾಗಿದೆ. ಒಟ್ಟು 42.18 ಲಕ್ಷ ವಾಹನಗಳು ಮಾರಾಟವಾಗಿವೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟವು (ಎಸ್‌ಐಎಎಂ) ಶುಕ್ರವಾರ ತಿಳಿಸಿದೆ.

2022–23ನೇ ಆರ್ಥಿಕ ವರ್ಷದಲ್ಲಿ ಒಟ್ಟು 38.90 ಲಕ್ಷ ವಾಹನಗಳು ಮಾರಾಟವಾಗಿದ್ದವು. ದ್ವಿಚಕ್ರ ವಾಹನಗಳ ಮಾರಾಟದಲ್ಲೂ ಶೇ 13.3ರಷ್ಟು ಏರಿಕೆಯಾಗಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ 1.58 ಕೋಟಿ ದ್ವಿಚಕ್ರ ವಾಹನ ಮಾರಾಟವಾಗಿದ್ದರೆ, 2023–24ರಲ್ಲಿ 1.79 ಕೋಟಿ ಮಾರಾಟವಾಗಿವೆ ಎಂದು ತಿಳಿಸಿದೆ.

2022–23ರಲ್ಲಿ 20.03 ಲಕ್ಷ ಯುಟಿಲಿಟಿ ವಾಹನಗಳು ಮಾರಾಟ ಆಗಿದ್ದರೆ, 2023–24ರಲ್ಲಿ 25.20 ಲಕ್ಷ ಮಾರಾಟವಾಗಿವೆ. ಒಟ್ಟಾರೆ ಮಾರಾಟದಲ್ಲಿ ಶೇ 25.8ರಷ್ಟು ಹೆಚ್ಚಳವಾಗಿದೆ ಎಂದು ವಿವರಿಸಿದೆ.

ಆದರೆ, ವಾಹನಗಳ ರಫ್ತಿನಲ್ಲಿ ಶೇ 5.5ರಷ್ಟು ಇಳಿಕೆಯಾಗಿದೆ. 2022–23ರಲ್ಲಿ 47.61 ವಾಹನಗಳನ್ನು ರಫ್ತು ಮಾಡಲಾಗಿತ್ತು. 2023–24ರಲ್ಲಿ 45 ಲಕ್ಷ ವಾಹನಗಳನ್ನು ರಫ್ತು ಮಾಡಲಾಗಿದೆ ಎಂದು ಹೇಳಿದೆ.

‘ಸರ್ಕಾರದ ದೃಢವಾದ ವಿತ್ತೀಯ ನೀತಿಯಿಂದಾಗಿ ದೇಶದ ಆಟೊಮೊಬೈಲ್ ಕೈಗಾರಿಕಾ ಕ್ಷೇತ್ರದ ಸಾಮರ್ಥ್ಯವು ತೃಪ್ತಿಕರವಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ದೇಶೀಯ ಕೈಗಾರಿಕಾ ಬೆಳವಣಿಗೆಯು ಶೇ 12.5ರಷ್ಟು ಏರಿಕೆಯಾಗಿದೆ’ ಎಂದು ಎಸ್‌ಐಎಎಂನ ಅಧ್ಯಕ್ಷ ವಿನೋದ್ ಅಗರ್ವಾಲ್ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

Multiple Vacancy

REQUIRED EXPERIENCED Telecaller, Loan Recovery Supervisor. For BankLoan collection. Salary 30,000+ Incentive Contact: 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ADMISSION CORNER

ಸ್ಪರ್ಧಾಮಿತ್ರ ACADEMY

IAS/KAS Prelims & Mains

PSI/PDO/VAO

PGCET

RRB/SSC/BANK

ADMISSION OPEN

ಬೆಂಗಳೂರು / ಮೈಸೂರು

9535111133 / 9535111166

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ

*Conditions apply

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

9731810277

9886213331

9845114560

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |

Tanveer: +91 9886213331 | Ravichandra: +91 9901641752 |

Anitha: +91 9900428036

ಯೋಧನ ತುಂಡಾಗಿದ್ದ ಹಸ್ತ ಜೋಡಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸೇನಾ ಯೋಧರು ಒಂದು ಕ್ಷಣವನ್ನೂ ವ್ಯರ್ಥ ಮಾಡದೆ ಇರಿಸಿದ ಹೆಜ್ಜೆಗಳು, ವಿಮಾನವು ರಾತ್ರಿಯ ಹೊತ್ತಿನಲ್ಲಿಯೂ ಬಂದಿಳಿದಿದ್ದು, ದೆಹಲಿಯಲ್ಲಿನ ವೈದ್ಯರು ನಡೆಸಿದ ಒಂಬತ್ತು ತಾಸು ಅವಧಿಯ ಶಸ್ತ್ರಚಿಕಿತ್ಸೆ...

ಯೋಧರೊಬ್ಬರ ತುಂಡಾಗಿದ್ದ ಎಡಗೈ ಹಸ್ತವನ್ನು ಮೊದಲಿನಂತೆ ಜೋಡಿಸಲು ಇವೆಲ್ಲವುಗಳ ಪರಿಣಾಮವಾಗಿ ಸಾಧ್ಯವಾಗಿದೆ. ನಾಯ್ಕ್ ಕೊಂಚೊಕ್ ಗ್ಯೆಲ್ಸಿನ್ ಅವರನ್ನು ಏಪ್ರಿಲ್ 9ರಂದು ಲೇಹ್‌ನಲ್ಲಿನ ಮಿಲಿಟರಿ ಗ್ಯಾರಿಸನ್ ಆಸ್ಪತ್ರೆಗೆ ಕರೆತಂದಾಗ ಅವರ ಎಡಗೈ ಹೆಬ್ಬೆರಳು ಮತ್ತು ತೋರುಬೆರಳಿನ ಭಾಗವು ಸಂಪೂರ್ಣವಾಗಿ ತುಂಡಾಗಿತ್ತು. ಲಡಾಕ್ ಸ್ಕೌಟ್ಸ್ ರೆಜಿಮೆಂಟ್‌ನ ಈ ಯೋಧ ಯಂತ್ರವೊಂದನ್ನು ಹಿಡಿದು ಕೆಲಸ ಮಾಡುವ ಸಂದರ್ಭದಲ್ಲಿ ಈ ರೀತಿ ಆಗಿತ್ತು.

ಲೇಹ್‌ನ ಆಸ್ಪತ್ರೆಯಲ್ಲಿ ಇವರನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಲಾಯಿತು. ಆದರೆ ಈ ಯೋಧನ ಹಸ್ತವನ್ನು ಜೋಡಿಸಲು ವಿಶೇಷವಾದ ಶಸ್ತ್ರಚಿಕಿತ್ಸೆಯ ಅಗತ್ಯ ಇದೆ ಎಂಬುದನ್ನು ವೈದ್ಯರು ಅರಿತರು. ಆ ಶಸ್ತ್ರಚಿಕಿತ್ಸೆ ನಡೆಸುವ ಕೌಶಲ ಇರುವ ವೈದ್ಯರು ಹಾಗೂ ಇತರ ಸಿಬ್ಬಂದಿ ಲೇಹ್‌ನಲ್ಲಿ ಲಭ್ಯರಿರಲಿಲ್ಲ.

ವೈದ್ಯರ ತಂಡದ ಜೊತೆ ಯೋಧ ನಾಯ್ಕ್ ಕೊಂಚೊಕ್ ಗ್ಯೆಲ್ಸಿನ್

ಗ್ಯೆಲ್ಸಿನ್ ಅವರನ್ನು ಸೇನೆಯ ದೆಹಲಿಯ ಆಸ್ಪತ್ರೆಗೆ ರವಾನಿಸಲು ತೀರ್ಮಾನಿಸಲಾಯಿತು. ತುಂಡಾಗಿದ್ದ ಅಂಗವನ್ನು ಶೀತಲೀಕೃತ ಪೆಟ್ಟಿಗೆಯಲ್ಲಿ ಇರಿಸಲಾಯಿತು. ಆರರಿಂದ ಎಂಟು ತಾಸುಗಳಲ್ಲಿ ಶಸ್ತ್ರ-ಚಿಕಿತ್ಸೆ ನಡೆಸಬೇಕಿತ್ತು. ಭಾರತೀಯ ವಾಯುಪಡೆಯು ತನ್ನ ಸಿ–130ಜೆ ವಿಮಾನವನ್ನು ಲೇಹ್‌ಗೆ ರವಾನಿಸಿತು.

ರಾತ್ರಿಯ ವೇಳೆ ಲ್ಯಾಂಡಿಂಗ್‌ಗೆ ಬಳಸುವ ಸಾಧನಗಳ ನೆರವಿನಿಂದ ಲೇಹ್‌ನಲ್ಲಿ ಇಳಿದ ವಿಮಾನವು, ಯೋಧನನ್ನು ಕರೆದುಕೊಂಡು ದೆಹಲಿಗೆ ತೆರಳಿತು. ನಂತರ ಅವರನ್ನು ಪಾಲಂ ತಾಂತ್ರಿಕ ಪ್ರದೇಶದಿಂದ ಆಸ್ಪತ್ರೆಗೆ ವೈದ್ಯಕೀಯ ಸಿಬ್ಬಂದಿಯ ಸುಪರ್ದಿಯಲ್ಲಿ ಕರೆದೊಯ್ದು ಶಸ್ತ್ರಚಿಕಿತ್ಸೆ ನಡೆಸಲಾಯಿತು. ಗ್ಯೆಲ್ಸಿನ್ ಆರೋಗ್ಯ ಈಗ ಸ್ಥಿರವಾಗಿದೆ.

ಡೆಲ್ಲಿ ಕ್ಯಾಪಿಟಲ್ಸ್‌ಗೆ ಎರಡನೇ ಜಯ • ಲಖನೌ ಸೂಪರ್ ಜೈಂಟ್ಸ್‌ಗೆ ನಿರಾಸೆ

ಕುಲದೀಪ್, ಮೆಕ್‌ಗುರ್ಕ್ ಮಿಂಚು

ಲಖನೌ (ಪಿಟಿಐ): ತಂಡಕ್ಕೆ ಪುನರಾಗಮನ ಮಾಡಿದ ಕುಲದೀಪ್ ಯಾದವ್ ಅವರ ಸ್ಫೂರ್ತಿಯುತ ಬೌಲಿಂಗ್ (20ಕ್ಕೆ3) ಮತ್ತು ಪದಾರ್ಪಣೆ ಪಂದ್ಯದಲ್ಲೇ ಜೇಕ್ ಫ್ರೇಸರ್ ಮೆಕ್‌ಗುರ್ಕ್ (55, 35ಎಸೆತ) ಅವರ ಬಿರುಸಿನ ಅರ್ಧ ಶತಕದ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಶುಕ್ರವಾರ ನಡೆದ ಐಪಿಎಲ್ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ಮೇಲೆ ಆರು ವಿಕೆಟ್‌ಗಳ ಸುಲಭ ಜಯಪಡೆಯಿತು.

ಈ ಎರಡನೇ ಗೆಲುವಿನಿಂದ, ಕೊನೆಯ ಸ್ಥಾನದಲ್ಲಿದ್ದ ಡೆಲ್ಲಿ ಪಾಯಿಂಟ್ ಪಟ್ಟಿಯಲ್ಲಿ 9ನೇ ಸ್ಥಾನಕ್ಕೇರಿತು. 160ಕ್ಕಿಂತ ಹೆಚ್ಚು ರನ್ ಗಳಿಸಿದಾಗಲೆಲ್ಲಾ ಆ ಮೊತ್ತವನ್ನು ರಕ್ಷಿಸುತ್ತಿದ್ದ ಲಖನೌ ತಂಡದ ದಾಖಲೆಯೂ ಕೊನೆಗೊಂಡಿತು. 14 ಪಂದ್ಯಗಳಲ್ಲಿ ಮೊದಲ ಬಾರಿ 160 + ಮೊತ್ತ ರಕ್ಷಿಸಲು ಕೆ.ಎಲ್. ರಾಹುಲ್ ಬಳಗ ವಿಫಲವಾಯಿತು.

ಏಕನಾ ಕ್ರೀಡಾಂಗಣದಲ್ಲಿ ಟಾಸ್ ಗೆದ್ದು ನಿರೀಕ್ಷೆಯಂತೆ ಬ್ಯಾಟ್ ಮಾಡಿದ ಲಖನೌ ತಂಡ ಮಧ್ಯಮ ಹಂತದ ಕುಸಿತದಿಂದ ಚೇತರಿಸಿ 7 ವಿಕೆಟ್‌ಗೆ 167 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು. ಆಯುಷ್ ಬಡೋನಿ (ಔಟಾಗದೇ 55, 35ಎ) ಅವರು ಅರ್ಧ ಶತಕ ಇದಕ್ಕೆ ಕಾರಣವಾಯಿತು. ಆದರೆ ಡೆಲ್ಲಿ ಕ್ಯಾಪಿಟಲ್ಸ್ ತಂಡ ಆರಂಭದಿಂದಲೇ ಬಿರುಸಿನ ಆಟವಾಡಿ 11 ಎಸೆತಗಳು ಬಾಕಿಯಿರುವಂತೆ 4 ವಿಕೆಟ್‌ಗೆ 170 ರನ್ ಹೊಡೆಯಿತು. ವೇಗಿ ಮಯಂಕ್ ಯಾದವ್ ಬದಲು ತಂಡದಲ್ಲಿ ಸ್ಥಾನ ಪಡೆದಿದ್ದ ವೇಗಿ ಅರ್ಷದ್ ಖಾನ್ ಮಾಡಿದ 19ನೇ ಓವರ್‌ನ ಮೊದಲ ಎಸೆತವನ್ನು ಡೀಪ್ ಮಿಡ್ ವಿಕೆಟ್ ಮೇಲೆ ಸಿಕ್ಸರ್ ಎತ್ತಿದ ಟ್ರಿಸ್ಟನ್ ಸ್ಟಬ್ಸ್ ಗೆಲುವನ್ನು ಪೂರೈಸಿದರು.

ಡೆಲ್ಲಿ 63 ರನ್‌ಗಳಾಗುಷ್ಟರಲ್ಲಿ ವಾರ್ನರ್ ಮತ್ತು ಪೃಥ್ವಿ ಶಾ ಅವರ ವಿಕೆಟ್ ಕಳೆದುಕೊಂಡಾಗ ಲಖನೌ ತಂಡದಿಂದ ಮರುಹೋರಾಟದ ಸಂಕೇತಗಳು ಕಾಣಿಸಿದ್ದವು. ಆದರೆ ಆಸ್ಟ್ರೇಲಿಯಾದ 22 ವರ್ಷದ ಆಲ್‌ರೌಂಡರ್ ಜೇಕ್ ಫ್ರೇಸರ್ ಮೆಕ್‌ಗುರ್ಕ್ ಬೀಸಾಟಕ್ಕೆ ತೊಡಗಿ ಆ ಆತಂಕ ದೂರ ಮಾಡಿದರು. ಅವರಿಗೆ ನಾಯಕ ರಿಷಭ್ ಪಂತ್ (41, 24ಎಸೆತ) ಬೆಂಬಲ ನೀಡಿದರು. ಇವರಿಬ್ಬರು 46 ಎಸೆತಗಳಲ್ಲಿ 77 ರನ್ ಸೇರಿಸಿ ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದರು.

ಇದಕ್ಕೆ ಮೊದಲು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಮಿಂಚಿದರು. ತೊಡೆಯ ನೋವಿನಿಂದ ಮೂರು ಪಂದ್ಯ ಕಳೆದುಕೊಂಡಿದ್ದ ಕುಲದೀಪ್ 4 ಓವರುಗಳಲ್ಲಿ ಒಂದೂ ಬೌಂಡರಿ ನೀಡದೇ 20 ರನ್ನಿಗೆ 3 ವಿಕೆಟ್ ಉರುಳಿಸಿದಾಗ ಲಖನೌ ಮೊತ್ತ 5 ವಿಕೆಟ್‌ಗೆ 77.

ಕುಲದೀಪ್ ಅವರು ನಾಯಕ ಕೆ.ಎಲ್.ರಾಹುಲ್ (39, 22ಎ), ಆಲ್‌ರೌಂಡರ್ ಮಾರ್ಕಸ್ ಸ್ಟೊಯಿನಿಸ್, ಉತ್ತಮ ಲಯದಲ್ಲಿರುವ ನಿಕೋಲಸ್ ಪೂರನ್ (0)– ಈ ಮೂರೂ ವಿಕೆಟ್‌ಗಳನ್ನು ಪಡೆದಿದ್ದರು. ಆತಿಥೇಯ ತಂಡ ಒಂದು ಹಂತದಲ್ಲಿ 7 ವಿಕೆಟ್‌ಗೆ 94 ರನ್ ಗಳಿಸಿ ದುಸ್ಥಿತಿಯಲ್ಲಿತ್ತು.

ಈ ಸಂದರ್ಭದಲ್ಲಿ ಬಡೋನಿ ಅವರು ಅರ್ಷದ್ ಖಾನ್ (20, 16ಎ) ಜೊತೆಗೂಡಿ ಲಖನೌ ತಂಡದ ಮೊತ್ತಕ್ಕೆ ಗೌರವದ ಲೇಪನ ನೀಡಿದರು. ಮುರಿಯದ ಎಂಟನೇ ವಿಕೆಟ್‌ಗೆ ಇವರಿಬ್ಬರು 42 ಎಸೆತಗಳಲ್ಲಿ 73 ರನ್ ಸೇರಿಸಿದರು.

ಆರಂಭ ಆಟಗಾರ ಕ್ವಿಂಟನ್ ಡಿ ಕಾಕ್ ಮತ್ತು ದೇವದತ್ತ ಪಡಿಕ್ಕಲ್ ಅವರ ವಿಕೆಟ್‌ಗಳನ್ನು ಖಲೀಲ್ ಅಹ್ಮದ್ ಪಡೆದರು. ಪಡಿಕ್ಕಲ್ (3) ಅವರು ಐದನೇ ಬಾರಿಯೂ ಎರಡಂಕಿ ಮೊತ್ತ ಗಳಿಸಲಾಗಲಿಲ್ಲ.



ವಿಕೆಟ್ ಪಡೆದ ಸಂಭ್ರಮದಲ್ಲಿ ಕುಲದೀಪ್ ಯಾದವ್ ಎಎಫ್‌ಪಿ ಚಿತ್ರ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	5	4	1	8	0.871
ಕೋಲ್ಕತ್ತ ನೈಟ್ ರೈಡರ್ಸ್	4	3	1	6	1.528
ಚೆನ್ನೈ ಸೂಪರ್ ಕಿಂಗ್ಸ್	5	3	2	6	0.666
ಲಖನೌ ಸೂಪರ್ ಜೈಂಟ್ಸ್	5	3	2	6	0.436
ಸನ್‌ರೈಸರ್ಸ್ ಹೈದರಾಬಾದ್	5	3	2	6	0.344
ಗುಜರಾತ್ ಟೈಟನ್ಸ್	6	3	3	6	-0.637
ಮುಂಬೈ ಇಂಡಿಯನ್ಸ್	5	2	3	4	-0.073
ಪಂಜಾಬ್ ಕಿಂಗ್ಸ್	5	2	3	4	-0.196
ಡೆಲ್ಲಿ ಕ್ಯಾಪಿಟಲ್ಸ್	6	2	4	4	-0.975
ರಾಯಲ್ ಚಾಲೆಂಜರ್ಸ್ ಬೆಂಗಳೂರು	6	1	5	2	-1.124

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (316 ರನ್)

ಪರ್ಪಲ್ ಕ್ಯಾಪ್: ಯುಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (10 ವಿಕೆಟ್)

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್: 7 ವಿಕೆಟ್‌ಗೆ 167 (20 ಓವರುಗಳಲ್ಲಿ)
ಡಿಕಾಕ್ ಎಲ್‌ಬಿಡ್ಬ್ಲ್ಯು ಬಿ ಖಲೀಲ್ 19 (13ಎ, 4x4)
ರಾಹುಲ್ ಸಿ ಪಂತ್ ಬಿ ಕುಲದೀಪ್ 39 (22ಎ, 4x5, 6x1)
ಪಡಿಕ್ಕಲ್ ಎಲ್‌ಬಿಡಬ್ಲ್ಯು ಬಿ ಖಲೀಲ್ 3 (6)
ಸ್ಟೊಯಿನಿಸ್ ಸಿ ಶರ್ಮಾ ಬಿ ಕುಲದೀಪ್ 8 (10, 4x1)
ಪೂರನ್ ಬಿ ಕುಲದೀಪ್ 0 (1ಎ)
ಹೂಡಾ ಸಿ ವಾರ್ನರ್ ಬಿ ಶರ್ಮಾ 10 (13ಎ)
ಬಡೋನಿ ಔಟಾಗದೇ 55 (35ಎ, 4x5, 6x1)
ಕೃಣಾಲ್ ಸಿ ಪಂತ್ ಬಿ ಮುಕೇಶ್ 3 (4ಎ)
ಅರ್ಷದ್ ಔಟಾಗದೇ 20 (16ಎ, 4x2)
ಇತರೆ: 10 (ಲೆಗ್‌ಬೈ 3, ವೈಡ್ 7)
ವಿಕೆಟ್ ಪತನ: 1–28 (ಕ್ವಿಂಟನ್ ಡಿಕಾಕ್, 2.5), 2–41 (ದೇವದತ್ತ ಪಡಿಕ್ಕಲ್, 4.2), 3–66 (ಮಾರ್ಕಸ್ ಸ್ಟೊಯಿನಿಸ್, 7.3), 4–66 (ನಿಕೋಲಸ್ ಪೂರನ್, 7.4), 5–77 (ಕೆ.ಎಲ್.ರಾಹುಲ್, 9.3), 6–89 (ದೀಪಕ್ ಹೂಡಾ, 11.5), 7–94 (ಕೃಣಾಲ್ ಪಾಂಡ್ಯ, 13).
ಬೌಲಿಂಗ್: ಖಲೀಲ್ ಅಹ್ಮದ್ 4–0–41–2; ಇಶಾಂತ್ ಶರ್ಮಾ 4–0–36–1; ಮುಕೇಶ್ ಕುಮಾರ್ 4–0–41–1; ಅಕ್ಷರ್ ಪಟೇಲ್ 4–0–26–0; ಕುಲದೀಪ್ ಯಾದವ್ 4–0–20–3.

ಡೆಲ್ಲಿ ಕ್ಯಾಪಿಟಲ್ಸ್: 4 ವಿಕೆಟ್‌ಗೆ170 (18.1 ಓವರ್)
ಪೃಥ್ವಿ ಶಾ ಸಿ ಪೂರನ್ ಬಿ ಬಿಷ್ಣೋಯಿ 32 (22ಎ, 4x6)
ವಾರ್ನರ್ ಬಿ ಠಾಕೂರ್ 8 (9ಎ, 4x1)
ಮೆಕ್‌ಗುರ್ಕ್ ಸಿ ಅರ್ಷದ್ ಬಿ ನವೀನ್ 55 (35ಎ, 4x2, 6x5)
ಪಂತ್ ಸ್ಟಂ. ರಾಹುಲ್ ಬಿ ಬಿಷ್ಣೋಯಿ 41 (24ಎ, 4x4, 6x2)
ಸ್ಟಬ್ಸ್ ಔಟಾಗದೇ 15 (9ಎ, 6X1)
ಹೋಪ್ ಔಟಾಗದೇ 11 (10ಎ, 4X1)
ಇತರೆ: 8(ಲೆಗ್‌ಬೈ 1, ವೈಡ್7)
ವಿಕೆಟ್ ಪತನ: 1–24 (ಡೇವಿಡ್ ವಾರ್ನರ್, 3.3), 2–63 (ಪೃಥ್ವಿ ಶಾ, 6.6), 4–140 (ಜೇಕ್ ಫ್ರೇಸರ್ ಮೆಕ್‌ಗುರ್ಕ್, 14.4), 4–146 (ರಿಷಭ್ ಪಂತ್, 15.3).
ಬೌಲಿಂಗ್: ಅರ್ಷದ್ ಖಾನ್ 3.1-0-34-0, ನವೀನ್ ಉಲ್ ಹಕ್ 3-0-24-1 , ಯಶ್ ಠಾಕೂರ್ 4-0-31-1, ಕೃಣಾಲ್ ಪಾಂಡ್ಯ 3-0-45-0 , ರವಿ ಬಿಷ್ಣೋಯಿ 4–0–25–2; ಮಾರ್ಕಸ್ ಸ್ಟೊಯಿನಿಸ್ 1-0-10-0
ಪಂದ್ಯದ ಆಟಗಾರ: ಕುಲದೀಪ್ ಯಾದವ್

ರಾಯಲ್ಸ್‌ಗೆ ಇಂದು ಕಿಂಗ್ಸ್ ಸವಾಲು

ಅಸ್ಥಿರ ಪ್ರದರ್ಶನ ನೀಡುತ್ತಿರುವ ಪಂಜಾಬ್ ಕಿಂಗ್ಸ್ ತಂಡ

ಮುಲ್ಲನಪುರ (ಪಿಟಿಐ): ಎರಡು ದಿನಗಳ ಹಿಂದೆ ಕೊನೆಯ ಎಸೆತದಲ್ಲಿ ಗುಜರಾತ್ ಟೈಟನ್ಸ್ ಎದುರು ಸೋಲನುಭವಿಸಿದ್ದ ರಾಜಸ್ಥಾನ ರಾಯಲ್ಸ್ ತಂಡವು ತನ್ನ ಕಾರ್ಯತಂತ್ರಗಳ ಜಾರಿಯಲ್ಲಿ ಎಚ್ಚರಿಕೆ ವಹಿಸಬೇಕಾಗಿದೆ. ಈ ತಂಡ, ಶನಿವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ, ಅಸ್ಥಿರ ಪ್ರದರ್ಶನ ನೀಡುತ್ತಿರುವ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ಬುಧವಾರ ನಡೆದ ಪಂದ್ಯದಲ್ಲಿ ರಾಯಲ್ಸ್ ತಂಡ ಸತತ ಐದನೇ ಪಂದ್ಯ ಗೆಲ್ಲುವ ಸುವರ್ಣಾವಕಾಶ ಹೊಂದಿತ್ತು. ಆದರೆ ಟೈಟನ್ಸ್ ತಂಡದ ರಾಹುಲ್ ತೆವಾಟಿಯಾ ಮತ್ತು ರಶೀದ್ ಖಾನ್ ಜಯವನ್ನು ಕಸಿದುಕೊಂಡಿದ್ದರು.

ಆ ಪಂದ್ಯದಲ್ಲಿ ರಾಯಲ್ಸ್ ತನ್ನ ಕಾರ್ಯತಂತ್ರದಲ್ಲಿ ಎಡವಿತ್ತು. ನಿರ್ಣಾಯಕ ಸಂದರ್ಭದಲ್ಲಿ ಕುಲದೀಪ್ ಸೆನ್ (19ನೇ ಓವರ್) ಮತ್ತು ಆವೇಶ್ ಖಾನ್ (20ನೇ ಓವರ್) ಅವರು 35 ರನ್ ಕೊಟ್ಟಿದ್ದರು.

ತಂಡದ ಪ್ರಮುಖ ಬೌಲರ್ ಟ್ರೆಂಟ್ ಬೌಲ್ಟ್ (2-0-8-0) ಅವರಿಗೆ ಎರಡು ಓವರ್ ಅವಕಾಶವಿದ್ದರೂ ಬೌಲಿಂಗ್ ನೀಡಿರಲಿಲ್ಲ.

ಅನುಭವಿ ಬೌಲ್ಟ್ ಇಂಥ ಸಂದರ್ಭದಲ್ಲಿ ಹೆಚ್ಚು ಪರಿಣಾಮಕಾರಿ ಆಗುತ್ತಿದ್ದರು. ರಾಯಲ್ಸ್ ಇಂಥ ವಿಷಯಗಳತ್ತ ಗಮನಹರಿಸಬೇಕಾಗಿದೆ.

ಶಿಖರ್ ಧವನ್ ನೇತೃತ್ವದ ಪಂಜಾಬ್ ಕಿಂಗ್ಸ್ ಇದುವರೆಗೆ ಆಡಿದ ಐದು ಪಂದ್ಯಗಳಲ್ಲಿ ಎರಡು ಗೆದ್ದು, ಮೂರು ಸೋತಿದೆ. ಪ್ರಮುಖ ಬ್ಯಾಟರ್‌ಗಳು ಲಯಕಂಡುಕೊಳ್ಳದಿರುವುದು ಪ್ರಮುಖ ಸಮಸ್ಯೆ. ಮಧ್ಯಮ ಕ್ರಮಾಂಕದಲ್ಲಿ ಹೊಸಬರಾದ ಶಶಾಂಕ್ ಸಿಂಗ್ ಮತ್ತು ಅಶುತೋಷ್ ಎರಡು ಪಂದ್ಯಗಳಲ್ಲಿ ಬಿರುಸಿನ ಆಟವಾಡಿ ಬ್ಯಾಟಿಂಗ್‌ಗೆ ಬಲ ನೀಡಿರುವುದು ಸಕಾರಾತ್ಮಕ ಅಂಶ.

ಆರಂಭ ಆಟಗಾರ ಜಾನಿ ಬೇಸ್ಟೊ (5 ಪಂದ್ಯಗಳಿಂದ 81) ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ಜಿತೇಶ್ ಶರ್ಮಾ (5 ಪಂದ್ಯಗಳಿಂದ 77) ನಿರಾಸೆ ಮೂಡಿಸಿದ್ದಾರೆ. ಹೀಗಾಗಿ ಇನಿಂಗ್ಸ್‌ಗೆ ಸ್ಥಿರತೆ ಸಿಗುತ್ತಿಲ್ಲ. ಸ್ಯಾಮ್ ಕರನ್ ಬೌಲಿಂಗ್‌ನಲ್ಲಿ ಪರವಾಗಿಲ್ಲ ಎನ್ನುವಂತೆ ಆರು ವಿಕೆಟ್ ಪಡೆದಿದ್ದರೂ, ಬ್ಯಾಟಿಂಗ್‌ನಲ್ಲಿ ಸಪ್ಪೆಯಾಗಿದ್ದಾರೆ.

ಇಂಗ್ಲೆಂಡ್‌ನ ಲಿಯಾಮ್ ಲಿವಿಂಗ್‌ಸ್ಟೋನ್ ಗಾಯಾಳಾಗಿರುವುದು ಮಧ್ಯಮ ಕ್ರಮಾಂಕ ಸೊರಗುವಂತೆ ಮಾಡಿದೆ.

ಆದರೆ ಬೌಲಿಂಗ್ ವಿಭಾಗ, ಬ್ಯಾಟಿಂಗ್‌ಗಿಂತ ಸ್ವಲ್ಪ ಉತ್ತಮವಾಗಿದೆ. ಆದರೂ ಅರ್ಷದೀಪ್ ಮತ್ತು ಕಗಿಸೊ ರಬಾಡ ಅವರಿಂದ ಪರಿಣಾಮಕಾರಿ ಬೌಲಿಂಗ್ ಪ್ರದರ್ಶನ ಇನ್ನೂ ಬಂದಿಲ್ಲ.

ರಾಜಸ್ಥಾನ ಬ್ಯಾಟಿಂಗ್ ಬಲವಾಗಿದೆ. ಮೊದಲು ಆಡಿದಾಗ ಅದು ದಾಖಲಿಸಿದ ಕಡಿಮೆ ಮೊತ್ತವೆಂದರೆ 185. ಸಂಜು ಸ್ಯಾಮ್ಸನ್, ರಿಯಾನ್ ಪರಾಗ್ ಒಳ್ಳೆಯ ಲಯದಲ್ಲಿದ್ದಾರೆ.

ಆದರೆ ಅದರ ಚಿಂತೆಯೆಂದರೆ ಈ ಹಿಂದಿನ ಆವೃತ್ತಿಗಳಲ್ಲಿ ಆರಂಭದಲ್ಲಿ ನೀಡುತ್ತಿದ್ದ ಉತ್ತಮ ಪ್ರದರ್ಶನ ಮಟ್ಟವನ್ನು ನಂತರ ಕಾಪಾಡಿಕೊಳ್ಳದೇ ಹೋಗಿದ್ದು. ಲೀಗ್ ಮಧ್ಯಮ ಹಂತ ತಲುಪಿದ ನಂತರ ಪ್ರದರ್ಶನ ಮಟ್ಟ ಕುಸಿದುಹೋಗುತಿತ್ತು. ಇದರಿಂದಾಗಿ ಕಳೆದ ಆರು ಐಪಿಎಲ್‌ಗಳಲ್ಲಿ ಎರಡು ಬಾರಿ ಮಾತ್ರ ತಂಡ ಪ್ಲೇ ಆಫ್‌ಗೆ ಅರ್ಹತೆ ಪಡೆದಿತ್ತು. ಜಿಟಿ ಎದುರಿನ ಸೋಲು ಮತ್ತಷ್ಟು ಹಿನ್ನಡೆಗೆ ದಾರಿ ಮಾಡಿಕೊಡದಂತೆ ರಾಯಲ್ಸ್ ಎಚ್ಚರ ವಹಿಸಬೇಕಾಗಿದೆ.

ಪಂದ್ಯ ಆರಂಭ: ರಾತ್ರಿ 7.30.

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್.

ರಾಯಲ್ಸ್‌ನ ರಿಯಾನ್ ಪರಾಗ್

ಪಂಜಾಬ್ ಕಿಂಗ್ಸ್‌ನ ಶಶಾಂಕ್ ಸಿಂಗ್

ನಾಲ್ಕನೇ ಟೆಸ್ಟ್‌ನಲ್ಲೂ ಆಸ್ಟ್ರೇಲಿಯಾಕ್ಕೆ ಜಯ

ಭಾರತದ ನಿರಾಶಾದಾಯಕ ಪ್ರದರ್ಶನ

ಪರ್ತ್ (ಪಿಟಿಐ): ಒಲಿಂಪಿಕ್ಸ್ ಸಿದ್ಧತೆಯ ಭಾಗವಾಗಿ ಆಸ್ಟ್ರೇಲಿಯಾ ಪ್ರವಾಸದಲ್ಲಿರುವ ಭಾರತ ಪುರುಷರ ಹಾಕಿ ತಂಡ ನಿರಾಶಾದಾಯಕ ಪ್ರದರ್ಶನ ಮುಂದುವರಿಸಿದೆ.

ಶುಕ್ರವಾರ ನಡೆದ ನಾಲ್ಕನೇ ಹಾಕಿ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಆಸ್ಟ್ರೇಲಿಯಾ 3–1 ಗೋಲು ಗಳಿಂದ ಭಾರತ ತಂಡವನ್ನು ಸೋಲಿಸಿತು.

ಭಾರತದ ಪ್ರದರ್ಶನ ಈ ಹಿಂದಿನ ಪಂದ್ಯಕ್ಕಿಂತ ಸ್ವಲ್ಪ ಸುಧಾರಿಸಿದ್ದರೂ, ಬಲಿಷ್ಠ ಆಸ್ಟ್ರೇಲಿಯಾ ಎದುರು ಗೆಲ್ಲಲು ಆಗಲಿಲ್ಲ. ಆಸ್ಟ್ರೇಲಿಯಾ ಸರಣಿಯಲ್ಲಿ 4–0 ಮುನ್ನಡೆ ಪಡೆಯಿತು.

ಗುಡುಗು– ಮಿಂಚಿನಿಂದ 40 ನಿಮಿಷ ತಡವಾಗಿ ಆರಂಭವಾದ ಈ ಪಂದ್ಯದ ನಾಲ್ಕೂ ಗೋಲುಗಳು ಪೆನಾಲ್ಟಿ ಕಾರ್ನರ್‌ಗಳ ಮೂಲಕ ಬಂದವು.

ಭಾರತ 12ನೇ ನಿಮಿಷ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮೂಲಕ ಮುನ್ನಡೆ ಪಡೆಯಿತು.

ಆದರೆ ಆಸ್ಟ್ರೇಲಿಯಾ ಜೆರೆಮಿ ಹೇವಾರ್ಡ್ಸ್ (19 ಮತ್ತು 47ನೇ ನಿಮಿಷ) ಅವರ ಮೂಲಕ ಮುನ್ನಡೆ ಸಾಧಿಸಿತು. ಜಾಕ್ ವೆಲ್ಚ್ ಅವರು 54ನೇ ನಿಮಿಷ ಆತಿಥೇಯರ ವಿಜಯದ ಅಂತರವನ್ನು ಹಿಗ್ಗಿಸಿದರು. ಮೊದಲ ಪಂದ್ಯವನ್ನು 1–5 ರಿಂದ ಸೋತಿದ್ದ ಭಾರತ ನಂತರದ ಎರಡು ಟೆಸ್ಟ್‌ಗಳನ್ನು ಕ್ರಮವಾಗಿ 2–4 ಮತ್ತು 1–2 ರಿಂದ ಸೋತಿತ್ತು. ಸರಣಿಯ ಐದನೇ ಹಾಗೂ ಅಂತಿಮ ಟೆಸ್ಟ್ ಶನಿವಾರ ನಡೆಯಲಿದೆ.

ಭಾರತದ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್

ಚೆಸ್: ಸೋಲಿನೊಡನೆ ಎರಡನೇ ಸ್ಥಾನಕ್ಕೆ ಗುಕೇಶ್

ಟೊರಾಂಟೊ (ಪಿಟಿಐ): ಮೊದಲ ಸೋಲು ಕಂಡ ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್, ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಜಂಟಿ ಮೊದಲ ಸ್ಥಾನದಿಂದ ಕೆಳಗೆ ಸರಿದರು. ಆದರೆ ಏಳನೇ ಸುತ್ತಿನಲ್ಲಿ, ಭಾರತದ ಇನ್ನೊಬ್ಬ ಪ್ರತಿಭಾನ್ವಿತ ಆರ್.ಪ್ರಜ್ಞಾನಂದ, ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ ಎದುರು ಸುಲಭ 'ಡ್ರಾ' ಪಡೆಯುವಲ್ಲಿ ಯಶಸ್ವಿಯಾದರು.

ಗುಕೇಶ್ ಈ ಸೋಲಿನಿಂದಾಗಿ ಅಮೆರಿಕದ ಕರುವಾನಾ ಮತ್ತು ಪ್ರಜ್ಞಾನಂದ ಜೊತೆ ಎರಡನೇ ಸ್ಥಾನ ಹಂಚಿಕೊಳ್ಳಬೇಕಾಗಿದೆ. ಮೂವರೂ ತಲಾ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಈ ಟೂರ್ನಿ ಅರ್ಧಭಾಗ ಕ್ರಮಿಸಿದ್ದು, ರಷ್ಯಾದ ಇಯಾನ್ ನೆಪೊಮ್‌ನಿಯಾಚಿ (4.5 ಪಾಯಿಂಟ್ಸ್) ಅವರು ಅರ್ಧ ಪಾಯಿಂಟ್ ಅಂತರದಿಂದ ಅಗ್ರಸ್ಥಾನ ಕಾಪಾಡಿಕೊಂಡಿದ್ದಾರೆ. ನೆಪೊಮ್ ಅವರು ಎರಡನೆ ಶ್ರೇಯಾಂಕ ಹಿಕಾರು ನಕಾಮುರಾ ಜೊತೆ ಪಾಯಿಂಟ್ ಹಂಚಿಕೊಂಡರು.

ಭಾರತದ ಮತ್ತೊಬ್ಬ ಆಟಗಾರ ವಿದಿತ್ ಗುಜರಾತಿ (3.5) ಅವರು ನಿಜತ್ ಅಬಸೋವ್ ಜೊತೆ ಡ್ರಾ ಮಾಡಿಕೊಂಡು ಐದನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ನಕಾಮುರಾ ಮತ್ತು ಅಲಿರೇಝಾ (ತಲಾ 2.5 ಪಾಯಿಂಟ್ಸ್) ಅವರು ಆರು ಮತ್ತು ಏಳನೇ ಸ್ಥಾನದಲ್ಲಿದ್ದರೆ, ಅಬಸೋವ್ (2 ಪಾಯಿಂಟ್) ಕೊನೆಯ ಸ್ಥಾನದಲ್ಲಿದ್ದಾರೆ.

ವೈಶಾಲಿಗೆ ಹಿನ್ನಡೆ: ಮಹಿಳಾ ವಿಭಾಗದಲ್ಲಿ ಆರ್.ವೈಶಾಲಿ ಟೂರ್ನಿಯಲ್ಲಿ ಮೂರನೇ ಸೋಲು ಅನುಭವಿಸಿದರು. ಚೀನಾದ ಟಿಂಗ್ಜಿ ಲೀ ಅವರು 36 ನಡೆಗಳಲ್ಲಿ ಭಾರತದ ಆಟಗಾರ್ತಿಯನ್ನು ಸೋಲಿಸಿದರು. ಈ ಪಂದ್ಯವೊಂದರಲ್ಲಿ ಮಾತ್ರ ಜಯ ಅಪಜಯ ನಿರ್ಣಯವಾಯಿತು. ಈ ವಿಭಾಗದ ಇತರ ಮೂರು ಪಂದ್ಯಗಳು 'ಡ್ರಾ' ಆದವು.

ಝೊಂಗ್‌ಯಿ ತಾನ್ (ಚೀನಾ) ಅವರು ಏಳು ಸುತ್ತುಗಳಿಂದ ಐದು ಪಾಯಿಂಟ್ಸ್ ಕಲೆಹಾಕಿ ಅರ್ಧ ಪಾಯಿಂಟ್ ಅಂತರದಿಂದ ಲೀಡ್ ಉಳಿಸಿಕೊಂಡಿದ್ದಾರೆ. ಅವರು ತಮ್ಮ ನಿಕಟ ಸ್ಪರ್ಧಿ, ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (4.5 ಪಾಯಿಂಟ್ಸ್) ಜೊತೆ 'ಡ್ರಾ' ಮಾಡಿಕೊಂಡರು.

ರಷ್ಯಾದ ಕ್ಯಾಥೆರಿನಾ ಲಾಗ್ನೊ, ಬಲ್ಗೇರಿಯಾದ ನುರ್ಗ್ಯುಲ್ ಸಲಿಮೊವಾ ಅವರ ಜೊತೆ 'ಡ್ರಾ' ಮಾಡಿಕೊಂಡರು. ಅನ್ನಾ ಮುಝಿಚುಕ್, ಭಾರತದ ಕೋನೇರು ಹಂಪಿ ಅವರ ಜೊತೆ ಪಾಯಿಂಟ್ ಹಂಚಿಕೊಳ್ಳಲು ನಿರ್ಧರಿಸಿದರು.

ಲಾಗ್ನೊ ಮತ್ತು ಲೀ ತಲಾ ನಾಲ್ಕು ಪಾಯಿಂಟ್ಸ್ ಸಂಗ್ರಹಿಸಿದ್ದು ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ. ಸಲಿಮೊವಾ ಐದನೇ ಸ್ಥಾನದಲ್ಲಿದ್ದಾರೆ. ಎರಡನೇ ರೌಂಡ್‌ರಾಬಿನ್‌ನಲ್ಲಿ ಅಮೋಘ ಪ್ರದರ್ಶನ ನೀಡಿದರೆ ಮಾತ್ರ ಹಂಪಿ ಮತ್ತು ವೈಶಾಲಿ ಅವರಿಗೆ ಅಗ್ರಸ್ಥಾನದತ್ತ ಸಾಗಲು ಅವಕಾಶವಿದೆ. ಅಲಿರೇಝಾ, 18 ವರ್ಷದ ಗುಕೇಶ್ ವಿರುದ್ಧ ಗೆಲ್ಲುವಲ್ಲಿ ಅದೃಷ್ಟದ ಬಲವೂ ನೆರವಾಯಿತು. ಮಿಡ್ಲ್ ಗೇಮ್‌ನಲ್ಲಿ ಗುಕೇಶ್ ಅವರ ಪಡೆಗಳ ಸ್ಥಿತಿ ಉತ್ತಮವಾಗಿತ್ತು. ಆದರೆ ಪಂದ್ಯವನ್ನು ಸಂಕೀರ್ಣಗೊಳಿಸಲು ಯತ್ನಿಸಿದ್ದು ದುಬಾರಿಯಾಯಿತು. ನಂತರ 'ಚೆಕ್‌ಮೇಟ್' ಬೆದರಿಕೆಯೊಡನೆ ಅಲಿರೇಝಾ ಒತ್ತಡ ಹೇರಿದರು.

ಏಳನೇ ಸುತ್ತಿನಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ವಿದಿತ್ ಗುಜರಾತಿ ಅವರು ಗ್ರ್ಯಾಂಡ್‌ಮಾಸ್ಟರ್ ನಿಜತ್ ಅಬಸೋವ್ (ಅಜರ್‌ಬೈಜಾನ್) ಎದುರು ಆಡಿದರು ಪಿಟಿಐ ಚಿತ್ರ

ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡ ರಷ್ಯಾ ಸೇನೆ

ಉಕ್ರೇನ್‌ನ ದೊಡ್ಡ ವಿದ್ಯುತ್ ಸ್ಥಾವರ ನಾಶ

ಕೀವ್(ಎಪಿ): ರಷ್ಯಾ ಪಡೆಗಳು ಉಕ್ರೇನ್‌ನ ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ಮುಂದುವರಿಸಿದ್ದು, ದೇಶದ ಬಹುದೊಡ್ಡ ವಿದ್ಯುತ್ ಸ್ಥಾವರವನ್ನು ಭಾರಿ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿ ನಾಶಪಡಿಸಿವೆ. ಉಳಿದ ಸ್ಥಾವರಗಳಿಗೂ ಹಾನಿ ಉಂಟಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕೀವ್, ಚೆರ್ಕಾಸಿ ಮತ್ತು ಝ್ಯುಟೊಮಿರ್ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಮಾಡುವ ಅತಿ ದೊಡ್ಡ ಸ್ಥಾವರವಾದ ಟ್ರಿಪಿಲ್ಸ್ಕಾ ಸ್ಥಾವರದ ಮೇಲೆ ಹಲವು ಕ್ಷಿಪಣಿ ಮತ್ತು ಡ್ರೋನ್‌ಗಳು ಅಪ್ಪಳಿಸಿವೆ. ಟ್ರಾನ್ಸ್‌ಫಾರ್ಮರ್, ಟರ್ಬೈನ್‌ಗಳು ಮತ್ತು ಜನರೇಟರ್‌ಗಳು ಹೊತ್ತಿ ಉರಿದಿವೆ. ಈ ಸ್ಥಾವರದಿಂದ 30 ಲಕ್ಷ ಗ್ರಾಹಕರಿಗೆ ವಿದ್ಯುತ್ ಪೂರೈಕೆಯಾಗುತ್ತಿತ್ತು.

ಸ್ಥಾವರಕ್ಕೆ ಮೊದಲ ಡ್ರೋನ್ ಅಪ್ಪಳಿಸುತ್ತಿದ್ದಂತೆ ಕಾರ್ಮಿಕರು, ಸುರಕ್ಷಿತ ಅಡಗುದಾಣಗಳನ್ನು ತಲುಪಿ ಜೀವ ಉಳಿಸಿಕೊಂಡರು ಎಂದು ಸ್ಥಾವರವನ್ನು ನಿಭಾಯಿಸುವ ಸೆಂಟ್ರೆನೆರ್ಗೊ ಕಂಪನಿಯ ಮೇಲ್ವಿಚಾರಣಾ ಮಂಡಳಿಯ ಅಧ್ಯಕ್ಷ ಆ್ಯಂಡ್ರಿ ಗೋಟಾ ಹೇಳಿದ್ದಾರೆ.

ಭೀಕರ ದಾಳಿಯಿಂದ ಸ್ಥಾವರ ಸಂಪೂರ್ಣ ಸುಟ್ಟು ಹೋಗಿದ್ದು, ಬೆಂಕಿಯ ಜ್ವಾಲೆ ಆವರಿಸಿತ್ತು. ಸುತ್ತಲೂ ದಟ್ಟ ಹೊಗೆ ಕವಿದಿತ್ತು. ದಾಳಿ ನಡೆದ ಕೆಲವು ತಾಸುಗಳ ನಂತರ ರಕ್ಷಣಾ ಸಿಬ್ಬಂದಿ ಅವಶೇಷಗಳನ್ನು ತೆರವುಗೊಳಿಸುವ ಕೆಲಸ ಮಾಡಿದರು ಎಂದು ಗೋಟ ಹೇಳಿದ್ದಾರೆ.

ಉಕ್ರೇನ್ ಎರಡನೇ ಅತಿ ದೊಡ್ಡ ನಗರ ಹಾರ್ಕಿವ್ ಮೇಲೆ ಗುರುವಾರ ರಾತ್ರಿ ಹತ್ತು ಬಾರಿ ದಾಳಿ ನಡೆದಿದ್ದು, ಬಹುತೇಕ ಇಂಧನ ಮೂಲಸೌಕರ್ಯಗಳು ಈ ದಾಳಿಯಲ್ಲಿ ಹಾನಿಗೀಡಾಗಿವೆ.

ಮಾಸ್ಕೊದಲ್ಲಿ ಮಾತನಾಡಿರುವ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ರಷ್ಯಾದ ತೈಲ ಸಂಸ್ಕರಣಾಗಾರಗಳನ್ನು ಗುರಿಯಾಗಿಸಿ ಉಕ್ರೇನ್ ನಡೆಸಿರುವ ದಾಳಿಗೆ ಇದು ಪ್ರತ್ಯುತ್ತರವೆಂದು ಪ್ರತಿಕ್ರಿಯಿಸಿದ್ದಾರೆ.

ರಷ್ಯಾದ ಬಾಂಬ್ ದಾಳಿಗೆ ಉಕ್ರೇನ್‌ನ ಡೊನೆಟ್‌ಸ್ಕ್ ಪ್ರಾಂತ್ಯದ ಕೊಸ್ತ್ಯಾಂತಿನಿವ್ಕಾ ಪ್ರದೇಶದಲ್ಲಿನ ಕಟ್ಟಡವು ಧ್ವಂಸಗೊಂಡಿದೆ —ಎಎಫ್‌ಪಿ ಚಿತ್ರ

> ಇಂಧನ ಮೂಲಸೌಕರ್ಯಗಳ ಮೇಲೆ ದಾಳಿ ಆಗುತ್ತಿರುವುದರಿಂದ ಹಾರ್ಕಿವ್ ನಗರದಲ್ಲಿ 2 ಲಕ್ಷಕ್ಕೂ ಹೆಚ್ಚು ಜನರು ವಿದ್ಯುತ್ ಇಲ್ಲದೇ ದಿನದೂಡುವಂತಾಗಿದೆ
>
> **ಡಿಮಿಟ್ರಿ ಕುಲೆಬಾ,** ಉಕ್ರೇನ್ ವಿದೇಶಾಂಗ ಸಚಿವ

> ನಮ್ಮ ಇಂಧನ ವಲಯದ ಮೇಲೆ ತೀರಾ ಕೆಟ್ಟ ಪರಿಣಾಮ ಬೀರಿದ, ಅತ್ಯಂತ ಮಾರಕ ಕ್ಷಿಪಣಿ ದಾಳಿ ಇದಾಗಿದೆ
>
> **ಹರ್ಮನ್ ಹಾಲುಶ್‌ಚೆಂಕೊ,** ಉಕ್ರೇನ್ ಇಂಧನ ಸಚಿವ

'ಗಡಿ ಸಮಸ್ಯೆ: ಸಕಾರಾತ್ಮಕ ಪ್ರಗತಿ'

ಭಾರತ ಜೊತೆಗಿನ ಸಂಬಂಧ ಕುರಿತು ಚೀನಾ ವಿದೇಶಾಂಗ ಇಲಾಖೆ ಪ್ರತಿಕ್ರಿಯೆ

ಬೀಜಿಂಗ್ (ಪಿಟಿಐ): ಚೀನಾ ಮತ್ತು ಭಾರತವು ಗಡಿ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ನಿಕಟ ಸಂವಹನವನ್ನು ನಡೆಸುತ್ತಿದ್ದು, ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಮಹತ್ವದ ಸಕಾರಾತ್ಮಕ ಪ್ರಗತಿಯನ್ನು ಸಾಧಿಸಿವೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ಹೇಳಿದರು.

ಚೀನಾಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಗೆ ಗುರುವಾರವಷ್ಟೇ ಪ್ರತಿಕ್ರಿಯಿಸಿದ್ದ ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರರಾದ ಮಾವೊ ನಿಂಗ್ ಅವರು, ಶುಕ್ರವಾರ ತಮ್ಮ ಪ್ರತಿಕ್ರಿಯೆಯನ್ನು ಇನ್ನಷ್ಟು ವಿವರಿಸಿದರು.

ನ್ಯೂಸ್‌ವೀಕ್ ಮ್ಯಾಗ್‌ಜಿನ್‌ಗೆ ನೀಡಿದ್ದ ಸಂದರ್ಶನದಲ್ಲಿ ಮೋದಿ ಅವರು, ಉಭಯ ದೇಶಗಳ ಗಡಿಯಲ್ಲಿ ಬಹುಕಾಲದಿಂದ ಉಂಟಾಗಿರುವ ಪರಿಸ್ಥಿತಿಯನ್ನು ರಾಜತಾಂತ್ರಿಕ ಮತ್ತು ಮಿಲಿಟರಿ ಮಟ್ಟದಲ್ಲಿ ಸಕಾರಾತ್ಮಕ ಮತ್ತು ರಚನಾತ್ಮಕವಾಗಿ ದ್ವಿಪಕ್ಷೀಯ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಈ ಮೂಲಕ ಗಡಿಯಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಪುನಃ ಸ್ಥಾಪಿಸಲು ಸಾಧ್ಯವಾಗುತ್ತದೆ ಎಂದು ಹೇಳಿದ್ದರು.

ಈ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮಾವೊ ನಿಂಗ್, ಗಡಿ ಸಮಸ್ಯೆಗೆ ಸಂಬಂಧಿಸಿದಂತೆ ಎರಡೂ ದೇಶಗಳು ರಾಜತಾಂತ್ರಿಕ ಮತ್ತು ಮಿಲಿಟರಿ ಹಂತದಲ್ಲಿ ನಿಕಟ ಸಂವಹನ ನಡೆಸುತ್ತಿವೆ. ಇದರಿಂದ ಸಕಾರಾತ್ಮಕ ಪ್ರಗತಿಯನ್ನೂ ಸಾಧಿಸಲಾಗಿದೆ ಎಂದರು.

'ಎರಡೂ ದೇಶಗಳ ಹಿತಾಸಕ್ತಿ ಕಾಯ್ದುಕೊಳ್ಳಲು ಉಭಯ ದೇಶಗಳ ಸಂಬಂಧಗಳು ಆರೋಗ್ಯಕರವಾಗಿರಬೇಕು ಎಂದು ನಾವು ನಂಬುತ್ತೇವೆ' ಎಂದು ತಿಳಿಸಿದರು.

ಪ್ಯಾಂಗಾಂಗ್ ಸರೋವರ ಪ್ರದೇಶದಲ್ಲಿ 2020ರ ಮೇ 5ರಂದು ಹಿಂಸಾತ್ಮಕ ಘರ್ಷಣೆ ನಡೆದ ಬಳಿಕ ಪೂರ್ವ ಲಡಾಖ್ ಗಡಿ ಬಿಕ್ಕಟ್ಟು ಉಲ್ಬಣಗೊಂಡಿದೆ. ಆಗಿನಿಂದ ಭಾರತ ಮತ್ತು ಚೀನಾ ನಡುವಿನ ಸಂಬಂಧ ಹಳಸಿತು. ಬಿಕ್ಕಟ್ಟು ಪರಿಹರಿಸಲು ಉಭಯ ದೇಶಗಳ ಕಡೆಯಿಂದ ಸೇನಾ ಕಮಾಂಡರ್‌ಗಳ ಮಟ್ಟದಲ್ಲಿ 21 ಸುತ್ತಿನ ಮಾತುಕತೆಗಳು ನಡೆದಿವೆ.

ಚೀನಾ ಸೇನೆಯ ಪ್ರಕಾರ, ಗಾಲ್ವಾನ್ ಕಣಿವೆ, ಪ್ಯಾಂಗಾಂಗ್ ಸರೋವರ, ಹಾಟ್‌ಸ್ಪ್ರಿಂಗ್ಸ್ ಮತ್ತು ಗೋಗ್ರಾದಿಂದ (ನಾಲ್ಕು ಪಾಯಿಂಟ್) ಉಭಯ ದೇಶಗಳು ಸೇನೆಯನ್ನು ಹಿಂತೆಗೆದುಕೊಳ್ಳಲು ಒಪ್ಪಿವೆ.

ಹಿಂದೂ ವಿರೋಧಿ ನೀತಿ ಖಂಡಿಸಿ ನಿರ್ಣಯ ಮಂಡನೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿನ ಹಿಂದೂ ವಿರೋಧಿ ಧರ್ಮಾಂಧತೆ, ದ್ವೇಷ ಮತ್ತು ಅಸಹಿಷ್ಣುತೆಯನ್ನು ಖಂಡಿಸಿ ಜನಪ್ರತಿನಿಧಿಗಳ ಸಭೆಯಲ್ಲಿ ಭಾರತೀಯ ಮೂಲದ ಸಂಸದ ಥಾನೆದಾರ್ ಬುಧವಾರ ನಿರ್ಣಯವೊಂದನ್ನು ಮಂಡಿಸಿದ್ದಾರೆ.

ಈ ನಿರ್ಣಯವನ್ನು ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಕುರಿತ ಸದನ ಸಮಿತಿಗೆ ವಹಿಸಲಾಗಿದೆ. 'ಹಿಂದೂಗಳು ಅಮೆರಿಕಕ್ಕೆ ಸಾಕಷ್ಟು ಕೊಡುಗೆ ನೀಡಿದ್ದರೂ, ಹಿಂದೂ ಅಮೆರಿಕನ್ನರು ಶಾಲಾ–ಕಾಲೇಜು ಕ್ಯಾಂಪಸ್‌ಗಳಲ್ಲಿ ಬೆದರಿಕೆಗೆ ಗುರಿಯಾಗುತ್ತಿದ್ದಾರೆ. ತಾರತಮ್ಯ, ದ್ವೇಷದ ಮಾತು ಹಾಗೂ ಪಕ್ಷಪಾತ ಪ್ರೇರಿತ ಅಪರಾಧಗಳಿಗೆ ತುತ್ತಾಗುತ್ತಿದ್ದಾರೆ' ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ರಾಹುಲ್ ವಿರುದ್ಧದ ಪ್ರಕರಣದ ವಿಚಾರಣೆ ಮುಂದಕ್ಕೆ

ಸುಲ್ತಾನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ 2018ರಲ್ಲಿ ದಾಖಲಾಗಿದ್ದ ಮಾನಹಾನಿ ಪ್ರಕರಣದ ವಿಚಾರಣೆಯನ್ನು ಇಲ್ಲಿನ ವಿಶೇಷ ನ್ಯಾಯಾಲಯ ಏ.22ಕ್ಕೆ ಮುಂದೂಡಿದೆ.

ರಾಹುಲ್ ಗಾಂಧಿ ಅವರು 2018ರ ಮೇನಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಗೃಹ ಸಚಿವ ಅಮಿತ್ ಶಾ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಬಿಜೆಪಿ ನಾಯಕ ವಿಜಯ್ ಮಿಶ್ರಾ ದೂರು ದಾಖಲಿಸಿದ್ದರು.

'ರಾಹುಲ್ ಗಾಂಧಿ ವಿರುದ್ಧ ಜಾಮೀನು ರಹಿತ ವಾರಂಟ್ ಹೊರಡಿಸಬೇಕು' ಎಂದು ಮಿಶ್ರಾ ಪರ ವಕೀಲರು ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ನ್ಯಾಯಾಧೀಶರು ರಜೆಯಲ್ಲಿ ಇರುವ ಕಾರಣ ವಿಚಾರಣೆಯನ್ನು ಮುಂದೂಡಲಾಗಿದೆ.

ಭಾರತದ ಸೇನಾ ಸಾಮರ್ಥ್ಯ ವೃದ್ಧಿಗೆ ಕರೆ

ವಾಷಿಂಗ್ಟನ್ (ಪಿಟಿಐ): ಭಾರತದ ಸೇನಾ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಸ್ಥಿರವಾದ ಅಧಿಕಾರದ ಸಮತೋಲನ ಸಾಧಿಸಲು ಉಭಯ ರಾಷ್ಟ್ರಗಳು ಒಟ್ಟಾಗಿ ಕೆಲಸ ಮಾಡಬಹುದು ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಸಂಸದರಿಗೆ ತಿಳಿಸಿದರು.

ರಕ್ಷಣಾ ಇಲಾಖೆಯ ವಾರ್ಷಿಕ ಬಜೆಟ್ ಕುರಿತ ಸಭೆ ವೇಳೆ ಮಾತನಾಡಿದ ಅವರು, ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಭದ್ರತೆಯನ್ನು ಹೆಚ್ಚಿಸಲು ಭಾರತ–ಅಮೆರಿಕ ಸೇನೆಗಳ ಕಾರ್ಯ ಚಟುವಟಿಕೆಗಳಿಗೆ ವೇಗ ನೀಡಬೇಕು ಎಂದು ಅಭಿಪ್ರಾಯಪಟ್ಟರು.

'ಈ ಬಜೆಟ್ ಮೂಲಕ ಅಮೆರಿಕ–ಭಾರತದ ಬಾಂಧವ್ಯದ ಹೊಸ ಅಧ್ಯಾಯ ಆರಂಭವಾಗುತ್ತಿದೆ' ಎಂದು ಹೇಳಿದರು.

'ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಭದ್ರತೆ ಹೆಚ್ಚಿಸಲು ಉಭಯ ದೇಶಗಳ ಸೇನೆಯ ಜಂಟಿ ಸಮರಾಭ್ಯಾಸ, ಮಾಹಿತಿ ವಿನಿಮಯ ಮತ್ತು ಇತರೆ ಕಾರ್ಯ ಚಟುವಟಿಕೆಗಳಿಗೆ ವೇಗ ನೀಡುತ್ತಿವೆ. ಬೆಳೆಯುತ್ತಿರುವ ಭಾರತ–ಅಮೆರಿಕ ಪಾಲುದಾರಿಕೆಯನ್ನು ಬೆಂಬಲಿಸಲು ನಾವು ಬದ್ಧರಾಗಿದ್ದೇವೆ' ಎಂದರು.

ಉಕ್ರೇನ್‌ನಲ್ಲಿ ಅಮೆರಿಕದ ಪತ್ರಕರ್ತ ನಾಪತ್ತೆ

ಮಾಸ್ಕೊ (ರಾಯಿಟರ್ಸ್): ರಷ್ಯಾದ ನಿಯಂತ್ರಣದಲ್ಲಿರುವ ಪೂರ್ವ ಉಕ್ರೇನ್‌ನಲ್ಲಿ ಅಮೆರಿಕದ ಪತ್ರಕರ್ತ ರಸ್ಸೆಲ್ ಬೆಂಟ್ಲಿ ನಾಪತ್ತೆಯಾಗಿದ್ದು, ಶೋಧ ನಡೆಯುತ್ತಿದೆ ಎಂದು ಸ್ಥಳೀಯ ಪೊಲೀಸರು ಶುಕ್ರವಾರ ತಿಳಿಸಿದರು.

ಬೆಂಟ್ಲಿ ಅವರು ಏ.8ರಿಂದ ನಾಪತ್ತೆಯಾಗಿದ್ದಾರೆ. ಇವರು ಉಕ್ರೇನ್‌ನಲ್ಲಿ ರಷ್ಯಾದ ಬೆಂಬಲಿತ ಪಡೆಗಳ ಸ್ವಯಂ ಘೋಷಿತ ಬೆಂಬಲಿಗರಾಗಿದ್ದರು. ರಷ್ಯಾದ ಮಾಧ್ಯಮವು ಇವರನ್ನು ಯುದ್ಧ ಬಾತ್ಮಿದಾರರು ಎಂದು ಕರೆಯುತ್ತಿತ್ತು.

ನಿಧನ ವಾರ್ತೆ

ಕೆ. ಲಿಂಗೇಗೌಡ



ಭಾರತೀನಗರ (ಮಂಡ್ಯ ಜಿಲ್ಲೆ): ಇಲ್ಲಿನ ಚಂದೂಪುರ ಗ್ರಾಮದ ನಿವಾಸಿ, ಕೆಪಿಸಿಸಿ ಸದಸ್ಯ ಕೆ.ಲಿಂಗೇಗೌಡ (75) ಶುಕ್ರವಾರ ಬೆಳಿಗ್ಗೆ ಅನಾರೋಗ್ಯದಿಂದ ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರಿಗೆ ಪತ್ನಿ ಸಾವಿತ್ರಮ್ಮ, ಪುತ್ರ, ನಾಲ್ವರು ಪುತ್ರಿಯರಿದ್ದಾರೆ. ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹತ್ತಿರದ ಸಂಬಂಧಿ.

ಅವರು 1986 ರಲ್ಲಿ ಜಿಲ್ಲಾ ಪರಿಷತ್ ಸದಸ್ಯರಾಗಿದ್ದರು. ನಂತರ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದರು. ಸಹಕಾರ ರತ್ನ ಪ್ರಶಸ್ತಿ ಪಡೆದಿದ್ದರು. ಭಾರತೀ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿಯಾಗಿದ್ದರು.

ಸಚಿವ ಎನ್.ಚಲುವರಾಯಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ತಾಯಿ ಗೌರಮ್ಮ, ಪತ್ನಿ ಉಷಾ, ಶಾಸಕರಾದ ಮಧು ಜಿ.ಮಾದೇಗೌಡ, ಕೆ.ಎಂ.ಉದಯ್, ಮಾಜಿ ಶಾಸಕ ಮರಿತಿಬ್ಬೇಗೌಡ, ಡಿಸಿ.ತಮ್ಮಣ್ಣ, ಬಿಇಟಿ ಎಜುಕೇಷನ್ ಟ್ರಸ್ಟ್‌ನ ಸಿಇಓ ಆಶಯ್ ಮಧು, ಕಾರ್ಯದರ್ಶಿಗಳಾದ ಬಿ.ಎಂ. ನಂಜೇಗೌಡ, ಸಿದ್ದೇಗೌಡ, ಅಂತಿಮ ದರ್ಶನ ಪಡೆದರು. ಚಂದೂಪುರದ ತೋಟದಲ್ಲಿ ಅಂತ್ಯಕ್ರಿಯೆ ನಡೆಯಿತು.

ಸುಧಾ ಶೆಟ್ಟಿ

ಭಟ್ಕಳ: ಮುರ್ಡೇಶ್ವರದ ನಿರ್ಮಾತೃ ಆರ್.ಎನ್.ಶೆಟ್ಟಿ ಅವರ ಪತ್ನಿ ಸುಧಾ ಆರ್.ಎನ್.ಶೆಟ್ಟಿ (85) ಗುರುವಾರ ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಅವರಿಗೆ ಮೂವರು ಪುತ್ರರು, ನಾಲ್ವರು ಪುತ್ರಿಯರು ಇದ್ದಾರೆ.

ಅವರು ತಮ್ಮ ಪತಿಯ ಧಾರ್ಮಿಕ, ಸಾಮಾಜಿಕ ಕಾರ್ಯಗಳಲ್ಲಿ ಸಹಕರಿಸುತ್ತಿದ್ದರು ಎಂದು ಕುಟುಂಬದವರು ತಿಳಿಸಿದ್ದಾರೆ.

ವೈಯಕ್ತಿಕ ಕಾರಣ ನೀಡಿದ ಬಾಕ್ಸರ್ ಎಂ.ಸಿ.ಮೇರಿ ಕೋಮ್

ಷೆಫ್ ಡಿ ಮಿಷನ್ ಸ್ಥಾನಕ್ಕೆ ರಾಜೀನಾಮೆ

ನವದೆಹಲಿ (ಪಿಟಿಐ): ಆರು ಬಾರಿಯ ವಿಶ್ವ ಚಾಂಪಿಯನ್ ಬಾಕ್ಸರ್ ಎಂ.ಸಿ.ಮೇರಿ ಕೋಮ್ ಅವರು ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತ ತಂಡದ ಷೆಫ್-ಡಿ-ಮಿಷನ್ ಸ್ಥಾನವನ್ನು ಶುಕ್ರವಾರ ತ್ಯಜಿಸಿದ್ದಾರೆ. ಕೆಲವು ವೈಯಕ್ತಿಕ ಕಾರಣಗಳಿಂದಾಗಿ ತಮಗೆ ಅನ್ಯಮಾರ್ಗವಿಲ್ಲದೇ ಈ ನಿರ್ಧಾರಕ್ಕೆ ಬಂದಿರುವುದಾಗಿ ಅವರು ತಿಳಿಸಿದ್ದಾರೆ.

ಷೆಫ್–ಡಿ–ಮಿಷನ್ ಸ್ಥಾನದಿಂದ ತಮ್ಮನ್ನು ಬಿಡುಗಡೆ ಮಾಡುವಂತೆ ಕೋರಿ ಮೇರಿ ಕೋಮ್ ತಮಗೆ ಪತ್ರ ಬರೆದಿದ್ದಾರೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷೆ ಪಿ.ಟಿ.ಉಷಾ ಪ್ರಕಟಿಸಿದ್ದಾರೆ.

ಎಂ.ಸಿ.ಮೇರಿ ಕೋಮ್

‘ದೇಶಕ್ಕೆ ಸಾಧ್ಯವಿರುವ ಎಲ್ಲ ರೀತಿಯಲ್ಲಿ ಸೇವೆ ಸಲ್ಲಿಸುವುದನ್ನು ಗೌರವವೆಂದು ಪರಿಗಣಿಸುತ್ತೇನೆ. ನಾನು ಅದಕ್ಕೆ ಮಾನಸಿಕವಾಗಿ ಸಿದ್ಧಳಾಗಿದ್ದೆ. ಆದರೆ ಪ್ರತಿಷ್ಠಿತ ಜವಾಬ್ದಾರಿಯನ್ನು ಎತ್ತಿಹಿಡಿಯಲು ನನ್ನಿಂದ ಸಾಧ್ಯವಾಗುತ್ತಿಲ್ಲ ಎಂದು ವಿಷಾದಿಸುತ್ತೇನೆ. ವೈಯಕ್ತಿಕ ಕಾರಣಗಳಿಂದಾಗಿ ರಾಜೀನಾಮೆ ನೀಡಲು ಬಯಸಿದ್ದೇನೆ’ ಎಂದು ಉಷಾ ಅವರಿಗೆ ಬರೆದ ಪತ್ರದಲ್ಲಿ 41 ವರ್ಷದ ಬಾಕ್ಸರ್ ತಿಳಿಸಿದ್ದಾರೆ.

‘ಬದ್ಧತೆಯಿಂದ ಹಿಂದೆ ಸರಿಯುವುದಕ್ಕೆ ಮುಜುಗರವಾಗುತ್ತಿದೆ. ಆದರೆ ನನ್ನ ಮುಂದೆ ಬೇರೆ ಆಯ್ಕೆಯಿಲ್ಲ. ನನ್ನ ದೇಶ ಮತ್ತು ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುತ್ತಿರುವ ಕ್ರೀಡಾಪಟುಗಳನ್ನು ಹುರಿದುಂಬಿಸಲು ನಾನು ಅಲ್ಲಿರಲಿದ್ದೇನೆ’ ಎಂದು ಹೇಳಿದ್ದಾರೆ.

ಹಿರಿಯ ಟೇಬಲ್ ಟೆನಿಸ್ ಆಟಗಾರ ಮತ್ತು ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಶರತ್ ಕಮಲ್ ಅವರು 2024ರ ಒಲಿಂಪಿಕ್ ಕ್ರೀಡೆಗಳ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಧ್ವಜಧಾರಿಯಾಗಿ ಹಾಗೂ ಬಾಕ್ಸಿಂಗ್ ತಾರೆ ಎಂ.ಸಿ ಮೇರಿ ಕೋಮ್ ಅವರನ್ನು ತಂಡದ ಷೆಫ್ ಡಿ ಮಿಷನ್ ಮತ್ತು ಶಿವ ಕೇಶವನ್ ಅವರನ್ನು ಡೆಪ್ಯುಟಿ ಷೆಫ್ ಡಿ ಮಿಷನ್ ಆಗಿ ಐಒಎ ಮಾರ್ಚ್ 21ರಂದು ನೇಮಕ ಮಾಡಿತ್ತು.

‘ಒಲಿಂಪಿಕ್ಸ್ ಪದಕ ವಿಜೇತೆ ಬಾಕ್ಸರ್ ಮತ್ತು ಐಒಎ ಅಥ್ಲೀಟ್‌ಗಳ ಆಯೋಗದ ಅಧ್ಯಕ್ಷೆ ಮೇರಿ ಕೋಮ್ ವೈಯಕ್ತಿಕ ಕಾರಣಗಳನ್ನು ನೀಡಿ ರಾಜೀನಾಮೆ ನೀಡಿರುವುದು ನಮಗೆ ಬೇಸರ ತಂದಿದೆ. ಅವರ ನಿರ್ಧಾರ ಮತ್ತು ಖಾಸಗಿತನವನ್ನು ನಾವು ಗೌರವಿಸುತ್ತೇವೆ’ ಎಂದು ಉಷಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ನಾನು ಸಂಬಂಧಿಸಿದವರ ಜೊತೆ ಸಮಾಲೋಚನೆ ನಡೆಸುತ್ತೇನೆ ಮತ್ತು ಆ ಸ್ಥಾನಕ್ಕೆ ಮತ್ತೊಬ್ಬರ ಹೆಸರನ್ನು ಶೀಘ್ರದಲ್ಲೇ ಘೋಷಣೆ ಮಾಡುತ್ತೇನೆ. ಮೇರಿ ಅವರ ಪತ್ರವನ್ನು ಸ್ವೀಕರಿಸಿದ ನಂತರ ಅವರೊಂದಿಗೆ ಮಾತನಾಡಿದ್ದೇನೆ’ ಎಂದು ಉಷಾ ಹೇಳಿದರು.

‘ನಾನು ಅವರ ಕೋರಿಕೆ ಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ. ಅವರ ನಿರ್ಧಾರವನ್ನು ಗೌರವಿಸುತ್ತೇನೆ. ಅವರು ಎಂದಿಗೂ ನನ್ನ ಮತ್ತು ಐಒಎ ಬೆಂಬಲ ಹೊಂದಿರುತ್ತಾರೆ ಎಂದು ಅವರಿಗೆ ತಿಳಿಸಿದ್ದೇನೆ. ಅವರ ಗೌಪ್ಯತೆಯನ್ನು ಗೌರವಿಸುವಂತೆ ಪ್ರತಿಯೊಬ್ಬರಲ್ಲೂ ವಿನಂತಿಸುತ್ತೇನೆ’ ಎಂದು ಅವರು ಹೇಳಿದರು.

‘ಒಲಿಂಪಿಕ್ಸ್ ಕನಸು ಭಗ್ನಗೊಳಿಸಲು ಸಂಚು’

ನವದೆಹಲಿ (ಪಿಟಿಐ): ‘ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನನ್ನ ನೆರವು ಸಿಬ್ಬಂದಿ ಪ್ರಯಾಣಕ್ಕೆ ಅಡೆತಡೆಗಳನ್ನು ಸೃಷ್ಟಿಸುವ ಮೂಲಕ ಒಲಿಂಪಿಕ್ಸ್ ಅರ್ಹತಾ ಪಂದ್ಯಗಳಲ್ಲಿ ನನ್ನ ಭಾಗವಹಿಸುವಿಕೆ ತಡೆಯಲು ಪ್ರಯತ್ನಿಸುತ್ತಿದೆ’ ಎಂದು ಕುಸ್ತಿಪಟು ವಿನೇಶಾ ಫೋಗಟ್ ಆರೋಪಿಸಿದ್ದಾರೆ.

ಆದರೆ ಫೆಡರೇಷನ್ ಅವರ ಆರೋಪಗಳನ್ನು ತಳ್ಳಿಹಾಕಿದೆ.

2018ರ ಏಷ್ಯನ್ ಕ್ರೀಡಾಕೂಟದಲ್ಲಿ (50 ಕೆ.ಜಿ) ಚಿನ್ನ, 2019 ಮತ್ತು 2022ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ (53 ಕೆ.ಜಿ ವಿಭಾಗದಲ್ಲಿ) ಕಂಚಿನ ಪದಕಗಳನ್ನು ಗೆದ್ದಿರುವ 29 ವರ್ಷದ ಫೋಗಟ್, ‘ಡೋಪಿಂಗ್ ಪ್ರಕರಣದಲ್ಲಿ ತನ್ನನ್ನು ಸಿಲುಕಿಸುವ ಭಯವಿದೆ’ ಎಂದೂ ಹೇಳಿದ್ದಾರೆ.

ಫೋಗಟ್ ಅವರ (ಕೋಚ್ ಮತ್ತು ಫಿಸಿಯೋ ಅವರ ಮಾನ್ಯತೆಗಾಗಿ) ಕೋರಿಕೆಯ ಇ-ಮೇಲ್ ಮಾರ್ಚ್ 18 ರಂದು ಬಂದಿತ್ತು. ಆದರೆ ನೋಂದಣಿ ದಿನಾಂಕ ಮಾರ್ಚ್ 11 ಆಗಿದ್ದರಿಂದ ಅದಾಗಲೇ ಸ್ಪರ್ಧಿಗಳು, ತರಬೇತುದಾರರು ಮತ್ತು ವೈದ್ಯಕೀಯ ಸಿಬ್ಬಂದಿ ಪ್ರವೇಶಗಳನ್ನು ಯುಡಬ್ಲ್ಯುಡಬ್ಲ್ಯುಗೆ ಕಳುಹಿಸಲಾಗಿತ್ತು ಎಂದು ಡಬ್ಲ್ಯುಎಫ್‌ಐ ಸ್ಪಷ್ಟಪಡಿಸಿದೆ.

ವಿನೇಶಾ

ಯುಡಬ್ಲ್ಯುಡಬ್ಲ್ಯು ತನ್ನ ಕೋರಿಕೆಯ ಮೇರೆಗೆ ಗಡುವನ್ನು ಸ್ವಲ್ಪ ಸಡಿಲಿಸಿದ ನಂತರ ಫೆಡರೇಷನ್ ಮಾರ್ಚ್ 15ರ ಸುಮಾರಿಗೆ ಪ್ರವೇಶಗಳನ್ನು ಕಳುಹಿಸಿದೆ. ಏಕೆಂದರೆ ಟ್ರಯಲ್ಸ್ ಗಡುವಿನ ಕೊನೆಯ ದಿನ ವಷ್ಟೇ ಪೂರ್ಣಗೊಂಡಿತ್ತು ಎಂದು ಡಬ್ಲ್ಯುಎಫ್‌ಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮುಂದಿನ ವಾರ ಬಿಷ್ಕೆಕ್ (ಕಿರ್ಗಿಸ್ಥಾನ) ನಲ್ಲಿ ನಡೆಯಲಿರುವ ಏಷ್ಯನ್ ಅರ್ಹತಾ ಪಂದ್ಯಾವಳಿಯಲ್ಲಿ 50 ಕೆ.ಜಿ ವಿಭಾಗದಲ್ಲಿ ಒಲಿಂಪಿಕ್ ಕೋಟಾ ಮೇಲೆ ಫೋಗಟ್ ಕಣ್ಣಿಟ್ಟಿದ್ದಾರೆ.

ಪಟಿಯಾಲದಲ್ಲಿ ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ ಅಧಿಕಾರಿಗಳು ಅನುಮತಿ ನೀಡಿದ ನಂತರ ಅವರು 53 ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದರು. ಆದರೆ ಸೆಮಿಫೈನಲ್‌ನಲ್ಲಿ ಸೋತಿದ್ದರು.

‘ಬ್ರಿಜ್ ಭೂಷಣ್ ಮತ್ತು ಅವರ ಆಪ್ತ ಸಂಜಯ್ ಸಿಂಗ್ ನನ್ನನ್ನು ಒಲಿಂಪಿಕ್ಸ್‌ನಲ್ಲಿ ಆಡದಂತೆ ತಡೆಯಲು ಎಲ್ಲಾ ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾರೆ. ತಂಡದೊಂದಿಗೆ ನೇಮಕಗೊಂಡ ಎಲ್ಲಾ ತರಬೇತುದಾರರು ಬ್ರಿಜ್ ಭೂಷಣ್ ಮತ್ತು ಅವರ ತಂಡಕ್ಕೆ ಸೇರಿದವರು. ಆದ್ದರಿಂದ ಅವರು ನಾನು ಕುಡಿಯುವ ನೀರಿನಲ್ಲಿ ಏನನ್ನಾದರೂ ಬೆರೆಸಿ ಕುಡಿಯುವಂತೆ ಮಾಡಬಹುದು ಎಂಬುದನ್ನು ಅಲ್ಲಗೆಳೆಯುವುದಿಲ್ಲ’ ಎಂದು ಫೋಗಟ್ ‘ಎಕ್ಸ್’ ಖಾತೆಯಲ್ಲಿ ತಿಳಿಸಿದ್ದಾರೆ.

ಪದಕ ಸುತ್ತಿನಲ್ಲಿ ಸೋತ ಆಕಾಶ್

ಬಿಷ್ಕೆಕ್ (ಕಿರ್ಗಿಸ್ಥಾನ), (ಪಿಟಿಐ): ಭಾರತದ ಫ್ರೀಸ್ಟೈಲ್ ಕುಸ್ತಿಪಟುಗಳು, ಇಲ್ಲಿ ನಡೆಯುತ್ತಿರುವ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಶುಕ್ರವಾರ ಒಂದೂ ಪದಕ ಪಡೆಯಲಾಗಲಿಲ್ಲ. ಕಂಚಿನ ಪದಕಕ್ಕೆ ಸೆಣಸಾಡುವ ಅವಕಾಶ ಪಡೆದಿದ್ದ ಆಕಾಶ್ ದಹಿಯಾ ಮತ್ತು ಅನಿರುದ್ಧ ಕುಮಾರ್ ತಮ್ಮ ತಮ್ಮ ವಿಭಾಗಗಳಲ್ಲಿ ಸೋತರು.

ಇತರ ಮೂವರು ಕುಸ್ತಿಪಟುಗಳು ಅದಕ್ಕಿಂತ ಬೇಗನೇ ಹೊರಬಿದ್ದರು. ಒಲಿಂಪಿಕ್‌ಯೇತರ ವಿಭಾಗದ 61 ಕೆ.ಜಿ. ಕ್ಲಾಸ್‌ನಲ್ಲಿ ಸ್ಪರ್ಧಿಸಿದ ಆಕಾಶ್ ಕಂಚಿನ ಪದಕದ ಪ್ಲೇಆಫ್ ಸೆಣಸಾಟದಲ್ಲಿ ಮಂಗೋಲಿಯಾದ ಎಂಖ್‌ಬೋಲ್ಡ್ ಎಂಖ್ಬತ್ ಅವರಿಗೆ ಪೈಪೋಟಿ ನೀಡಿದರೂ ತಾಂತ್ರಿಕ ಕೌಶಲದ ಆಧಾರದಲ್ಲಿ ಸೋತರು.

125 ಕೆ.ಜಿ. ವಿಭಾಗದಲ್ಲಿ ಅನಿರುದ್ಧ ಕುಮಾರ್ ಅವರು ಕಂಚಿನ ಪದಕದ ಪ್ಲೇಆಫ್ ಸೆಣಸಾಟದಲ್ಲಿ ಬಹರೇನ್‌ನ ಶಾಮಿಲ್ ಮೊಗೊಮೆದ್ ಎ ಶರಿಪೋವ್ ಅವರಿಗೆ ‘ಚಿತ್’ ಆಧಾರದಲ್ಲಿ ಸೋತರು.

ಯಶ್ ತುಶಿರ್ (74 ಕೆ.ಜಿ ವಿಭಾಗ), ರೇಪೇಜ್ ಸುತ್ತಿನಲ್ಲಿ ಕಜಕಸ್ಥಾನದ ಸಿರ್ಬಾಝ್ ತಲ್ಗತ್ ಅವರಿಗೆ ‘ತಾಂತ್ರಿಕ ಕೌಶಲ’ದ ಆಧಾರದ ಮೇಲೆ ಸೋತು ಪದಕದ ಅವಕಾಶ ಕಳೆದುಕೊಂಡರು.ಸಂದೀಪ್ ಸಿಂಗ್ ಮಾನ್ (86 ಕೆ.ಜಿ) ಕ್ವಾಲಿಫಿಕೇಷನ್ ಸೆಣಸಾಟದಲ್ಲಿ ಜಪಾನ್‌ನ ತತ್ಸುವಾ ಶಿರಾಯಿ ಅವರಿಗೆ ಮಣಿದರು.

92 ಕೆ.ಜಿ ವಿಭಾಗದಲ್ಲಿ ವಿನಯ್ ಅವರು ಕ್ವಾಲಿಫಿಕೇಷನ್ ಸುತ್ತಿನಲ್ಲಿ ಕಜಕಸ್ತಾನದ ಅದಿಲೆತ್ ದವ್ಲುಂಬಯೇವ್ ಅವರಿಗೆ ಸೋತರು.

ಮೂರು ಪದಕ: ಭಾರತ ಈ ಚಾಂಪಿಯನ್‌ಷಿಪ್‌ನಲ್ಲಿ ಈವರೆಗೆ ಮೂರು ಪದಕಗಳನ್ನು ಗೆದ್ದುಕೊಂಡಿದೆ.

ವಿಶ್ವ ಟೆನ್‌ಕೆ ಓಟ: ಅನ್ಯಾಂಗೊ ಭಾಗಿ

ಬೆಂಗಳೂರು (ಪಿಟಿಐ); ವಿಶ್ವದ ಎರಡನೇ ಅತಿ ವೇಗದ ಟೆನ್‌ಕೆ ಓಟಗಾರ್ತಿ ಅನ್ಯಾಂಗೊ ಅಚೋಲ್ ಅವರು ಏ.28ರಂದು ನಡೆಯುವ ‘ಟಿಸಿಎಸ್ ವಿಶ್ವ 10ಕೆ ಬೆಂಗಳೂರು-2024’ ಓಟದಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಅನ್ಯಾಂಗೊ

ಕೆನ್ಯಾದ ಅನ್ಯಾಂಗೊ ಅವರು ವೇಲೆನ್ಸಿಯಾದಲ್ಲಿ ನಡೆದ ಸ್ಪರ್ಧೆಯಲ್ಲಿ ಅತ್ಯುತ್ತಮ 28 ನಿಮಿಷ 57 ಸೆಕೆಂಡುಗಳಲ್ಲಿ ಗುರಿ ತಲುಪಿದರು.

2019ರಲ್ಲಿ ನಡೆದ 3000 ಮೀಟರ್ ಓಟದಲ್ಲಿ ಆಫ್ರಿಕನ್ ಜೂನಿಯರ್ ಚಾಂಪಿಯನ್ ಷಿಪ್‌ನಲ್ಲಿ ಬೆಳ್ಳಿ ಪದಕ ವಿಜೇತೆ ಅನ್ಯಾಂಗೊ ಈ ವರ್ಷದ ವಿಶ್ವ ಕ್ರಾಸ್- ಕಂಟ್ರಿ ಚಾಂಪಿಯನ್‌ಷಿಪ್ ನಲ್ಲಿ ಸ್ವಲ್ಪದರಲ್ಲಿ ಪದಕದಿಂದ ವಂಚಿತರಾದರು.

ಪ್ರಜಾವಾಣಿ ಶನಿವಾರ • ಏಪ್ರಿಲ್ 13, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಅಕರ್ಷಕ ಬೆಲೆಯಲ್ಲಿ ನಿವೇಶನಗಳು ಲಭ್ಯ

Electricity | Water | Tar Road | Park | Drainage

ಕಗ್ಗಲೀಪುರ ಹಾಗು ಸೋಮನಹಳ್ಳಿ ಸಮೀಪ

ಬೆಲೆ ಕೇವಲ
8 ಲಕ್ಷ ದಿಂದ ಪ್ರಾರಂಭ

"ಅನುಮೋದಿತ ಬಡಾವಣೆಗಳು ಲಭ್ಯ"

EMI ಸೌಲಭ್ಯವವಿದೆ

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ

89700 56056



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

LAND FOR SALE
Suitable for Residential / Godown / School at Ullalu Village, Bengaluru.
18,513 Sqft. South Facing at Ullalu Village, Yeshwantapura Hobli, Bengaluru North Taluk, with clear title deeds for sale.
Interested parties for more details please contact :
99019 85699

REAL ESTATE SELLING

Sites

Anjanapura

BDA ANJANAPURA 2nd Block Site 30x40 for Sale. Genuine Buyer Contact: 9901757000

Banashankari

BANASHANKARI 6TH STAGE- Surrounding BDA-AVAILABLE/ WANTED 20x30 30x40 40x60, 50x80 SITES. BRINDAVAN ASSOCIATES-9980863245

BANASHANKARI 6TH Stage 4th H Block Near 100feet Road 20x30`North to Metro Junction 4th`Block 30x40 North-Facing 9916809188 9606226222

SALE: BANASHANKARI 6th Stage, 9th Block, 30x40, West facing Rs.98 lacs, 40x60, North facing, Rs.1.98 Crores. Contact: 9845259332

30X40 PLOT FOR SALE IN BANASHANAKARI 6th STAGE. BROKERS EXCUSE. CONTACT WHATSAPP ONLY: +919964573666

Bannerghatta Road

WEST FACING 65x40 (2600 sq ft) site in Vijaya Bank Layout, near Aiyappa Temple, available for immediate sale. Brokers excuse. Please contact 98451 66586.

AKSHAYA NAGAR (AKSHAYA GARDEN) PRIME LOCATION RESIDENTIAL 40x60 EAST FACING SITE SALE, 9500/- 9845069739, 9740183922

Devanahalli

30X40 30X50 DC Converted CUDA Approved Plots Sale Chikkaballapur, 30 Minutes From Airport: 9945569909 7676900174

2080 SQFT, E/F, plot for sale at Orchid Nirvan IVC Road, Serious Buyers Contact:- 9449080669.

Intl Airport Road

30x40 Converted Plots @ 2,00,000/-
166/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Jakkur

TELECOM LAYOUT 10th Cross, 46X60 West Facing Conversion BBMP B Katha 11,000 Per Sq Negotiable Contact: 9880315695

Kempegowda Layout

KEMPEGOWDA LAYOUT, COMMERCIAL BDA SITE FOR SALE 20X30, 30X40, 40X60, 50X80 CONTACT KUMAR: 9945119449

***NADAPRABHU* KEMPEGOWDA** LAYOUT 3rd Block 'L' Sector 40x60 West Facing ₹.5900/-. Contact: 9686469799

Magadi Road

40/60 EAST Facing Plot For Sale In Herohalli Adjacent To Syndicate Bank Layout. A Khatha, Brokers Excuse. Call 9845233902

Mysore Road

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Nagarabhavi

22X34 HEALTH LAYOUT Nagarabhavi, 40 Feet Road, BDA Site West Facing for Sale. Contact: 9980409820.

Nelamangala

"NELAMANGALA RASHI DEVELOPERS 30x50 SOUTH FACING SITE FOR SALE CLOSE TO 'D'MART TUMKUR HIGHWAY. 9845268611"

Padmanabha Nagar

SITE FOR SALE 28x40 R.K. Layout, 2nd Stage, opposite Canara Bank BDA 'A' Khata Facing: East, South, West, Corner Site, JAGADISH 9900005419

Sadashiva Nagar

SADASHIVANAGAR 80X120 Magnificent Site For Sale, Genuine Prospective Buyers Only Call 9900001973 Brokers Strictly Excused

SADASHIVA NAGAR RESIDENCIAL prime location 54x86 SITE FOR SALE.Contact: 9945079777

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

Vishweshwariah Layout

VISHWESHWARAIAH LAYOUT BDA 4th Block 30x40 North Facing 40 Feet Road Good Location Contact: 8970249997

SITE SALE 30x40 'B'Khata Price 6900/- Gangamma Layout SMV 3RD Block Near Vidyaniketan School:9663356556

AVAILABLE 40X60 North Facing BDA Site 1st Block Vishveshwariah Layout 40ft Road Good Location: 9481703468

"30X40 WEST facing BDA site for sale 7th Block, Vishveshwaraiah Layout, 40ft Road. 9845500019/ 7019314962"

SMVL 4TH Block 30x40 WEST NEAR Sonnahalli Circle SMVL 9th Block NEAR KLE 30x40 North 9900224071

Vidyaranyapura

SITES FOR Sale-Vaderhalli, Vidyaranayapura post;DC converted sites with all amenities.Further details Call-8296106706 / 9845879279

Whitefield

BDA APPROVED sites for Sale off Whitefield/ Old Madras'Road. Ready for registration. Hurry! Call: 9035083224

Chickjala

SITE SALE, 30x50, East, 7500/Sqft, Woods Enclave, Telecom Layout, Chikkajaala Bangalore North. Owner: 9880308604/ 9740750256

Sarjapur

30*40 EAST facing Site for sale in 60 acre Telecom Dept Society, Gated layout KALPAVIRUKSHA located in highway at Ganagalur, Near Sarjapur, First allottee, Call 9343316541/ 9902512905.

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha. Rs.5.50 Crores. Party going out of station, Immediate Registration, Contact: 9845765559/ 9845043282

J P Nagar

J.P.NAGAR 6TH PHASE 22x30 NORTH 4 BEDROOM TRIPLEX HOUSE SALE 1,40,00,000/- NEGOTIABLE 9845069739, 9740183922, 9380613718

J.P.NAGAR 1ST Phase 30x40 South Facing With old House, Prime Location For Sale Call: 9980645789

Kanakapura Road

SALE INDEPENDENT Duplex`3BHK Villa, Gated`Community @ off kanakapura`Rd 30x50 East`Facing With`Wardrobe Kitchent,`Fans, Geysers, Lights, Grill Work, Car-garage 1.35cr Negotiable`Call Roopa: 8546948484

40X60 SITE, 2 BHK HOUSE West, Kendriyanagara, 1.5 KM. From Talaghattapura Metro. 2.40Cr. 9945724472, 7829830333.

Nagarabhavi

NAGARBHAVI 30X40 12th Block 2 BHK Independent House 40ft Road South Face, Sale: 9448045601/ 9535811626

NAGARBHAVI D group 30x40 5 BHK duplex house, 2.10 crores, near reliance fresh. 9148284222/ 8296430225.

Vishweshwariah Layout

30X40 BDA 4 BHK Triplex Fully Furnished House for SALE at Sir M Visveswaraya layout 1st block Call : 8147115323

Farm House/ Land/ Resorts

Devanahalli

READY TO occupy 1/2 acre gated converted ekhata 15 fully-furnished rooms garden nandi hills road 9Cr. 9677002197

Agricultural Land

Out-Station

4 ACRES Farmland with Fully Fenced, Gate, 300 Coconut Trees, 180 Teakwood Trees, 2 Borewels, 1TC on 40 Feet Tar Road, Just 12kms from Yediyur Highway towards Leftside, Rate 60 Lakhs Per Acre. 9844603127

Commercial Land

Banashankari

"40X60 COMMERCIAL property for sale Hosakerehalli 100 feet Ring Road Banashankari 3rd Stage. 9845500019/ 7019314962"

Commerical

Kengeri

COMMERCIAL PROPERTY For Sale 16500/- Sqf, Ajasent Kengeri Metro Station For Hotel, Theater Kumar 9945119449

Sarjapur Road

COMMERCIAL 20000 Sft Suitable For Complex Near Wipro kodathi Rs 10500/- Sft Buyers Contact: 8884501767

Sunkadakatte

RENT/ SALE- 550sqft Class room with Office- Tutorial @ Mahadeswaranagara, Sunkadakatte. Contact 9632961545, 9164951545

Flat

Basavanagudi

2 AND 3 BHK Flat 1135 and 1700 Sft with covered car park for sale at Basavanagudi at Rs. 1 Cr and 1.5 Cr. 9900568947, 9845440436.

Malleshwaram

SALARPURIA SATTVA Luxuria, 3 BHK Flat for sale, 2200 sqft, semi furnished, 2 car parking, 15th floor, South facing, Price- 2.90cr. Cont: 9986691137, 9844966426

WEEKEND CORNER

Re-drilling or deepening 6½" borewells by Robo Rig

VIJAYALAKSHMI BOREWELLS-BANGALORE
94481-71416

RENTAL PROPERTIES

Accommodation Available

Commercial

5000 SQUARE FEET GOWDOWN OR INDUSTRY WITH 50 HP POWER AVAILABLE AT NEAR NAGASANDRA METRO STATION VIKASA NAGAR 9341237571/ 8660728589

RENT- OFFICE with 1000sqft, new building, Off. 10th Main, BSK 1st Stage, Bangalore. Contact: 9845164247

Flats

MALLESHWARAM 1910 Sft 3 BHK Apartment East Facing, Vaasthu Compliant 24/7 Electricity Water 65.00 Lakhs. Only for Lease. Vegetarians only. No Brokers. 8618814085/ 7676256325.

MYSORE ROAD AVAILABLE LEASE THREE BHK FLAT RUPEES THIRTYONE LAKHS MAINTENANCE CHARGES BY OWNER: 9738223432

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

DH Classifieds
More value, more impact
DECCAN HERALD
ಪ್ರಜಾವಾಣಿ

BOOK YOUR CLASSIFIED ADVERTISEMENT @ ANY OF OUR ADVERTISING AGENCIES

CENTRAL

SESHADRIPURAM: Vizdom Outlooks: 9845021250 | **CHICKPET:** Nagaraj Ads: 9448533327 | **GANDHI NAGAR :** Meghana Advertising : 9845494426 | United Ads : 9341233030 | Mpee Gee : 9880768108 | **KUMARA PARK:** Bronze Communications: 23310081 | Avanti Communications: 22205998 | **FRAZER TOWN:** Walk-Advertising: 9844001541 | **COX TOWN:** D. R. Associates: 9845120432 | Creative Eye: 9845014592 | **DICKENSON ROAD:** Manipal Advertising: 9738388316 | **VASANTH NAGAR :** Batha Advertising : 22269106 | Ad Point: 9845176901 | **HENNUR :** Jeevitha Creative Communications: 9886280456 | **KALYAN NAGAR:** L K Advertising : 8217484780 | **KORAMANGALA:** 365 Ads: 9343703463 | Pulse Advertising: 8197870039 | **INDIRANAGAR :** Kshama Communications: 9845067714 | Trinity Advertising: 9945571777 | Centigrade : 9902251683 | **St. JOHN'S ROAD:** Graphic Arts : 9844073437 | **JAI BHARATH NAGAR :** L C Communications : 9740324334 | **K R PURAM :** Sri Maruthi : 70195 98720 | **BELLANDUR:** Vivek Avenues: 98450 11892

SOUTH

JAYANAGAR : Redd Arrow: 26655705 | Spectrum Inc: 26761220 | Shastry Ventures : 9880660308 | Sneha Advertisers: 9844076925 | Surabhi Ads : 99455 87574 | **J. P. NAGAR :** Raksheenda Publicity : 9845064970 | **HANUMANTH NAGAR:** Avena Media: 9986934449 | OM Shree Ads: 94485 93438 | **BANASHANKARI :** Popular Enterprises : 9448672817 | Akpha Publicity : 26764536 | Popular Advertising: 9035775105 | Anand Communications : 9845511145 | | Sampoorna Advertising: 9986190744 | Reality Advertisers: 9742013378 | D.G Publicities : 9243402739 | **K. R. ROAD:** Streamline: 9880490672 | **YEDIYUR :** Ankit Communications: 9448001951 | **GANDHI BAZAAR:** Allied Publicity: 9343772964 | Ad Venture : 9886195457 | **CHAMARAJPET :** Bharathi Ads: 41503131 | **V.V Puram :** Nandana Ads : 9448493382 | **BASAVANAGUDI:** Pragathi Advertisers: 7353762673 | First Choice: 9845044148 | Cauvery Ads : 9886824737 | Subha Advertising: 9845533466 | MASS Designs: 9886287849 | Vinyas Advertising : 9845048414 | **KANAKAPURA ROAD :** Sagar Advertisers 9964652358 | **SRINAGAR :** Raksha Advertising 9844574789 | **NAYANDANAHALLI :** Drishya 360 : 9886774482 | **UTTARAHALLI:** Golden Ads: 9844424877

NORTH

R T NAGAR : AD6 Advertising: 9008999919 | Smart Media: 9590518900 | Madhu Ads : 9945072007 | **BENSON TOWN :** | Surekha Advertisers: 9342233097| Rounqh Publicity: 9845172646 | **YELAHANKA:** Chandu Ads : 9880690007 | Suresh Ad Communications : 9902059333 | **MATHIKERE:** A.A.Associates: 23378382 | **VIDYARANYAPURA :** Balaram Advertisers: 9880598082 | **MALLESHWARAM:** Media Options: 8147024605 | Sparkles Network : 9663984711 | Roopa Advertisers: 9845288832 | Prakurthi Ads: 9148917339 | Madhyama : 9886981719 | Pochi Advertisers: 9449059015 | Ads 360: 9739991752 | Nesara Advertisers : 9845030087 | A. A. Advertising: 9481428108 | **THANISANDRA (Jakkur) :** Blueeye Communications : 8431419754 | 08035006966

WEST

RAJAJINAGAR : Chiya's Advertising: 9632288867 | Patil Graphics: 9880359470 | Sri Sainath Enterprises: 9845642185 | S. R. Advertising : 9845269729 | Adz Corner: 9886245268 | Garden City: 9844423886 | Vijaya Publicities (V.R.Opticians): 9845359345 | S.D.Enterprises: 9845500301 | **MAHALAKSHMI LAYOUT :** Peepal Ads: 7975560055 | **NAGARABHAVI :** Damam Advertising 9900158293 | Roopa Communications : 9880877599 | Yashaswi Ads : 9980697155 | Bhargav Enterprises: 9880177773 | Shree Enterprises: 9901076272 | Vibini Media: 9880004702 **VIJAYA NAGAR :** Pragati Advertisers: 9845542727 | Trupty Advertisers: 9845046667 | Topcopy: 9901255400 | **BASAVESHWAR NAGAR :** Omkar Advertising : 9972099398 | Ambar Communications : 9986879230 | Pravasthi Advertising: 9448325268 **PEENYA:** Indira Advertising : 9980314247 | Shrusti Media trove : 98456 58993 | Praanjala Creation: 9844364829 **YESWANTHPUR :** CreActive : 9845133368

For more information contact: Ph: 45557160 | 161 | 162 | 163 | 164
Mobile: 9731810277 | 9901641752 | 9845114560 | 9886213331
E-mail: dhclassifieds@deccanherald.co.in

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ

ಕ್ಲಾಸಿಫೈಡ್ಸ್

REAL ESTATE BUYING

Sites

Anjanapura

WANTED BDA SITE Anjanapura, Banashankari 30x40, 40x60 East North facing for residential own use. 9845000759

Kanakapura Road

WANTED 30X40 SITES DC Convertion And BMRDA Approved, HAROHALLI Town Limits, Kanakapura Road. 9844318577, 9740148870.

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

WANTED SITE 40x60 30x40Anjanapura BDA NarayanaNagar, BCMC Layout, Banshankari 6th Stage, Jayanagar Housing Society Agents Excuse. Call:9663454878.

"WANTED 50X80,60X40 Sites Banashankari 6th`Stage/ Kempegowda/ Vishveshwaraiah Layout. Contact Genuine Owners, Brokers Excuse. 8660145711/ 9448272607"

Yelahanka

WANTED 30×40 Site in Judicial/ GKVK Layout Yelahankha with Clear Titles, Immediate Settlement, Call: 9845190654

Vishweshwariah Layout

"WANTED 20X30- SITE Vishwashwaraih 6th-Block, 1200 to 1300 Number series Direct Registration No Agreement only 10days Registration. Contact: 9945662333"

JOB OPPORTUNITIES

General

A REPUTED property development company requires BUSINESS DEVELOPMENT MANAGERS & SENIOR MANAGERS, Age above 30 years. Retired persons also can apply. Freshers/ Experienced. Earning Rs. 50,000/- per month. Contact:- 8884456860.

Teachers/ Professors

"ST. MARTIN'S HIGH SCHOOL' 7th cross Behind Anjan Theatre, Magadi Road, Bengaluru-23. Requires: Head Mistress, Academic Advisor, Accountant/ clerk qualified and Trained Teachers for Nursery, Primary High School to teach all the subjects including Computer, PE, and Drawing. Contact Office- Phone: 080-23101999, 9916184299, 9591990199

Wanted

'TOP MNC Com. Licensed By Central Govt. RETIRED/VRS Persons 2nd Career Opportunity Age above 45 Years 35K to 40K PM. 7019215243/ 9886641282.'

Part-Time Jobs

TOP MNC Company Licensed from Central Government Hiring Retired VRS, House wife's age 35 above Minimum Monthly Earnings 75k above: 9916197616

TOP MNC Com. Licensed By Central Govt. Retired/ VRS Persons 2nd Career Opportunity Age Above 45 Years 35K To 40K. 7019215243/ 9886641282

PUBLIC NOTICE

ಸಾರ್ವಜನಿಕ ಪ್ರಕಟಣೆ

ಶ್ರೀ ರಂಗಸ್ವಾಮಿ.ಟಿ ಬಿನ್ ಜಿ.ಎನ್. ತಿಮ್ಮರಾಯಪ್ಪ, ವಾಸ: ನಂ.7585, ಮುನಿಯಪ್ಪ ಬಿಲ್ಡಿಂಗ್, 2ನೇ ಅಡ್ಡರಸ್ತೆ, ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಷೆಡ್ಯೂಲ್ ಸ್ವತ್ತನ್ನು ಶ್ರೀ ನಂಜುಂಡಪ್ಪ ಬಿನ್ ಕಾಳೇಗೌಡ ರವರಿಂದ ನೊಂದಾಯಿತ ಕ್ರಯದ ಮುಖೇನ ಪಡೆದುಕೊಂಡಿರುತ್ತಾರೆ, ಅದೇ ರೀತಿ ಶ್ರೀ.ನಂಜುಂಡಪ್ಪ ಬಿನ್ ಕಾಳೇಗೌಡ ಅವರು ಸದರಿ ಷೆಡ್ಯೂಲ್ ಸ್ವತ್ತನ್ನು ಮೂಲ ಮಾಲೀಕರಾದ ಶ್ರೀ ಜಿ.ರೇಣುಕ ಬಿನ್ ಎಮ್ ಗುಬ್ಬಿ ಹುಚ್ಚಪ್ಪ ರವರಿಂದ ದಿ:29-03-1994 ರಂದು ಕ್ರಯಪತ್ರ ಸಂಖ್ಯೆ 1ನೇ ಪುಸ್ತಕದ 1440 ಸಂಪುಟದ, 83-84ನೇ ಪುಟಗಳಲ್ಲಿ 1649 ನಂಬರ್‌ರಂತೆ ನೊಂದಾಯಿತ ಕ್ರಯಪತ್ರದ ಮುಖೇನ ಕ್ರಯಕ್ಕೆ ಪಡೆದಿದ್ದು ಸದರಿ ನೊಂದಾಯಿತವಾಗಿರುವ ಕ್ರಯಪತ್ರದ ಮೂಲಪ್ರತಿ ಕಳೆದುಹೋಗಿರುತ್ತದೆ. ಸದರಿ ಷೆಡ್ಯೂಲ್ ಸ್ವತ್ತನ್ನು ಹೆಚ್.ಡಿ.ಎಫ್.ಸಿ ಬ್ಯಾಂಕಿನ ನೆಲಮಂಗಲ ಶಾಖೆಯಿಂದ ಸಾಲ ಪಡೆದು ಶ್ರೀ ಬಿ.ಕೆ.ಮಿಶ್ರ ಬಿನ್ ಪಿ.ಎನ್.ಮಿಶ್ರ ಹಾಗು ಶ್ರೀಮತಿ ಕೃಷ್ಣದೇವಿ ಕೋ ಬಿ.ಕೆ.ಮಿಶ್ರ ರವರುಗಳು **ಶ್ರೀ ರಂಗಸ್ವಾಮಿ.ಟಿ ಬಿನ್ ಜಿ.ಎನ್.ತಿಮ್ಮರಾಯಪ್ಪರವರಿಂದ** ಕ್ರಯಕ್ಕೆ ಪಡೆಯಲಿದ್ದಾರೆ.

ಆದ್ದರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು- ಭಾದ್ಯತೆ, ಋಣ, ಅಧಿಕಾರ ಹೊಂದಿದ್ದಲ್ಲಿ ಈ ಪ್ರಕಟಣೆಗೊಂಡ 7 **ದಿವಸಗಳ** ಒಳಗಾಗಿ ಈ ಕೆಳಕಂಡ ವಿಳಾಸಕ್ಕೆ ತಿಳಿಯಪಡಿಸುವುದು.

ಷೆಡ್ಯೂಲ್ ಸ್ವತ್ತಿನ ವಿವರ:

ವಾರ್ಡ್ ನಂ.18, ಗುಬ್ಬಿ ಹುಚ್ಚಪ್ಪ ಬಡಾವಣೆ, ಸುಭಾಷ್‌ನಗರ, ನೆಲಮಂಗಲ ಟೌನ್-562123ನ ಸರ್ವೆ ನಂ.163/2ಎ ರಲ್ಲಿ ವಿಂಗಡಿಸಿರುವ ಸೈಟ್ ನಂ.21 ಖಾತಾ ಸಂಖ್ಯೆ 3345/2664/21, ಸ್ವತ್ತಿನ ಸಂಖ್ಯೆ 42-509-347ರ ವಿಸ್ತೀರ್ಣ **ಪೂರ್ವ- ಪಶ್ಚಿಮ:** 40 ಅಡಿಗಳು ಮತ್ತು **ಉತ್ತರ-ದಕ್ಷಿಣ:** 30 ಅಡಿಗಳು ಇದಕ್ಕೆ ಚಕ್ಕುಬಂದಿ: **ಪೂರ್ವಕ್ಕೆ:** ಸೈಟ್ ನಂ.31, **ಪಶ್ಚಿಮಕ್ಕೆ:** ರಸ್ತೆ, **ಉತ್ತರಕ್ಕೆ:** ಸೈಟ್ ನಂ.22, **ದಕ್ಷಿಣಕ್ಕೆ:** ಕೆ.ನಂಜಪ್ಪನವರ ಸೈಟು.

ಎಸ್.ಎಚ್.ಸಿಂಗಯ್ಯ, ವಕೀಲರು
7ನೇ ಮುಖ್ಯರಸ್ತೆ, ಎಸ್.ಬಿ.ಐ ಬ್ಯಾಂಕ್ ಹತ್ತಿರ, ಸದಾಶಿವನಗರ,
ಕುಣಿಗಲ್ ರಸ್ತೆ, ತುಮಕೂರು,
ಮೊ:9844964791

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

BUSINESS

Business to Business

Business

SALE OF running concern MRP-Liquor Store in HSR Layout, Bangalore for Sale, Partnership / Investment. Call 6364214505

Business Offers

General

DRY FRUITS (more than 50 varieties), Flavoured Cashews, Dry Fruits Gift boxes, Attractive Price, Excellent Quality, Free Home Delivery, Contact Farms India 8095059460/ 6360940295

PERSONAL

Lost

DOCUMENT LOST

I, Smt. **Vasantha Devadas** R/at.#1528 1st floor, South end B Cross Road, Jayanagara 9th Block Bengaluru -41 have lost Property Original Sale Deed **Document /No.1652/2000-01 BKI, Dated : 01.06.2000, Survey No. 57/1, measurement 19 1/2 guntas,** Bilekahalli Village, Begur Hobli, Bengaluru South, New Address: 7th Main Road, 19th Cross BTM 2nd Stage N.S.Palya. **While transit Finder Please Contact: 9448477556**

DOCUMENT LOST

I, **Hamsa Narayan Swami,** R/at. R.A. Road, Ejipura, Bengaluru, have lost my **Sale Deed Document No. 3927-94/95, Survey No.68-75-83 (Ward No. 148. Ejipura),** While in transit. If found Please contact: **7975795170**

Change of Name

CHANGE OF NAME

I, **DEEPAK. A** Residing at No. 224, 10th "A' Main, HRBR Layout, 1st Block, Kalyan Nagar, Banaswadi, Bangalore-560043 have changed our minor son's name from **CHARVIK. D. GOWDA** to **D. CHARVIK GOWDA** vide affidavit dated 12.04.2024 before notary A.R. Muneer Ahmed, Bangalore. Henceforth he shall be known as **D. CHARVIK GOWDA** only.

I, MARY VIRGINE ROZARIO W/o.Murugesh. S. R/a#2/11, 3rd Floor, 101 House, Nanjappa Road, BTC Shanthinagar Post, Wilson Garden, Bangalore- 560027 have changed my Name to MARY VIRGINE vide`affidavit dated:8.4.2024 sworn before Notary P.N.Nagesha, Bengaluru.

DH Classifieds More value, more impact ಪ್ರಜಾವಾಣಿ
NAME CHANGE
@50/-*
PER WORDS
*Conditions apply
Book your Name change Ad in DH All Karnataka + Prajavani Bengaluru City All Days
www.dhclassifieds.com
BOOK NOW
For more details contact:
7795158424
9900428036
9731810277
9901641752
9845114560
080- 45557163/164

Sai Enclave Phase - 3
SITES FOR SALE

The Best Investment on EARTH is EARTH

A Premium gated community residential layout project attached to upcoming BBMP Limits Nagadasanahalli, SINGANAYAKANAHALLI, YELAHANKA

15 Acres Mega Township

Ready for registration

AMENITIES

- Meditation Center | • Underground Drainage & Sewage
- Water Connections to each Plot | • Electricity to each Plot
- Concrete Road | • Avenue Plantation | • 24hrs Security
- Compound Wall | • Genuine Title

72044 96826
81055 19354

DH Classifieds DECCAN HERALD More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-*
FOR 15 WORDS

www.dhclassifieds.com
BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

DH Classifieds DECCAN HERALD More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 550/-*
PER SQCM
SINGLE / DOUBLE / MULTIPLE COLUMN

www.dhclassifieds.com
BOOK NOW
* Conditions apply
For more details contact:
+91 9901641752 | +91 9845114560
+91 9900428036 | +91 9731810277
+91 9886213331 | 080- 45557163/164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331



ನೆಲಮಂಗಲ ನಗರ ಸಭೆ ವಾರ್ಡ್ ನಂ. 25 ರಲ್ಲಿ

BMRDA ಅನುಮೋದನೆ ಆದ
'A' KHATA ನಿವೇಶನಗಳು

ನೆಲಮಂಗಲ ಟೌನ್

ನೆಲಮಂಗಲದಿಂದ ಕೇವಲ ಒಂದು ಕಿಮೀ ಅಂತರದಲ್ಲಿ ನಿವೇಶನಗಳು

SPOT BOOKING OFFER 50% OFF on Registration Cost

•ನೋಂದಣಿಗೆ ಸಿದ್ಧವಿರುವ ಸೈಟುಗಳು • ಮನೆ ಕಟ್ಟಲು ಎಲ್ಲಾ ಸೌಲಭ್ಯ ಹೊಂದಿದೆ
• ಕಾನೂನಾತ್ಮಕ ದಾಖಲೆಪತ್ರಗಳು •ಲೇಔಟ್ ಸಂಪೂರ್ಣ ಅಭಿವೃದ್ಧಿಯಾಗಿದೆ
•ನಿವೇಶನ ಖರೀದಿಸಲು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಸೌಲಭ್ಯವಿದೆ

ಸೌಕರ್ಯಗಳು: ಮನೆ ಕಟ್ಟಲು ಪ್ರಶಸ್ತ ಸ್ಥಳ, ಟಾಂಬರ್ ರಸ್ತೆಗಳು, ಬೀದಿ ದೀಪಗಳು, ಪ್ರತ್ಯೇಕ ನೀರಿನ ಸಂಪರ್ಕ, ರಸ್ತೆ ಬದಿ ಮರಗಳು, ಒಳಚರಂಡಿ ವ್ಯವಸ್ಥೆ

ನಿವೇಶನದ ಅಳತೆಗಳು
30x40, 30x50

ಸೈಟು ಭೇಟಿಗಾಗಿ ಸಂಪರ್ಕಿಸಿ : **9606442859**

ACTUAL PRICE Rs. ~~499~~/- Per Sft

OFFER PRICE Rs. 370/-* Per Sft

*for Sites in Phase-2 only

DTCP APPROVED
Residential Sites

ಚಿಕ್ಕಬಳ್ಳಾಪುರ

ಈಶಾ ಫೌಂಡೇಶನ್‌ನಿಂದ ಕೇವಲ 15 ನಿಮಿಷಗಳ ಪ್ರಯಾಣ

- ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ.
- 100% ಕಾನೂನಾತ್ಮಕ ದಾಖಲೆ ಪತ್ರಗಳು • ಅಭಿವೃದ್ಧಿಪಡಿಸಿದ ಲೇಔಟ್
- ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : • ನೀರು •ಬೀದಿ ದೀಪ •ರಸ್ತೆಗಳು •ಪಾರ್ಕ್ •ವಿದ್ಯುತ್ •ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

ಸೈಟ್ ಭೇಟಿಗಾಗಿ ಕರೆ ಮಾಡಿ : **8880665577**

ARIHANT GROUP OF INSTITUTIONS

CONGRATULATIONS!!!

ARIHANT

ARIHANT GROUP OF INSTITUTIONS
CONGRATULATES ALL ITS STUDENTS, PARENTS & STAFF!

OUR II PUC TOPPERS AY 2023-24

YASHIKA R
COMMERCE
97.70%

MOHITH V KASHYAP
SCIENCE
97.20%

Name	Stream	Score
NIKITHA K	COMMERCE	96.70%
RAKSHITHA K	COMMERCE	96.70%
ABHISHEK B	SCIENCE	96.66%
H K PRABHANJAN	SCIENCE	96.50%
ADITYA N BHATT	SCIENCE	96.10%
MAMATHA K	COMMERCE	95.30%
ANUSHA S	SCIENCE	95.10%
SIRI D K	SCIENCE	94.50%
S SANJAY KUMAR REDDY	COMMERCE	94.30%
SHREYA S	SCIENCE	93.50%
V G VAISHNAVI	SCIENCE	93.10%
DHRUV R PARMAR	COMMERCE	93%
ASHISH S BIJOOR	COMMERCE	93%
HARSHITHA P	COMMERCE	93%
ABHYUDAY S GOWDA	SCIENCE	92.60%
NIDHI RAJ SALECHA	COMMERCE	92.50%
SETHIYA TAANVI MANOJ	COMMERCE	92%
PRERANA K M	SCIENCE	92.60%
MANOJ M KRISHNA	SCIENCE	92.50%
AMRUTHA H	SCIENCE	92.50%
ANUP KABRA	SCIENCE	92%
KABINI BALIGER	SCIENCE	92%
PRIYA D	SCIENCE	91.80%
JAYANTH D N	SCIENCE	91.80%
SUHAIL KHAN	SCIENCE	91.60%
BHOOMIKA S KUNDER	SCIENCE	91.30%
HARIKA S	SCIENCE	90.80%
KRISH R PAREET	SCIENCE	90.60%

ADMISSIONS OPEN

ADMISSIONS OPEN

PU Programs
SCIENCE
- PCMB
- PCMC

with CA, CET, JEE & NEET Coaching

COMMERCE
- ABEM
- ABMS
- ABES
- ABECs

BBA Programs
- BBA Regular
- BBA + Digital Marketing

B.Com Programs
- B.Com Regular
- B.Com + CA/CS
- B.Com + ACCA, UK

BCA* Programs
MBA* Programs
MCA* Programs
PGDM* Programs

Corporate Campus
R V Road, V V Puram, Bengaluru

Global Campus
Thalaghattapura, Kanakapura Main Road, Bengaluru

92 36 36 36 36 | agiedu.in | /agieduofficial